SRI M. S. KRISHNAN.—We will walk out.

(ಗೊಂದಲ)

(ಈ ಸಂದರ್ಭದಲ್ಲಿ ಮಾನ್ಯ ಸದಸ್ಯರುಗಳಾದ ಪಂಪಾಪತಿಯವರು ಕೆ. ಬಿ. ಶಾನಪ್ಪನವರು, ಎಂ. ಎಸ್. ಕೃಷ್ಣನ್‌ರವರು, ಆರ್. ವೆಂಕಟರಾಮಯ್ಯ ಮತ್ತು ಟಿ. ಎಸ್. ಮಣಿ ಇವರು ಎದ್ದು ನಿಂತು ಒಟ್ಟಿಗೆ ಮಾತನಾಡುತ್ತಿದ್ದುದನ್ನು ಅಧಿಕೃತವಾಗಿ ದಾಖಲೆ ಮಾಡಬಾರದೆಂದು ಅಧ್ಯಕ್ಷರು ಆದೇಶಿಸಿದರು.)

ಶ್ರೀ ಎಂ. ಎಸ್. ಕೃಷ್ಣನ್.—ನಾವು ಕುಳಿತುಕೊಳ್ಳುವುದಿಲ್ಲ. ನಾವು ಹೊರಗೆ ಹೋಗುತ್ತೇವೆ.

ಅಧ್ಯಕ್ಷರು.—ಮಾನ್ಯ ಸದಸ್ಯರುಗಳು ಈ ರೀತಿ ವರ್ತನೆ ಮಾಡಿದರೆ ನಿಮ್ಮ ನಾಲ್ಕುಮಂದಿಯ ಮೇಲೂ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. Nothing will be recorded. What ever you have said, will not be recorded. It is expunged. The matter has been closed after my ruling.

(Sriyuths M. S. Krishnan, R. Venkataramaiah, pampapathi, K. B. Shanappa. and T. S. Mani walked out of the House)

ಅಧ್ಯಕ್ಷರು.—ಅವರು ವಾಕೌಟ್ ಮಾಡಲು ಬಂದಿದ್ದರು, ನಾಳೆ ಪೇಪರ್‌ನಲ್ಲಿ ಬರಲಿ ಅಂಥ. ಮಾನ್ಯ ಕೆ. ಹೆಚ್. ಪಾಟೀಲರೇ ತಾವು ಮಾತನಾಡಿ.

Finan Cialh Business

೧೯೮೮-೮೯ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ ಬೇಡಿಕೆಗಳ ಕ್ರಮ ಸಂ ೧೭,೧೮,೧೯,೨೦, ೨೨,೩೬ ೪೦,೪೧,೪೨,೪೩,೨೭ ಮತ್ತು ೫೫—ಮುಖ್ಯ ಮಂತ್ರಿಗಳಿಗೆ ಸಂಬಂಧಪಟ್ಟ ಇಲಾಖೆಗಳ ಬೇಡಿಕೆಗಳು.

ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧಿಸಿದ ಅನೇಕ ಬೇಡಿಕೆ ಮೇಲೆ ಎರಡೂಕಡೆಯ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ನಾನು ಹೆಚ್ಚು ಸಮಯವನ್ನು ತೆಗೆದು ಕೊಳ್ಳದೆ ಕೆಲವೇ ಮಾತುಗಳನ್ನು ಆಡಿ ಕೆಲವು ಸೌಲಭ್ಯ ಕೊಡುತ್ತಿರುವ ಬಗ್ಗೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಈಪತ್ತಿನದಿವಸ ಮಂಡಿಸಿರತಕ್ಕಂಥ ಬೇಡಿಕೆಗಳನ್ನು ನೋಡಿದರೆ ಮಾನ್ಯ ಮುಖ್ಯಮಂತ್ರಿಗಳು ಎರಡು ವರ್ಷಗಳ ಲಾಗಾಯ್ತು ಏನು ಹೇಳುತ್ತಾಬಂದಿರುತ್ತಾರೆ ಅದಕ್ಕೂ ಇದಕ್ಕೂ ಬಹಳ ದೂರ ಇರುತ್ತದೆ. ಅವರು ಹೇಳುತ್ತಿದ್ದಂಥ ದೆವಲಪ್‌ಮೆಂಟ್ ಆಕ್ಟಿವಿಟೀಸ್, ಪ್ಲಾನಿಂಗ್ ಎಂದು ಹೇಳಿ ಗೋಡೌನ್ ಕಟ್ಟಿಸುತ್ತೇವೆ, ಮನೆಗಳನ್ನು ಕಟ್ಟಿಸುತ್ತೇವೆಂದು ತೋರಿಸುತ್ತಿದ್ದರೇ ವಿನಃ ರಚನಾತ್ಮಕ ವಾದ ಮತ್ತು ದೇಶಕ್ಕೆ ಉತ್ಪಾದನೆಯನ್ನು ಮಾಡತಕ್ಕಂಥ ಯಾವುದೇ ಯೋಜನೆಯನ್ನು ಅಳವಡಿಸಿ ಕೊಳ್ಳದಿರುವುದು ಅತ್ಯಂತ ವಿಷಾದನೀಯ. ಅವರು ಪ್ರಾಯಶಃ ಕಠಿಣವಾಯವಾದ ಬಜೆಟ್‌ನ್ನು ತಂದು ಇದರಲ್ಲಿ ನಾವು ಏನು ಮಾಡಬೇಕು ಎನ್ನುವ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಾರೆ. ಸರ್ಕಾರ ಮಾಡಲಾರದಂಥ ಅನೇಕ ಕಾರ್ಯಕ್ರಮಗಳನ್ನು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅದಕ್ಕೆ ಒಂದು ಹೇಳುತ್ತೇನೆ. "ನವದೆಹಲಿಯ ಅಖಿಲ ಭಾರತ ಅನುಸೂಚಿತ ಜಾತಿ ಸಹಕಾರ ಅಭಿವೃದ್ಧಿ ನಿಗಮದಿಂದ ಕಾರ್ಯಗತ ಗೊಳಿಸಲಾಗುವ ಬೆಂಗಳೂರು ಜಿಲ್ಲೆಯಲ್ಲಿರುವ ಹಣ್ಣು, ಹೂವು ಮತ್ತು ತರಕಾರಿ ರಫ್ತು ಯೋಜನೆಗಳನ್ನು ಇನ್ನೂ ಎರಡು ಜಿಲ್ಲೆಗಳಿಗೆ ವಿಸ್ತರಿಸುವುದು" ಎಂದು ಹೇಳಿದ್ದೀರಿ, ಬಹಳ ಸಂತೋಷ, ನಮ್ಮಲ್ಲಿರತಕ್ಕಂಥ ಷೆಡ್ಯೂಲ್‌ಕ್ಯಾಸ್ಟ್ ಮತ್ತು ಷೆಡ್ಯೂಲ್ ಟ್ರೈಬ್ಸ್ ಇನ್‌ಸ್ಟಿಟ್ಯೂಷನ್‌ಗಳಿಗೂ ೪-೫ ವರ್ಷಗಳ ಹಿಂದೆ ಮಾಡಿದಂಥ ಇನ್‌ಸ್ಟಿಟ್ಯೂಷನ್‌ಗಳು. ಅವಕ್ಕೆ ಹಣವನ್ನು ಕೊಡಬೇಕು ಎನ್ನುವ ದೃಷ್ಟಿಯಿಂದ ಫಂಡ್ಸ್ ಕೊಟ್ಟಿದೆ. ಹೇಗೋ ಅರ್ಜಿಹಾಕಿಕೊಳ್ಳುವ ಅವಕಾಶ ವನ್ನು ತೆಗೆದುಕೊಂಡು ನಡುವೆ ದಳ್ಳಾಳಿಗಳು ಹಣವನ್ನು ತಿಂದು ಹಾಕುತ್ತಿದ್ದಾರೆ, ಏತಕ್ಕೆ ಇಂಥ ಯೋಜನೆಗಳನ್ನು ತರುತ್ತೀರಿ ? ಏತಕ್ಕೆ ಹಣವನ್ನು ಖರ್ಚುಮಾಡುತ್ತೀರಿ. ಇದು ಸೆಂಟ್ರಲ್‌ನವರು ಕೊಡಬೇಕಾದ ಹಣ, ಇದಕ್ಕೆ ನಿಮ್ಮದು ಏನು ಬೇಕಾಗುತ್ತದೆ ? ಇದಕ್ಕೆ ಬೇರೆ ಸೊಸೈಟಿ ಮಾಡಿ ಇಂಪ್ಲಿಮೆಂಟ್ ಮಾಡಬೇಕೆಂದು ಮೊಹಾವನ್ ಕಮಿಟಿಯವರು ಯೋಚಿಸಿದ್ದರು. ಆದು ಕಾರ್ಯಗತ

ವಾಗಿಲ್ಲ. ಡಚ್ ಸರ್ಕಾರದ ನೆರವು ತೆಗೆದುಕೊಂಡು ಅಜಿಬೆ ಸಾಕಣೆ ಮಾಡುವುದಾಗಿ ಹೇಳಿದ್ದೀರಿ. ಅವರ ನೆರವು ತೆಗೆದುಕೊಳ್ಳಿ. ಆದರೆ ಒಂದು ಕಡೆ ಕೇಂದ್ರ ಸರ್ಕಾರದವರು ನಮಗೆ ಪಕ್ಷಪಾತ ಮಾಡುತ್ತಿದ್ದಾರೆ, ಕೇಂದ್ರ ಸರ್ಕಾರದಿಂದ ನಮಗೆ ಹಣ ಬರುತ್ತಿಲ್ಲ, ನಾವು ತೊಂದರೆಗೀಡಾಗಿ ದ್ದೇವೆಂದು ಹೇಳುತ್ತೀರಿ. ಇನ್ನೊಂದು ಕಡೆ ನಿಮ್ಮ ಯೋಜನೆಗಳನ್ನು ನೋಡಿದರೆ ಕೇಂದ್ರ ಸರ್ಕಾರ ಕೊಡತಕ್ಕ ಹಣವನ್ನು ಬಿಟ್ಟರೆ ಮತ್ತೇನು ಇಲ್ಲ. ತಾವು ಯಾವುದಾದರೂ ಒಂದು ಯೋಜನೆ ಹಾಕಿ, ಆ ಯೋಜನೆ ಮುಖಾಂತರ ಸರ್ಕಾರ ಈ ರೀತಿ ಮಾಡುತ್ತಿದೆ, ಅದಕ್ಕೆ ಕೇಂದ್ರ ಸರ್ಕಾರದ ಸಹಾಯ ತೆಗೆದುಕೊಳ್ಳುತ್ತೇವೆ, ಜನರ ಸಹಕಾರ ತೆಗೆದುಕೊಳ್ಳುತ್ತೇವೆ, ನೀವೆಲ್ಲರೂ ಸಹಕಾರ ಕೊಡಿ ಎಂದರೆ ಚೆನ್ನಾಗಿತ್ತು. ಕರ್ನಾಟಕ ರಾಜ್ಯದಲ್ಲಿ ಉತ್ಕೃಷ್ಟವಾದ ಭೂಮಿ ಇದೆ, ವ್ಯವಸಾಯಕ್ಕೆ ಅತ್ಯಂತ ಶ್ರೇಷ್ಠವಾಗಿದೆ. ಆದರೆ ನೀರಾವರಿ ಬಗ್ಗೆ ಹೇಳುವುದಾದರೆ, ಮಲಪ್ರಭಾ ಯೋಜನೆ ಪೂರ್ಣವಾಗಿ ಎಷ್ಟೋ ದಿನವಾಯಿತು. ಆದರೂ ಅದರ ಲಾಭ ರೈತರಿಗೆ ಸಿಕ್ಕಿಲ್ಲ. ಹಣದ ಅಭಾವ ಇದೆ ಎಂದು ಹೊಸದನ್ನು ಬೇಡುತ್ತಾರೆ. ಆದರೆ ಮಲಪ್ರಭಾ ಯೋಜನೆ ಆಗಿ ನೀರು ನಿಂತಿದೆ, ಜನರಿಗೆ ಅದರ ಉಪಯೋಗವಾಗುತ್ತಿಲ್ಲ. ಏತಕ್ಕೆ ಆಗುತ್ತಿಲ್ಲ? ಅದನ್ನು ಉಪಯೋಗಿಸಿಕೊಳ್ಳತಕ್ಕ ಭೂಮಿ ಬೇಕು, ಸಲಕರಣೆಗಳು ಬೇಕು. ನೀರನ್ನು ಅಬ್ಸಾರ್ಬ್ ಮಾಡತಕ್ಕ ಕೆಪಾಸಿಟಿ ಎರೆ ಮಣ್ಣಿನ ಭೂಮಿಗೆ ಇಲ್ಲ. ಅದಕ್ಕಾಗಿ ಲ್ಯಾಂಡ್ ಅಭಿವೃದ್ಧಿ ಮಾಡುವ ಸಲುವಾಗಿ ಎಂ. ಪಿ. ಪಾಟೀಲ್‌ರವರು ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದ್ದೀರಿ. ಆ ಸಮಿತಿಯ ವರದಿ ತಮ್ಮ ನಜರಿಗೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಈ ಬಗ್ಗೆ ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೋ ತಿಳಿಯುತ್ತಿಲ್ಲ. ನಿಮ್ಮ ಸೆಕ್ರೆಟೆರಿಯೇಟ್ ಏನು ಮಾಡುತ್ತಿದೆಯೋ ತಿಳಿಯುತ್ತಿಲ್ಲ. ಆ ಸಮಿತಿಯವರು ಉತ್ತಮ ರಿಪೋರ್ಟ್ ಕೊಟ್ಟಿದ್ದಾರೆ, ಅದನ್ನು ಜಾರಿಗೆ ಕೊಡಲು ಹಣ ಕೂಡ ಜಾಸ್ತಿ ಬೇಕಾಗುವುದಿಲ್ಲ, ಜನರಿಗೆ ಉಪದೇಶ ಮಾಡಿ, ಜನರ ಕಡೆಯಿಂದ ಹಣ ಕೊಡಿಸಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ಏತಕ್ಕೆ ಮಾಡಬಾರದೆಂದು ಪ್ರಶ್ನೆ ಮಾಡುತ್ತೇನೆ. ಹಿಂದೆ ಬೊಮ್ಮಾಯಿಯವರು ವಿಶೇಷ ಆಸ್ತೆ ವಹಿಸಿದ್ದರು. ಕಾಂಗ್ರೆಸ್ ಸರ್ಕಾರವನ್ನು ವಿಶೇಷವಾಗಿ ಟೀಕಿಸಿದ್ದರು. ಈಗ ಕಮಿಟಿಯನ್ನು ನೇಮಿಸಿಯೂ ಕೆಲಸ ಆಗಿಲ್ಲ. ಆದಾದನಂತರ ರೈತರ ಹಿತದೃಷ್ಟಿಯಿಂದ ಬೊಮ್ಮಾಯಿಯವರು ಮತ್ತಿತರರು ಈಚೆಕಡೆ ಕುಳಿತಾಗ ಗುಂಡೂರಾಯರ ಸರ್ಕಾರ ಅನೇಕ ಯೋಜನೆಗಳನ್ನು ರೂಪಿಸಿ ಕಳು ಹಿಸಿತು. ನಾನು ಈ ಸಂದರ್ಭದಲ್ಲಿ ನೇರವಾಗಿ ಪ್ರಶ್ನೆ ಮಾಡುತ್ತೇನೆ, ಎರಡಲ್ಲಿ ಒಂದನ್ನು ಕೇಳಿ. ಅಂದು ಕೊಟ್ಟ ವರದಿಯನ್ನು ರಾಜಕೀಯ ತೊಡಕಿನಲ್ಲಿ ಮೂಲೆಗೆ ಹಾಕಿದ್ದೀರಿ ಎಂಬುದನ್ನು ಒಪ್ಪು ತ್ತೀರಾ? ಇಲ್ಲದಿದ್ದರೆ, ಪ್ರಾಮಾಣಿಕವಾಗಿ ತಾವು ಈಗ ಮಂತ್ರಿಯಾಗಿ ಬಂದಿರತಕ್ಕ ಕಾಲದಲ್ಲಿ ಯಾವ ರೀತಿ ಮಾಡಬಲ್ಲಿರಿ? ನಾವು ಮಾತನಾಡುವಾಗ, ಟೀಕೆ ಮಾಡುವಾಗ ಏನು ಹೇಳುತ್ತೇವೆ ಅದನ್ನು ನಮಗೆ ಇಂದಲ್ಲ ನಾಳೆ ದುರ್ದೈವದಿಂದಲೋ ಸುದೈವದಿಂದಲೋ ಅಧಿಕಾರ ಬಂದಾಗ ನಾವು ಯಾವ ಸ್ಥಿತಿಯಲ್ಲಿದ್ದೇವೆ ಎಂಬುದನ್ನು ತಿಳಿದುಕೊಂಡು ಮಾಡಬೇಕೆಂಬುದೇ ನನ್ನ ಇಚ್ಛೆ. ರೈತರನ್ನು ಹುರಿದುಂಬಿಸುವ ದೃಷ್ಟಿಯಿಂದ ಅನೇಕ ಯೋಜನೆಗಳನ್ನು ಕಾರ್ಯಗತಗೊಳಿಸುತ್ತೇವೆಂದು ಜನತಾ ಪಕ್ಷದ ಪ್ರಣಾಳಿಕೆಯಲ್ಲಿ ಆಶ್ವಾಸನೆ ಕೊಟ್ಟಿರಿ. ಅದು ಗಾಳಿ ಗೋಪುರವಾಗಿ ಉಳಿದಿದೆ. ಬಾಬೆಸ್ತರಿಗೆ ವಿಶೇಷ ವಿಮಾ ಯೋಜನೆ ಎಂದು ಹೇಳಿದ್ದೀರಿ. ಇದನ್ನು ಮಾಡುವುದಕ್ಕೆ ಸರ್ಕಾರದಿಂದ ಕಾರ್ಯಕ್ರಮ ಬೇಕೇ? ಯಾವುದಾದರೂ ಸೊಸೈಟಿಯಿಂದ ಕಾರ್ಯಕ್ರಮ ಹಾಕಿ ವಿಮಾ ಯೋಜನೆ ಮಾಡುವುದ ಕ್ಕಾಗುವುದಿಲ್ಲವೇ? ಸರ್ಕಾರ ವಿಮಾ ಯೋಜನೆ ಮಾಡುತ್ತೇವೆಂದು, ಅದೊಂದು ದೊಡ್ಡ ಯೋಜನೆ ಎಂಬ ದೃಷ್ಟಿಯಿಂದ ಹೇಳಿದ್ದಾರೆ. ಹುಬ್ಬಳ್ಳಿಯಲ್ಲಿ ಕಲಾಭವನದ ರಚನೆ. ಹುಬ್ಬಳ್ಳಿ ಕಾರ್ಪೊರೇಷನ್ನಿಗೆ ಒಂದು ಕಲಾಭವನವನ್ನು ಕಟ್ಟುವುದಕ್ಕಾಗುವುದಿಲ್ಲವೇ? ಕರ್ನಾಟಕ ರಾಜ್ಯ ಸರ್ಕಾರ ಅದಕ್ಕೆ ದೊಡ್ಡದಾಗಿ ಅಧಿಕಾರ ಉಪಯೋಗಿಸಿ ಕಲಾಭವನವನ್ನು ಕಟ್ಟಬೇಕೇ? ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇಷ್ಟೇ ನಮಗೆ ಇರತಕ್ಕವು ಎಂದು ಹೇಳಿದಿರಿ. ಕಲಾಭವನ ಕಟ್ಟುತ್ತೇವೆ, ಫಿಷ್ಮನ್ ಅಭಿವೃದ್ಧಿ ಬ್ಯಾಂಕಿಗೆ ಕಳುಹಿಸುತ್ತೇವೆಂದು ಹೇಳಿದಿರಿ. ಇದಕ್ಕೆ ಬದಲಾಗಿ ಇಲಾಖೆಯಲ್ಲಿ ಏನು ಕೊರತೆ ಇದೆ, ರಾಯಚೂರು ಥರ್ಮಲ್ ಪ್ಲಾಂಟ್ ಸಾಲದಾಗಿದೆ, ಇನ್ನೂ ಆ ಪ್ಲಾಂಟುಗಳನ್ನು ಮಾಡಬೇಕೆಂದು ಯೋಜನೆ ಮಾಡಿದ್ದೇವೆ, ಉದ್ದಿಮೆಗಳಿಗೆ ಸಾಕಷ್ಟು ವಿದ್ಯುತ್ ಕೊಡುತ್ತೇವೆಂದು ಹೇಳಿದ್ದರೆ ಒಪ್ಪುತ್ತಿದ್ದೆ. ಈ ದಿಸೆಯಲ್ಲಿ ಹಿಂದೆ ಮಾಡಿದ ಯೋಜನೆಗಳು ಕಂಗಾಲವಸ್ಥೆಯಲ್ಲಾಗಿ ಉಳಿದಿವೆ. ಆ ಯೋಜನೆಗಳನ್ನು ಇನ್ನೂ ಕಾರ್ಯಗತ ಮಾಡಿಲ್ಲ. ದಾಂಡೇಲಿ ಪೇಪರ್ ಮಿಲ್‌ನವರಿಗೆ ಕೊಡತಕ್ಕ ಕನ್‌ಸೆಷನ್ ಏನಿದೆ ಅದನ್ನು 2001ನೇ ಇಸವಿಯವರೆಗೆ ಮುಂದುವರೆಸಿದ್ದೀರಿ. ಆಗ ಕನ್‌ಸೆಷನ್ ಕೊಡುವಾಗ ದಾಂಡೇಲಿ ಫ್ಯಾಕ್ಟರಿಯಿಂದ ಪಲ್ಪ್ ತೆಗೆದು ಕೊಳ್ಳಬೇಕು ಎಂಬ ಅಭಿಪ್ರಾಯ ಇತ್ತು. ನಾಮಿನಲ್ ರೇಟಿಗೆ ಪಲ್ಪ್ ತೆಗೆದುಕೊಳ್ಳಬೇಕು ಎಂದಿತ್ತು. ನಮ್ಮ ಕಾಲಕ್ಕೆ ನಾನು ಪ್ರಾರಂಭ ಮಾಡಿದೆ, ಆಗಲಿಲ್ಲ. ನನ್ನ ಮಂತ್ರಿ ಪದವಿ ಹೋಯಿತು. ನೀವೂ

ಕೂಡ ಮಂತ್ರಿ ಪದವಿ ಹೋಗುತ್ತದೆ ಎಂದು ಬಿಟ್ಟಿದ್ದೀರೋ ಏನೋ ಗೊತ್ತಿಲ್ಲ. ಅಂಥದ್ದನ್ನು ಮಟ್ಟ ಹಾಕಿ ಜನ ಕಲ್ಯಾಣ ಮಾಡಿ. ಒಂದೊಂದು ಫಾರೆಸ್ಟ್‌ನಿಂದ ದೇಶದ ಸಂಪತ್ತನ್ನು ಬಳಸಿಕೊಂಡು ದೊಡ್ಡವರಾಗುತ್ತಿದ್ದಾರೆ. ಅವರು ಕೆಲವು ಸಮಯದಲ್ಲಿ ಎಲೆಕ್ಷನ್‌ಗೆ ಹಣ ಕೊಟ್ಟಿರಬಹುದು. ಆದರೆ ಅಷ್ಟೊಂದು ಸಣ್ಣ ಕೆಲಸಕ್ಕಾಗಿ ಅವರನ್ನು ಹೆಚ್ಚಾಗಿ ಪೋಷಿಸುವುದು, ಬೆಳೆಸುವುದು ಸೂಕ್ತವಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಾವು ಸದನದಲ್ಲಿ ಒಂದು ಠರಾವು ಪಾಸ್ ಮಾಡಿದೆವು: ನಾನು ಡಿಸೆಂಟ್ಸ್ ಅಭಿಪ್ರಾಯದ ಗೋಜಿಗೆ ಹೋಗುವುದಿಲ್ಲ. ಆದರೆ ಸದನದಲ್ಲಿ ನೀರಾವರಿ ಸಲುವಾಗಿ ೩೦೦ ಕೋಟಿ ರೂಪಾಯಿ ಕೊಡಬೇಕೆಂದು ಸರ್ವಾನುಮತದಿಂದ ಠರಾವು ಮಾಡಿದೆವು. ಮಾನ್ಯ ನಾಯಕರಿಗೆ ನೆನಪಿರಬಹುದು. ಈ ಸದನದಲ್ಲಿ ನಿಮ್ಮ ಮನವಿಗೆ ಮನ್ನಣೆ ಕೊಟ್ಟು ಒಮ್ಮತದ ನಿರ್ಣಯವನ್ನು ನಾವೆಲ್ಲರೂ ಸೇರಿ ಪಾಸ್ ಮಾಡಿದ್ದೇವೆ. ಏತಕ್ಕೆ ಎಂದು ನಾವು ಕೇಳಿದೆವಾ ? ಇಲ್ಲ. ೩೦೦ ಕೋಟಿ ರೂಪಾಯಿಗಳನ್ನು ಒಮ್ಮೆಲೇ ಕೊಡುವುದಕ್ಕಾಗುವುದಿಲ್ಲ. ಇವತ್ತೇ ಅಷ್ಟು ಹಣ ಕೊಡಿ ಎಂದು ಹೇಳುವುದಕ್ಕೆ ನಾವು ತಯಾರಿಲ್ಲ. ೩೦೦ ಕೋಟಿ ರೂಪಾಯಿಗಳನ್ನು ಕೊಡುವುದಕ್ಕಾಗದಿದ್ದರೂ ಆ ಮಾರ್ಗದಲ್ಲಿ ಹೋಗುತ್ತೇವೆ ಎಂಬ ಭರವಸೆಯನ್ನಾದರೂ ಕೊಡಬೇಕಾಗಿತ್ತು. ಒಮ್ಮೆಗೇ ಅಷ್ಟು ಹಣ ಖರ್ಚು ಮಾಡಲು ಆಗದಿದ್ದರೆ ಈ ವರ್ಷ ೧೦೦ ಕೋಟಿ, ಮುಂದಿನ ವರ್ಷ ೧೦೦ ಕೋಟಿ ಖರ್ಚು ಮಾಡುತ್ತೇವೆ ಎಂದೂ ಹೇಳಲಿಲ್ಲ. ಹಾಗಾದರೆ ರೈತರು ನಿಮ್ಮ ಮೇಲೆ ಯಾವ ವಿಶ್ವಾಸ ಇಟ್ಟಿದ್ದರೋ ಅದು ಉಳಿದಿದೆಯೋ ? ಅಂದು ಕೊಟ್ಟ ಪ್ರಣಾಳಿಕೆಯನ್ನು ನಂಬಿ ಜನತೆ ನಿಮಗೆ ಮ್ಯಾಂಡೇಟ್ ಕೊಟ್ಟಿತ್ತು. ಅದು ಇವತ್ತು ನಿಷ್ಫಲವಾಗಿದೆ. ತಾವು ಜಾಣ್ಮೆಯನ್ನು ಪಡೆದಿದ್ದೀರಿ. ತಮ್ಮಲ್ಲಿ ಕಲಾಕೌಶಲ್ಯತೆ ಇದೆ. ಅದನ್ನು ದೇಶದ ರಕ್ಷಣೆ ಮಾಡುವುದಕ್ಕೆ ಉಪಯೋಗ ಮಾಡಿ. ಜನತೆಯನ್ನು ರಕ್ಷಣೆ ಮಾಡುವುದಕ್ಕೆ ಉಪಯೋಗ ಮಾಡಿ, ಶಿಕ್ಷೆ ಮಾಡುವುದಕ್ಕಲ್ಲ ಎಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಸ್ವಾಮಿ, ತಮ್ಮ ಅವಧಿಯಲ್ಲಿ ಅನೇಕ ಮಾರ್ಪಾಡುಗಳನ್ನು ತಾವು ಬಯಸಿದ್ದೀರಿ, ಅದೆಲ್ಲಾ ಆಗಿದೆಯಾ ? ಎಜುಕೇಷನ್‌ನಲ್ಲಿ ಕೂಡ ನಿಮ್ಮದೇ ಆದ ಬದಲಾವಣೆಯನ್ನು ಮಾಡುತ್ತೇವೆ ಎಂದು ಹೇಳಿದ್ದೀರಿ. ಈ ಬಗ್ಗೆ ತಾವು ಯಾವ ತರಹದ ಕಾರ್ಯಕ್ರಮ ಇಟ್ಟುಕೊಂಡಿದ್ದೀರೋ ತಿಳಿಯದು. ಕೇವಲ ಎರಡು ಮೂರು ಮಂತ್ರಿಗಳನ್ನು ಬದಲಾವಣೆ ಮಾಡುವುದು ಬಿಟ್ಟರೆ ಎಜುಕೇಷನ್‌ನಲ್ಲಿ ಯಾವ ಪುರುಷಾರ್ಥವನ್ನೂ ತಾವು ಸಾಧಿಸಿಲ್ಲ ಎಂದು ಹೇಳಬಹುದು. ತಾವು ಹೇಳಬಹುದು, ಪಾಲಿಟೆಕ್ನಿಕ್‌ಗಳನ್ನು ಹೆಚ್ಚು ಕೊಟ್ಟಿದ್ದೇವೆ, ಕಾಲೇಜುಗಳನ್ನು ಹೆಚ್ಚು ಕೊಟ್ಟಿದ್ದೇವೆ ಎಂದು. ಕೊಡುವಂಥ ಕಾಲೇಜುಗಳ ಸಂಖ್ಯೆಯಿಂದ ಎಜುಕೇಷನ್ ಕ್ವಾಲಿಟಿ ಬೆಳೆಯುವುದಿಲ್ಲ. ನಾನು ಹೇಳುವ ಮಾತನ್ನು ಒಪ್ಪಬೇಕು. ಗುಣಮಟ್ಟದ ಮಾನದಿಂದ ಅಳೆದರೆ ಎಷ್ಟು ಸಂಸ್ಥೆಗಳು ಉಳಿಯುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಎಜುಕೇಷನ್ ಸುಧಾರಣೆ ಬಗ್ಗೆ ನೀವೇ ಒಂದು ಕಮಿಟಿ ನೇಮಿಸಿದ್ದೀರಿ. ಅದು ರಿಪೋರ್ಟ್ ಕೊಟ್ಟಿದೆ. ಇಂಥ ರಿಪೋರ್ಟ್‌ಗಳು ರಾಜಕಾರಣಿಗಳ ಕೈಗೆ ಸಿಕ್ಕಿದಾಗ ಗಾಳಿಪಟವಾಗುತ್ತದೆ. ಟೆಕ್ನಿಕಲ್ ಕಮಿಟಿಯ ಅಭಿಪ್ರಾಯಕ್ಕೆ ಎಲ್ಲಿ ಮನ್ನಣೆ ಕೊಟ್ಟಿದ್ದೀರಿ ? ಎಲ್ಲಿ ತಾಂತ್ರಿಕ ವಿಭಾಗಕ್ಕೆ ಮನ್ನಣೆ ಇಲ್ಲವೋ ಅದು ಜನತೆಯ ಸರ್ಕಾರವಾಗಿ ಪರಿಣಮಿಸಲಾರದು, ಅನೇಕ ಸಂಸ್ಥೆಗಳಿಗೆ ಮೊದಲೇ ಕೊಟ್ಟಿದ್ದಾರೆ. ನಾವು ಏನೂ ಮಾಡುವ ಸ್ಥಿತಿಯಲ್ಲಿಲ್ಲ ಎಂದು ಹೇಳಬಹುದು. ಹಾಗೆ ಹೇಳಿ ಪಾರಾಗುವುದಕ್ಕಾಗುವುದಿಲ್ಲ. ಜೀವರಾಜ್ ಆಳ್ವ ಅವರನ್ನು ಕರೆದು ಕೇಳಿ. ಕೆಲವು ಕಾಲೇಜುಗಳಿಗೆ ಹೋದಸಾರಿ ರಿಸ್ಟ್ರಿಕ್ಷನ್ ಹಾಕಿದ್ದೀರಿ. ಇಷ್ಟು ಸಂಖ್ಯೆಗಿಂತ ಹೆಚ್ಚು ಅಡ್ಮಿಷನ್ ಮಾಡಕೂಡದು ಎಂದು ರಿಸ್ಟ್ರಿಕ್ಷನ್ ಮಾಡಿದ್ದೀರಿ. ತಮ್ಮ ಮೇಲೆ ಲಂಚದ ಆಪಾದನೆ ಪೂರ್ವದಲ್ಲಿ ಕೇಳುತ್ತಿದ್ದೇನೆ, ನೀವು ಕೊಟ್ಟ ಅಂಕಿಸಂಖ್ಯೆಗಳನ್ನು ಮೀರಿ ಯಾರು ಕಾಲೇಜುಗಳಲ್ಲಿ ಅಡ್ಮಿಷನ್‌ಗಳನ್ನು ಮಾಡಿದ್ದಾರೆ ಅವರ ಮೇಲೆ ಯಾವ ಕ್ರಮ ತೆಗೆದುಕೊಂಡಿದ್ದೀರಿ ? ಕೆಲವು ಕಾಲೇಜುಗಳವರು ಗೌರ್ನಮೆಂಟನ್ನು ಚೀಟ್ ಮಾಡಿ ಶಿಕ್ಷೆ ಪಡೆದಂಥವರು ಊರು ತುಂಬಾ ಬಿಲ್ಡಿಂಗ್ ಕಟ್ಟುತ್ತಿದ್ದಾರೆ. ಯಾರು ಯಾರು ಕಾನೂನು ಉಲ್ಲಂಘನೆ ಮಾಡಿದ್ದಾರೆ ಎಂಬುದನ್ನು ನೋಡುವುದಕ್ಕೂ ಸಹ ಆಗಿಲ್ಲ. ಕೆಲವು ಕಾಲೇಜುಗಳವರು ತಾವು ನಿರ್ಧಾರ ಮಾಡಿದ ಅಂಕಿಸಂಖ್ಯೆಗಳಿಗಿಂತ ಎರಡು ಮೂರು ಪಟ್ಟು ಮೀರಿ ಅಡ್ಮಿಷನ್ಸ್ ಮಾಡುತ್ತಿದ್ದಾರೆ. ನೀವು ಕೇಳಿದರೆ ಕಾಲೇಜುಗಳ ಹೆಸರುಗಳನ್ನು ಹೇಳಬಲ್ಲೆ. ಆದರೆ ನಾನು ಹಾಗೇ ಹೆಸರು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ, ತಾವು ತಪಾಸಣೆ ಮಾಡಬೇಕು. ಆಗ ಮಾತ್ರ ತಮ್ಮ ಇಂಟೆಲಿಜೆನ್ಸ್ ವರ್ಕ್ಸ್ ಮಾಡುತ್ತಿದೆ, ನಿದ್ರೆ ಮಾಡುತ್ತಿಲ್ಲ ಎಂದು ನಾನು ಭಾವನೆ ಮಾಡುತ್ತೇನೆ. ಆ ದೃಷ್ಟಿಯಿಂದ ತಾವು ಆಲೋಚನೆ ಮಾಡಿ. ಒಂದು ಪಾಲಿಟೆಕ್ನಿಕ್‌ಗೆ ೪೦ ಸೀಟುಗಳನ್ನು ಕೊಟ್ಟು, ಇನ್ನೊಂದು ಪಾಲಿಟೆಕ್ನಿಕ್‌ಗೆ ೪೦೦ ಸೀಟುಗಳನ್ನು ಕೊಟ್ಟರೆ ನಿಮ್ಮನ್ನು ಯಾವ ರೀತಿಯಿಂದ ನಿಷ್ಪಕ್ಷಪಾತವಾದ ಸರ್ಕಾರ, ಅಥವಾ ಕಲ್ಮಶರಹಿತವಾದ ಸರ್ಕಾರ, ಅಥವಾ ಲಂಚಗುಳಿತನದಿಂದ ದೂರವಿದ್ದ ಸರ್ಕಾರ ಅಂತ ಹೇಳಲಿ ಎಂಬುದನ್ನು ತಾವು ನನಗೆ ಉಪದೇಶ ಮಾಡಿ. ಇಂಗ್ಲೀಷ್ ಮೀಡಿಯಂ

ಶಾಲೆಗಳು ಬೇಡ ಎಂದು ಒಂದು ನಿರ್ಣಯವನ್ನು ತೆಗೆದುಕೊಂಡಿದ್ದೀರಿ. ಏಕೆ ತೆಗೆದುಕೊಂಡ್ರಿ ? ಇದಕ್ಕೆ ಕಾರಣವೇನೆಂದರೆ, ಕನ್ನಡ ಕಾವಲು ಸಮಿತಿಯ ಅಧ್ಯಕ್ಷರಾದ ಪಾಟೀಲ್ ಪುಟ್ಟಪ್ಪನವರ ಅಭಿಪ್ರಾಯ. ನಮ್ಮ ಕರ್ನಾಟಕ ರಾಜ್ಯದಲ್ಲಿ ಐ. ಎ. ಎಸ್. ಅಥವಾ ಐ. ಪಿ. ಎಸ್. ಆಗುವ ಜನರು ಇಲ್ಲವೇನು ? ಅವರು ಐ. ಎ. ಎಸ್., ಐ. ಪಿ. ಎಸ್. ಆಗಬೇಕಾದರೆ ಅವರು ಬರೀ ಕನ್ನಡ ಕಲಿತರೆ ಆಗುತ್ತದೆಯೇ ? ನಿಮ್ಮ ಮಕ್ಕಳನ್ನು ಬರೀ ಇಂಗ್ಲೀಷ್ ಶಾಲೆಯಲ್ಲಿ ಓದಿಸುತ್ತೀರಿ. ಹಿಂದುಳಿದವರು ಅತೀ ಬಡತನದಲ್ಲಿರತಕ್ಕಂತವರು, ಹಳ್ಳಿಯವರು ತಮ್ಮ ಮಕ್ಕಳನ್ನು ಕೇವಲ ಕನ್ನಡ ಶಾಲೆಗೆ ಕಳುಹಿಸಿ ಕನ್ನಡ ಪಾಸ್ ಮಾಡಿ ಅವರು ಇಲ್ಲಿ ಸಿಪಾಯಿ ಕೆಲಸದ ಕೂಲಿಗಾಗಿ ಬರಬೇಕು, ನಿಮ್ಮ ಮಕ್ಕಳು ಐ. ಎ. ಎಸ್. ಆಫೀಸರ್ ಆಗಿ ಬರಬೇಕೆಂಬುದು ನಿಮ್ಮ ಧೋರಣೆಯೇ ? ಕನ್ನಡ ಕಾವಲು ಸಮಿತಿಯ ಅಧ್ಯಕ್ಷರಾದಂತಹವರು ಏನಾದರೂ ಹೇಳಿದರೆ ಏನು ಹೇಳುತ್ತಿದ್ದಾರೆಂಬುದನ್ನು ವಿಚಾರ ಮಾಡುವ ಶಕ್ತಿ ಬೇಕೋ ಬೇಡವೋ ಎಂಬುದರ ಬಗ್ಗೆ ನಿಮ್ಮನ್ನು ಪ್ರಶ್ನೆ ಮಾಡುತ್ತೇನೆ. ಕನ್ನಡ ಕಾವಲು ಸಮಿತಿಯ ವಿಚಾರವನ್ನು ನಿಮ್ಮ ನೆನಪಿಗೆ ಏಕೆ ತರುತ್ತಿದ್ದೇನೆಂದರೆ, ಇವತ್ತು ಅವರು ಎಲ್ಲಿಯವರೆಗೆ ಹೋಗಿದ್ದಾರೆಂದರೆ ಪ್ರತಿಯೊಂದು ಮನೆಯ ವ್ಯವಹಾರದೊಳಗೂ ಆಫೀಸಿನೊಳಗೆ ಹೋಗಿ ಕೈಹಾಕುವ ಸ್ಥಿತಿಗೆ ಬಂದಿದ್ದಾರೆ ಅವರು ಇಷ್ಟೊಂದು ಉನ್ಮಾದ ಸ್ಥಿತಿಗೆ ಏಕೆ ಹೋದರೋ ಗೊತ್ತಿಲ್ಲ. ಇವತ್ತು ಎಲ್ಲ ಸಮಿತಿಯ ಅಧ್ಯಕ್ಷರ ರಾಜೀನಾಮೆಯನ್ನು ಕೇಳಿದಂತಹವರು, ಇವರು ಬೊಮ್ಮಾಯಿಯವರಿಗೆ ಬೇಕಾದಂತಹವರು ಎಂದು ಅವರ ರಾಜೀನಾಮೆಯನ್ನು ಕೇಳಲಿಲ್ಲವೇ ? ಅಥವಾ ಇವರ ರಾಜೀನಾಮೆ ಕೇಳಿದರೆ ಧಾರವಾಡದಲ್ಲಿ ತೊಂದರೆಯಾಗುತ್ತದೆಂದು ಅವರ ರಾಜೀನಾಮೆಯನ್ನು ಕೇಳಲಿಲ್ಲವೇ ? ಅವರು ಏಕೆ ರಾಜೀನಾಮೆಯನ್ನು ಕೊಡಲಿಲ್ಲ ? ತಾವು ಉಳಿದವರೆಲ್ಲರ ರಾಜೀನಾಮೆಯನ್ನು ಕೊಡಿಸಿದ್ದು, ಇವರ ಕಡೆಯಿಂದ ಏಕೆ ರಾಜೀನಾಮೆಯನ್ನು ತೆಗೆದುಕೊಳ್ಳಲಿಲ್ಲ ? ಇದಕ್ಕೆ ಏನು ಕಾರಣವೆಂದು ನಾನು ತಮ್ಮನ್ನು ಪ್ರಶ್ನೆ ಮಾಡಿದರೆ ತಾವು ಏನು ಹೇಳುತ್ತೀರಿ ? ಇದಕ್ಕೆ ತಮ್ಮ ಉತ್ತರವೇನು ? ಶ್ರೀಮಾನ್ ಪಾಟೀಲ್ ಪುಟ್ಟಪ್ಪನವರು ಡಿ. ಸಿ. ಗೆ. ಒಂದು ಪತ್ರ ಬರೆದಿದ್ದಾರೆ. ಇದೊಂದು ಉದಾಹರಣೆಯನ್ನು ಹೇಳುತ್ತಿದ್ದೇನೆ. ಇಂತಹವು ಬಹಳ ಆಗಿವೆ. ನನಗೂ ಅವರು ಅನೇಕ ಪತ್ರಗಳನ್ನು ಬರೆದಿದ್ದಾರೆ, ನೀವು ಬರೀ ಇಂಗ್ಲೀಷ್‌ನಲ್ಲೇ ಪತ್ರ ವ್ಯವಹಾರ ಮಾಡುತ್ತೀರಾ, ಕನ್ನಡದಲ್ಲಿ ಪತ್ರ ವ್ಯವಹಾರ ಮಾಡುವುದಿಲ್ಲ, ಇದು ಸರಿಯಲ್ಲ ಎಂಬುದಾಗಿ ಪತ್ರ ಬರೆದರು ಅದಕ್ಕೆ ನಾನು ಅವರಿಗೆ ಉತ್ತರ ಬರೆದಿದ್ದೇನೆ. ನಾನು ನಿಮ್ಮ ಪತ್ರ ಬರುವುದಕ್ಕಿಂತ ಮುಂಚೆ ಕನ್ನಡದಲ್ಲೂ ಪತ್ರ ವ್ಯವಹಾರ ಮಾಡುತ್ತಿದ್ದೆ, ನಿಮ್ಮ ಪತ್ರ ಬಂದ ಮೇಲೆ ಇನ್ನು ಮುಂದೆ ಬರೀ ಇಂಗ್ಲೀಷ್‌ನಲ್ಲೇ ಪತ್ರ ವ್ಯವಹಾರ ಮಾಡುತ್ತೇನೆ. ಕನ್ನಡದಲ್ಲಿ ಪತ್ರ ವ್ಯವಹಾರ ಮಾಡುವುದಿಲ್ಲ ಅಂತ ಪತ್ರ ಬರೆದೆ. ಏಕೆಂದರೆ ಉದ್ಧಟ ಪ್ರವೃತ್ತಿಯವರಿಗೆ ಉದ್ಧಮರಹಿತವಾದ ಉತ್ತರ ಕೊಡಬೇಕೆಂದು ಆ ರೀತಿ ಬರೆದಿದ್ದೇನೆ. ಇಲ್ಲದಿದ್ದರೆ ಆ ರೀತಿ ಬರೆಯುತ್ತಿರಲಿಲ್ಲ. ಕನ್ನಡದ ಮೇಲೆ ನನಗೆ ವ್ಯಾಮೋಹ ಇಲ್ಲ ಅಂತ ಅಲ್ಲ. ಕನ್ನಡದ ಅಭಿಮಾನ ಪಾಟೀಲ ಪುಟ್ಟಪ್ಪನವರಿಗೆ ಅವರನ್ನು ಕಾವಲು ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ ಮೇಲೆ ಬಂದಿದೆ. ಆದರೆ ನನಗೆ ಮೊದಲಿನಿಂದಲೂ ಬಂದಿದೆ. ಈ ಪಾಟೀಲಪುಟ್ಟಪ್ಪನವರು ಅಮೇರಿಕಾ ಕ್ಯಾಲಿಫೋರ್ನಿಯಾಕ್ಕೆ ಹೋಗಿ ಗ್ರಾಜುಯೇಟ್ ಆಗಿ ಬಂದಿದ್ದಾರೆ. ಆದರೆ ನಾನು ಇಲ್ಲೇ ಕಲಿತವನು.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಸಹ ಎಂ ಎ. ಮಾಡಿದ್ದೀರಿ.

ಶ್ರೀ ಕೆ. ಹೆಚ್. ಪಾಟೀಲ್.—ಹೌದು ನೀವು ನನ್ನನ್ನು ಸೋಲಿಸಿದ ಅವಧಿಯಲ್ಲಿ ಸುಮ್ಮನೆ ಕುಳಿತಿರಬೇಕಲ್ಲ ಎಂಬುದಾಗಿ ಎಂ. ಎ. ಮಾಡಿದೆ. ಇಲ್ಲದಿದ್ದರೆ ಅದನ್ನೂ ಮಾಡುತ್ತಿರಲಿಲ್ಲ

ಶ್ರೀ ಎಸ್. ಬಂಗಾರಪ್ಪ.—ಯಾವುದು ?

ಶ್ರೀ ಕೆ. ಹೆಚ್. ಪಾಟೀಲ್.—ಎಂ. ಎ. ಇನ್ ಪೊಲಿಟಿಕಲ್ ಸೈನ್ಸ್. ಒಂದು ಲೆಟರ್‌ನ್ನು ಮೀನಾಕ್ಷಿ ಸುಂದರಂರವರಿಗೆ ಬರೆಯುತ್ತಾರೆ. ಅದು ಏನೆಂದರೆ.—

> "ಧಾರವಾಡ ಜಿಲ್ಲೆಯ ರಾಣಿಬೆನ್ನೂರು ತಾಲ್ಲೂಕು ಕದ್ರಿ ಗ್ರಾಮ ಪಂಚಾಯಿತಿಯಲ್ಲಿ ೫೦ ಎಕರೆ ಜಮೀನನ್ನು ಕೆ. ಎಫ್. ಪಾಟೀಲ್ ಅವರು ೫೦ ಪೈಸೆಗೆ ಒಂದು ಎಕರೆಯಂತೆ ಹನುಮನಹಟ್ಟಿಯ ಗ್ರಾಮೀಣ ವಿಶ್ವವಿದ್ಯಾನಿಲಯದ ಅಭಿವೃದ್ಧಿಗೋಸ್ಕರ ಕೊಡಲಾಗಿದೆ. ಈಗ ಆ ಜಮೀನನ್ನು ಸ್ವಂತ ಉಪಯೋಗೋಸ್ಕರ ವಿಲೇವಾರಿಯಾಗುತ್ತಿದೆ ಎನ್ನುವ ದೂರು ನನಗೆ ಬಂದಿದೆ"

ಇವರು ಯಾರು ದೂರು ತೆಗೆದುಕೊಳ್ಳುವುದಕ್ಕೆ ? ಬ್ರಹ್ಮನನ್ನು ನೇಮಿಸಿದರೇನು ? ನಿಮಗೆ ಬರಲಿಲ್ಲ ದೂರು, ಅಥವಾ ನಮ್ಮ ಜಿಲ್ಲಾ ಮಂತ್ರಿಗಳ ಕಡೆಗೆ ದೂರು ಬರಲಿಲ್ಲ, ಅಥವಾ ಅಧ್ಯಕ್ಷರ ಕಡೆಗೆ ಬರಲಿಲ್ಲ ದೂರು, ಅಥವಾ ಎಂ. ಎಲ್. ಎ. ಆದ ನನ್ನ ಕಡೆಗೂ ಬರಲಿಲ್ಲ ದೂರು. ಅವರ ಕಡೆಗೆ ದೂರು ಬಂದಿದೆಯಂತೆ ಇದು ಕನ್ನಡ ಕಾವಲು ಸಮಿತಿಯ ಕೆಲಸವೇನ್ರೀ ? ನಾನು ಅವನಿಗೆ ಬರೆದಿದ್ದೇನೆ. ಇದು ಸರಿಯಲ್ಲ. ನಿಮಗೆ ಗೊತ್ತಾಗಲಿ ಎಂದು ಹೇಳುತ್ತಿದ್ದೇನೆ. ಇದು ಒಂದೇ ಅಲ್ಲ. ಎಲ್ಲ ಕಡೆಗೂ ಇದೇ ರೀತಿ ಮಾಡಿದ್ದಾರೆ. ಅದು ಮಾನ್ಯ ಬೊಮ್ಮಾಯಿಯವರಿಗೆ ಗೊತ್ತಿದೆ. ಆ ಜಮೀನನ್ನು ಆ ಪಂಚಾಯಿತಿಯವರು ಕೊಟ್ಟದ್ದಲ್ಲ. ಹಿಂದೆ ಬಾಂಬೆ ಗೌರ್ನಮೆಂಟ್‌ರವರೇ ಕೊಟ್ಟಿದ್ದಾರೆ. ೫೦೦ ಎಕರೆ ಅಂತ ಬರೆಯುತ್ತಾರೆ ಅವರಿಗೆ ಏನೂ ಗೊತ್ತಿಲ್ಲ, ಎಷ್ಟು ಎಕರೆ ಎಂಬುದು ಗೊತ್ತಿಲ್ಲ. ಆದರೂ ಪತ್ರ ಬರೆಯುತ್ತಾರೆ ಅದನ್ನು ಬಿಟ್ಟರೆ ಇನ್ನೊಬ್ಬರಿಗೆ ಮತ್ತೊಂದು ಪತ್ರ ಬರೆದಿದ್ದಾರೆ. ಕೆ. ಹೆಚ್. ಪಾಟೀಲರು ಮಂತ್ರಿಯಾಗಿದ್ದಾಗ ಆ ಜಮೀನನ್ನು ಅಗ್ರಿಕಲ್ಚರ್ ಯೂನಿವರ್ಸಿಟಿಗೆ ಕೊಡಬೇಕೆಂದು ಹುಕುಂ ಮಾಡಿದ್ದಾರೆ. ಅಂತ ಬರೆದಿದ್ದಾರೆ. ನಾನು ಹುಕುಂ ಮಾಡಲಿಲ್ಲ. ಆ ಸಂಸ್ಥೆಯವರೇ ಅಗ್ರಿಕಲ್ಚರಲ್ ಯೂನಿವರ್ಸಿಟಿಗೋಸ್ಕರ ಪುಕ್ಕಟೆಯಾಗಿ ಕೊಟ್ಟಿದ್ದಾರೆ ಈ ಮಹಾನುಭಾವನಿಗೆ ಏನು ಗೊತ್ತಿಲ್ಲದೆ ಬರೆಯುತ್ತಾರೆ. ಇದು ದೊಡ್ಡ ಮಾತಲ್ಲ, ಏತಕ್ಕೆ ಹೇಳುತ್ತಿದ್ದೇನೆಂದರೆ, ಇಂತಹ ವಿವೇಕದಿಂದ ದೂರ ಇರುವ ಜನರನ್ನು ಸಾಕುವುದಕ್ಕೆ ಅವನನ್ನು ಸಲಹುವುದಕ್ಕೆ ಹಣವನ್ನು ಕೊಡುತ್ತಿದ್ದೀರಿ. ಆ ರೀತಿಯ ಹಣವನ್ನು ಕೊಡುವಾಗಲೂ ಆತ ನನಗೆ ಪಗಾರ ಇಲ್ಲ, ಭತ್ಯ ಇಲ್ಲ ಅಂತ ಹೇಳುತ್ತಾರೆ. ಅವರು ನಡೆಸುತ್ತಿರುವಂತಹ ವಿಶ್ವ ವಾಣಿ ಪೇಪರ್ ಯಾವುದು ಇದೆ, ಅದು ೫೦೦–೬೦೦ ವರೆಗೆ ಸರ್ಕುಲೇಸನ್ ಇದ್ದರೂ ಸಹಿತ ಅದಕ್ಕೆ ಎಷ್ಟು ಜಾಹಿರಾತು ಕೊಡುತ್ತಿದ್ದೀರಿ ಎಂಬುದನ್ನು ತೆಗೆದು ನೋಡಿ, ಗೊತ್ತಾಗುತ್ತದೆ. ಕೊಡಿ. ಬೇಡ ಅನ್ನುವುದಿಲ್ಲ. ತಿಳಿಯಹಾಗೆಯಾದರೂ ಕೊಡಿ. ಇಂಡಿಯನ್ ಎಕ್ಸ್‌ಪ್ರೆಸ್‌ಗೆ ಕೊಡಿ, ನಾವು ಬೇಡ ಅನ್ನುವುದಿಲ್ಲ. ಏಕೆಂದರೆ ಅದರ ಸರ್ಕುಲೇಸನ್ ಕೂಡ ಜಾಸ್ತಿ ಇದೆ. ಅವರು ನಿಮ್ಮನ್ನು ಯಾವಾಗಲೂ ಹೊಗಳುತ್ತಾರೆ. ೫೦೦–೬೦೦ ಸರ್ಕುಲೇಸನ್ ಇರತಕ್ಕ ಪತ್ರಿಕೆಗೆ ಜಾಹಿರಾತಿಗಾಗಿ ಕೊಟ್ಟ ಹಣದಲ್ಲೇ ತನಗೆ ಸಂಬಳ ಗಿಂಬಳ ಅಂತ ಉಪಯೋಗ ಮಾಡುವ ಜನಗಳಿಗೆ ತಾವು ರಕ್ಷಣೆ ಮಾಡುವುದನ್ನು ಇನ್ನು ಮೇಲಾದರೂ ಬಂದ್ ಮಾಡಬೇಕೆಂದು ನಿಮ್ಮನ್ನು ಕೇಳಿಕೊಳ್ಳುತ್ತೇನೆ. ಇವರ ಮೇಲೆ ಈ ಸದನದ ಒಳಗೂ ಒಂದು ನಿರ್ಣಯ ಆಗಿದೆ ಇವರಿಗೆ ಸಂಬಂಧಪಟ್ಟ ವಿಷಯವನು ಪ್ರಿವಿಲೇಜ್ ಕಮಿಟಿಗೆ ಕಳುಹಿಸಬೇಕೆಂದು ನಿರ್ಣಯ ಆಗಿದೆ. ಅವರು ತಮ್ಮ ಮೇಲೆ ಸಹ ಆಪಾದನೆ ಮಾಡಿದರು, ಅಧ್ಯಕ್ಷರ ಮೇಲೆ ಮಾಡಿದರು, ಎಂ.ಎಲ್.ಎ.ಗಳಮೇಲೆ ಆಪಾದನೆಮಾಡಿದರು. ಇವತ್ತು ಅನೇಕ ತಾಲ್ಲೂಕು ಕಚೇರಿಗಳಲ್ಲಿ ಕನ್ನಡದಲ್ಲಿ ಬರೆದಿದ್ದಾರೋ ಅಥವಾ ಇಂಗ್ಲೀಷ್‌ನಲ್ಲಿ ಬರೆದಿದ್ದಾರೋ ಎನ್ನುವ ನೆಪವೊಡ್ಡಿ ಕಾನ್ಫಿಡೆನ್ಸಿಯಲ್ ರೆಕಾರ್ಡ್ಸ್‌ನ್ನು ನೋಡಿ ಅದರಲ್ಲಿ ಹೀಗೆ ಮಾಡಿದ್ದೀರಿ, ಹಾಗೆ ಮಾಡಿದ್ದೀರಿ ಎಂದೆಲ್ಲಾ ಹೇಳಿ ಜನರನ್ನು ಬೆದರಿಸಿ ತನ್ನ ಹಿಡಿತದಲ್ಲಿ ಇಟ್ಟುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇಂತಹ ಇವರ ದುರವೃತ್ತಿಗೆ ಈಡಾದಂತಹ ಜನತೆಗೆ ರಕ್ಷಣೆ ಕೊಡದೇ ಇದ್ದರೆ ಇದನ್ನು ಯಾವ ಸರ್ಕಾರ ಎಂದು ಕರೆಯಬೇಕೆಂದು ನೀವೆ ಹೇಳಿ. ನಾನು ಹೇಳುವುದಿಲ್ಲ. ಅವರನ್ನೇ ನಾನು ಕೇಳುತ್ತೇನೆ. ಉಳಿದ ಭಾಷೆಯನ್ನು ನಾವು ಹೇಳುವುದಕ್ಕೆ ಹೋಗುವುದಿಲ್ಲ. ಈ ಬಗ್ಗೆ ತಮ್ಮ ಉತ್ತರದಲ್ಲಿ ತಾವು ಹೇಳೇ ಹೇಳುತ್ತೀರಿ. ಅಧ್ಯಕ್ಷರೇ, ರಾಮಕೃಷ್ಣ ಹೆಗಡೆಯವರು ಅಧಿಕಾರಕ್ಕೆ ಬಂದಮೇಲೆ ನಾವು ಬೇಕೆಂದರೂ ಬೇಡ ಎಂದರೂ ಕೂಡ ಕಮಿಷನ್‌ಗಳನ್ನು ನೇಮಿಸುತ್ತಿದ್ದಾರೆ. ಅನೇಕ ಸಲ ಬೇಡ ಎಂದು ಹೇಳಿದರೂ ಕಮಿಷನ್‌ಗಳನ್ನೂ ಮಾಡಿದ್ದು ಎಷ್ಟು ವರದಿಗಳು ಬಂದಿವೆ ಇವುಗಳನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಒಬ್ಬ ಅಧಿಕಾರಿಯನ್ನೇನಾದರೂ ಇಟ್ಟಿದ್ದೀರಾ ? ಅವುಗಳ ಮೇಲೆ ಧೂಳು ಹೊಡೆಯುವುದಕ್ಕಾದರೂ ಸಿಬ್ಬಂದಿ ಇಟ್ಟಿದ್ದೀರಾ ? ಇದಕ್ಕೆ ಎಷ್ಟು ದುಡ್ಡು ಖರ್ಚಾಗಿದೆ ಸರ್ಕಾರದ ಹಣವನ್ನು ಸೂರೆ ಮಾಡಿ, ಅನೇಕ ಜನರ ಸಮಯವನ್ನು ಹಾಳುಮಾಡಿ ನೇಮಿಸಿರತಕ್ಕ ಅನೇಕ ಕಮಿಷನ್‌ಗಳಲ್ಲಿ ಯಾವುದೇ ರೀತಿಯ ನಿರ್ಣಯವನ್ನು ಪಡೆಯಲಾರದಂತೆ ನಡೆಯುತ್ತಿರುವುದನ್ನು ನೋಡಿದರೆ ಇದಕ್ಕೆ ದಕ್ಷ ಸರ್ಕಾರ ಎಂದು ಹೇಳಬೇಕೇ ? ಎನ್ನಲೇಬೇಕೆಂದರೆ ಹೇಳೋಣ ನಾನು ಆಗಲೇ ಎಜುಕೇಷನ್ ಪಾಲಿಸಿ ಬಗ್ಗೆ ಮಾತನಾಡುವಾಗ ನಮ್ಮ ಪುಟ್ಟಪ್ಪನವರ ಪ್ರಶ್ನೆಯಾಯಿತು ಇವತ್ತು ಎಲ್ಲಾ ಕಡೆ ಒಂದೇ ರೀತಿ ಸಿಲಿಬಸ್ ಇಲ್ಲ. ಒಂದೊಂದು ವಿಶ್ವವಿದ್ಯಾನಿಲಯದಲ್ಲಿ ಒಂದೊಂದು ನಮೂನೆಯ ಸಿಲಿಬಸ್. ಇದರ ಜೊತೆಗೆ ಮಾರ್ಕ್ಸ್‌ನ ಪದ್ಧತಿ ಕೂಡ ಬೇರೆಯೇ ಇದೆ. ಇವತ್ತು ಬೆಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಅತಿ ಹೆಚ್ಚಿನ ಮಾರ್ಕ್ಸ್ ತೆಗೆದುಕೊಂಡರೆ ಕರ್ನಾಟಕ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಅತಿ ಕಡಿಮೆ ಅಂಕಗಳನ್ನು ತೆಗೆದುಕೊಳ್ಳುತ್ತಾರೆ. ಈ ಬಗ್ಗೆ ಶಿಕ್ಷಕರನ್ನು ಕೇಳಿದರೆ, ಮಾರ್ಕ್ಸ್ ಪದ್ಧತಿ ಅವರದ್ದೂ ನಮ್ಮದೂ ಬೇರೆ ಎಂದು ಹೇಳುತ್ತಾರೆ. ಇಂತಹ ಉದಾಸೀನ ಕ್ರಮದಿಂದ ಹುಡುಗರಲ್ಲಿನ ತಾರತಮ್ಯ ಹಾಗೆಯೇ ಉಳಿಯುತ್ತದೆ. ಇವತ್ತು ನಾನು

ಮಾನವೊಂದು ಹೇಳುತ್ತಿದ್ದೇನೆ. ಇವತ್ತು ಕರ್ನಾಟಕದಲ್ಲಿ ೩ ಭಾಗದ ಜನರೂ ಒಂದೇ ಆಗಿ ಒಂದು ಗೂಡಿದಾಗ ಎಲ್ಲರೂ ಜನರನ್ನೂ ಸಮಾನ ದೃಷ್ಟಿಯಿಂದ ನೋಡತಕ್ಕ ಅವಕಾಶವನ್ನು ನಿಮ್ಮಿಂದ ನಾವು ಹೆಚ್ಚು ನಿರೀಕ್ಷೆ ಮಾಡುತ್ತೇವೆ. ಇವತ್ತು ಇದು ನಿಮಗೆ ಬೇಕಾಗಲೀ ಬೇಡದಾಗಲೀ ನೀವು ಇವತ್ತು ಕಾರವಾರ ಜಿಲ್ಲೆಯನ್ನು ಪ್ರತಿನಿಧಿಸುತ್ತಿದ್ದೀರಿ. ಆ ಜಿಲ್ಲೆಯ ಜನರಾದ ನೀವು, ಧಾರವಾಡ, ಬೆಳಗಾಂ, ಬಿಜಾಪುರ, ಗುಲ್ಬರ್ಗ, ಬೀದರ್, ರಾಯಚೂರು ಹಾಗೂ ಬಳ್ಳಾರಿ ಈ ಎಲ್ಲಾ ಪ್ರದೇಶಕ್ಕೆ ವಿಶೇಷ ವಾಗಿ ಅನ್ಯಾಯವಾಗುತ್ತಾ ಇರುವುದನ್ನು ತಡೆಗಟ್ಟುವುದಕ್ಕೆ ತಾವು ಸಮರ್ಥರಿದ್ದೀರಿ ಎಂದು ನಾವು ತಿಳಿದಿದ್ದೇವೆ. ಸುದೈವದಿಂದ ಇಲ್ಲಿಯವರೆಗೆ ಆಗಿರತಕ್ಕ ಅನ್ಯಾಯದ ಬಗ್ಗೆ ಹೋರಾಡುವುದಕ್ಕೆ ಅನೇಕ ಜನರು ತಯಾರಿದ್ದಾರೆ, ನಮ್ಮ ಜನ ಇವತ್ತು ಸಹನೆಯಿಂದ ನೋಡುತ್ತಿದ್ದಾರೆ. ಇವತ್ತು ಸಹನೆ ತಪ್ಪಿದರೆ ನಿಮ್ಮ, ನಮ್ಮ ಕೈಮೀರಿ ಹೋಗುವ ಘಟನೆಗಳು ನಡೆಯಬಹುದು. ಅದಕ್ಕಿಂತ ಪೂರ್ವದಲ್ಲಿ ನ್ಯಾಯ ನಿಷ್ಠೂರತೆಯಿಂದ ನ್ಯಾಯವನ್ನು ಇವರಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಅಲ್ಲಿಂದ ಬರುವ ಜನರಿಗೆ ಶಿಕ್ಷಣ ಬಹಳ ಕಡಿಮೆ ಇದೆ. ಇವತ್ತು ಆ ಭಾಗದಲ್ಲಿ ಕೆಲವು ಶಾಲೆಗಳು ಆಗಲೋ ಈಗಲೋ ಬೀಳುವ ರೀತಿಯಲ್ಲಿ ಇವೆ. ಹೊಂಬಳದ ಹತ್ತಿರ ಬೆಳಗಾನೂರಿನಲ್ಲಿರುವ ಶಾಲೆ ವಾರದೊಳಗೆ ಬೀಳುವಂಥಹ ಸ್ಥಿತಿಯಲ್ಲಿ ಇತ್ತು. ಅದು ಹಾಗೇ ಇದ್ದು ೫-೬ ತಿಂಗಳಿಂದ ಇನ್ನೂ ಬಿದ್ದು ಹೋಗಿಲ್ಲ. ಅಲ್ಲಿ ಮಕ್ಕಳು ಹೊರಗೇ ನಿಲ್ಲುತ್ತಾರೆಯೇ ಹೊರತು ಒಳಗೆ ಹೋಗುವು ದಿಲ್ಲ. ಅದರ ಬಗ್ಗೆ ಇವರಿಗೆ ಲಕ್ಷ್ಯವಿಲ್ಲ ಅದೇನೋ ೧೦೦ ಹಾಸ್ಟಲ್‌ಗಳನ್ನು ಕಟ್ಟುತ್ತೇವೆಂದು ಮಾನ್ಯ ಬಸವಣ್ಣಪ್ಪನವರು ಇಲ್ಲಿ ಹೇಳಿದ್ದೇ ಹೇಳಿದ್ದು, ಆ ದೃಷ್ಟಿಯಿಂದ ತಾವು ಇವತ್ತು ನೈಜವಾದ ರೂಪ ರೇಷೆಯನ್ನು ಒಳಗೊಂಡ ಪ್ಲಾನ್ ಮಾಡುವುದು ಅವಶ್ಯಕ ಇದೆ. ರೆಪಿನ್ಯೂ ಕಡೆ ಹೆಚ್ಚು ನಿಗಾ ವಹಿಸಿರುವ ಬೊಮ್ಮಾಯಿಯವರು ಪ್ಲಾನಿಂಗ್ ಕಡೆಗೆ ಹೆಚ್ಚು ಲಕ್ಷ ವಹಿಸುತ್ತಿಲ್ಲ. ಆಲ್ ಇಂಡಿಯಾ ಪ್ಲಾನನ್ನು ನೋಡಿ ಸ್ವಲ್ಪ ಆ ಕಡೆ ಈಕಡೆ ಹೆಚ್ಚು ಕಡಿಮೆ ಮಾಡಿ ಒಂದು ಪ್ಲಾನ್ ಹಾಕುತ್ತಾರೆ. ನಮ್ಮ

೧೧-೦೦ ಎ. ಎಂ.

ಕರ್ನಾಟಕ ರಾಜ್ಯಕ್ಕೆ ಬೇಕಾಗಿರುವಂತಹ ಪ್ಲಾನ್ ಬೇಕು. ಈ ಕರ್ನಾಟಕ ರಾಜ್ಯದಲ್ಲಿರುವ ೧೭೬ ತಾಲ್ಲೂಕುಗಳು ಏನೇನು ಬೆಳೆಗಳನ್ನು ಬೆಳೆಯುತ್ತವೆ, ವ್ಯವಸಾಯಗಾರರ ಉತ್ಪಾದನೆಯಾವುದು ಎಷ್ಟು ಪ್ರೊಡಕ್ಷನ್ ಆಗುತ್ತಿದೆ ಅವನ ಮನೆಗೆ ಆಗಿ ಮಾರ್ಕೆಟ್‌ಗೆ ಹೋಗುವ ಸರ್‌ಪ್ಲಸ್ ಎಷ್ಟು ಎಂಬುದನ್ನು ಕಂಡುಹಿಡಿಯಲಿಕ್ಕೆ ಒಂದು ಪ್ಲಾನ್ ಮಾಡಿ. ಮಾರ್ಕೆಟ್‌ಬಲ್ ಸರ್‌ಪ್ಲಸ್ ಕಂಡುಹಿಡಿಯುವುದಕ್ಕೆ ಪ್ರೊಸೆಸಿಂಗ್ ಆರ್ಗನೇಷನ್ ಕೋ ಆಪರೇಟಿವ್ ಸೊಸೈಟಿಗಳ ಮುಖಾಂತರ ಮಾಡಿ, ಅಥವಾ ಸರ್ಕಾರದ ವತಿಯಿಂದ ಅವುಗಳ ಮುಖಾಂತರ ಇಂಡಸ್ಟ್ರೀಸ್‌ಗಳನ್ನು ಸ್ಟಾರ್ಟ್ ಮಾಡಿ, ಇಂಡಸ್ಟ್ರೀಯಲೈಸೇಷನ್ ಆಗುತ್ತದೆ. ಯಾವ ರಾಜ್ಯದಲ್ಲಿ ವಿಶ್ವೇಶ್ವರಯ್ಯನವರಂತಹ ಮಹಾತ್ಮರು ಹುಟ್ಟಿದರೋ ಅವರು Industrialise of perish ಎಂದು ಹೇಳಿದರು. ಇವರು ಪೆರಿಷ್ ಎಂದು ಹೇಳಲಿಕ್ಕೆ ಹೊರಟಿದ್ದಾರೆ ಇಂಡಸ್ಟ್ರಿಯಲೈಸ್ ಇಲ್ಲ. ಮಾನ್ಯ ಜೆ. ಹೆಚ್. ಪಟೇಲ್‌ರವರು ನಾವು ಫ್ರಾನ್ಸ್‌ನಿಂದ ಕರೆದುಕೊಂಡು ಬರುತ್ತೇವೆ, ಇಂಗ್ಲೆಂಡ್ ಅಮೇರಿಕಾದಿಂದ ಕರೆದುಕೊಂಡುಬರುತ್ತೇವೆಂದು ಹೇಳುತ್ತಾರೆ. ಅವರು ಇಲ್ಲಿಗೆ ಬಂದು ರಕ್ತ ಸುರಿಸುವ ಇಂಡಸ್ಟ್ರೀಗಳನ್ನು ಮಾಡುತ್ತಾರೆಯೇ ಅಥವಾ ಹೊಟ್ಟೆತುಂಬುವ ಇಂಡಸ್ಟ್ರಿಗಳನ್ನು ಮಾಡುತ್ತಾರೆಯೇ ನಾನು ಯಾವುದು ದೊಡ್ಡದು ಸಣ್ಣದು ಇಂಡಸ್ಟ್ರೀಗಳನ್ನು ಮಾಡಬೇಕೆಂದು ಹೇಳುತ್ತಾ ಇಲ್ಲ. ನಮಗೆ ಬೇಕಾಗಿರುವುದು ಹೊಟ್ಟೆಗೆ ಕೂಳು ಮೈಗೆ ಬಟ್ಟೆ ಇರಲಿಕ್ಕೆ ಮನೆ ಈ ಮೂರೂ ಬಡ ಜನರಿಗೆ ದೊರೆಯುವಂತಾಗಬೇಕು. ಬಡ ಜನರಿಗೆ ಸಹಾಯವಾಗುವಂತಹ ಯೋಜನೆಗಳನ್ನು ಮಾಡಿದ್ದೀರಾ ? ಎಲ್ಲರಿಗೂ ಸಹಾಯ ಮಾಡುವುದಕ್ಕೆ ಈ ತರಹ ಯೋಜನೆಯನ್ನು ಜನರ ಎದುರಿಗೆ ಇಟ್ಟರೆ ಯಾರೇ ಬಂದರೂ ಎಷ್ಟೇ ಮಂದಿ ಬಂದರೂ ನಿಮ್ಮನ್ನು ಹೊರಗೆ ಹಾಕಲಿಕ್ಕೆ ಸಾಧ್ಯವಿಲ್ಲ. ನಿಮ್ಮನ್ನು ಹೋಗಿ ಎಂದು ಹೇಳುವುದಕ್ಕಾಗುವುದಿಲ್ಲ. ನಿಮಗೆ ವ್ಯಾಳ್ಯ ಸಿಕ್ಕಿಲ್ಲ. ನಾವು ವಿರೋಧಪಕ್ಷದವರು ಹೇಳುತ್ತಿದ್ದರೂ ನಿಮಗೆ ಲಕ್ಷ್ಯ ಹರಿಸುವುದಕ್ಕೆ ಆಗಿಲ್ಲ. ತಿಂಗಳುಗಟ್ಟಲೆ ಹೇಳುತ್ತಿದ್ದರೂ '' ಗೋರ್ಕಲ್ಲ ಮೇಲೆ ಮಳೆಗರೆದರೆ ಗೋರ್ಕಲ್ಲು ನೀರು ಕುಡಿಯುವುದೇ'' ನಾವು ಬಾಯಿ ತೀಟೆ ತೀರಿಸಿಕೊಳ್ಳುವುದಕ್ಕೆ ಮಾತನಾಡಿದರೆ. ಅದಕ್ಕೆ ಮುಖ್ಯ ಮಂತ್ರಿಗಳು ಏನೋ ಉತ್ತರ ಕೊಟ್ಟರೆ ಏನು ಪ್ರಯೋಜನ ? ನಾನು ಮಾತನಾಡಿದ ಪ್ರತಿಯೊಂದು ವಾಕ್ಯವನ್ನು ಅಧಿಕಾರಿಗಳು ಸಮರ್ಥ ರೀತಿಯಲ್ಲಿ ತೂಗಿ ನೋಡಿ ಯಾವುದನ್ನು ಅಮಲಿಗೆ ತರುವುದಕ್ಕೆ ಸಾಧ್ಯವಿದೆ ಅವನ್ನು ತರಲಿಕ್ಕೆ ಪ್ರಯತ್ನ ಮಾಡಬೇಕು, ಇಲ್ಲದಿದ್ದರೆ ನಾವು ಹೇಳಿದ್ದು ವ್ಯರ್ಥ ಪ್ರಲಾಪವಾಗುತ್ತದೆಎನ್ನುವ ಮಾತನ್ನು ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಮಾನ್ಯ ಬೊಮ್ಮಾಯಿಯವರು ಹೊರಗೆ ಹೋದರು, ಹರಿಜನರ ಹಿತರಕ್ಷಣೆಗೆ ಹೆಸರುವಾಸಿಯಾದ ಈ ಕರ್ನಾಟಕ ಸರ್ಕಾರಕ್ಕೆ ಒಂದು

ಸಣ್ಣ ವಿಷಯವನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಒಬ್ಬ ಹಾಲಪ್ಪ ನುರಿಯಪ್ಪ ವಾದರ್ ಅವನು ಟ್ರಸ್ಟಿಮಾಡಿ ಶಿರಹಟ್ಟಿ ತಾಲ್ಲೂಕು ನಾಗಡಿ ಗ್ರಾಮದೊಳಗೆ ೩೫ ಎಕರೆ ಹೊಲ ಕೊಟ್ಟರು. ಆ ಹೊಲದ ರಿವಿಜನ್ ಸರ್ವೆ ನಂ. ೫೪,೫೫ ೩೫ ಎಕರೆ ಜಮೀನು ಕೊಟ್ಟ ನಂತರ ಅವನು ಜಮೀನನ್ನು ಕೆಲವಾರು ವರ್ಷ ಸಾಗು ಮಾಡುತ್ತಾ ಬಂದರೂ ಆ ಮನುಷ್ಯನ ಕಡೆಯಿಂದ ಒಂದು ಅಧಿಕಾರ ಪತ್ರವನ್ನು ತೆಗೆದುಕೊಂಡರು ಒಬ್ಬ ಮನುಷ್ಯನ ಹೆಬ್ಬಟ್ಟು ಹೊತ್ತಿಸಿ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಆ ಕಾಗದವನ್ನು ನೋಂದಣಿ ಮಾಡಿದರು, ಹರಿಜನರ ಕಡೆ ಆ ಆಸ್ತಿ ಇನ್ನು ಮುಂದ ಕೊಡಲಿಕ್ಕೆ ಬರುವುದಿಲ್ಲ. ಮಾನ್ಯ ಬೊಮ್ಮಾಯಿಯವರ ನಜರತ್‌ಗೆ ಕಾಗದ ಕೊಟ್ಟರೆ ಅವರು ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದರು. ಹೆಬ್ಬೆಟ್ಟು ಹೊತ್ತಿದಂತಹ ಕಾಗದವನ್ನು ಯಾವ ಸಬ್ ರಿಜಿಸ್ಟ್ರಾರ್ ನೋಂದಣಿ ಮಾಡಿದ್ದರೋ ಅವರಿಗೆ ಪ್ರಮೋಷನ್ ಆಯಿತು. ಅಲ್ಲಿ ಅಸಿಸ್ಟೆಂಟ್ ಕಮೀಷನರ್ ಇದ್ದವರಿಗೆ ಡೆಪ್ಯುಟಿ ಕಮೀಷನರ್ ಆಗಿ ಪ್ರಮೋಷನ್ ಸಿಕ್ಕಿದೆಯೋ ಏನೋ ಗೊತ್ತಿಲ್ಲ ಬಹುತೇಕ ಡೆಪ್ಯುಟಿ ಕಮೀಷನರ್ ಆಗಿರಬೇಕು. ಈ ರೀತಿ ಮಾಡಿದರೆ ಯಾವರೀತಿಯಿಂದಹಾಗೂ ತ್ವರಿತಗತಿಯಿಂದ ಕ್ರಮಕೈಗೊಳ್ಳುತ್ತಾರೆ ಎನ್ನುವುದು ನನಗೆ ತಿಳಿಯುವುದಿಲ್ಲ ಎಂ. ಎಲ್. ಎ. ಮುಖಾಂತರ ಒಬ್ಬ ಬಡ ಹರಿಜನನಿಗೆ ಅನ್ಯಾಯವಾಗಿದೆಯೆಂದು ಸರ್ಕಾರದ ಗಮನಕ್ಕೆ ತಂದರೆ ಅದನ್ನು ಸರಿ ಮಾಡಲಿಕ್ಕೆ ಶಕ್ತಿಯಿಲ್ಲ ಅಂದರೆ ಇದನ್ನು ಯಾವ ಸರ್ಕಾರವೆಂದು ಹೇಳಬೇಕು ? ಮತ್ತೆ ಯಾರಿಗೆ ಸಹಾಯ ಮಾಡುತ್ತೀರಿ ? ನಮ್ಮಂತಹವರಿಗೆ ಸಹಾಯ ಮಾಡುತ್ತೀರೇನು ? ಬಡ ಜನರಿಗೆ ಅನ್ಯಾಯವಾಗಿದೆ ಎಂದು ಹೇಳಿದಾಗ ತಕ್ಷಣ ಮಾಡುತ್ತೇವೆಂದು ಹೇಳಿದರು. ಈಗಲಾದರೂ ಮಾನ್ಯ ಬೊಮ್ಮಾಯಿಯವರು ಮಾಡುತ್ತಾರೆಯೋ ? ಸಹಾಯ ಮಾಡುತ್ತೇವೆಂದು ಹೇಳಿದರು ಆದರೆ ಮಾಡಲಿಲ್ಲಇಲ್ಲಿ ಹೇಳಿದರೆಅದು ಭರವಸೆಗಳ ಸಮಿತಿಗೆ ಬರುತ್ತದೆಂದುಅಧ್ಯಕ್ಷರುಹೇಳುತ್ತಾರೆ. ನಮಗೇನು ಬೇರೆ ಉದ್ಯೋಗವಿಲ್ಲವೇನು ? ನಿಮ್ಮ ಕೈಯಲ್ಲಿ ಆಗದಿದ್ದರೆ ಆಗುವುದಿಲ್ಲವೆಂದು ಹೇಳಿ. ಮತ್ತೊಮ್ಮೆ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಯಾವ ಸಬ್ ರಿಜಿಸ್ಟ್ರಾರ್ ಹೆಬ್ಬೆಟ್ಟು ಹಾಕಿದ್ದನ್ನು ರಿಜಿಸ್ಟರ್ ಮಾಡಿದ್ದಾರೋ ಆರಿವಿಜನ್ ಸರ್ವೆನಂಬರ್ ೫೪ ೫೫ರಲ್ಲಿ೩೫ ಎಕರೆಭೂಮಿಯನ್ನು ಅವನಿಗೆಕೊಡಬೇಕು. ಬಾರಬಂಗಡಿ ಮಾಡಿ ಅವರು ಕಾಂಗ್ರೆಸ್ ಪಾರ್ಟಿಯಿಂದ ನಿಮ್ಮ ಕಡೆಗೆ ಏತಕ್ಕೆ ಬರುತ್ತಾರೆ ? ನೀವು ರಕ್ಷಣೆ ಕೊಡುತ್ತೀರಿ ಎಂದು ಬರುತ್ತಾರೆ. ಕಾಂಗ್ರೆಸ್ ಪಾರ್ಟಿ ಅಧಿಕಾರಕ್ಕೆ ಹೋಯಿತು, ಈ ೩೫. ಎಕರೆ ಹೊಲ ದಕ್ಕುವುದಿಲ್ಲ ನನಗೆ, ಅದಕ್ಕೆ ಇಲ್ಲಿಗೆ ಬರಬೇಕು ಅಂತ ಹಿಂದೆ ಹೇಳುತ್ತಿದ್ದರು ಏನಾದರೂ ತಪ್ಪು ಮಾಡಿದಗೆ ಕಾಂಗ್ರೆಸ್ಸಿಗೆ ಬರಬೇಕು ಅಂತ. ಆ ಲೆಕ್ಕ ಹೀಗಾಯ್ತು. ಅದರ ಸಲುವಾಗಿ ತಾವು ನಿಗಾವಹಿಸಿ ಕೆಲಸ ಮಾಡಬೇಕು ಎಂದು ನಾನು ನಿಮ್ಮನ್ನು ಕೇಳಿ ಕೊಳ್ಳುತ್ತೇನೆ. ಮೆಡಿಕಲ್ ಕಾಲೇಜ್ ವಿಷಯವಾಗಿ ನಿನ್ನೆ ಶ್ರೀ ಪಠಾನ್ ರಾಚಯ್ಯನವರು ಹೇಳಿದರು, ಏನೆಂದರೆ ನಾವು ೪೦ ಪರ್ಸೆಂಟ್ ರಿಜರ್ವೇಷನ್ ತೆಗೆದುಕೊಳ್ಳುತ್ತೇವೆ ಎಂದು. ನೀವು ಈ ಭಿಕ್ಷೆಬೇಡುವ ಕೆಲಸ ಏಕೆ ಮಾಡುತ್ತೀರಿ ? Why don't you have a definite policy ? ೪೦ ಪರ್ಸೆಂಟ್ ತೆಗೆದುಕೊಳ್ಳುವುದು ಬೇಡ ಎಂದು ನಾನು ಹೇಳುವುದಿಲ್ಲ. Have a definite policy. You can bring an ordinance or law or whatever you want. You control it. ಇವತ್ತು ನನಗೆ ಅನೇಕ ಜನರಿಂದ ಮನವಿ ಬಂದಿದೆ. ನೀವು ಪ್ರಾಮಾಣಿಕವಾಗಿ ಕೆಲಸ ಮಾಡುವವರಿಗೆ ಅವಕಾಶ ಕೊಡುವುದಿಲ್ಲ ಎಂದು. ನೀವು ಎಷ್ಟೇ ತಗೊಳ್ಳಿ. ಆದರೆ ಒಂದು ಫೀಜು ಅಂತ ನಿರ್ಧಾರ ಮಾಡಿಬಿಡಿ. ನೀವು ಪೂರ್ತಿಯಾಗಿ ಮಾಡಿಲ್ಲ. ಒಂದು ಕಾಲೇಜನ್ನು ನಡೆಸಬೇಕಾದರೆ ಶಕ್ತಿ ಇದ್ದವರು ನಡೆಸಲಿ. ಕಾಲೇಜು ನಡೆಸಬೇಕಾದರೆ ಬೇಕಾದಂಥ ಹಣ ಏನು ಇರುತ್ತದೆ, ಅದರೊಳಗೆ ಒಂದನೇ ಎಂಟು ಭಾಗವನ್ನು ಜನರಿಂದ ಹೇಗಾದರೂ ಕೊಡಿಸಲಿಕ್ಕೆಬೇಕು. ವಿದ್ಯಾರ್ಥಿಗಳಿಂದ ಇಷ್ಟೇ ಫೀಜು ವಸೂಲು ಮಾಡಬೇಕು. ಇದಕ್ಕೆ ಒಪ್ಪಿದೇ ಇದ್ದರೆ ನೀವು ಕಬೂಲು ಮಾಡುವುದಿಲ್ಲ ಅಂತ ಹೇಳಿ. ಇದುಬಿಟ್ಟು, ಕಾಂಪ್ರಮೈಸಿಂಗ್ ನೇಚರ್ ತಗೊಂಡರೆ ಹೇಗೆ ಸಾಧ್ಯವಾಗುತ್ತದೆ ? ನಿಜವಾಗಿ ಅವರು ಏನು ಹಣವಂತರು ಇದ್ದಾರೆ ನಮ್ಮನ್ನು ನಿಮ್ಮನ್ನು ಕೂಡಿ ದಾರಿತಪ್ಪಿಸುವವರು ಇದ್ದಾರೆ. ಮುಂದಿನ ಜನಾಂಗವನ್ನು ಹಾಳು ಮಾಡಿದರೆ ಯಾವ ರೀತಿಯಿಂದ ನಾವು ಶಹಭಾಷ್‌ಗಿರಿ ಕೊಡಬೇಕು ಎಂದು ಕೇಳುತ್ತೇನೆ ? ನಿಮಗೆ ಅದೇನೂ ಬೇಕಾಗಿಲ್ಲ. ನೀವು ನಮ್ಮ ಅನುಗ್ರಹದಿಂದ ಬಂದಿಲ್ಲ ಮತ್ತು ಅದನ್ನು ಕೇಳುವುದಿಲ್ಲ ಮತ್ತು ಅದನ್ನು ಅಪೇಕ್ಷೆ ಮಾಡುವುದಿಲ್ಲ. ಅದು ನಿಜ, ಆದರೆ ನಿಮಗೆ ಜನರು ಹಾಕಿದ ಓಟಿಗಾದರೂ ಪ್ರತಿಫಲ ಸಿಗುವಂತಾಗ ಬೇಕಾದರೆ ನಿಜವಾಗಿ ನೀವು ನಿಷ್ಠೂರತೆಯಿಂದ ಕೆಲಸ ಮಾಡಬೇಕು ಎಂದು ಹೇಳುತ್ತೇನೆ. ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ನಿಮಗೆ ಆ ಶಕ್ತಿ ಇದೆ. ಹೀಗೆ ಮಾಡುವ ನಿಮ್ಮ ಶಕ್ತಿ ದುರುಪಯೋಗ ಆಗಬಾರದು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ಕೆಲವು ಇಂಜಿನಿಯರಿಂಗ್ ಕಾಲೇಜುಗಳು ನಿಮ್ಮ ಸರ್ಕಾರದಿಂದ ರೆಕಮಂಡ್ ಆಗಿ ಹೋದವು.

ಇಬ್ಬರು ವಿದ್ಯಾಮಂತ್ರಿಗಳು ಪತ್ರ ಬರೆದರು. ಗ್ರಾಂಟ್‌ನಲ್ಲಿ ಇನ್‌ಕ್ಲೂಡ್ ಮಾಡಿ ಎಂದು ಟೆಲಿಗ್ರಾಂ ಕೊಟ್ಟರು. ಆದರೆ ಇನ್ನೂ ತನಕ ಮಾಡಿಲ್ಲ. ಏಕೆಂದರೆ ಅವರು ನಿಮ್ಮವರು ಅಲ್ಲ: ಮಾಡುವುದಕ್ಕೆ ಆಗಲಿಲ್ಲ. ಅದು ಸಣ್ಣದು ಆಗಿರುವುದರಿಂದ ನಾನು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಆದರೆ ಇನ್ನೂ ಇಂತಹ ಯಾವ್ಯಾವುದು ಇವೆ ಎಂಬುದು ನನ್ನ ನಜರಿಗೆ ಬಂದಿಲ್ಲ. ದಯವಿಟ್ಟು ಆಲ್ ಇಂಡಿಯಾ ಟೆಕ್ನಿಕಲ್ ಬೋರ್ಡ್‌ನಲ್ಲಿ ಏನು ಮಂಜೂರಾಗಿವೆ, ಅವುಗಳನ್ನಾದರೂ ಸಹ ಗ್ರಾಂಟ್ ಇನ್ ಏಡ್ ನೊಳಗೆ ಒಳಪಡಿಸಿ, ಕೆಲವರಿಗೆ ಏನು ಕೊಡುತ್ತೀರಿ, ಅದನ್ನು ಕಡಿಮೆ ಮಾಡಿ ಅವರಿಗೂ ಇವರಿಗೂ ಹಂಚಿಕೊಡಿ. ಕೇಂದ್ರ ಸರ್ಕಾರದವರು ಕೊಡುತ್ತೇವೆ ಎಂದು ಹೇಳುತ್ತಾರೆ, ಆದರೆ ನಿಮ್ಮಿಂದ ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ದಯವಿಟ್ಟು ಇದನ್ನು ತೆಗೆದುಕೊಳ್ಳುವ ಹಾಗೆ ಮಾಡಿ. ಮಾನ್ಯ ಅಧ್ಯಕ್ಷರೇ, ಈ ಜಿಲ್ಲಾ ಪುನರ್‌ವಿಂಗಡಣೆ ಸಲುವಾಗಿ ಬಹಳ ಹೇಳಿದರು. ನಾನಂತೂ ಶ್ರೀ ಹೆಗಡೆಯವರ ಸಲುವಾಗಿ ಬಾಯಲ್ಲಿ ನೀರು ಹಾಕಿಕೊಂಡು ಕಾಯುತ್ತಾ ಕೂತಿದ್ದೆ. ಇವತ್ತು ಮಾಡುತ್ತಾರೆ, ನಾಳೆ ಮಾಡುತ್ತಾರೆ ನಾಡದ್ದು ಮಾಡುತ್ತಾರೆ ಎಂದು. ಮೂರು ಕಮಿಟಿಗಳನ್ನು ನೇಮಿಸಿದರು. ಒಂದನ್ನು ಮಾತ್ರ ಮೆಚ್ಚಬೇಕು. ಅವರಿಗೆ ಅಭಿನಂದನೆಗಳನ್ನು ಸಲ್ಲಿಸಬೇಕು, ಎನೆಂದರೆ ವಿರೋಧ ಪಕ್ಷದವರು ಮಾತನಾಡುವವರಿದ್ದಾರೆ ಅವರ ಮಾತನಾಡದಹಾಗೆ ಮಾಡುವ ಶಕ್ತಿ ಅವರಿಗೆ ಇದೆ. ಅದು ಹೇಗೆ ಎಂದರೆ, ಒಂದು ಕಮೀಶನ್ ಅನ್ನು ನೇಮಿಸುವುದು. ಅದು ಆಗುವವರೆಗೆ ಕಾಯಬೇಕಲ್ಲ. ಅದಾದ ಮೇಲೆ ಇನ್ನೊಂದು ಕಮಿಶನ್ ಅನ್ನು ನೇಮಿಸುವುದು. ಅಲ್ಲಿಯವರೆಗೆ ಮತ್ತೆ ತಡಿಯಬೇಕಲ್ಲ ? ಇವತ್ತಿನ ದಿವಸಕ್ಕೆ ಜಿಲ್ಲೆ ಮಾಡಬೇಕೆಂದು ಎನ್ನುವುದಾದರೆ ನಿಜವಾಗಿ ತ್ವರಿತಗತಿಯಲ್ಲಿ ಮಾಡಿ ಎಲ್ಲೆಲ್ಲಿ ಹಣಖರ್ಚು ಮಾಡಬೇಕೋ ಅಲ್ಲಿ ಸ್ವಲ್ಪ ತಡಮಾಡಿ. ಇಲ್ಲದಿದ್ದರೆ ಜಿಲ್ಲೆ ಮಾಡುವುದಕ್ಕೆ ಸಾಧ್ಯವಿಲ್ಲವೆಂದು ಸ್ಪಷ್ಟವಾಗಿ ಹೇಳಬೇಕು. ನಮ್ಮ ಗದುಗಿನ ವಾಟರ್ ಸಪ್ಲೈ ಸಲುವಾಗಿ ಬಹಳ ಹೇಳಿದ್ದಾರೆ. ಅವರು ಪತ್ರ ಬರೆದಿದ್ದಾರೆ. ಜೊತೆಗೆ ಸೌಜನ್ಯಯುತವಾಗಿ ಇದನ್ನು ಮಾಡಿಕೊಟ್ಟೇ ತೀರುತ್ತೇನೆ ಎಂದು ಹೇಳಿದ್ದಾರೆ. ಇದಕ್ಕಾಗಿ ಅವರಿಗೆ ನನ್ನ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಕೊಟ್ಟಂಥ ವಚನವನ್ನು ಅವರು ಪಾಲನೆ ಮಾಡಲಿ ಎಂದು ನೆನಪುಮಾಡಿಕೊಡುತ್ತೇನೆ.

ಇನ್ನು ಈ ಜನರಲ್ ಅಡ್ಮಿನಿಸ್ಟ್ರೇಷನ್ ಹೇಗಿದೆ ಎಂದರೆ ಅನೇಕ ಜನ ಈ ಡೀಸೆಂಟ್ರಲೈಸೇಷನ್ ಹೇಳಿದ್ದಾರೆ. ಪದೇ ಪದೇ ಹೇಳುತ್ತಾರೆ, ಕೇಂದ್ರ ಸರ್ಕಾರದವರು ನಮಗೆ ಪವರ್ ಕೊಡಬೇಕು. ಕೇಂದ್ರ ಸರ್ಕಾರದಿಂದ ಪವರ್ ಯಾವುದೂ ಬಂದಿಲ್ಲ ಎಂದು. ಇವತ್ತು ನೀವು ಪವರ್ ಯಾವುದಕ್ಕೆ ಕೊಟ್ಟಿದ್ದೀರಿ. ನಾವು ಜಿಲ್ಲಾ ಸಮಿತಿಗಳಿಗೆ ಕೊಟ್ಟಿದ್ದೇವೆ, ತಾಲ್ಲೂಕು ಸಮಿತಿಗಳಿಗೆ ಕೊಟ್ಟಿದ್ದೇವೆ ಎಂದು ಹೇಳಬಹುದು. ನೀವು ಹೇಳುವ ಮಾತನ್ನು ಕೇಳಿಕೊಂಡು, ನಾವು ಇಲ್ಲಿಗೆ ಬರುವುದೇ ಬೇಡ ಅಲ್ಲೇ ಏನಾದರೂ ವ್ಯವಸ್ಥೆ ಮಾಡಿಕೊಳ್ಳೋಣ ಎಂದು ಅಲ್ಲಿ ಹೋದಮೇಲೆ, ಪಂಚಾಯ್ತಿಯವರ ಭತ್ಯೆ ಕೊಡುವುದಕ್ಕೆ ಸಹಿತ ಟ್ರಜರಿಗೆ ಹೋಗಬೇಕು, ಟ್ರೆಜರಿಯವರು ಟೋಕನ್ ಕೊಡುತ್ತಾರೆ, ಆ ಟೋಕನ್ ತೆಗೆದುಕೊಂಡು ಮನೆಗೆ ಬಂದು ಕುಳಿತುಕೊಳ್ಳಬೇಕು. ಅವರು ಯಾವಾಗ ಹೇಳುತ್ತಾರೆ ಆಗ ಹೋಗಬೇಕು. ಈ ಒಂದು ಸಣ್ಣ ಭತ್ಯಕೂಡ ಸರಿಯಾಗಿ ಸಿಕ್ಕುತ್ತಿಲ್ಲ. ಏಕೆ ಈ ಪರಿಯಿಂದ ಪವರ್ ಸೆಂಟ್ರಲೈಸ್ ಮಾಡುತ್ತೀರಿ ? ನಿಮಗೆ ಫೈನಾನ್ಸ್ ಮೇಲೆ ಹಿಡಿತವಿಲ್ಲವೆ ? ನೀವು ಫೈನಾನ್ಸ್ ನಲ್ಲಿ ನುರಿತವರು ಇದ್ದೀರಿ. ನಿಮಗೆ ಸಹಾಯಕವಾಗುವಂಥ ಸಿಬ್ಬಂದಿ ಇಲ್ಲವೇ ? ಇವತ್ತು ಎಷ್ಟು ಮಂತ್ರಿಗಳು ಇದ್ದಾರೆ, ಒಬ್ಬರಾದರೂ ಕೂಡ ನಾನು ಇದನ್ನು ಖರ್ಚುಮಾಡೇ ಮಾಡುತ್ತೇನೆ, ಈ ಕೆಲಸ ಮಾಡಿಕೊಡುತ್ತೇನೆಂದು ಹೇಳತಕ್ಕಂಥ ಎದೆಗಾರಿಕೆ ಯಾರಿಗೂ ಇಲ್ಲ, ಮಾನ್ಯ ಜೆ.ಹೆಚ್. ಪಟೇಲರಿಗೆ ಇರಬಹುದು, ಅವರ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ, ಅವರು ಏನು ಹೇಳುತ್ತಾರೋ, ಅದನ್ನು ಮಾಡುತ್ತಾರೆ. ಆದರೆ ಮಾನ್ಯ ಬೊಮ್ಮಾಯಿಯವರಿಗೂ ಸಹಿತ ಇಲ್ಲ, ಅವರು ಅನೇಕ ಸಂದರ್ಭಗಳಲ್ಲಿ ಹೇಳುತ್ತಾರೆ. ಆದರೆ ಇಲ್ಲಿ ಬಂದಮೇಲೆ ಪುಷ್ ಆಗುತ್ತದೆ. ಆಮೇಲೆ ಮಾನ್ಯ ಮುಖ್ಯಮಂತ್ರಿಯವರು ಮೊನ್ನೆ ಒಂದು ಸ್ಟೇಟ್‌ಮೆಂಟ್ ಮಾಡಿದ್ದನ್ನು ನೋಡಿದೆ. ಅನೇಕ ಜನರಿಗೆ ಪ್ರಮೋಷನ್ ಕೊಟ್ಟರು. ಎಷ್ಟು ಮಂದಿಗೆ ಚೀಫ್ ಸೆಕ್ರಟರಿ ಲೆವಲ್‌ನಲ್ಲಿ ಪ್ರಮೋಷನ್ ಕೊಟ್ಟಿರಿ ಎನ್ನುವುದನ್ನು ಪೇಪರಿನಲ್ಲಿ ನೋಡಿದೆ. ಇವರು ಮಹಾ ದಕ್ಷತೆಯನ್ನು ತೋರಿಸಿದ್ದಾರೆಂದು ಪ್ರಮೋಷನ್ ಕೊಟ್ಟರೋ, ಅಥವಾ ಇವರು ಏನಾದರೂ ಹಣದ ಕೊರತೆ ಇದೆ ಎಂದು ನಿಮಗೆ ಅಪ್ಲಿಕೇಷನ್ ಕೊಟ್ಟರೋ ? ನಾವು ಯಾವುದನ್ನಾದರೂ ಕೇಳಿದರೆ, ನೀವು ತಿರುಗಿ ಮುರುಗಿ ಕೇಂದ್ರ ಎಂದು ಹೇಳುತ್ತೀರಿ. ಕೇಂದ್ರ ಏನಾದರೂ ಹಾಳಾಗಿ ಹೋಗಲಿ, ನೀವು ಏಕೆ ಇದರ ಕಡೆ ಲಕ್ಷ್ಯ ಕೊಟ್ಟಿರಿ. ನೀವು ಒಂದುಹೆಜ್ಜೆ ಮುಂದು ಹೋಗಿ, ಇವರನ್ನು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ, ಇವರಿಗೆ ಬೇರೆ ರೂಲ್ಸ್ ಮಾಡಿ, ಹೊಸ ಕೇಡರ್ ತಯಾರು ಮಾಡಿ, ಮಹಾತ್ಮ ಗಾಂಧಿಯವರ ತತ್ವದಂತೆ ಮಿನಿಮಮ್ ಸ್ಯಾಲರಿ ೫೦೦–೧೦೦೦ ಕೊಡತಕ್ಕಂಥವ್ಯವಸ್ಥೆ ಮಾಡಿದ್ದರೆ,

ಅದನ್ನು ನಾನು ಒಪ್ಪುತ್ತೀನೆ. ಕರ್ನಾಟಕ ಮಾದರಿ ಇದೆಯೆಂದು ಹೇಳಬಹುದಿತ್ತು. ಅದು ಬಿಟ್ಟು ನೀವು ಸ್ಟೈಫಂಡಿಯರಿಗಳನ್ನು ನೇಮಕ ಮಾಡಿಕೊಂಡು, ಅವರಿಗೂ ಸರಿಯಾದ ನೆಲೆ ಇಲ್ಲದೆ, ಅವರು ಇವತ್ತು ಮುಷ್ಕರ ಮಾಡಬೇಕೆಂದು ಮಾಡುತ್ತಿದ್ದಾರೆ. ಇವತ್ತು ಒಬ್ಬ ರೈತನು ತನಗೆ ತಿನ್ನುವುದಕ್ಕೆ ಕೂಳಿಲ್ಲದೆ ಬಳಲುತ್ತಿರುವಾಗ, ಯಾವತರಹದ ಲಕ್ಷ್ಯವನ್ನು ಆತನ ಬಗ್ಗೆ ಕೊಡದೇ ಅಧಿಕಾರಿಗಳಿಗೆ ಮಾತ್ರ ೮-೧೦ ಸಾವಿರ ಪಗಾರ ಕೊಡುತ್ತಿದ್ದೀರಿ. ಇಲ್ಲಿರತಕ್ಕ ಸೆಕ್ರೆಟೇರಿಯಟ್ ಜನ ಎಷ್ಟು ವರ್ಷದಿಂದ ಒಂದೇಕಡೆ ಇದ್ದಾರೆ, ಇವರು ವರ್ಗವೇ ಆಗುವುದಿಲ್ಲ. ನಮ್ಮದು ನಿಮ್ಮದು ವರ್ಗ ಆಗಬಹುದು. ಏತಕ್ಕಾಗಿ ಎಂದು ಕೇಳಿದರೆ, ಇವರಿಗೆ ಸ್ಪೆಷಲೈಸ್ಡ್ ಟ್ರೈನಿಂಗ್ ಆಗಿದೆ ಎಂದು ಹೇಳುತ್ತೀರಿ. ಹಾಗಾದರೆ ಉಳಿದವರಿಗೆ ಸ್ಪೆಷಲೈಸ್ಡ್ ಟ್ರೈನಿಂಗ್ ಹಾಗುವುದುಬೇಡವೇ ? ಅವರು ದಡ್ಡರಾಗಿಯೇ ಇರಬೇಕೇ. ಯಾವ ದೃಷ್ಟಿಯಿಂದ ಈ ರೀತಿ ಮಾಡುತ್ತಿದ್ದೀರಿ. ಕೆಲವು ಸಲ ನಿವೃತ್ತಿಯಾದವರನ್ನೂ ಸಹಿತ ಕೆಲಸಕ್ಕೆ ತೆಗೆದುಕೊಳ್ಳುತ್ತೀರಿ ? ಮುಖ್ಯಮಂತ್ರಿಗಳು ಯಾವರೀತಿ ಇದಕ್ಕೆ ಒಪ್ಪುತ್ತಾರೋ ನನಗಂತೂ ಗೊತ್ತಿಲ್ಲ. ಇವರಿಗೆ ಮೊದಲಿನಷ್ಟೇ ಪಗಾರ ಕೊಡುತ್ತೀರಿ ಈ ಬಗ್ಗೆ ಕೇಳಿದರೆ, ಟೆಂಪರರಿ ಇಲ್ಲವೇ ಕಾಂಟ್ರಾಕ್ಟ್ ಬೇಸಿಸ್ ಮೇಲೆ ನೇಮಿಸಿಕೊಳ್ಳುತ್ತೇವೆ ಎಂದು ಹೇಳಬಹುದು. ಆದ್ದರಿಂದ ಯಾವುದು ಯೋಗ್ಯ ಎಂಬುದನ್ನು ತಾವೇ ತಮ್ಮ ವಿವೇಕದಿಂದ ಪರಿಶೀಲನೆಮಾಡಿ. ಮತ್ತೆ ಬೇರೆ ಕಡೆಯು ಅಧಿಕಾರಿಗಳನ್ನು ಒಂದೊಂದು ವರ್ಷಕ್ಕೂ ವರ್ಗ ಮಾಡುತ್ತೀರಿ, ಉದಾಹರಣೆಗೆ ಗದಗ್‌ನಲ್ಲಿ ಅಸಿಸ್ಟೆಂಟ್ ಕಮೀಷನರ್ ಒಬ್ಬರು ಇದ್ದರು, ನಾನು ಅವರ ಹೆಸರನ್ನು ಹೇಳಬಾರದು. ಆದರೂ ಹೇಳುತ್ತೇನೆ. ತೋರವಿ ಎಂದು ಅವರ ಹೆಸರು ಅವರು ಉತ್ತಮ ಆಫೀಸರ್ ಇದ್ದರು, ನಿಷ್ಪಕ್ಷಪಾತವಾಗಿ ಕೆಲಸ ಮಾಡುತ್ತಿದ್ದರು, ಇವರ ಬಗ್ಗೆ ಮಾನ್ಯ ದೊಡ್ಡಮೇಟಿಯವರದ್ದೂ ಕೂಡ ಯಾವುದೇ ತಕರಾರು ಇರಲಿಲ್ಲ. ಇವರನ್ನು ಒಂದು ವರ್ಷ ನಾಲ್ಕು ತಿಂಗಳಿಗೇ ವರ್ಗ ಮಾಡಿದ್ದೀರಿ, ಏತಕ್ಕೆ ಮಾಡಿದಿರಿ ? ನಾವು ಟ್ರಾನ್ಸ್‌ಫರ್ ಮಾಡಿ, ಡಿಸ್‌ಮಿಸ್ ಮಾಡಿ ಎಂದು ಕೆಲವರ ಬಗ್ಗೆ ಹೇಳಿದ್ದೇವೆ. ಆದರೆ ಮಾಡಿಲ್ಲ, ಲಂಚ ತೆಗೆದುಕೊಂಡವರು, ಎಲ್ಲಾ ಮಾಡಿದವರು ಡಿವಿಜನಲ್ ಕಮೀಷನರ್ ಇದ್ದವರು, ಅವರನ್ನು ಸೆಕ್ರೆಟೇರಿಯೇಟ್‌ಗೆ ನೇಮಕ ಮಾಡಿದ್ದೀರಿ, ಇವರ ಬಗ್ಗೆ ತಮ್ಮ ಕಡೆ ಡಾಕ್ಯುಮೆಂಟ್ ಕಳುಹಿಸಿದ್ದೇನೆ. ಮಾನ್ಯ ಬೊಮ್ಮಾಯಿಯವರ ಕಡೆಗೂ ಕಳುಹಿಸಿಕೊಟ್ಟಿದ್ದೇನೆ. ಅವರಿಂದ ಏನೂ ಉತ್ತರ ಬಂದಿಲ್ಲ, ನಿಮ್ಮ ಕಡೆಯಿಂದ ಮಾತ್ರ ಪ್ರಾಮ್ಪ್ಟ್ ಆಗಿ ಉತ್ತರ ಬಂದಿದೆ. ನನಗೆ ನಿಮ್ಮ ಕಡೆಯಿಂದ ಯಾವುದಕ್ಕೆ ಉತ್ತರ ಬರುವುದಿಲ್ಲ, ಆಗ ನಾನು, ಮಾನ್ಯ ಹೆಗ್ಗಡೆಯವರು ನನ್ನ ವಿರುದ್ಧ ಇದ್ದಾರೆ ಎಂದು ನಾನು ತಿಳಿದುಕೊಳ್ಳುತ್ತೇನೆ. ಅವರು ನಿಜವಾಗಿಯೂ ಲಂಚಕೋರತನ ಮಾಡಿದ್ದಾರೆ ಎಂದು ಡಾಕ್ಯುಮೆಂಟರಿ ಎವಿಡೆನ್ಸ್ ತೋರಿಸಿ ಕೊಟ್ಟೆ. ಆದರೆ ಅವರಿಗೆ ಏನೂ ಆಗಲಿಲ್ಲ. ಅವರು ದೊಡ್ಡ ಅಧಿಕಾರಿ ಇದ್ದಾರೆ. ಇದೇ ಒಬ್ಬ ಕಾನ್‌ಸ್ಟೇಬಲ್ ಇದ್ದರೆ ಇಮ್ಮಿಡಿಯಟ್ ಆಗಿ ಸಸ್ಪೆಂಡ್ ಮಾಡುತ್ತೀರಿ. ಈ ರೀತಿ ತಾರತಮ್ಯ ಆಗಬಾರದು ಎಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ಈಗಲೂ ಸಹಿತ ಎಲ್ಲ ಭಾಗಗಳಿಗೂ ಸರಿಸಮಾನವಾಗಿ ಹಿತಕರವಾಗುವಂತಹ ಕೆಲಸಗಳು ತಮ್ಮಿಂದ ಆಗಲಿ, ತಮ್ಮ ಕಾಲದಲ್ಲಿ ಕರ್ನಾಟಕ ರಾಜ್ಯ ಹೆಚ್ಚು ಅಭಿವೃದ್ಧಿಯಾಗಲಿ ಎಂದು ಹಾರೈಸುತ್ತಾ ಒಂದು ಮಾತನ್ನು ಹೇಳುತ್ತೇನೆ. ಶ್ರೀಮಾನ್ ಹೆಗಡೆಯವರು ಸೆಂಟ್ರಲ್ ಗೌರ್ನಮೆಂಟ್ ನಿಮ್ಮಗು. ಪಂಜಾಬ್‌ನಲ್ಲಿ ಈ ರೀತಿ ಆಯಿತು, ಅಲ್ಲಿ ಇಷ್ಟು ಆಯಿತು, ಅಲ್ಲಿ ೫೦ ಮಂದಿ ಕೊಲೆಯಾಗುತ್ತಾರೆ, ಇಲ್ಲಿ ಒಂದೇ ಕೊಲೆಯಾಗುತ್ತದೆ ಎಂದು ಹೇಳುತ್ತಿರುತ್ತಾರೆ. ನಾನು ಇವತ್ತು ತಮ್ಮನ್ನು ಕೇಳುತ್ತೇನೆ. ಶ್ರೀಮಾನ್ ತಿವಾರಿಯವರು ನಿಮ್ಮ ಸ್ನೇಹಿತರಿದ್ದಾರೆ, ಅವರು ಇವತ್ತಿನದಿವಸ ಹಿಂದೆ ಯಾವ ಫೈನಾನ್ಸ್ ಮಿನಿಸ್ಟರೂ ಕೊಡಲಾರದಂಥ ಅನೇಕ ಸವಲತ್ತುಗಳನ್ನು ಅಗ್ರಿಕಲ್ಚರಿಸ್ಟ್ಸ್‌ಗೆ ಕೋ-ಆಪರೇಟಿವ್ಸ್‌ಗೆ ಕೊಟ್ಟಿದ್ದಾರೆ, ಅವುಗಳನ್ನು ತಾವು ಅಭ್ಯಾಸ ಮಾಡಿ, ಉಪಯೋಗ ಮಾಡುವಂತಹ ರೀತಿಯಲ್ಲಿ ನಮ್ಮ ರಾಜ್ಯದಲ್ಲೂ ಮಾಡಿದರೆ ಚೆನ್ನಾಗಿರುತ್ತದೆ. ಅಗ್ರಿಕಲ್ಚರಿಸ್ಟ್ಸ್‌ಗೆ ಹತ್ತು ರೂಪಾಯಿಗಿಂತ ಹೆಚ್ಚು ಇಂಟರೆಸ್ಟ್ ಹಾಕಬಾರದು ಎಂದು ನಬಾರ್ಡ್ ಮುಖಾಂತರ ಮಾಡಿದ್ದಾರೆ. ಅವುಗಳೆಲ್ಲವನ್ನೂ ನಾನು ಇಲ್ಲಿ ಓದುವುದಕ್ಕೆ ಇಚ್ಛೆಪಡುವುದಿಲ್ಲ. ಬಹಳ ಇದೆ, ತಾವು ದಯವಿಟ್ಟು ನೋಡಬೇಕು. ಅದೂ ಅಲ್ಲದೆ, ನ್ಯಾಷನಲ್ ಕೋಆಪರೇಟೀವ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಸಲುವಾಗಿ ಅವರಿಗೆ ಒಂದು ಸಹಾಯವನ್ನು ನಾನು ಕೊಟ್ಟಿದ್ದೆ. ಬಹಳಷ್ಟು ಸ್ಕೀಮ್‌ಗಳು ಇವೆ. ಮೊನ್ನೆ ಸಹಕಾರ ಇಲಾಖೆಯ ಮೇಲೆ ಮಾತನಾಡುತ್ತಾ ಹೇಳಿದ್ದೆ. ಅದರಲ್ಲಿ ೧೭ ಬೇರೆ ಬೇರೆ ತರಗತಿಯ ಸ್ಕೀಮ್‌ಗಳು ಇದ್ದಾವೆ. ಆ ಸ್ಕೀಮ್‌ಗಳಲ್ಲಿ ೧೬ ನಮ್ಮ ರಾಜ್ಯಕ್ಕೆ ಅನ್ವಯವಾಗುವಂತಹದು ಇದೆ. ಅವರಲ್ಲಿ ಹೇರಳವಾದ ಹಣ ಇದೆ. ಈ ಹಣದಲ್ಲಿ ಕೆಲಭಾಗವನ್ನು ಸಾಲರೂಪದಿಂದ ಕೊಡುತ್ತಾರೆ, ಕೆಲಭಾಗವನ್ನು ಗ್ರಾಂಟ್ ರೂಪದಿಂದ ಕೊಡುತ್ತಾರೆ. ಸಾಲ ರೂಪದಿಂದ ಕೊಟ್ಟರೂ ಈಗ ನಮಗೆ ಸಿಗುವುದು ಸಿಗುತ್ತದಲ್ಲ. ಅದನ್ನು ತಂದು ಉಪಯೋಗ ಮಾಡಿಕೊಳ್ಳುವುದಕ್ಕೆ ನಮ್ಮ ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿರುತ್ತೀರಾ

ಎಂದು ಕೇಳುತ್ತೇನೆ. ಅವರು ಕೊಟ್ಟಂಥ ಹಣವನ್ನು ಸ್ಯಾಂಕ್ಷನ್ ಮಾಡಬೇಕಾದರೂ ರಿಲೀಸ್ ಮಾಡಬೇಕಾದರೂ ನಮ್ಮ ಫೈನಾನ್ಸ್ ಸೆಕ್ರೆಟರಿಯವರು ಮಾಡುತ್ತಿಲ್ಲ. ಚೀಫ್ ಮಿನಿಸ್ಟರ್‌ರವರು ಹೇಳಿದರೂ ಕೊಡಲಾರದೆ ಇದ್ದಾರೆ. ಇಂತಹ ದಾರ್ಢ್ಯವನ್ನು ಅವರು ಹೊಂದಿರುತ್ತಾರೆ. ಎಂದರೆ ಅವರು ದಡ್ಡರಾದರೂ ಇರಬಹುದು, ಇಲ್ಲ ಜನಗಳಿಗೆ ಸಹಾಯ ಮಾಡಬಾರದು ಎಂಬ ಪ್ರವೃತ್ತಿ ಅವರಿಗೆ ಇರಬಹುದು. ಇವೆರಡರ ಒಳಗೆ ಯಾವುದು ಉಂಟು ಎಂಬುದನ್ನು ಕಂಡುಹಿಡಿಯುವ ಕೆಲಸ ಮಾಡಬೇಕೆಂದು ನಿಮ್ಮನ್ನು ಬೇಡುತ್ತೇನೆ. ಇನ್ನುಮೇಲಾದರೂ ಎನ್. ಸಿ. ಡಿ. ಸಿ. ಹಣವನ್ನು ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಕೊಡಬೇಡಿ. ನಿಮ್ಮ ಕೈಯಲ್ಲೇ ಇಟ್ಟುಕೊಳ್ಳಿ. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಿಂದ ಬೇರೆ ಇಡಿರಿ. ಬೇರೆ ಇಟ್ಟು ಎನ್. ಸಿ. ಡಿ. ಸಿ. ಸ್ಕೀಮ್‌ನಿಂದ ಬರತಕ್ಕಂಥ ಹಣವನ್ನು ಖರ್ಚು ಮಾಡಿ, ತಿರುಗಿ ರೀಇಂಬರ್ಸ್ ಕೇಳುವುದಕ್ಕೆ ಬರುವ ರೀತಿಯಲ್ಲಿ ವ್ಯವಸ್ಥೆ ಮಾಡಿರಿ ಎಂದು ಹೇಳುತ್ತೇನೆ. ಇದರ ಬಗ್ಗೆ ಲಕ್ಷ್ಯ ಹರಿಸಿದ್ದೀರೋ ಇಲ್ಲವೋ ಗೊತ್ತಿಲ್ಲ. ಮಾನ್ಯ ಸಭಾಧ್ಯಕ್ಷರೇ, ಕೆಲವರು ಅಧಿಕಾರಿಗಳು ಸಸ್ಪೆಂಡ್ ಆಗಿದ್ದಾರೆ. ಸಸ್ಪೆಂಡ್ ಇದ್ದಂಥವರಲ್ಲಿ ಅನೇಕ ಜನ ಪ್ರಾಮಾಣಿಕರಿದ್ದಾರೆ. ಅವರ ಬಗ್ಗೆ ಯಾವುದೇ ತರಹದ ನಿಷ್ಠೂರವಾದಂಥ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದು ಸಾಧ್ಯ ಇಲ್ಲ. ಆದರೂ ಸಹಿತ ಹ್ಯುಮಿಲಿಯೇಷನ್ ಮಾಡುವುದಕ್ಕಾಗಿ ಅವರನ್ನು ಸಸ್ಪೆನ್‌ಷನ್‌ನಲ್ಲಿ ಇಟ್ಟಿದ್ದಾರೆ. ಬಹಳ ದಿವಸ ಅಂದರೆ ೬ ತಿಂಗಳ ಮೇಲೆ ಸಸ್ಪೆಂಡ್‌ನಲ್ಲಿಡಬಾರದು ಎಂದು ಕಾನೂನು ಇದ್ದರೂ ಸಹಿತ ಆ ಕಾನೂನನ್ನು ಭಂಗ ಮಾಡುತ್ತೀರಿ. ವಿಜಿಲೆನ್ಸ್‌ನಿಂದ ಕ್ಲಿಯರ್ ಬರುವವರೆಗೆ ಅವರನ್ನು ರೀಇನ್‌ಸ್ಟೇಟ್ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳುತ್ತೀರಿ. ವಿಜಿಲೆನ್ಸ್ ಎಂದರೆ ಅದೇನೂ ಬ್ರಹ್ಮಲಿಪಿ ಅಲ್ಲ. ಅವರಿಗೂ ಒಂದು ವರ್ಷದೊಳಗೆ ಇಷ್ಟು ಕೆಲಸ ಮಾಡಬೇಕು, ಆರು ತಿಂಗಳೊಳಗೆ ಇಷ್ಟು ಕೆಲಸ ಮಾಡಬೇಕು, ಮೂರು ತಿಂಗಳೊಳಗೆ ಇಷ್ಟು ಕೆಲಸ ಮಾಡಬೇಕು ಎಂದು ಒಂದು ಷರತ್ತು ಹಾಕಿ. ಅವರು ಇವತ್ತಿನ ದಿವಸ ಮೂರು ತಿಂಗಳ ಒಳಗೆ ಕ್ಲೋಸ್ ಮಾಡದೇ ಹೋದರೆ ಅವರೂ ಸಹ ಕರಪ್ಟ್ ಆಗಿದ್ದಾರೆ ಎಂದು ಆಪಾದನೆ ಮಾಡಿದ್ದಾರೆ ಇದಕ್ಕೆ ತಮ್ಮ ಅಂಬೋಣ ಏನು ? ಈ ದೃಷ್ಟಿಯಿಂದ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅಧಿಕಾರಿಗಳು ಯಾರು ಎಂದು ನಾನು ಹೆಸರು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ಆದರೆ ನಿಜವಾಗಿಯೂ ಅನ್ಯಾಯವಾಗಿದೆ. ನಿಮ್ಮ ಕೈಯಿಂದ ಅನ್ಯಾಯ ಆಗುವುದನ್ನು ಜನತೆ ಹಾಗೂ ನಿಮ್ಮ ಕೆಲವು ಸ್ನೇಹಿತರಿಂದ ನೋಡುವುದಕ್ಕೆ ಆಗುವುದಿಲ್ಲ. ಅದನ್ನು ತಿದ್ದಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಸಭಾಧ್ಯಕ್ಷರೇ, ನಾನು ಹೆಚ್ಚು ಮಾತುಗಳನ್ನು ಹೇಳಲಾರೆ. ರಾಮಕೃಷ್ಣ ಹೆಗಡೆಯವರು ಇವತ್ತಿನಿಂದಲಾದರೂ ಮುಂದಿನ ವರ್ಷದೊಳಗೆ ೧೭೫ ತಾಲ್ಲೂಕುಗಳಲ್ಲಿ ಪ್ರತಿಯೊಂದು ತಾಲ್ಲೂಕಿನಲ್ಲೂ ಸಹ ಬೆಳೆಯತಕ್ಕ ಬೆಳೆಗಳು ಏನು, ಯಾವರೀತಿ ಅವುಗಳನ್ನು ಮಾರ್ಕೆಟ್‌ಗೆ ತರಬೇಕಾದರೆ ಅವುಗಳಿಗೆ ಯಾವ ಯಾವ ಸೌಲಭ್ಯಗಳು ಬೇಕು ಎಂದು ಅವುಗಳ ಬಗ್ಗೆ ಯೋಚನೆ ಮಾಡದೇ ಹೋದರೆ ಕರ್ನಾಟಕ ಇನ್ನೂ ಬಡವಾಗುತ್ತದೆ, ಎಂದೆಂದೂ ಉದ್ಧಾರವಾಗುವುದಿಲ್ಲ ಎಂಬ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮುಂದೆ ಬರುವವರು ಮಾಡುವುದಕ್ಕಿಂತ ಇವರೇ ಇದನ್ನು ಮಾಡಿ ಹೆಚ್ಚು ಕೀರ್ತಿಯನ್ನು ಪಡೆಯಲಿ ಎಂದು ಹೇಳುತ್ತೇನೆ, ಅದರ ಮೇಲೆ ಅವರ ಇಚ್ಛೆ. ಆಮೇಲೆ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಗಳ ಬಗ್ಗೆ ನಿನ್ನೆ ದಿವಸ ಒಂದು ವಿಚಾರ ನೋಡಿದೆ. ಸೆಪ್ಟೆಂಬರ್ ತಿಂಗಳಲ್ಲಿ ಚುನಾವಣೆ ಮಾಡಬೇಕೆಂದು ಸರ್ಕಾರದವರು ಒಂದು ಪ್ರಕಟಣೆಯನ್ನು ಹೊರಡಿಸಿದ್ದಾರೆ. ಮಾನ್ಯ ಅಧ್ಯಕ್ಷರೇ, ಸೆಪ್ಟೆಂಬರ್ ತಿಂಗಳಿನಲ್ಲಿ ಮಳೆಗಾಲವಾದ್ದರಿಂದ ಡಿಸೆಂಬರ್ ತಿಂಗಳವರೆವಿಗೂ ಎಕ್ಸ್‌ಟೆಂಡ್ ಮಾಡಿ. ಏರಿಯ ನಿಯಮಗಳಲ್ಲಿರತಕ್ಕಂಥದಕ್ಕೆ ತಾವು ನೇಮಿಸಿರುವ ಶ್ರೀಮಾನ್ ಅಜ್ಜೀಬಾಳ ಹೆಗಡೆಯವರ ರಿಪೋರ್ಟ್‌ನ್ನು ಪರಿಶೀಲನೆ ಮಾಡಿ ಸೂಕ್ತ ನಿರ್ಣಯವನ್ನು ತೆಗೆದುಕೊಂಡ ನಂತರ ಚುನಾವಣೆ ಮಾಡುವಂತಾದ್ದನ್ನು ಮಾಡಿ. ಡಿಸೆಂಬರ್ ತಿಂಗಳವರೆವಿಗೂ ಈಗ ಇರುವಂತಹ ಕಮಿಟಿಗಳನ್ನೇ ಮುಂದುವರಿಸಿ, ಒಂದು ವೇಳೆ ತಾವು ಡಿಸೆಂಬರ್ ತಿಂಗಳಲ್ಲಿ ಚುನಾವಣೆ ಮಾಡುವುದಾದರೆ ಅಲ್ಲಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡುವುದಾದರೆ ಪ್ರಜಾಪ್ರಭುತ್ವಕ್ಕೆ ಕುಂದು ತಂದಾತಾಗುತ್ತದೆ. ಅದನ್ನು ಮಾಡಬೇಡಿ. ಮಾನ್ಯ ಅಧ್ಯಕ್ಷರೇ, ಹೇಳಲು ಹೋದರೆ ಅನೇಕ ಸಂಗತಿಗಳಿವೆ. ಇವತ್ತು ತಾವು ಸಹಕಾರಿ ಸಂಸ್ಥೆಗಳನ್ನು ಸಸ್‌ಪೆಂಡ್ ಮಾಡುವುದಕ್ಕೆ ಹೊರಟಿದ್ದೀರಿ. ಯಾವ ರೀತಿಯಲ್ಲೂ ಸಂಬಂಧವಿಲ್ಲದೆ ಇರತಕ್ಕಂಥ ಅನೇಕ ಸಹಕಾರಿ ಸಂಸ್ಥೆಗಳನ್ನು ಸಸ್‌ಪೆಂಡ್ ಮಾಡಿದ್ದೀರಿ. ನಾವೇನಾದರೂ ಕೇಳಿದರೆ ಕೋರ್ಟಿಗೆ ಹೋಗಿ ಎಂದು ಹೇಳಬಹುದು. ಎಲ್ಲರೂ ಕೋರ್ಟಿಗೆ ಹೋಗುವುದಕ್ಕಾಗುತ್ತದೆಯೇ ? ಅದು ಸರಿಯಾದುದು ಅಲ್ಲ. ಸಹಕಾರಿ ಜೀವನದಲ್ಲಿ, ಸಹಕಾರಿ ತತ್ವದಲ್ಲಿ, ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಒಂದು ಮಾತನ್ನು ಹೇಳಿ

ದ್ದಾರೆ. ಅದೇನೆಂದರೆ ಪ್ರಜಾಪ್ರಭುತ್ವದಲ್ಲಿ ಪ್ರಜಾಪ್ರಭುತ್ವವಾದಿಗಳು ಯಾರೇ ಆಗಲಿ, ಸಹಕಾರಿ ಚಳುವಳಿಯಲ್ಲಿ ನಮ್ಮ ಹಿಡಿತ ಹಿಡಿದುಕೊಳ್ಳುವುದಕ್ಕೆ ಅಪೇಕ್ಷಪಡುವುದಿಲ್ಲ ಆಡಳಿತವನ್ನು ನಿಮ್ಮ ಕೈಗೆ ಕೊಟ್ಟು ನಾಮಿನೇಷನ್ ಮಾಡುವುದಿಲ್ಲವೆಂದು ಹೇಳಿದ್ದರು. ಆದರೆ ಇವತ್ತು ನಮ್ಮ ನಾಯಕರು ಕರ್ನಾಟಕ ಸೆಂಟ್ರಲ್ ಬ್ಯಾಂಕ್‌ಗೆ ನಾಲ್ಕು ಜನರನ್ನು ನಾಮಿನೇಷನ್ ಮಾಡಿದ್ದಾರೆ. ಅದಕ್ಕೆ ಮಾನ್ಯ ಬೊಮ್ಮಾಯಿಯವರ ಒತ್ತಾಯವೆಂದು ಹೇಳಿ. ತಾವು ಮಾಡಿದ್ದಕ್ಕೆ ಅಡ್ಡಿ ಇಲ್ಲ. ಆದರೆ ಅಲ್ಲಿ ಹಣ ಕೊಡಬೇಕಲ್ಲ. ತಾವು ನೂರಾರು ೯೫ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿ ಇಲ್ಲಿಯ ವರೆವಿಗೂ ಕೊಟ್ಟಿಲ್ಲ. ನಾನೆ ಕೇಳಿದೆ. ಇದರಲ್ಲಿ ತಾವು ದುಡ್ಡು ಕೊಟ್ಟ ಮೇಲೆ ಅವರಿಗೆ ಅಧಿಕಾರ ಬರುತ್ತದೆ. ದುಡ್ಡು ಕೊಡದಿದ್ದರೆ ಅಧಿಕಾರ ಬರುವುದಿಲ್ಲ. ಅದೂ ನೀವು ಯಾರನ್ನು ನಾಮಿನೇಷನ್ ಮಾಡಿದ್ದೀರಿ. ಚಲೋ ಇರುವವರನ್ನಾದರೂ ಮಾಡಿದ್ದರೆ ಪರವಾಗಿಲ್ಲ. ನಮ್ಮ ಮಾನ್ಯ ಸದಸ್ಯರಾದಂತಹ ಚನ್ನಬಸವ ದೊಡ್ಡಮೇಟಿ ಯವರಂತಹವರನ್ನು. ಅದನ್ನು ಸಹ ಮಾಡಿಲ್ಲ. ಎಂತಹವರನ್ನೋ ಹಾಕಿದ್ದೀರಿ. ಈ ದೃಷ್ಟಿಯಿಂದ ನಾನು ನಿಜವಾಗಿಯೂ ನಿಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅನೇಕ ಸಂದರ್ಭಗಳಲ್ಲಿ ಅನೇಕ ಪರಿಸ್ಥಿತಿಯಲ್ಲಿ ಸಹಕಾರ ಸಂಘಗಳ ಹತ್ಯೆ ಯಾಗುತ್ತಿದೆ. ಅದು ಆಗಬಾರದು. ಇದು ನಿಮ್ಮ ಕಾರ್ಯ ವೈಖರಿಯಾಗಬಾರದು. ಸಹಕಾರ ಸಂಘಗಳನ್ನು ಯಾರು ಚೆನ್ನಾಗಿ ನಡೆಸುತ್ತಿದ್ದಾರೋ ಅಂತಹವರಿಗೆ ಇನ್ನು ಹೆಚ್ಚು ಸಾಮರ್ಥ್ಯ ಕೊಟ್ಟು ಚೆನ್ನಾಗಿ ನಡೆಸಿ ಎಂದು ಹೇಳಬೇಕು. ಅದು ಬಿಟ್ಟು ತಾವು ಆ ಸಹಕಾರ ಸಂಘಗಳನ್ನು ತೆಗೆದು ಕೊಂಡು ನಡೆಸಲಿಕ್ಕೆ ಆಗದೆ ಪುನಃ ಅವರಿಗೆ ಕೊಟ್ಟರೆ ಕೆಟ್ಟಿರುವ ಸಹಕಾರಿ ಸಂಘಗಳಲ್ಲಿ ಇವು ಇನ್ನು ಕೆಟ್ಟ ಸಹಕಾರಿ ಸಂಘಗಳಾಗುತ್ತವೆ. ಆ ರೀತಿ ಮಾಡಬೇಡಿ. ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ, ಈಗ ಐದು ವರ್ಷಗಳಿಂದ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿ ಸರ್ಕಾರವನ್ನು ನಡೆಸಿಕೊಂಡು ಬಂದಿದ್ದಾರೆ. ದಿನಾಂಕ ೧೦-೧-೧೯೮೩ರಂದು ಅವರು ಮುಖ್ಯಮಂತ್ರಿಗಳಾಗಿ ಅಧಿಕಾರವನ್ನು ವಹಿಸಿ ಕೊಂಡರು. ಇವತ್ತು ಅವರಿಗೆ ಅಂದು ಇದ್ದಂತಹ ಹುಮ್ಮಸ್ಸು ಜನರ ಉತ್ತೇಜನ ಇಂದು ಇದೆಯೇ? ಇವತ್ತು ಏನಾಗಿದೆ ಎಂದು ಪ್ರಶ್ನೆ ಹಾಕಿ ನಾನೇ ಉತ್ತರ ಹೇಳಬೇಕು. ಯಾವ ಒಂದು ಹಿನ್ನೆಲೆಯಲ್ಲಿ ಯಾವ ಜನರ ಬೆಂಬಲವನ್ನು ನೀವು ಪಡೆದು ಅಧಿಕಾರವನ್ನು ವಹಿಸಿಕೊಂಡಾಗ ಯಾವ ಜನರ ಬೆಂಬಲ ಇತ್ತೋ, ಅದು ಇವತ್ತು ಇಲ್ಲವೆಂದು ನಾನು ಹೇಳಬೇಕಾಗಿದೆ. ನೀವು ಅಂದು ಅಧಿಕಾರವನ್ನು ಸ್ವೀಕಾರ ಮಾಡಿದಾಗ ಈ ರಾಜ್ಯದ ಜನರ ಎದುರು ಒಂದು ಘೋಷಣೆಯನ್ನು ಮಾಡಿ ಒಂದು ಕಾರ್ಯ ಕ್ರಮವನ್ನು ಹಾಕಿಕೊಂಡಿರಿ. ಆಗ ಘೋಷಣೆ ಮಾಡಿದ್ದುದು ಏನು ? ಈ ರಾಜ್ಯದಲ್ಲಿ ಈಗ ಇರತಕ್ಕಂಥ ಅನಿಷ್ಟತೆಯನ್ನು ತೊಡೆದು ಹಾಕಿ ನಾನು ಪವಿತ್ರವಾದ, ಕಲ್ಮಷವಿಲ್ಲದ ಇರತಕ್ಕಂಥ ಒಂದು ರಾಜಕೀಯ ಆಡಳಿತವನ್ನು ಕೊಡುತ್ತೇನೆಂದು ಘೋಷಣೆ ಮಾಡಿದಿರಿ. ಈ ಘೋಷಣೆಯನ್ನು ಪರಿಶೀಲನೆ ಮಾಡಿ ನೋಡಿದಾಗ ನೀವು ಏನು ಸಾಧನೆ ಮಾಡಿದ್ದೀರೆಂದು ನಾನು ಹೇಳುವುದಾದರೆ, ನೀವು ಇದರಲ್ಲಿ ನೂರಕ್ಕೆ ನೂರರಷ್ಟು ಸೋತಿದ್ದೀರಿ. ಮತ್ತೊಂದು ಮಾತು, ಮಾನ್ಯ ಮುಖ್ಯ ಮಂತ್ರಿಯವರು ಅಧಿಕಾರಕ್ಕೆ ಬಂದಾಗ ಹೇಳಿದ ಮಾತನ್ನು ರಾಜ್ಯದ ಜನತೆಯು ಮರೆತಿರಬಹುದು. ಆದರೆ ನಾವು ಅದನ್ನು ಜ್ಞಾಪಕ ಮಾಡಿಕೊಳ್ಳಲೇ ಬೇಕಾಗಿದೆ. ಇವರು ಅಧಿಕಾರವನ್ನು ವಹಿಸಿಕೊಂಡ ದಿನ ಒಂದು ಘೋಷಣೆಯನ್ನು ಮಾಡಿದರು. ಅದೇನೆಂದರೆ, This is appear in Indian Express dated 11-1-83.

"The Karnataka Chief Minister Mr. Ramakrishna Hegde said here on Tuesday that his Government would enquire into concrete cases of corruption against the previous Government. In an Interview to UNI, he said the people of the State were disillusioned and dissatisfied and obviously wanted a change of Government, as they were disgusted with political and administrative corruption and non-performance of previous Government. An eight member Janata Government has assumed office.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

Mr. Hegde said his Government would give priority to the elimination of administrative corruption. On the development side, the rural development including building of infrastructure for irrigation would receive immediate attention. On the economic front the Chief Minister said his Government would concentrate on the arrest of price rise, reduction of poverty and providing employment to the unemployed, industrialisation would go on unhampered."

(SRI D. T. JAYAKUMAR IN CHAIR)

ಇದು ಅವರು ಮಾಡಿರತಕ್ಕ ಘೋಷಣೆ. ನಾವು ಇದನ್ನು ವಿಷದವಾಗಿ ಕೂಲಂಕಷವಾಗಿ ಪರಿಶೀಲನೆ ಮಾಡಬೇಕು. ಅವರು ಕಾಂಗ್ರೆಸ್ ಸರ್ಕಾರವನ್ನು ಬಯ್ದು ಬಹಳ ಭ್ರಷ್ಟ ನೀರಸವಾಗಿರತಕ್ಕ ಸರ್ಕಾರವನ್ನು ಕಾಂಗ್ರೆಸ್‌ನವರು ಕೊಟ್ಟಿದ್ದರು ಮತ್ತು ಕಾಂಗ್ರೆಸ್ ಸರ್ಕಾರ ಅಸಹ್ಯವಾದ ರೀತಿಯಲ್ಲಿ ಆಡಳಿತವನ್ನು ನಡೆಸಿತ್ತು. ಅದನ್ನು ನಿವಾರಣೆ ಮಾಡುತ್ತೇನೆ ಎಂದು ಇವರು ಹೇಳಿದ್ದರು. ಆವತ್ತಿನ ಮುಖ್ಯ ಮಂತ್ರಿಯಾಗಿದ್ದ ಗುಂಡೂರಾವ್ ವಿರುದ್ಧ ಖಟ್ಲೆ ಹಾಕಿ ಅವರ ಸರ್ಕಾರ ಮಾಡಿರತಕ್ಕಂಥ ಲಂಚರುಷುವತ್ತುಗಳ ಬಗ್ಗೆ ತನಿಖೆ ಮಾಡಿಸುವುದಾಗಿ ಹೇಳಿದ್ದರೂ ಸಹ ಇವತ್ತಿನವರೆಗೂ ಆ ರೀತಿ ತನಿಖೆಯನ್ನು ಇವರು ಮಾಡಿಸಲಿಲ್ಲ. ಕಾಂಗ್ರೆಸ್ ಸರ್ಕಾರದವರು ಭ್ರಷ್ಟನಿರಸನವಾದ ಸರ್ಕಾರವನ್ನ ಕೊಟ್ಟಿದ್ದಾರೆ, ಅವರು ಬಹಳ ಅಸಹ್ಯವಾಗಿ ಆಡಳಿತವನ್ನು ಮಾಡಿದ್ದಾರೆ, ಅವರ ಕಾಲದಲ್ಲಿ ಆಗಿರುವ ಎಲ್ಲಾ ಭ್ರಷ್ಟಾಚಾರ, ಲಂಚರುಷುವತ್ತುಗಳ ಬಗ್ಗೆ ತನಿಖೆ ಮಾಡಿಸುತ್ತೇನೆಂದು ಹೇಳಿದ ಇವರು ಇವತ್ತಿನವರೆಗೂ ತನಿಖೆಯನ್ನು ಏಕೆ ಮಾಡಿಸಲಿಲ್ಲವೆಂದು ನಾನು ಕೇಳುತ್ತೇನೆ? ಕಾಂಗ್ರೆಸ್ ಸರ್ಕಾರ ಇದ್ದಾಗ ಯಾವ ಭ್ರಷ್ಟಚಾರವು ನಡೆದಿಲ್ಲ. ಭ್ರಷ್ಟಾಚಾರವನ್ನು ಕಾಂಗ್ರೆಸ್ ಸರ್ಕಾರದವರು ಮಾಡಿದ್ದಾರೆ ಎನ್ನತಕ್ಕಂತಾದ್ದರ ಬಗ್ಗೆ ಕಿಂಚಿತ್ತು ಮತ್ತು ಲವಲೇಶ ಆಧಾರ ಕೂಡ ನಿಮಗೆ ಸಿಗಲಿಲ್ಲವಾದ್ದರಿಂದ ನೀವು ಅದರ ಬಗ್ಗೆ ತನಿಖೆ ಮಾಡಿಸಲಿಲ್ಲ. ನಿಜವಾಗಿ ಕಾಂಗ್ರೆಸ್ ಸರ್ಕಾರ ಭ್ರಷ್ಟಾಚಾರ ಮಾಡಿದ್ದರೆ ನೀವು ಅಧಿಕಾರಕ್ಕೆ ಬಂದು ೫ ವರ್ಷಗಳಾದರೂ ಅದರ ಬಗ್ಗೆ ಏಕೆ ತನಿಖೆ ಮಾಡಿಸಲಿಲ್ಲ? ಕಾಂಗ್ರೆಸ್ ಸರ್ಕಾರ ಇದ್ದಾಗ ಮಾಡಿದ ಭ್ರಷ್ಟಾಚಾರವನ್ನು ನಾವು ನಿವಾರಣೆ ಮಾಡುತ್ತೇವೆಂದು ಏನೋ ಒಂದು ಹುಮ್ಮಸ್ಸಿನ ಹಿನ್ನೆಲೆಯಲ್ಲಿ ಹೇಳಿ ಆ ಕಾರ್ಯವನ್ನು ಅನುಷ್ಠಾನಕ್ಕೆ ತರದೇ ಹೋದರೆ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳದೇ ಹೋದರೆ, ನೀವು ಯಾವ ರೀತಿ ಸತ್ಯಸಂಧರೆಂದು, ನೀವು ಯಾವ ರೀತಿ ನಿಷ್ಠಾವಂತರೆಂದು ನಾವು ತಿಳಿದುಕೊಳ್ಳಬೇಕು?

ಬಡತನದ ಬಗ್ಗೆ ಹೇಳಬೇಕಾದರೆ, ಬಡತನವನ್ನು ನಿರ್ಮೂಲನೆ ಮಾಡಬೇಕೆಂದು ಕಾಂಗ್ರೆಸ್ ಸರ್ಕಾರದವರು ಏನು ಕಾರ್ಯಕ್ರಮಗಳನ್ನು ಹಾಕಿ ಕೊಂಡಿದ್ದರೋ ಅದಕ್ಕಿಂತ ಹೆಚ್ಚಿನ ಕಾರ್ಯಕ್ರಮಗಳನ್ನು ತಾವು ಹಾಕಿಕೊಂಡು ಏನಾದರೂ ಬಡತನವನ್ನು ನಿವಾರಣೆ ಮಾಡಿದ್ದೀರಾ? ಎಷ್ಟು ಬಡವರಿಗೆ ಅನುಕೂಲವನ್ನು ತಾವು ಮಾಡಿ ಕೊಟ್ಟಿದ್ದೀರಿ? ಎಷ್ಟು ಆರ್ಥಿಕ ಕಾರ್ಯಕ್ರಮಗಳನ್ನು ತಾವು ಹಾಕಿ ಕೊಂಡಿದ್ದೀರಿ? ನಿಮ್ಮ ರಾಜಕಾರಣ ನಮಗೆ ಬೇಕಾಗಿಲ್ಲ. ಜಿಲ್ಲಾಪರಿಷತ್ತು ಮಾಡಿದ್ದೇವೆ, ಮಂಡಲ ಪಂಚಾಯಿತಿ ಮಾಡಿದ್ದೇವೆಂದು ನೀವು ಹೇಳುವುದು ನಮಗೆ ಬೇಡ. ಅದರಿಂದ ದೇಶದ ಸಂಪತ್ತು ಹೆಚ್ಚಿಗೆ ಆಗಲಿಲ್ಲ. It is a political instrument for rural people.

೧೧-೩೦ ಎ.ಎಂ.

ಅದರಿಂದ ಏನು ಪ್ರಯೋಜನ ಆಯಿತು ಎಂದರೆ, 'disgust and disillusionment' ಎಂದು ಕಾಂಗ್ರೆಸ್ ಸರಕಾರದ ಬಗ್ಗೆ ತಾವು ಏನು ಹೇಳಿದ್ದಿರಿ. ಅದರ ಬಗ್ಗೆ ಹೇಳಬೇಕೆಂದರೆ, ಇವೊತ್ತಿನ ದಿವಸ ನಿಮ್ಮ ಜಿಲ್ಲಾಪರಿಷತ್‌ಗಳಿಂದಾಗಿ ನಿಮ್ಮ ಸರಕಾರ I only call it as a disgust and disillusionment to-day. ಇರಿಗೇಶನ್ ಬಗ್ಗೆ ರೈತರಿಗೋಸ್ಕರವಾಗಿ infrastructure create ಮಾಡುತ್ತೇವೆ ಎಂದು ಹೇಳಿದ್ದೀರಿ. ನೀವು ರೈತರ ಬಗ್ಗೆ ಮಾಡಿದ ಘೋಷಣೆಗಳನ್ನು ಕಾರ್ಯಗತ ಮಾಡಿದ್ದರೆ ರೈತರು ನಿಮ್ಮನ್ನು ಹೊಗಳುತ್ತಿದ್ದರು. ನೀವು ರೈತ ಸಂಘದವರ ಕಡೆಗೆ ಗಮನ ಕೊಡಲಿಲ್ಲ, ರೈತರ ಕಡೆಗೆ ಗಮನ ಕೊಡಲಿಲ್ಲ ಎಂದು ರೈತರು ಇವೊತ್ತು ಬೇರೆ ಒಂದು ಪಕ್ಷವನ್ನು ಮಾಡಿಕೊಂಡಿದ್ದಾರೆ. ಅದು ಯಶಸ್ವಿಯಾಗಲಿ ಅಥವಾ ಇನ್ನೇನಾದರೂ ಆಗಲಿ ಅದು ನಮಗೆ

ಬೇಕಾಗಿಲ್ಲ. ಒಟ್ಟಿನಲ್ಲಿ ರೈತರ ಬಗ್ಗೆ ನಿಮ್ಮ ನಿರ್ಲಕ್ಷತನದಿಂದಾಗಿ ಹೀಗೆ ಅವರು ಬೇರೆ ವಿಚಾರ ಮಾಡುವ ಸಂದರ್ಭ ಬಂತು. ಹಾಗೆಯೇ ನೀವು ರೈತರಿಗೋಸ್ಕರವಾಗಿ ನೀರಾವರಿ ಯೋಜನೆಗಳಿಗೆ ಸಾಕಷ್ಟು ಹಣವನ್ನು ಒದಗಿಸಿ, ಸಾಕಷ್ಟು ನಿರ್ದಿಷ್ಟವಾಗಿರತಕ್ಕಂಥ ಸಾಧನೆಗಳನ್ನು ಮಾಡುತ್ತೇವೆ ಎಂದು ಘೋಷಣೆ ಮೂಲಕ ಹೇಳಿದ್ದೀರಿ. ಆದರೆ ಅಂಥ ಸಾಧನೆಗಳನ್ನು ರೈತರ ಬಗ್ಗೆ ಮಾಡಿ ತೋರಿಸಿದ ಮೇಲೆ ನಾವು ಇಂತಹ ಅಭಿವೃದ್ಧಿ ಕಾರ್ಯವನ್ನು ಮಾಡಿದ್ದೇವೆ ಎಂದು ಹೇಳಿದ್ದರೆ ನಿಮಗೆ ಶಹಬಾಸ್‌ಗಿರಿ ಬರುತ್ತಾ ಇತ್ತು. ನೀವು ರಾಜ್ಯದಲ್ಲಿನ ನೀರಾವರಿಯ ಕೆಲಸ ಕಾರ್ಯಗಳ ಬಗ್ಗೆ ಏನೇನು ಮಾಡಿದ್ದೀರಿ ಎನ್ನುವ ಬಗ್ಗೆ ನಾನು ಈಗ ಏನನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ೨೦೦ ಕೋಟಿ ರೂಪಾಯಿಗಳನ್ನು ಒದಗಿಸಿ ಅಲ್ಲಿ ನೀರು ನಿಲ್ಲತಕ್ಕಂಥ ಒಂದು ವ್ಯವಸ್ಥೆಯನ್ನು ಮಾಡುತ್ತೇವೆ ಎಂದು ಹೇಳಿದಿರಿ. ಆದರೆ ಆ ನಿರ್ಣಯವು ಇವೊತ್ತಿನವರೆಗೂ ಕಾರ್ಯರೂಪಕ್ಕೆ ಬರಲಿಲ್ಲ. ಅಂತಹ ಒಂದು ನಿರ್ಣಯವನ್ನು ಈ ಸದನದಲ್ಲಿ ಮಾಡಲಾಗಿತ್ತು. ಆದರೆ ಅದು ಕಾರ್ಯಗತವಾಗಲಿಲ್ಲ ಅಂದರೆ, ಸದನದ ನಿರ್ಣಯಗಳಿಗೆ ಏನು ಗೌರವ ಬಂದ ಹಾಗೆ ಆಯಿತು? ಇದರ ಬಗ್ಗೆ ನೀವು ಏನಾದರೂ ಗಮನವನ್ನು ಕೊಟ್ಟಿದ್ದೀರಾ? ಆ ಬಗ್ಗೆ ನಾನು ಹೆಚ್ಚಿಗೆ ಹೇಳುವುದಿಲ್ಲ. ಏಕೆಂದರೆ ನಿಮ್ಮ ಮಂತ್ರಿ ಮಂಡಲದಲ್ಲಿ ಮಂತ್ರಿಯಾಗಿರತಕ್ಕಂಥ ಮಾನ್ಯ ದೇವೇಗೌಡರು ಹೊರಗೆ ಬರುವಾಗ ಹೇಳಿದ್ದರು. ನಾನು ರೈತನ ಮಗ, ನಾನು ಮಣ್ಣಿನ ಮಗ, ಮಣ್ಣಿನ ಮಕ್ಕಳು ಉದ್ಧಾರವಾಗಿಲ್ಲ ಎಂದರೆ ಏನು ಪ್ರಯೋಜನ? ಅವರಿಗಾಗಿ ಯೋಜನೆಗಳು ಕಾರ್ಯಗತವಾಗದಿದ್ದರೆ ಏನು ಪ್ರಯೋಜನ? ಅದಕ್ಕಾಗಿ ನಾನು ರಾಜೀನಾಮೆ ಕೊಡುತ್ತಿದ್ದೇನೆ ಎಂಬ ಅರ್ಥದಲ್ಲಿ ಹೇಳಿದರು. ನೀರಾವರಿ ಯೋಜನೆ ಎಂದು ಇದೆ. ಅದರಲ್ಲಿ ನೀವು ರೈತರಿಗೋಸ್ಕರವಾಗಿ ಹಣವನ್ನು ವೆಚ್ಚ ಮಾಡಿ ರೈತರಿಗೆ ಅನುಕೂಲಮಾಡಿಕೊಡುತ್ತೇವೆ ಎಂದು ಹೇಳಿದ್ದೀರಿ. ಆದರೆ ಅದನ್ನೂ ಕೂಡ ಮಾಡಲಿಕ್ಕೆ ಹೋಗಲಿಲ್ಲ. ರಾಜ್ಯದಲ್ಲಿ ನೌಕರಿ ಇಲ್ಲದವರಿಗೆ ನೌಕರಿ ಕೊಡುತ್ತೇವೆ ಎಂದು ಹೇಳಿದಿರಿ. ಈ ಬಗ್ಗೆ ಮೊದಲೇ ಘೋಷಣೆ ಮಾಡಿದಿರಿ. ಹೀಗೆ ಮಾಡಿದ ಘೋಷಣೆಯನ್ನು ಜಾರಿ ಮಾಡಲಿಕ್ಕೆ ನಿಮಗೆ ಐದು ವರ್ಷಗಳು ಬೇಕೇ? ರಾಜ್ಯದಲ್ಲಿ ೩ ಲಕ್ಷ ಸ್ಕಿಲ್ಡ್ ಲೇಬರರ್ಸ್ ಇದ್ದಾರೆ, ಮತ್ತು ಸಾಕಷ್ಟು ಸಂಖ್ಯೆಯಲ್ಲಿ ಅನ್‌ಸ್ಕಿಲ್ಡ್ ಲೇಬರರ್ಸ್ ಇದ್ದಾರೆ. ಸುಮಾರು ೩೫ ಸಾವಿರ ಜನ ಅನ್‌ಎಂಪ್ಲಾಯ್ಡ್ ಗ್ರಾಜುಯೇಟ್ಸ್ ಇದ್ದಾರೆ. ೫-೬ ಸಾವಿರ ಇಂಜಿನಿಯರಿಂಗ್ ಪದವೀಧರರು ಇದ್ದಾರೆ. ಅವರು ನಿರುದ್ಯೋಗಿಗಳಾಗಿದ್ದಾರೆ. ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ತಮಗೆ ಉದ್ಯೋಗ ಬೇಕು ಎಂದು ನೋಂದಾಯಿಸಿರತಕ್ಕಂಥವರು ೧೩ ಲಕ್ಷ ಜನರಿದ್ದಾರೆ. ನಿಮ್ಮ ಆಡಳಿತವನ್ನು ಪ್ರಾರಂಭ ಮಾಡಿದಾಗ ಇದ್ದ ಸಂಖ್ಯೆ ೭ ಲಕ್ಷವಾಗಿತ್ತು. ಆದರೆ ಅಲ್ಪ ಕಾಲಾವಧಿಯಲ್ಲಿ ಅದು ೧೩ ಲಕ್ಷಕ್ಕೆ ಏರಿದೆ. ಇಂತಹವರ ಬಗ್ಗೆ ನೀವು ಏನು ಯೋಚನೆ ಮಾಡಿದ್ದೀರಿ? ಒಟ್ಟಿನಲ್ಲಿ ಇಂತಹ ಎಲ್ಲಾ ವಿಷಯಗಳ ಬಗ್ಗೆ ನೀವು ಏನೇನು ಹೇಳಿದ್ದೀರಿ, ಏನೇನು ಘೋಷಣೆ ಮಾಡಿದ್ದೀರಿ ಅವೆಲ್ಲವನ್ನೂ ನಾನು ಲಿಸ್ಟ್ ಮಾಡಿಕೊಂಡಿದ್ದೇನೆ. ಮನೆಗೆ ಒಂದು ನೌಕರಿ ಕೊಡುತ್ತೇವೆ ಎಂದು ಹೇಳಿದಿರಿ. ಹಳ್ಳಿಗಾಡಿನಲ್ಲಿರತಕ್ಕಂಥ ರೈತರ ಮಕ್ಕಳಿಗೆ ಕೆಲಸ ಕೊಡುತ್ತೇವೆ ಎಂದು ಹೇಳಿದಿರಿ. ರೈತರ ಬಗ್ಗೆ ಇಷ್ಟೆಲ್ಲಾ ಹೇಳುವ, ಘೋಷಣೆ ಮಾಡುವ, ಕೆಲಸ ಕೊಡುತ್ತೇವೆ ಎಂದು ಭರವಸೆ ಕೊಟ್ಟ ನೀವು ಎಷ್ಟು ರೈತ ಕುಟುಂಬಗಳಿಗೆ ಈಗ ನೌಕರಿ ಒದಗಿಸಿಕೊಟ್ಟಿದ್ದೀರಿ? ಅದನ್ನು ದಯವಿಟ್ಟು ಹೇಳಬೇಕು. ಮತ್ತು ಇತರ ಎಷ್ಟು ಜನರಿಗೆ ಕೆಲಸ ಕೊಟ್ಟಿದ್ದೀರಿ ಎಂದು ಹೇಳಬೇಕು. ನೀವು ಮಾಡಿದ ಕೆಲಸಗಳೆಲ್ಲಾ ನೀರಿನಲ್ಲಿ ಹುಣಸೆಹಣ್ಣನ್ನು ತೊಳೆದ ಹಾಗೆ ಆಗಿದೆ. ಇಂತಹವರ ಬಗ್ಗೆ ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಯಾರ್ಯಾರದೋ ಶಿಫಾರಸ್ಸಿನ ಮೇಲೆ ಹೊಸ ಹೊಸ ಹುದ್ದೆಗಳನ್ನು ಸೃಷ್ಟಿ ಮಾಡಿ, ಜಿಲ್ಲಾಮಟ್ಟದಲ್ಲಿ ನಿಮಗೆ ಬೇಕಾದ ಹಾಗೆ ನೇಮಕ ಮಾಡಿಕೊಂಡಿದ್ದೀರಿ. ದಿನಗೂಲಿಯವರ ಸಂಘ, ಪದವೀಧರರ ಸಂಘ ಎಂದೆಲ್ಲಾ ಮಾಡಿಕೊಂಡು, ಅವರು ಇವೊತ್ತು ಯಾವುದೋ ರೀತಿಯಲ್ಲಿ ಸರಕಾರಿ ಸೇವೆಯಲ್ಲಿ ಸೇರಿಕೊಂಡು ಖಾಯಂ ಆಗುತ್ತಿದ್ದಾರೆ. ಹೀಗಾಗಿ ಎಸ್.ಸಿ., ಎಸ್.ಟಿ. ಯವರಿಗಾಗಲಿ ಮತ್ತಿತರ ಹಿಂದುಳಿದವರ ಬಗ್ಗೆಯಾಗಲಿ ಯಾರು ಕಣ್ಣೆತ್ತಿ ನೋಡುತ್ತಿಲ್ಲ. ಹೀಗೆ ಇಂತಹ ಜನರನ್ನು ನೇಮಕ ಮಾಡಿಕೊಳ್ಳುವಾಗ ಅಧಿಕಾರದಲ್ಲಿರುವವರ, ತಮ್ಮ ಜಾತಿ, ತಮ್ಮ ಜನ ಎಂದು ತಮಗೆ ಬೇಕಾದವರನ್ನು ತಮಗೆ ಬೇಕಾದ ರೀತಿಯಲ್ಲಿ ಒಳಗೆ ಸೇರಿಸಿಕೊಂಡು ಈಗ ಖಾಯಂ ಮಾಡಿಕೊಳ್ಳುತ್ತಿದ್ದಾರೆ. ನೀವು ಹೋದ ಕಡೆಗಳಲ್ಲಿ ಆ ಸಂಘದವರುಗಳು ಬಂದು ನಮ್ಮನ್ನು ಖಾಯಂ ಮಾಡಿ ಎಂದು ಬೇಡಿಕೊಂಡಾಗ ನೀವು ಸಕ್ರಮಗೊಳಿಸುತ್ತೇವೆ ಎಂದು ಹೇಳಿ ಅವರಿಂದ ಶಹಭಾಸ್‌ಗಿರಿ ಗಿಟ್ಟಿಸಿಕೊಳ್ಳುತ್ತಿದ್ದೀರಿ. ಇದು ಒಂದು ರೀತಿಯಲ್ಲಿ ಓಟುಗಳನ್ನು ಗಳಿಸುವ ಕ್ರಮ ಇರಬಹುದು. ಏನು ಇದು ನಿಮ್ಮ ನೀತಿಯೇ ? ೩೫ ಸಾವಿರ ಜನ ಅನ್ ಎಂಪ್ಲಾಯ್ಡ್ ಗ್ರಾಜುಯೇಟ್ಸ್ ಇದ್ದಾರೆ, ಅವರಿಗೆ ಕೆಲಸ ಕೊಡುವುದನ್ನು ಬಿಟ್ಟು ಶಿಫಾರಸ್ ಮೇಲೆ ಸೇರಿದವರ ಸೇವೆಯನ್ನು ರೆಗ್ಯುಲರೈಸ್

ಮಾಡುವುದು ನಿಮ್ಮ ನೀತಿಯೋ ? ಇದು ರಾಜ್ಯ ನಡೆಸುವ ವೈಖರಿಯೋ ? ಇದು ಅನವಶ್ಯಕವಾಗಿತ್ತು. ನೀವು ಏನು ಹೇಳುತ್ತೀರೋ ಅದನ್ನು ಮಾಡಬೇಕು, ಆಗದ್ದನ್ನು ಬಾಯಲ್ಲಿ ಹೇಳುವುದಕ್ಕೆ ಹೋಗ ಬಾರದು. ನಾನು ಮಂತ್ರಿಯಾಗಿದಾಗ ಬಾಯಲ್ಲಿ ಏನೇನು ಹೇಳಿದ್ದೇನೆ. ಅವನ್ನೆಲ್ಲಾ ಕಾರ್ಯಗತ ಮಾಡಿದ್ದೇನೆ. ಮಾಡುವುದಾದರೆ ಹೇಳಬೇಕು. ಮಾಡಬಾರದೆಂದು ಮನಸ್ಸಿನಲ್ಲಿಟ್ಟುಕೊಂಡು ರಾಜಕೀಯ ಭಾಷಣ ಮಾಡಿ ಜನಗಳನ್ನು ಮೋಸಗೊಳಿಸಿದ ವ್ಯವಹಾರ ಮಾಡಬಾರದು.

ಮೂರನೇಯ ದಿವಸ ಇನ್ನೊಂದು ಘೋಷಣೆ. This is Deccan Herald dated

11-1-83

> "Chief Minister Ramakrishna Hegde to-day said Government was determined to continue Devaraj Urs policy of protective discrimination in favour of the weaker sections and backward classes. Hegde said it would give more nourishment to the weaker sections."

ನರಿಷ್‌ಮೆಂಟ್ ಎಂದರೆ ಏನು ? ಯಾರ್ಯಾರಿಗೆ ಯಾವ್ಯಾವ ರೀತಿ ನರಿಷ್‌ಮೆಂಟ್ ಕೊಡಬೇಕೆನ್ನುವ ಕಾರ್ಯಕ್ರಮ ಹಾಕಿದ್ದೀರಿ ? ಈ ಪ್ರೊಟೆಕ್ಟೀವ್ ಡಿಸ್ಕ್ರಿಮಿನೇಷನ್‌ಗೆ ಯಾವರೀತಿಯಲ್ಲಿ, ಕಾರ್ಯಕ್ರಮ ಕೊಟ್ಟಿದ್ದೀರಿ. ಇದು ಬರೀ ಘೋಷಣೆಯ ಹೊರತಾಗಿ ನೀವು ಏನು ಮಾಡಿದಿರಿ ? ಅಂಥ ಅತಿಶಯವಾದ ಸಾಧನೆ ಮಾಡಿರುವುದು ಏನು ? ದಯವಿಟ್ಟು ಅದನ್ನು ಹೇಳಬೇಕು. ಇನ್ನೊಂದು ಹೇಳಿದ್ದಾರೆ. "Top priority would be given to farmers" ಇದು ಯಾವ ಫಾರ್ಮರ್ಸ್ ಸಂತೃಪ್ತರಾಗಿದ್ದಾರೋ ನನಗಂತು ಗೊತ್ತಿಲ್ಲ. ನೀವು ಇದಕ್ಕೆ ಪ್ರಿಯಾರಿಟಿ ಕೊಟ್ಟಿದ್ದೀರೋ ಇವತ್ತಿಗೂ ಗೊತ್ತಿಲ್ಲ. ೧೩-೧-೧೯೮೩ರಲ್ಲಿ ಇನ್ನೊಂದು ಮಾತು ಹೇಳಿದರು. 'Chief Minister Ramakrishna Hegde has asked to submit assets and liabilities of his ministerial colleagues.' ಇವತ್ತು ಅವರು ಕೊಟ್ಟಿದ್ದಾರೋ ಬಿಟ್ಟಿದ್ದಾರೋ ಗೊತ್ತಿಲ್ಲ. ಇವರಿಗಿರುವ ಆಸ್ತಿಪಾಸ್ತಿ ಮತ್ತು ೫ ವರ್ಷದ ಹಿಂದೆ ಇದ್ದ ಆಸ್ತಿ ಪಾಸ್ತಿ ವಿವರ ಮತ್ತು ಇವರು ಬೇರೆಯವರ ಹೆಸರಿನಲ್ಲಿ ಮಾಡಿರುವ ಬೇನಾಮಿ ವ್ಯವಹಾರಗಳ ಬಗ್ಗೆ ಯೆಲ್ಲಾ ತನಿಖೆಯಾಗಲೇಬೇಕು. ೫ ವರ್ಷಗಳ ಹಿಂದೆ ಯಾರ್ಯಾರು ಮಂತ್ರಿಗಳಿದ್ದು ಆಸ್ತಿಪಾಸ್ತಿ ಮಾಡಿದ್ದರೋ ಅವರ ಬಗ್ಗೆಯೂ ನನ್ನನ್ನೂ ಸೇರಿಸಿ ಎಲ್ಲಾ ವಿವರವೂ ಈ ದೇಶದ ಜನತೆಗೆ ಗೊತ್ತಾಗ ಬೇಕು. ಇಲ್ಲದೇ ಹೋದರೆ ಏನು ಬೇಕಾದರೂ ಮಾಡಬಹುದು. ಎಷ್ಟು ದುಡ್ಡಾದರೂ ಹೊಡೆಯ ಬಹುದು ಎಂದು ಹಾಗೆಯೇ ಇಟ್ಟುಕೊಂಡರೆ ಹೇಗೆ ಸ್ವಾಮಿ ? ಆಮೇಲೆ ಇನ್ನೊಂದು ಘೋಷಣೆಯನ್ನು ಇವರು ಏನು ಚೆನ್ನಾಗಿ ಮಾಡಿದ್ದಾರೆ ಸ್ವಾಮಿ, ನಾನು ಅವರಿಗೆ ಏನು ಹೇಳುತ್ತಿದ್ದೇನೆ ಎಂದರೆ ನೀವು ಹೇಳಿದಂತೆ ನಡೆದುಕೊಳ್ಳಿ. ೧೯-೧-೮೩ ರಂದು

> "Chief Minister Ramakrishna Hegde to-day expressed his unhappiness with thestate of finances inherited by him from the Gundu Rao regime, He says his predecessor had undertaken extravagent expenditure on non-plan Projects and schemes which would benefit none."

He said he would discuss with Finance Minister Sri pranab Mukheerji and the planning Commission Members regarding States' annual plan outlay and the introduction of new scheme and programme.' ಮಾನ್ಯ ಗುಂಡೂರಾಯರ ಸರಕಾರ ಏನು ಕೊನೆಯಾಯಿತು ಆವತ್ತು ಏನು ಹೇಳಿದ್ದಾರೆಂದರೆ, ಆ ಸರ್ಕಾರ ಆರ್ಥಿಕ ಸ್ಥಿತಿ ದುರಸ್ಥಿತಿಯಲ್ಲಿತ್ತು ಎಂದು ಹೇಳಿದ್ದಾರೆ. ಏಕೆಂದರೆ ಯೋಜನೇತರ ಖರ್ಚುಗಳ ಬಾಬತ್ತಿಗಾಗಿ ಹಣವನ್ನು ಜಾಸ್ತಿ ಉಪಯೋಗಿಸಿದುದರಿಂದ ಎಲ್ಲಾ ದಿವಾಳಿ ಯಾಯಿತು ಎಂದು ಹೇಳಿದ್ದೀರಿ. ಆದರೆ ಇವತ್ತಿನ ದಿವಸ ನೀವೇನಾಗಿದ್ದೀರಿ ? ನಾನು ಪದೇ ಪದೇ ಹೇಳುತ್ತಿದ್ದೇನೆ. ಈ ಬಗ್ಗೆ ಅಂಕಿ ಅಂಶಗಳನ್ನು ಹೇಳೀ ಹೇಳೀ ನಮಗೇ ನಾಚಿಕೆಯಾಗಿದೆ. ನಿಮಗೆ ನಾಚಿಕೆಯಾಗಿದೆಯೋ ಇಲ್ಲವೋ ಗೊತ್ತಿಲ್ಲ. ನಿಮಗೆ ನಾಚಿಕೆ ಇಲ್ಲ. ಪ್ರಜೆಗಳ ಪ್ರತಿನಿಧಿಗಳಾಗಿ ನಾವು ಏನು ಹೇಳುತ್ತಿದ್ದೇವೆ ಎಂಬುದರ ಕಡೆಗೆ ಗಮನವಿಲ್ಲ. ಈ ರಾಜ್ಯದ ಸುಸ್ಥಿತಿ, ಆರ್ಥಿಕ ದುಸ್ಥಿತಿ

ಯಾವ ಮಟ್ಟಕ್ಕೆ ಬಂದಿದೆ ಇದನ್ನು ಹೇಗೆ ನಿಭಾಯಿಸುತ್ತೀರಿ ಎಂದು ಕೇಳಿದರೆ ಅವಕ್ಕೆ ಉತ್ತರಹೇಳುವುದಿಲ್ಲ, ಏನೋ ಉತ್ತರ ಹೇಳುವುದು, ಈಗ ಇಲ್ಲಿ ಏನು ಬೇಡಿಕೆಗಳು ಇವೆ ಅದಕ್ಕೆ ಸದನದ ಒಪ್ಪಿಗೆ ತೆಗೆದುಕೊಂಡು ಮನೆಗೆ ಹೋಗುವುದು ಇದು ಸರಿಯಲ್ಲ. ಜನಗಳ ಹಿತದೃಷ್ಟಿಯ ಕಡೆಗೆ ನೀವು ಗಮನ ಕೊಡಬೇಕು. ಇವರು ಇನ್ನೊಂದು ಘೋಷಣೆಯನ್ನು ಮಾಡಿದ್ದಾರೆ ಅದು ಏನೆಂದರೆ,

> 'peoples Support'—that is Deccan Herald dated 31-1-1983.
> Peoples support will be guaranteed against any move to destablise the Janata Government in Karnataka Chief Minister Ramakrishna Hegde said here to-day during the Meeting the Press Programme organized by the Karnataka Union of Working journalists, Mr. Hegde, said : no one either from his own party or even Mr. Gandhi could do anything to destablise the Government as long as it did not betray the people Mr. Hegde, said that there was no big problem in expanding the Ministry'

O.K. now he rolys completely on peoples support, peoples programme, implementation of people programme and whatever implemention and whatever he said, whateverhe has committed to the public now I say he has not implemented any of his promises held out to the people. Now, he has gone on making promises as in the words of Mr. Kharge, there are as many as thousands of promises held out to the people of this State and none of them are implemented, whether half implemented, not implemented or a fraction of is implemented but he has not completed any of the programmes he has held out to the people of this State. Even he has said that his own party cannot destablise. Now, I don't want to elaborate this because, my party has taken a decision that we are not intrested in any of the doings and undoings of the Janata party here in this Karnataka. Mr. Hegde has been telling to the public from house-top that Congress is intrested in destablising his Government. I want to say here, that we are not intrested in destblising the Government. Mr. Patil has said in many words that we are not interested in destablising but they must leave and go on their own performance or non-performance. ಹಿಂದಿನ ಸರ್ಕಾರ ಏನೂ ಕೆಲಸ ಮಾಡಲಿಲ್ಲವಾದ್ದರಿಂದ ಅವರು ಮನೆಗೆ ಹೋದರು ಎಂದು ಹೇಳಿದಿರಿ, ಆದರೆ ನೀವೇನು ಮಾಡಿದ್ದೀರಿ ಎಂದು ನಾನು ಕೇಳುತ್ತಿದ್ದೇನೆ. ಈಗ ರೈತರ ವಿಚಾರ ಆಯಿತು. ಇನ್ನು ಅಡ್ಮಿನಿಸ್ಟ್ರೇಟಿವ್ ಕರಪ್ಷನ್ ಬಗ್ಗೆ ಮಾನ್ಯ ಹೆಗಡೆಯವರೇ ಸಾಕಷ್ಟು ಸುತ್ತೋಲೆಗಳನ್ನು ಕೊಟ್ಟಿದ್ದಾರೆ, ಸುತ್ತೋಲೆಯಲ್ಲಿ ಅವರು ಏನು ಹೇಳಿದ್ದಾರೆ ಎಂದರೆ ಸೆಕ್ರೆಟರಿ ಆದಿಯಾಗಿ ಎಲ್ಲಾ ಹಂತದಲ್ಲೂ ಕೂಡಾ ಅಧಿಕಾರ ವರ್ಗದವರು ಭ್ರಷ್ಟಾಚಾರದಿಂದ ವಿಮುಕ್ತರಾಗಿಲ್ಲ ಎಂದು ಅವರೇ ಹೇಳಿದ್ದಾರೆ. ಅವರ ಮಾತನ್ನು ಈಗ ನಾವು ಕೇಳುತ್ತಿದ್ದೇವೆ. ಅಂದರೆ ಇದರ ಅರ್ಥ ಏನು ಇದನ್ನು ಹೇಳತಕ್ಕಂಥದ್ದು ನಾಲ್ಕೈದು ತಿಂಗಳ ಹಿಂದೆ. ನಾಲ್ಕುವರೆ ವರ್ಷ ಪರ್ಯಂತ ಈ ಸರ್ಕಾರವನ್ನು ನಡೆಸಿಕೊಂಡು ಬಂದು ಎಲ್ಲಾ ಅಧಿಕಾರಿ ವರ್ಗದ ಮೇಲೆ ಹಾಕಿ ಅವರು ಹೇಳುವುದನ್ನು ನಂಬಿ, ಅವರು ಮಾಡಿದ್ದನ್ನೆಲ್ಲಾ ನೋಡಿ ಸಂತೋಷಪಟ್ಟು ಮತ್ತೆ ಏನು ಮಾಡದೇ ಇದ್ದರೂ ಕೂಡಾ ಅದನ್ನು ನೋಡಿ ಅನುಭವಪಟ್ಟು ಅವರಿಗೆ ಶಹಭಾಷಗಿರಿಯನ್ನು ಕೊಡತಕ್ಕಂಥ ಒಂದು ಸಾಹಸವನ್ನು ಮಾಡಿದ್ದೀರಿ. ಇದು ಸರಿ ಇಲ್ಲದ ಮಾತು. ನಿಮ್ಮ ಸರ್ಕಾರ, ನೀವು ಜನಗಳ ವಿಶ್ವಾಸವನ್ನು ಕಳೆದುಕೊಳ್ಳಲಿಕ್ಕೆ ಸಾಕಷ್ಟು ಪ್ರಯತ್ನ ಮಾಡುತ್ತಿದ್ದೀರಿ. ಈಗ ಜಿಲ್ಲಾ ಪರಿಷತ್ತುಗಳನ್ನು ರಚನೆ ಮಾಡಿದ್ದೀರಿ, ಜಿಲ್ಲಾ ಪರಿಷತ್ತುಗಳಿಂದ ಜನಗಳಿಗೆ ಅನುಕೂಲವಾಗಬೇಕು ಮತ್ತು ಸರ್ಕಾರಕ್ಕೆ ಅನುಕೂಲವಾಗಬೇಕು

ಈಗ ಯಾರಿಗೆ ಅನುಕೂಲವಾಗುತ್ತಿದೆ ಎಂದು ಹೇಳಿ ಪ್ರಶ್ನೆಯನ್ನು ಹಾಕಿದರೆ ಉತ್ತರವನ್ನು ನಾನು ನಿಮಗೆ ಹೇಳುತ್ತೇನೆ. ಜಿಲ್ಲಾ ಪರಿಷತ್ತಿನಲ್ಲಿ ನೂರಾರು ವರ್ಷಗಳಿಂದ ಯಾವ ಒಂದು ವರ್ಗ, ಜಮೀನ್ದಾರಿ ವರ್ಗ, ಹಣವಂತರ ವರ್ಗ, ಕಾರ್ಖಾನೆಗಳನ್ನು ಇಟ್ಟುಕೊಳ್ಳತಕ್ಕಂಥ ವರ್ಗ, ಲೇವಾದೇವಿಯನ್ನು ಮಾಡತಕ್ಕಂಥ ವರ್ಗ, ಕಂಟ್ರಾಕ್ಟ್‌ನಿಂದ ಜೀವನ ಮಾಡತಕ್ಕಂಥ ವರ್ಗ, ಏನಿಷ್ಟು ಹಾಗೂ ಏನಿದ್ದರೋ ಅವರು ಬಡವರ ಮೇಲೆ ದಬ್ಬಾಳಿಕೆಯನ್ನು ಮಾಡತಕ್ಕಂಥ ಜನ ಇವತ್ತು ಅಧಿಕಾರಕ್ಕೆ ಬಂದಿದ್ದಾರೆ. ಇವತ್ತು ಜಿಲ್ಲಾಪರಿಷತ್ತುಗಳು ಬಂದು ಒಂದೂವರೆ–ಎರಡು ವರ್ಷ ಆಗುತ್ತಾ ಬಂತು. ಆದರೂ ಕೂಡಾ ನೀವು ಜಿಲ್ಲಾ ಪರಿಷತ್ತಿನ ವ್ಯವಸ್ಥೆಯನ್ನು ಸರಿಯಾಗಿ ಸರಿದೂಗಿಸಲಿಕ್ಕೆ ಇವತ್ತು ಪ್ರಯತ್ನವನ್ನು ಮಾಡಿಲ್ಲ, ಹಣವನ್ನು ಕೊಡಲಿಕ್ಕೆ ಪ್ರಯತ್ನವನ್ನು ಮಾಡಿಲ್ಲ, ನಾನು ಒಂದು ಉದಾಹರಣೆಯನ್ನು ಹೇಳಬೇಕೆಂದಿದ್ದೇನೆ. ಧಾರವಾಡ ಡಿಸ್ಟ್ರಿಕ್ಟ್ ಬಗ್ಗೆ ಧಾರವಾಡ ಡಿಸ್ಟ್ರಿಕ್ಟ್‌ನಲ್ಲಿ ಒಂದು ತಿಂಗಳಿಗೆ ಎಷ್ಟು ಹಣವನ್ನು ಕಳುಹಿಸುತ್ತಿದ್ದೀರಿ ? ೮೦–೯೦ ಲಕ್ಷ ರೂಪಾಯಿಗಳನ್ನು ನೀವು ಕಳುಹಿಸುತ್ತಿದ್ದೀರಿ. ಅದರಲ್ಲಿ ನೌಕರ ವರ್ಗದವರ ಸಂಬಳಕ್ಕೆ ೫೨ ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ೫೨ ಲಕ್ಷ ರೂಪಾಯಿಗಳು ಇದಕ್ಕೆ ಹೋದರೆ ಇನ್ನುಳಿದ ೩೫–೪೦ ಲಕ್ಷ ರೂಪಾಯಿಗಳನ್ನು ಎಲ್ಲಾ ಅಭಿವೃದ್ಧಿ ಕಾರ್ಯಗಳಿಗೂ ಹಂಚಬೇಕು ಎಂದು ಹೇಳಿಬಿಟ್ಟು ಎಲ್ಲಾ ತಾಲ್ಲೂಕುಗಳಿಗೂ ಹಂಚುತ್ತಿದ್ದಾರೆ. ಈ ರೀತಿ ಆದರೆ ಯಾವ ಅಭಿವೃದ್ಧಿ ಕೆಲಸಗಳನ್ನು ನೀವು ಮಾಡುವುದು ? ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳ ಧ್ಯೇಯ ಧೋರಣೆಗಳು ಏನು ಇತ್ತು ? ನಮ್ಮ ಉದ್ದೇಶ ಏನು ಇತ್ತು ಎಂದರೆ ಇದರಿಂದ ಬಡವರ ಕಲ್ಯಾಣವಾಗುತ್ತದೆ, ಅವರ ಸಂಕಷ್ಟಗಳನ್ನು ನೋಡಿ ತಿಳಿದುಕೊಂಡು, ಅವರ ಸಂಕಷ್ಟಗಳ ಪರಿಹಾರಕ್ಕೆ ಇವರು ಸಹಾಯ ಮಾಡುತ್ತಾರೆ, ಅವರ ಜೀವನವನ್ನು ಸುಧಾರಣೆಯನ್ನು ಮಾಡುತ್ತಾರೆ ಎಂಬ ಉದ್ದೇಶದಿಂದ ಪಂಚಾಯತ್‌ರಾಜ್ ಜಿಲ್ಲಾ ಪರಿಷತ್ತುಗಳನ್ನು ಮಾಡಿದೆವು. ಈಗ ನಾನು ಏನು ಹೇಳುತ್ತಿದ್ದೇನೆಂದರೆ, ನೂರಾರು ವರ್ಷಗಳಿಂದ ಪರಂಪರೆಯಾಗಿ ಬಂದಿರತಕ್ಕಂಥ ಜನರು ಯಾರು ಇದ್ದಾರೆ, ಅವರಿಗೆ ದಬ್ಬಾಳಿಕೆಯನ್ನು ಮಾಡತಕ್ಕಂಥದ್ದು, ಜನರನ್ನು ಶೋಷಣೆ ಮಾಡತಕ್ಕಂಥದ್ದು ಸ್ವಾಭಾವಿಕವಾಗಿದೆ ಅಂಥ ಜನಗಳ ಕೈಯಲ್ಲಿ ಜಿಲ್ಲಾಪರಿಷತ್ತನ್ನು ಕೊಟ್ಟು ಬಿಟ್ಟು ಬಡವರನ್ನು ಉದ್ಧಾರ ಮಾಡಿ ಎಂದರೆ ಹೇಗೆ ಸಾಧ್ಯ ? ಎಲ್ಲಿ ನೋಡಿದರೂ ಕೂಡಾ ಇವರಿಗೆ ತೊಂದರೆ. ನಿಮ್ಮ ವರ್ಗದವರನ್ನು ಕೇಳುವವರೇ ಇಲ್ಲ. ಬಡವರನ್ನು ಕೇಳುವವರೇ ದಿಕ್ಕು ಇಲ್ಲ. ಹಿಂದುಳಿದ ವರ್ಗದವರ ಬಗ್ಗೆ ಆಮೇಲೆ ಬರುತ್ತೇನೆ. ಈ ಜನರು ಇವರಿಗೆ ಯಾವ ಲೆಕ್ಕ ? ಇಷ್ಟು ರೀತಿಯಾಗಿ ಇಷ್ಟು ದಬ್ಬಾಳಿಕೆ ಇಷ್ಟು ಶೋಷಣೆ ಏತಕ್ಕೋಸ್ಕರ ? ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಜನರಿಗೆ ಒಂದು ನೀತಿಯನ್ನು ಹೇಳಿದರು, ಏನೆಂದರೆ, ನಿಮ್ಮ ಅಧಿಕಾರವನ್ನು ನಿಮಗೇ ಕೊಟ್ಟಿದ್ದೇವೆ ಎಂದು. ಅಧಿಕಾರವನ್ನು ಏನು ಕೊಟ್ಟದ್ದು ಅವರಿಗೆ ? ನಿಮ್ಮ ಅಧಿಕಾರವನ್ನು ನಿಮಗೆ ಕೊಟ್ಟಿದ್ದೇವೆ ಎಂದರೆ ನಿಮ್ಮ ಸಾಮಾನನ್ನು ನಿಮಗೆ ಕೊಟ್ಟಿದ್ದೇವೆ ಹಾಗೇ ಎಂದರೆ ಏನು ? ನಿಮ್ಮ ಸಾಮಾನನ್ನು ನಿಮಗೆ ಕೊಟ್ಟಿದ್ದೇವೆ ಎಂದರೆ ಇವರಿಗೆ ಏನೂ ಬೇಡವೆ ? ಅವರಿಗೆ ಅಸ್ತ್ರ ಬೇಡವೇ ? ಅವರಿಗೆ ವ್ಯವಸ್ಥೆ ಬೇಡವೇ ? ನೀವು ಏತಕ್ಕೆ ಇಲ್ಲಿರತಕ್ಕಂಥದ್ದು ? ಇಷ್ಟು ಜನ ಮಂತ್ರಿಗಳು ಏತಕ್ಕೆ ನಿಮಗೆ ? ಎಲ್ಲಾ ಜಿಲ್ಲಾ ಪರಿಷತ್‌ಗೂ ಒಬ್ಬೊಬ್ಬ ಮಂತ್ರಿಗಳನ್ನು ಮಾಡಿದ್ದೀರಿ ಇಷ್ಟು ಮಂತ್ರಿಗಳು ಏತಕ್ಕೆ ? ಇಷ್ಟು ಜನ ಮಂತ್ರಿಗಳ ಕೆಲಸ ಏನು ? ಅವರು ಏನು ಕೆಲಸ ಮಾಡುವುದು ? ಇವರು ಏನು ಲಸಕೆ ಮಾಡುವುದು ಏತಕ್ಕೆ ಈ ಜಿಲ್ಲಾ ಪರಿಷತ್ತು ಸುಧಾರಣೆ ಆಗಿರತಕ್ಕಂಥದ್ದು ಏನು ? ನೀವು ಅಧಿಕಾರಕ್ಕೆ ಬಂದು ಐದು ವರ್ಷ ಆಯಿತು. ಅಲ್ಲಿಂದ ಇಲ್ಲಿಯವರೆಗೆ ನಿಮ್ಮ ಸಾಧನೆ ಏನೂ ಇಲ್ಲ ಎಂದು ಹೇಳುತ್ತಾ ಇದ್ದೇವೆ. ಜನಗಳ ಸಂಕಷ್ಟಗಳನ್ನು ಹೇಳುತ್ತಾ ಇದ್ದೇವೆ. ಜನಗಳ ಒಂದು ಪರಿಸ್ಥಿತಿಯನ್ನು ಹೇಳುತ್ತಾ ಇದ್ದೇವೆ. ನೀವು ಕೇಳುತ್ತಾ ಇದ್ದೀರಿ, ಕೇಳಿ ನೀವು ಏನು ಮಾಡುತ್ತಿದ್ದೀರಿ ? ಬಜೆಟ್‌ನಲ್ಲಿ ಏನು ಇವತ್ತು ಬೇಡಿಕೆಗಳನ್ನು ಪಾಸು ಮಾಡುತ್ತಿದ್ದೇವೆ, ಅದನ್ನು ಪಾಸು ಮಾಡಿದ ನಂತರ ಆ ಹಣವನ್ನು ಯಾವಾಗ ಖರ್ಚು ಮಾಡಲಿಕ್ಕೆ ಪ್ರಾರಂಭ ಮಾಡುವುದು ? ಹಣವನ್ನು ನವೆಂಬರ್ ಅಥವಾ ಡಿಸೆಂಬರ್ ತಿಂಗಳಲ್ಲಿ ಖರ್ಚು ಮಾಡುವುದಕ್ಕೆ ಪ್ರಾರಂಭ ಮಾಡುವುದು. ಅಲ್ಲಿಯವರೆಗೂ ಖರ್ಚು ಮಾಡುವುದಿಲ್ಲ. ಹಣವನ್ನು ಉಳಿಸಲಿಕ್ಕೆ ಪ್ರಯತ್ನ ಮಾಡುತ್ತೀರಿ. ಈ ರೀತಿ ಪ್ರಯತ್ನವನ್ನು ಮಾಡಿದರೆ ಇದೇನು ದೊಡ್ಡ ಆರ್ಥಿಕ ತಜ್ಞತೆಯೇ ? ಇದೇನು ಮುತುವರ್ಜಿಯೇ ? ಇಂಥ ವ್ಯವಸ್ಥೆಯನ್ನು ದನ ಕಾಯುವವರು ಮಾಡುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆ ದನಗಳ ಸಂಖ್ಯೆಯೂ ಕೂಡಾ ಕಡಿಮೆಯಾಗಿದೆ, ನಾಲ್ಕು ಕೋಟಿ ಇದ್ದದ್ದು ಎರಡು ಕೋಟಿ ಆಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ಅಲ್ಲ. ದನ ಕಾಯುವವರು ಇಂಥ ಕೆಲಸವನ್ನು ಮಾಡುತ್ತಾರೆ

ಎಂದು ಹೇಳಿದೆ. ಈಗ ಬಜೆಟ್‌ನಲ್ಲಿ ಅಳವಡಿಸಿರತಕ್ಕಂಥ ಹಣವನ್ನು ನವಂಬರ್ ಅಥವಾ ಡಿಸೆಂಬರ್‌ನಲ್ಲಿ ಖರ್ಚು ಮಾಡಿದರೆ ಹೇಗೆ ? ನೀವು ಹಣವನ್ನು ಉಳಿಸಲಿಕ್ಕೆ ಪ್ರಯತ್ನವನ್ನು ಮಾಡುತ್ತೀರಿ. ಈ ಅರ್ಥಿಕ ಶಾಖೆ ಯಾವುದು ? ಆರ್ಥಿಕ ಶಾಖೆಯಂಥ ಅಧ್ವಾನದ ಇಲಾಖೆಯನ್ನೇ ನಾನು ನೋಡಿಲ್ಲ. ಏನು ಬೇಕಾದರೂ ಕೇಳುವುದು. ಇಲ್ಲಿ ವ್ಯವಸ್ಥೆ ಇಲ್ಲ, ಇಲ್ಲಿ ರಾಜ್ಯಾಂಗ ಇಲ್ಲ, ಈ ದೇಶದಲ್ಲಿ ಫೈನಾನ್ಸ್ ಕಮಿಷನ್ ಇಲ್ಲ, ಅವರಿಗೆ ನಿಶವಳಿಕೆಯನ್ನು ಹಾಕಿಕೊಟ್ಟಿಲ್ಲ, ರೀತಿ ನೀತಿ ಇಲ್ಲ, ಸ್ಕೀಮ್ ಇಲ್ಲ, ಕಾರ್ಯಕ್ರಮ ಏನೂ ಇಲ್ಲ. ನಾನು ಈ ನನ್ನ ಜೀವನದಲ್ಲಿಯೇ ನೋಡಿಲ್ಲ. ರಾಜಕಾರಣಿಗಳು ಬರುತ್ತಾರೆ. ಹೋಗುತ್ತಾರೆ. ರಾಜಕಾರಣಿಗಳು ಹಂಗಾಮಿಯಾಗಿ ಇರುತ್ತಾರೆ ನಾವು ಇವೊತ್ತು ೫ ವರ್ಷ ಇರುತ್ತೇವೆ, ಮನೆಗೆ ಹೋಗುತ್ತೇವೆ. ಜನರು ಬೇಡವೆಂದರೆ ಹೋಗುತ್ತೇವೆ. ಇಲಾಖೆಯಲ್ಲಿರುವ ಅಧಿಕಾರಿಗಳು ಪರ್ಮನೆಂಟ್ ಆಗಿ ಇರತಕ್ಕಂಥವರು ; ದೇಶದ ಹಿತವನ್ನು ಕಾಪಾಡತಕ್ಕಂಥವರು. ಈ ದೇಶದ ಅರ್ಥ ವ್ಯವಸ್ಥೆಯನ್ನು ಕಾಪಾಡತಕ್ಕಂಥವರು ಈ ಆರ್ಥಿಕ ಇಲಾಖೆಯವರು. ಕರ್ನಾಟಕದ ಆರ್ಥಿಕ ಸ್ಥಿತಿ ಈ ಒಂದು ಇಲಾಖೆಯ ಕೈಗೆ ಸಿಕ್ಕಿ ದಿವಾಳಿ ಆಗಿದೆ. ಏಕೆ ದಿವಾಳಿ ಆಗಿದೆ ಎಂದರೆ. ಇವರಿಗೆ ಖರ್ಚು ಮಾಡುವುದಕ್ಕೆ ಏನಾದರೂ ಪ್ಲಾನ್ ಇದೆಯೇ ?

ಛೇರ್ಮನ್.—ತಮ್ಮ ಭಾಷಣ ೩೦ ಮಿನಿಟ್ ಆಯಿತು.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಧರ್ಮಸಿಂಗ್ ಅವರು ಮಾತನಾಡುವುದಿಲ್ಲ, ನಾನೇ ಮಾತನಾಡುತ್ತೇನೆಂದು ಹೇಳಿದ್ದೇನೆ.

ಛೇರ್ಮನ್.—ಮಾನ್ಯ ವೀರಪ್ಪ ಮೊಯಿಲಿಯವರ ಹೆಸರೂ ಇದೆ, ಧರ್ಮಸಿಂಗ್ ಅವರ ಬದಲು ಮೊಯಿಲಿಯವರು ಹೆಸರು ಕೊಟ್ಟಿದ್ದಾರೆ

ಶ್ರೀ ಬಿ. ಬಸವಲಿಂಗಪ್ಪ.—ನಾವು-ನಾವು ಅಡಜಸ್ಟ್ ಮಾಡಿಕೊಳ್ಳುತ್ತೇವೆ, ತಾವು ಚಿಂತೆ ಮಾಡುವುದು ಬೇಡ. ಮಾನ್ಯ ಲಕ್ಷ್ಮೀಸಾಗರ್‌ರವರೂ ಚಿಂತೆ ಮಾಡುವುದು ಬೇಡ. ಜನರಲ್ ಅಡ್ಮಿನಿಸ್ಟ್ರೇಷನ್, ಇದು ಏನು ಜನರಲ್ ಅಡ್ಮಿನಿಸ್ಟ್ರೇಷನ್; ಇದಕ್ಕೆ ಏನು ಪರಿಜ್ಞಾನ ಇದೆ ? ಇತಿಮಿತಿ ಇದೆಯೇ ? ಪ್ರಾರಂಭ ಇದೆಯೇ, ಕೊನೆಯಿದೆಯೇ ? ನಾನು ೧೯೫೮ ರಿಂದ ಮಂತ್ರಿಯಾಗಿದ್ದೆನು. ಇವೊತ್ತಿನ ದಿವಸ ನಾನು ಎಂ.ಎಲ್.ಎ. ಆಗಿದ್ದೇನೆ. ಇವರ ವ್ಯವಹಾರ ನೀತಿ ನೋಡಿದರೆ ನನಗೆ ದಿಗ್ಭ್ರಮೆ ಹುಟ್ಟಿಸುತ್ತದೆ. ಇವರು ಹೇಳಿದ್ದೇ ಇಂಟರ್‌ಪಿಟೇಷನ್, ಇವರು ಹೇಳಿದ್ದೇ ಮಾತು, ಆಡಿದ್ದೇ ಆಟ. ಹಾಡಿದ್ದೇ ಹಾಡು. ಅಧ್ಯಕ್ಷರೇ, ಮಂತ್ರಿಗಳು ಆರ್ಡರ್ ಮಾಡುವಾಗ ಓದಬೇಕು, ತಿಳಿದುಕೊಳ್ಳಬೇಕು ಗತ್ತಿನ ಮೇಲೆ ನೀವು ಮಾಡಿದ್ದು ಸರಿಯಿಲ್ಲ, ಎಂದು ಹೇಳಬೇಕು. ವಿವೇಚನೆ ಇರತಕ್ಕ ಮಂತ್ರಿ ಇದ್ದರೆ ಅವರಿಗೆ ಹೆದರಿಕೆ ಬರುತ್ತದೆ. ಇಲ್ಲದಿದ್ದರೆ ಹೆದರಿಕೆ ಬರುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಹೇಳುತ್ತಿದ್ದೇನೆ, ಈ ಅಧಿಕಾರಿಗಳಿಗೆ ಈಗ ಯಾವ ಹೆದರಿಕೆಯೂ ಇಲ್ಲ, ಸರ್ಕಾರದಲ್ಲಿ ಮಾನ್ಯ ಮುಖ್ಯಮಂತ್ರಿಯಾಗಿರತಕ್ಕವರು ಸಾರ್ವತ್ರಿಕವಾಗಿ ಘೋಷಣೆ ಮಾಡಿದ್ದರೆ, ವಾಗ್ದಾನ ಮಾಡಿದ್ದಾರೆ. ಇಂಥವುಗಳನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಜಿ.ಎ.ಡಿ. ಇರಬೇಕೋ ಅಥವಾ ಯಾವುದಕೆ ಅಧಿಕಾರ ? ಇರಬೇಕು. ಜಿ.ಎ.ಡಿ.ನಲ್ಲಿ ಯಾರನ್ನು ಇಟ್ಟುಕೊಳ್ಳಬೇಕು, ಯಾವುದಾದರೂ ಕಾರ್ಯಕ್ರಮಗಳನ್ನು ಹಾಕಿಕೊಂಡರೆ ಅದನ್ನು ಇಂಪ್ಲಿಮೆಂಟ್ ಮಾಡಬೇಕಲ್ಲ, ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವಂತಹವರು ಇದ್ದರೆ ಅಂಥವರನ್ನು ಇಟ್ಟುಕೊಳ್ಳಿ. ಅರಿತು ನುರಿತವರನ್ನು ಇಟ್ಟುಕೊಳ್ಳುವುದು ಬಿಟ್ಟು ಯಾರನ್ನೋ ವಯಸ್ಸಾಗಿದೆಯೆಂದು ಮುಖ್ಯ ಕಾರ್ಯದರ್ಶಿಯನ್ನಾಗಿ ಮಾಡಬಹುದೇ ? ಯಾರೋ ದೊಡ್ಡ ದೊಡ್ಡ ಅಧಿಕಾರಿಗಳು ಇದ್ದರೆ ಅವರನ್ನು ಮಾಡುವುದು ಸರಿಯಾದುದು ಅಲ್ಲ. ಅಮೇರಿಕಾ ದೇಶದಲ್ಲಿ ಕಾಂಟ್ರ್ಯಾಕ್ಟ್ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುತ್ತಾರೆ. ಯಾರು ಯೋಗ್ಯರು ಇದ್ದಾರೆ, ಯಾರು ನಿಪುಣರು ಇದ್ದಾರೆ ಅಂಥವರನ್ನು ಈ ಇಲಾಖೆಗಳಲ್ಲಿ ನೇಮಕ ಮಾಡುತ್ತಾರೆ. ಅವರು ಕೊನೆಗೆ ಐದು ವರ್ಷದ ನಂತರ ಮನೆಗೆ ಹೋಗುತ್ತಾರೆ, ಆ ರೀತಿ ನಾವು ಮಾಡುವುದಿಲ್ಲ. ಇವೊತ್ತು ಏನು ಆಗಿದೆ ಅಂದರೆ ಯಾರೋ ವಯಸ್ಸಾದವರು ಇದ್ದರೆ ಪ್ರೊಮೋಷನ್ ಕೊಡುತ್ತೇವೆ ನಮ್ಮ ದೇಶಕ್ಕೆ ಸ್ವತಂತ್ರ ಬಂದ ನಂತರ ಇವೊತ್ತಿನ ವರೆಗೆ ಒಂದೇ ತರಹ ಜನ ಇದ್ದಾರೆ, ಅವರೇ ಮುಖ್ಯ ಕಾರ್ಯದರ್ಶಿಗಳು ಆಗುವುದು. ಬೇರೆ ಯಾರೂ ಯೋಗ್ಯರು ಇಲ್ಲವೇ ? ಇವೊತ್ತಿನ ದಿವಸ ಅವರೇ ಇರಲಿ, ಬೇಡ ಎಂದು ಹೇಳುವುದಿಲ್ಲ: ಆದರೆ ಈ ಜನತೆಗೆ ಏನು ಆಗಬೇಕು ಎಂದು ನೋಡಬೇಕು. ಆರ್ಟಿಕಲ್ ೩೩೫ ಏನು ಹೇಳುತ್ತದೆ, "ಎಫಿಷಿಯನ್ಸಿ ಅಂಡ್ ಮೆರಿಟ್" ಎಂದು ಅದರಲ್ಲಿದೆ. ಆ ಪದ ಏಕೆ ಉಪಯೋಗಿಸುತ್ತಿದ್ದಾರೋ ಗೊತ್ತಿಲ್ಲ. ನನ್ನ ಭಾವನೆಯಲ್ಲಿ ಎಲ್ಲರ ಅನುಭವಕ್ಕೂ ಬರುವ ರೀತಿಯಲ್ಲಿ ಹೇಳುವುದಾದರೆ, ಎಫಿಷಿಯನ್ಸಿ

ಅಂಡ್ ಮೆರಿಟ್ ಎಂತಹುದು ಅಂದರೆ ಯೋಗ್ಯತೆ ಮತ್ತು ಗುಣ ಇರಬೇಕು. ಯಾವುದೇ ಅಧಿಕಾರಿಯಿಂದ ದೇಶಕ್ಕೆ ಏನು ಅನುಕೂಲ ಆಯಿತು ಎಂದು ನೋಡಬೇಕು. ಇವರಿಂದ ಬಡ ಜನ ಹಳ್ಳಿ ಹಳ್ಳಿಗಾಡಿನಲ್ಲಿ ಅವರ ಸ್ಥಿತಿ ಸುಧಾರಿಸಿತೇ ಎನ್ನುತಕ್ಕದ್ದರ ಬಗ್ಗೆ ಒಂದು ಟೆಸ್ಟ್ ಇಡಬೇಕೇ ಹೊರತಾಗಿ ನೀನು ಎಷ್ಟು ದಿವಸ ಅಧಿಕಾರದಲ್ಲಿ ಕಳೆದೆ, ಇಷ್ಟು ದಿವಸಕ್ಕೇ ಪ್ರೊಮೋಷನ್ ಕೊಡಬೇಕು ಎಂದು ಹೇಳುವುದು ಸರಿಯಲ್ಲ. ಇದು ಎಲ್ಲಿ ಆದರೂ ತಪ್ಪು, ಕೇಂದ್ರದಲ್ಲಿ ಆದರೂ ತಪ್ಪು, ಇಲ್ಲಿ ಆದರೂ ತಪ್ಪು. ಆದ್ದರಿಂದ ನಾನು ಏನು ಹೇಳುತ್ತಿದ್ದೇನೆಂದರೆ ಇಂತಹ ಸಾರೋದ್ಧಾರ ಮುಖ್ಯ ಕಾರ್ಯದರ್ಶಿಗಳು ಏನು ಬಂದಿದ್ದಾರೆ ಅವರನ್ನು ಬದಲಾವಣೆ ಮಾಡಿ. ಯಾರು ಬಡವರ ಬಗ್ಗೆ ಹಿಂದುಳಿದ ವರ್ಗದವರ ಬಗ್ಗೆ ಕನಿಕರ ಇಟ್ಟುಕೊಂಡಿರುತ್ತಾರೆ, ಅನುಕಂಪದ ಭಾವನೆ ಇಟ್ಟುಕೊಂಡಿದ್ದಾರೆ, ಅವರ ಕಷ್ಟ ನಷ್ಟಗಳನ್ನು ಹಾಗೂ ಸ್ಥಿತಿಗತಿಗಳನ್ನು ಸುಧಾರಿಸಲಿಕ್ಕೆ ಯಾರು ತಮ್ಮ ಬುದ್ಧಿವಂತಿಕೆಯನ್ನು ಉಪಯೋಗಿಸಿಕೊಂಡು ಕೆಲಸವನ್ನು ಮಾಡುತ್ತಾರೆ, ಅಂತಹವರನ್ನು ಎಫಿಷಿಯೆಂಟ್ ಅಂಡ್ ಮೆರಿಟೆಡ್ ಎಂದು ಹೇಳಬೇಕೇ ವಿನಹ ಸುಮ್ಮನೆ ವಯಸ್ಸಿನಲ್ಲಿ ಕಾಲ ಕಳೆದರೆ ಮೆರಿಟ್ ಎಂದು ಹೇಳುವುದು ಸರಿಯಲ್ಲ. ಆದ್ದರಿಂದ ನಾನು ಹೇಳುತ್ತಿದ್ದೇನೆ ದಯವಿಟ್ಟು ಇದನ್ನು ಬದಲಾವಣೆ ಮಾಡಿ. ಯಾರು ಬಡವರ ಉದ್ಧಾರಕ್ಕೋಸ್ಕರ ಕಮಿಟೆಡ್ ಆಗಿದ್ದಾರೆ ಅಂತಹವರನ್ನು ಇಂತಹ ಹುದ್ದೆಗಳಿಗೆ ನೇಮಕ ಮಾಡಬೇಕು. ನಾವು ನಮ್ಮ ರಾಜ್ಯಾಂಗದಲ್ಲಿ ಸಮಾಜವಾದವನ್ನು ಜಾರಿಗೆ ತರುತ್ತೇವೆಂದು ಘೋಷಣೆ ಮಾಡಿದ್ದೇವೆ. ಇಲ್ಲಿ ಸಮಾಜವಾದ ಎಂದರೆ ಏನು ? it cannot be an just talk of socialism, it cannot be verbose but it should be speaking socialism in details, and that should be capable of being implemented effectively to the benefit of those who are deprived, who are suppressed and then who have not seen the light of the civilization. ಇಂತಹ ಜನರಿಗೆ ಮತ್ತು ಇಂತಹ ವಿಚಾರಗಳಿಗೋಸ್ಕರ ಇವರ ಮೆರಿಟ್ ಮತ್ತು ಎಫಿಷಿಯೆನ್ಸಿ ಉಪಯೋಗವಾಗದಿದ್ದರೆ ಏನು ಮಾಡುವುದು ? ಇಂತಹ ಅಧಿಕಾರಿಗಳನ್ನು ದನ ಕಾಯುವುದಕ್ಕೆ ಹಾಕಬೇಕು ? I am using very strong words...

ಶ್ರೀ ಕೆ. ಹೆಚ್. ಪಾಟೀಲ್.—ದನಕಾಯುವವರು ಸಹ ಬುದ್ಧಿವಂತರಿರಬೇಕಾಗುತ್ತದೆ. ತನ್ನ ದನಗಳು ಯಾವುವು ಎಂಬುದನ್ನು ಗುರುತು ಹಿಡಿಯುವಂತಹ ಶಕ್ತಿ ಅವರಿಗೆ ಇರಬೇಕಾಗುತ್ತದೆ.

ಶ್ರೀ ಸಿ. ಎಂ. ರೇವಣಸಿದ್ದಯ್ಯ.—ದನಕಾಯುವ ಕೆಲಸ ಬಹಳ ಕಡಿಮೆ ದರ್ಜೆಯದು ಎಂದು ಭಾವಿಸಬೇಡಿ. ಆ ಕೆಲಸವೂ ಸಹ ಬಹಳ ಮುಖ್ಯವಾದುದು. ಆ ಕೆಲಸ ಮಾಡಲು ಬಹಳ ಜಾಣತನ ಬೇಕು. ಈ ಕೆಲಸ ಮಾಡುವವರು ದನಗಳಿಗೆ ಯಾವಾಗ ನೀರು ಕುಡಿಸಬೇಕು ಮತ್ತು ಯಾವಾಗ ಮೇವು ಹಾಕಬೇಕು ಎಂಬುದನ್ನು ತಿಳಿದುಕೊಂಡಿರಬೇಕಾಗುತ್ತದೆ. ಇವೊತ್ತು ದನ ಕಾಯುವವರು ಉತ್ತಮ ಕೆಲಸ ಮಾಡುತ್ತಿದ್ದಾರೆಂಬುದನ್ನು ತಾವು ತಿಳಿದುಕೊಳ್ಳಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಅದನ್ನು ನಾನು ಒಪ್ಪುತ್ತೇನೆ. ಆ ಕೆಲಸ ಮಾಡಲು ಎಂತಹ ಪ್ರವೀಣತೆ ಇರಬೇಕು ಎಂಬುದು ನನಗೆ ಗೊತ್ತಿಲ್ಲ. ಏಕೆಂದರೆ, ನನ್ನ ಅಜ್ಜ ವ್ಯಾಪಾರ ಮಾಡುತ್ತಿದ್ದ, ನಮ್ಮಪ್ಪ ವ್ಯಾಪಾರ ಮಾಡುತ್ತಿದ್ದ, ಈಗ ನಾನು ವ್ಯಾಪಾರ ಮಾಡುತ್ತಿದ್ದೇನೆ. ಆದ್ದರಿಂದ ಆ ಕೆಲಸದ ಕಷ್ಟ ನನಗೆ ಗೊತ್ತಿಲ್ಲ. ಒಟ್ಟಿನಲ್ಲಿ ಇವರು ನಮಗೆ ಕಾಟ ಕೊಡುವುದು ಬೇಡ ಎಂದು ಇದನ್ನು ಹೇಳುತ್ತಿದ್ದೇನೆ. ಈಗ ನೀವು ಅಧಿಕಾರದಲ್ಲಿದ್ದೀರಿ. ಹಿಂದೆ ನಾನು ಸಹ ಮಂತ್ರಿಯಾಗಿದ್ದೆ. ಮಂತ್ರಿಯಾದವರು ಮತ್ತು ಮುಖ್ಯಮಂತ್ರಿಯಾದವರು ತಮ್ಮ ಜಾತಿಯವರನ್ನೇ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿಕೊಳ್ಳಬಾರದು. ಒಂದುವೇಳೆ ಆ ರೀತಿ ಮಾಡಿದರೆ ಏನಾಗುತ್ತದೆಂದರೆ, ಆ ಜಾತಿಗೆ ಸೇರಿದ ಜನರು ಮೆರೆದಾಡುವುದಕ್ಕೆ ಅವಕಾಶವಾಗುತ್ತದೆ ಮತ್ತು ಬೇರೆ ಜಾತಿಯ ಜನರನ್ನು ಶೋಷಣೆ ಮಾಡುವುದಕ್ಕೆ ಒಂದು ದಾರಿ ಮಾಡಿಕೊಟ್ಟಂತೆ ಆಗುತ್ತದೆ. ಆದ್ದರಿಂದ ಮಂತ್ರಿಯಾದವರು ತಮಗೆ ಬೇಕಾದವರನ್ನು ಆಪ್ತ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಿಕೊಳ್ಳಲು ಅವಕಾಶವಿದ್ದರೂ ಸಹ ತಮ್ಮ ಜಾತಿಯವರನ್ನು ನೇಮಕ ಮಾಡಿಕೊಳ್ಳಬಾರದು. ಆದ್ದರಿಂದ ಸರ್ಕಾರದವರು ಇದರ ಕಡೆಗೂ ಗಮನ ಕೊಡಬೇಕು. ಅಧಿಕಾರಿಗಳ ಬಗ್ಗೆ ನಾನು ಇಷ್ಟು ಹೇಳುವುದು, ಜನರ ಕಷ್ಟ ಏನಿದೆ ಎಂಬುದನ್ನು ತಿಳಿಯದಿರುವವರನ್ನು, ಬಡತನದ ಬೇಗೆ ಮತ್ತು ಹಸಿವು ಯಾವ ರೀತಿ ಇರುತ್ತದೆಂಬುದನ್ನು ತಿಳಿಯದಿರುವವರನ್ನು ಅಧಿಕಾರಿಯನ್ನಾಗಿ ನೇಮಕ ಮಾಡಿದರೆ, ಅವರಿಗೆ ಜನರ ಕಷ್ಟ ಏನಿದೆ ಎಂಬುದು ಗೊತ್ತಾಗುವುದಿಲ್ಲ. ಅದಕ್ಕೋಸ್ಕರ ನಾನು ತಮಗೆ ವಿನಯಪೂರ್ವಕವಾಗಿ ಹೇಳುತ್ತಿದ್ದೇನೆ. ಏನೆಂದರೆ, ಯಾರು ಯಾರು ಇಂತಹ ಐ.ಎ.ಎಸ್. ಅಧಿಕಾರಿಗಳು ಮತ್ತು ದೊಡ್ಡ ದೊಡ್ಡ

ಅಧಿಕಾರಿಗಳು ಇದ್ದಾರೆ, ಅಂತಹವರು ನಮಗೆ ಬೇಕಾಗಿಲ್ಲ. ಬಡವರ ಬಗ್ಗೆ ಯಾರಿಗೆ ಅನುಕಂಪ ಇಲ್ಲ, ಯಾರಿಗೆ ಕಮಿಟ್‌ಮೆಂಟ್ ಎಂಬುದು ಇಲ್ಲ, ಅಂತಹವರನ್ನು ಸರ್ಕಾರದ ನೌಕರಿಯಿಂದ ತೆಗೆಯಬೇಕು. ಅವರು ತಮ್ಮ ಪಾಲಿನ ಸಂಬಳವನ್ನು ತೆಗೆದುಕೊಂಡು ಮನೆಗೆ ಹೋಗಲಿ. ಅವರ ಸೇವೆ ನಮಗೆ ಬೇಕಾಗಿಲ್ಲ. ಈ ಬಗ್ಗೆ ಸರ್ಕಾರ ಒಂದು ಕಠೋರವಾದಂಥ ನಿರ್ಧಾರವನ್ನು ತೆಗೆದು ಕೊಂಡರೆ, ಕಳೆದ 3 ವರ್ಷಗಳಿಂದ ನೀವು ಜನತೆಗೆ ಏನೇನು ವಾಗ್ದಾನ ಮಾಡಿದ್ದೀರಿ, ಅವನ್ನೆಲ್ಲಾ ಜಾರಿಗೆ ಕೊಡಬಹುದು. ಇಲ್ಲಿಯವರೆಗೆ ನೀವು ಜನತೆಗೆ ರಾಶಿಗಟ್ಟಲೆಯಾಗಿ ಕೊಟ್ಟಿರುವಂತಹ ವಾಗ್ದಾನಗಳು ಏತಕ್ಕೆ ಕಾರ್ಯಗತವಾಗಿಲ್ಲವೆಂದರೆ, ಇಂತಹ ದಡ್ಡ ಐ.ಎ.ಎಸ್. ಅಧಿಕಾರಿಗಳು ಇರುವುದರಿಂದಲೇ. ಇವರುಗಳು ತಾವು ಅತಿ ಬುದ್ಧಿವಂತರೆಂದು ತಿಳಿದುಕೊಂಡಿದ್ದಾರೆ. ಆದರೆ ಅದು ತಪ್ಪು. ನಾವು ರೆವಿನ್ಯೂ ಮಂತ್ರಿಯಾಗಿದ್ದಾಗ ಈ ಅಧಿಕಾರಿಗಳನ್ನೆಲ್ಲಾ ಕೂಡಿಹಾಕಿ ಕ್ಲಾಸ್ ತೆಗೆದುಕೊಳ್ಳುತ್ತಿದ್ದೆ. ಆಗ ನಾನು ಇವರಿಗೆ ಟೀಚರ್ ಆಗಿದ್ದೆ. ನಾನು ತೆಗೆದುಕೊಳ್ಳುತ್ತಿದ್ದ ಕ್ಲಾಸ್‌ನಲ್ಲಿ ಈ ಅಧಿಕಾರಿಗಳಿಗೆ ಕಾನೂನು ಬಗ್ಗೆ ಏನಾದರೂ ಪ್ರಶ್ನೆ ಕೇಳಿದರೆ ಸರಿಯಾದ ಉತ್ತರ ಕೊಡುತ್ತಿರಲಿಲ್ಲ. ಈ ಅಧಿಕಾರಿಗಳಿಗೆ ಕಾನೂನು ಬಗ್ಗೆ ಯಾವ ಅರಿವೂ ಇರಲಿಲ್ಲ. ಇವರು ಬಹಳ ದಡ್ಡ ಜನರಿದ್ದಾರೆ. ಆದರೂ ನೀವು ಇವರೆಲ್ಲಾ ಬುದ್ಧಿವಂತರೆಂದು ಒಪ್ಪಿಕೊಂಡು ಇವರ ಕೈಗೆ ಅಧಿಕಾರ ಕೊಟ್ಟರೆ, ಈಗಿರುವಂತಹ ಪರಿಸ್ಥಿತಿ ಇದೇರೀತಿ ಮುಂದುವರೆಯುತ್ತದೆ. ಜನರು ಬಡತನದಲ್ಲಿಯೇ ನರಳಬೇಕಾಗುತ್ತದೆ. ಒಟ್ಟಿನಲ್ಲಿ ಈ ಅಧಿಕಾರವರ್ಗದ ಜನರನ್ನು ನಿಮ್ಮ ಹತೋಟಿಯಲ್ಲಿಟ್ಟುಕೊಂಡು ಸರ್ಕಾರ ನಡೆಸುವ ಬಗ್ಗೆ ನೀವು ನಿರ್ವೀರ್ಯರಾಗಿದ್ದೀರಿ ಮತ್ತು ಸೋತಿದ್ದೀರಿ ಎಂದು ನಿಷ್ಠೂರವಾಗಿ ಈ ಎರಡು ಮಾತುಗಳನ್ನು ನಾನು ಹೇಳುತ್ತಿದ್ದೇನೆ.

ಇನ್ನು ಶ್ರೀಮಾನ್ ರಾಮಕೃಷ್ಣಹೆಗಡೆ ಅವರು ಈ ದೇಶಕ್ಕೆಲ್ಲಾ ಉಪದೇಶ ಮಾಡುತ್ತಾರೆ. ಕೇಂದ್ರದವರು ಹಾಗಿರಬೇಕು, ಹೀಗಿರಬೇಕು ಎಂದೆಲ್ಲಾ ಹೇಳುತ್ತಾರೆ. ಅವರು ಹಾಗೆ ಕೆಲಸ ಮಾಡಬೇಕಾಗಿತ್ತು, ಹೀಗೆ ಕೆಲಸ ಮಾಡಬೇಕಾಗಿತ್ತು, ಅವರು ತಮ್ಮ ಆರ್ಥಿಕ ವ್ಯವಸ್ಥೆಯನ್ನು ಸರಿಯಾಗಿ ನಡೆಸಿಕೊಂಡು ಹೋಗುತ್ತಿಲ್ಲ ಎಂಬ ಬಗ್ಗೆ ಪುಸ್ತಕಗಳನ್ನು ಬರೆದೂ ಬರೆದೂ ನಮಗೆ ಕಳುಹಿಸಿದ್ದೂ ಕಳುಹಿಸಿದ್ದೆ.

ಶ್ರೀ ಜಿ. ಎಸ್. ಬಾಗಲಕೋಟೆ.—ರಿಜಲ್ಟ್ ಬಂದಿದೆ.

ಶ್ರೀ ಬಿ. ಬಸವಲಿಂಗಪ್ಪ.—ರಿಜಲ್ಟ್ ಬರುತ್ತದೆ. ಹೋಗುತ್ತದೆ. ಅದು ಮುಖ್ಯವಲ್ಲ. ಹಿಂದೆ ನಾನು ಮಂತ್ರಿಯಾಗಿದ್ದೆ. ಈಗ ಮಂತ್ರಿಯಾಗಿಲ್ಲ. ಅಧಿಕಾರಕ್ಕೆ ಯಾರು ಬೇಕಾದರೂ ಬರಬಹುದು ಅಥವಾ ಬರದಿರಬಹುದು. ಯಾವುದೂ ಖಾಯಂ ಅಲ್ಲ.

12-00 Noon.

ಸ್ವಾಮಿ, "ಕೊಯಿಲಿಷನ್ ಆಟ್ ದಿ ಸೆಂಟರ್"—ಇವರ ಬುದ್ಧಿವಾದ ಏಕೆ ಬೇಕು? ಕರ್ನಾಟಕದ ಜನ ಎಲ್ಲಾ ಸೇರಿ ನೀವು ಮುಖ್ಯ ಮಂತ್ರಿಯಾಗಿ ಕೆಲಸ ಮಾಡಿ, ನಮ್ಮ ಕಷ್ಟನಷ್ಟಗಳನ್ನು ಅರಿತು ಕೊಂಡು ನಿವಾರಣೆಮಾಡಿ ಎಂದು ಹೇಳಿದರೆ ಏಕ್‌ದಂ ಆ ಕಡೆ ಕೈ ಚಾಚಬಿಡುವುದೇ, ಹಾಗಿದ್ದರೆ ನೀವು ಸೆಂಟರ್‌ಗೆ ಹೋಗಿ. ಇಲ್ಲಿಂದ ಅಲ್ಲಿಗೆ ಏಕೆ ಕೈಚಾಚಬೇಕು. ಅಲ್ಲೇ ಇದ್ದು ಕೆಲಸ ಮಾಡುವುದು. ಏಕೆ ಇಲ್ಲಿ ಕೆಲಸ ಮಾಡುವುದಕ್ಕೆ ನಿಮಗೆ ಆಗುವುದಿಲ್ಲವೇ?

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಬಸವಲಿಂಗಪ್ಪನವರೆ, ಒಂದು ನಿಮಿಷ. ಮುಖ್ಯಮಂತ್ರಿ ಆದ ತಕ್ಷಣ ಯಾವುದೂ ಪುಸ್ತಕ ಬರೆಯಬಾರದು ಎಂದು ಏನಾದರೂ ನಿಯಮ ಇದೆಯೋ? ಈ ದೇಶದ ಬಗ್ಗೆ ಚಿಂತನೆ ಮಾಡಬಾರದು ಎಂದು ನಿಯಮ ಇದೆಯೇ? ಇದ್ದರೆ ದಯವಿಟ್ಟು ಹೇಳಿ ಅದನ್ನು.

ಶ್ರೀ ಬಿ. ಬಸವಲಿಂಗಪ್ಪ.—ವೇದವನ್ನು ಯಾರೋ ಕಾಡಿನ ಜನ ಬರೆದರು. ಈಗ ನೀವು ಆ ಹೆಸರನ್ನು ಇಟ್ಟುಕೊಂಡಿದ್ದೀರಿ. ಸ್ವಾಮಿ, ಈಗ ಮುಖ್ಯ ಮಂತ್ರಿಗಳಿಗೆ ಈ ಜವಾಬ್ದಾರಿ ಕೊಟ್ಟರೆ ಅವರು ಆ ಕಡೆ ಕೈ ತೋರಿಸುವುದೇ? ಅಲ್ಲಿ ಹೋಗಲಿ, ಡೆಲ್ಲಿಗೆ ಹೋಗಿ ಮುಗಿಸಿಕೊಳ್ಳಿ ಎಂದು ಹೇಳಿದರೆ, Coalition at the Centre : Ramakrishna Hegde.

"India is already passing through a phase of coalition politics even though political polarisation is

> gradually taking place at the State level there is yet no sign of emergence of a national alternative''.

Further it said,

> ''Even before the emergency, forced the opposition parties to come closer, the Lokanayaka Jayaprakash Narayan had predicted in a speech at the Indian council of world affairs at New Delhi on February 3rd, 1977 that Seventies would see a coalition Government both at the Centre and in the States''.

ನೀವೇ ಮಾಡಿಕೊಂಡು ಹೋಗಿ. ಅಲ್ಲಿ ನೀವು ಬರುತ್ತೀರಿ ಎಂದು ನಾವು ಕಾದಿದ್ದೇವೆಯೇ? ನೀವು ಈ ಪುಸ್ತಕ ಬರೆದು, ರಾಜ್ಯಭಾರ ಮಾಡಿ, ಈಗ ಎಲ್ಲಾ ಒಟ್ಟಿಗೆ ಮಾಡೋಣ ಎಂದು ನಾವು ಹೇಳುವುದಕ್ಕೆ ತಯಾರಾಗಿಲ್ಲ, ನೀವು ತಯಾರಾಗಿರಬಹುದು. ಆದರೆ ನೇರವಾಗಿ ನಾವೇ ಮಾಡುತ್ತೇವೆ. ಇವರಿಗೆ ಅಲ್ಲಿ ಹೋಗಿ ಸೇರಿಕೊಳ್ಳುವುದಕ್ಕೆ ಆಸೆ ಏಕೆ? ರಾಜೀವಗಾಂಧಿಯವರು ಅವರ ಶಕ್ತಿಯ ಮೇಲೆ, ಪಾರ್ಟಿಯ ಬೆಂಬಲದ ಮೇಲೆ ಅಲ್ಲಿ ಪ್ರಧಾನ ಮಂತ್ರಿಗಳಾಗಿದ್ದಾರೆ. ಅವರ ಕ್ಯಾಬಿನೆಟ್‌ನಲ್ಲಿ ಎಲ್ಲರೂ ಸೇರಿಕೊಂಡುಬಿಟ್ಟು ಮಿನಿಸ್ಟರುಗಳು ಆಗುವುದೇ? ನಿಮಗೆ ಏಕೆ ಈ ಕೆಲಸ. ಕರ್ನಾಟಕ ರಾಜ್ಯದಲ್ಲಿ ಕೆಲಸ ಸರಿಯಾಗಿ ಮಾಡಿ ಎಂದು ೫ ವರ್ಷ ನಿಮಗೆ ಅವಕಾಶ ಕೊಟ್ಟರೂ ಕೂಡ ಇವತ್ತು ಆರ್ಥಿಕ ದುಸ್ಥಿತಿ ಬಂದುಬಿಟ್ಟು ನೌಕರರಿಗೆ ಕೊಡತಕ್ಕಂಥ ಆಸೆಯೇ ಇಲ್ಲ, ಹಾಗೆಲ್ಲಾ ಮಾಡಿದ್ದಾರೆ. ಆಮೇಲೆ ಆರ್ಥಿಕ ವ್ಯವಸ್ಥೆ ಏನಿದೆ, ಆ ವ್ಯವಸ್ಥೆ ಬಗ್ಗೆ ಬುದ್ಧಿವಾದ ಹೇಳುವುದಕ್ಕೆ ಹೋಗುತ್ತಿದ್ದು. ಅದಕ್ಕೆ ಒಂದು ಪುಸ್ತಕ ಬರೆಯುವುದು. Union financial assistance to the States ಎಂದು ಬರೆದಿದ್ದಾರೆ. ಕಾನ್‌ಸ್ಟಿಟ್ಯೂಷನಲ್ಲಿ ಆರ್ಥಿಕ ವ್ಯವಸ್ಥೆ ಏನಿದೆ ಅಂದರೆ, ಇದರಲ್ಲಿರ ತಕ್ಕಂಥ ಸಂಪನ್ಮೂಲಗಳನ್ನು ರೂಢಿಸಿಕೊಂಡು ಈ ಒಂದು ರಾಜ್ಯದ ಆರ್ಥಿಕ ವ್ಯವಸ್ಥೆಯನ್ನು ಅಭಿವೃದ್ಧಿ ಮಾಡಿ ಜನಗಳ ಕಲ್ಯಾಣಕ್ಕೋಸ್ಕರ ದುಡಿಯುವುದನ್ನು ಬಿಟ್ಟು ಇದೆಲ್ಲಾ ಪುಸ್ತಕ ಬರೆಯುವಂಥಾದ್ದು ಏನು? ಇದೆಲ್ಲಾ ಯಾವಾಗ ಬರೆದದ್ದು, ಯಾರು ಬರೆದರು, ಯಾವಾಗ ಬರೆದಿರಿ, ಹೇಗೆ ಬರೆದಿರಿ, ಎಲ್ಲರಿಗೂ ಇದನ್ನು ಕಳಿಸುವುದಕ್ಕೆ ಏಕೆ ಪ್ರಯತ್ನ ಮಾಡುತ್ತೀರಿ? ಇದರ ಪುರುಷಾರ್ಥ ಏನು? ಇದರ ಉದ್ದೇಶ ಏನು? ಆಮೇಲೆ ಇನ್ನೊಂದು ಪುಸ್ತಕ ಬರೆಯುವುದು. ''Need for national alternative'' ಇದು ನಿಮ್ಮ ಕೈಯಲ್ಲಿ ಆಗುತ್ತದೆಯೇ? ಯಾರೋ ಒಬ್ಬರೋ, ಇಬ್ಬರೋ ಅಲ್ಲಿ ಇಲ್ಲಿ ಗೆದ್ದುಬಂದರೆ ರಾಷ್ಟ್ರ ಮಟ್ಟದಲ್ಲಿ ಆಲ್ಟರ್ನೇಟೀವ್ ಗೌರ್ನಮೆಂಟ್ ರಚನೆ ಮಾಡುತ್ತೀರೋ? ನಿಮಗೆ ಏನು ಸಂಬಂಧ? ನೀವು ಏಕೆ ಇಷ್ಟೆಲ್ಲಾ ಪ್ರಯತ್ನ ಮಾಡುತ್ತೀರಿ? ರಾಷ್ಟ್ರಮಟ್ಟದಲ್ಲಿ ನೀವು ಯಾರೋ ಒಬ್ಬರನ್ನು, ಬೇರೆಯವರನ್ನು ಪ್ರಧಾನಮಂತ್ರಿ ಮಾಡಲಿಕ್ಕೆ ಪ್ರಯತ್ನ ಮಾಡುತ್ತೀರಿ. ಆದರೆ ಈ ಪುಸ್ತಕಗಳನ್ನು ಬರೆಯತಕ್ಕಂಥಾದ್ದು ಯಾರಿಗೋಸ್ಕರ, ಯಾರಿಗೋಸ್ಕರ ಬೆಳಕನ್ನು ಚೆಲ್ಲತಕ್ಕಂಥಾದ್ದು, ಓದು ಎಂದು ಹೇಳತಕ್ಕಂಥಾದ್ದು? ದಯಮಾಡಿ ಈ ಕೆಲಸ ಬಿಡಿ, ಸಾಕು. ನಿಮಗೆ ಇದು ಆಗದ ಮಾತು, ಹೋಗದ ಮಾತು. ಆಮೇಲೆ ನಿಮ್ಮ ಆರ್ಥಿಕ ಸ್ಥಿತಿ ಹೇಗಿದೆ ಎನ್ನುವುದರ ಬಗ್ಗೆ ಒಂದು ಮಾತನ್ನು ಹೇಳುತ್ತಾ ಇದ್ದೇನೆ. ಈಗ ಯೋಜನಾ ಇಲಾಖೆಯ ವಾರ್ಷಿಕ ವರದಿಯಲ್ಲಿರುವ ಮೊದಲನೇ ವಾಕ್ಯವನ್ನು ಓದುತ್ತೇನೆ :

> ''೧೯೮೭–೮೮ರಲ್ಲಿ, ಯೋಜನಾ ಇಲಾಖೆಯು ಲಭ್ಯವಿರುವ ಸಂಪನ್ಮೂಲ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು, ಯೋಜನಾ ಹಂಚಿಕೆಯನ್ನು ೯೧೭ ಕೋಟಿ ರೂಪಾಯಿಗಳಿಂದ ೭೯೯.೪೫ ಕೋಟಿ ರೂಪಾಯಿಗಳಿಗೆ ಇಳಿಸಲು ಕ್ರಮ ಕೈಗೊಂಡಿದೆ''.

ಸ್ವಾಮಿ, ಇದೇನು ಮುತ್ಸದ್ದಿತನವೇ? ಕೇಂದ್ರ ಸರ್ಕಾರದವರು ೯೧೭ ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ಅಂದರೆ ಅದನ್ನು ಇಳಿಸಿಬಿಟ್ಟು ನನಗೆ ಇಷ್ಟೇ ಸಾಕು ಎನ್ನತಕ್ಕಂಥ ನಿಲುವು ಏನಿದೆ, ಈ ನಿಲುವನ್ನು ನಾಳೆ ಜನಗಳು ನೋಡಿ ನಾಚಿಕೆ ಪಡುವುದಿಲ್ಲವೇ? ನಾನು ಕಠಿಣವಾದ ಭಾಷೆಯನ್ನು ಉಪಯೋಗಿಸುತ್ತಿದ್ದೇನೆ. ಕೇಂದ್ರ ಸರ್ಕಾರದವರು ಅನುಸರಿಸತಕ್ಕ ಆರ್ಥಿಕ ವ್ಯವಸ್ಥೆ ಮೇಲೆ ನೀವು ದಿನಾ ಟೀಕೆ ಮಾಡುತ್ತಲೇ ಇದ್ದೀರಿ. ನಿಮ್ಮ ಬಾಳು ಏನಾಗಿದೆ? ನಿಮ್ಮ ಆರ್ಥಿಕ ವ್ಯವಸ್ಥೆಯನ್ನು ಸರಿದೂಗಿಸಲಿಕ್ಕೆ ೧೫೦ ಕೋಟಿ ರೂಪಾಯಿಗಳನ್ನು ಕಡಿಮೆ ಮಾಡುವ ನಿರ್ಧಾರ ತೆಗೆದುಕೊಂಡಿದ್ದೀರಿ. ಇದು ಯಾವ ಬುದ್ಧಿವಂತರು ಮೆಚ್ಚತಕ್ಕ ಕೆಲಸ? ಇದನ್ನು ಜನ ಮೆಚ್ಚುತ್ತಾರೆಯೇ? ಬೆಂಬಲ ಕೊಡುತ್ತಾರೆಯೇ? ಯೋಚನೆ ಮಾಡಿ.

೧೯೮೭-೮೮ರ ಬಜೆಟ್ ಪುಟ ೨೨ರಲ್ಲಿ ನಮ್ಮ ಸರ್ಕಾರ, ಮೌಲ್ಯಾಧಾರಿತ ಸರ್ಕಾರ ಎಂದು ಹೇಳಿದ್ದೀರಿ. ಮೌಲ್ಯ ಅಂದರೆ ಏನು ಎನ್ನುವುದು ನನಗೆ ಗೊತ್ತಿರಲೇ ಇಲ್ಲ. ನಾನು ಸಂಸ್ಕೃತ ಓದಿದ್ದರೂ ಗೊತ್ತಿರಲಿಲ್ಲ.

ಶ್ರೀ ವೇದಾಂತ ಹೆಮ್ಮಿಗೆ.—'ಮೌಲ್ಯ' ಏನು ಎನ್ನುವುದನ್ನು ಅಣ್ಣಾಬಾದ್‌ನಲ್ಲಿ ತೋರಿಸಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—'ಮೌಲ್ಯ' ಎನ್ನುವುದಕ್ಕೆ ಇಂಗ್ಲೀಷ್‌ನಲ್ಲಿ ರೇಟ್ ಎಂದು ಇದೆ. ಕನ್ನಡದಲ್ಲಿ ಬೆಲೆ ಎಂದಾಗುತ್ತದೆ. ಅಂದರೆ ಬೆಲೆ ಆಧಾರಿತ ಆಡಳಿತ.

ಶ್ರೀ ರಾಮಕೃಷ್ಣ ಹೆಗಡೆ.—ಮೌಲ್ಯಕ್ಕೂ ಬೆಲೆಗೂ ವ್ಯತ್ಯಾಸ ಇದೆ.

ಶ್ರೀ ಬಿ. ಬಸವಲಿಂಗಪ್ಪ.—ಮೌಲ್ಯದ ಬಗ್ಗೆ ಅರ್ಥ ಕಂಡುಹಿಡಿದಿದ್ದು, ಇವತ್ತು ನನಗೆ ಅರ್ಥ ವಾಗಿದೆ. ಕಾರಣ ಏನೆಂದರೆ, ಸರ್ಕಾರದವರು ಮಾಡತಕ್ಕ ಎಲ್ಲಾ ಕಾರ್ಯಕ್ರಮಗಳಿಗೂ ಅದರ ಬೆಲೆ ಎಷ್ಟು ಎನ್ನುವುದನ್ನು ನಿರ್ಣಯ ಮಾಡಿದ್ದಾರೆ. ಇವರ ಬಗ್ಗೆ ಸಣ್ಣ ನೌಕರರಾಗಲೀ, ದೊಡ್ಡ ನೌಕರರಾಗಲೀ, ಮಂತ್ರಿಗಳಾಗಲೀ ನಾನು ಎಲ್ಲರ ಬಗ್ಗೆ ಮಾತನಾಡುವುದಿಲ್ಲ. ಆದರೆ ಜನ ಮಾತನಾಡುತ್ತಿದ್ದಾರೆ. ಸರ್ಕಾರೀ ಕಾರ್ಯಕ್ರಮಗಳಿಗೆ ರೇಟ್ ಫಿಕ್ಸ್ ಮಾಡಿ, ಮಾರಾಟ ಮಾಡು ತ್ತಿದ್ದಾರೆಂದು ಜನ ಮಾತನಾಡುವುದನ್ನು ಕೇಳಿ ಕೇಳಿ ನನಗೆ ಸಾಕಾಗಿದೆ. ಇದು ನಾನು ಹೇಳಿದ್ದಲ್ಲ. ಆ ವಿಚಾರವನ್ನು ನಾನು ಸದನಕ್ಕೆ ತಿಳಿಸಿದ್ದೇನೆ. ಇವರು ಮುಖ್ಯ ಮಂತ್ರಿಗಳಾದ ಮೇಲೆ ಯಾವ ರೀತಿಯ ಆಡಳಿತವನ್ನು ರಾಜ್ಯಕ್ಕೆ ಕೊಟ್ಟಿದ್ದಾರೆ, ಏನೇನು ಕೊಟ್ಟಿದ್ದಾರೆಂದು ನೋಡಬೇಕಾಗಿದೆ. ಯಾರೇ ಮುಖ್ಯ ಮಂತ್ರಿಗಳಾಗಿರಲಿ, ಮಂತ್ರಿಗಳಾಗಿರಲಿ, ಅವರ ನಡೆ ನುಡಿಗಳು ಬಹಳ ಸ್ಪಷ್ಟ ವಾಗಿರಬೇಕು. ನೀತಿಗರ್ಭಿತವಾಗಿರಬೇಕು. ಬೇರೆ ಜನ ನಾವು ಮಾಡತಕ್ಕ ಕೆಲಸಗಳ ಬಗ್ಗೆ ಕೇಳಿದರೆ, ಉತ್ತರ ಕೊಡತಕ್ಕ ಶಕ್ತಿ ಇರಬೇಕು. ನಾವು ಆಸ್ತಿ ಪಾಸ್ತಿ ಮಾಡಿಕೊಂಡಿದ್ದರೆ, ಅವಕ್ಕೆ ಆಧಾರಸಹಿತ ವಾಗಿ ಈ ರೀತಿ ಬಂದಿದೆ. ಲಂಚರುಷುವತ್ತುಗಳಿಂದ ತೆಗೆದುಕೊಂಡಿಲ್ಲ ಎಂದು ಹೇಳತಕ್ಕ ಧೈರ್ಯ ಮಂತ್ರಿಗಳಿಗೆ, ಅಧಿಕಾರಿಗಳಿಗೆ ಇರಬೇಕು. ಅಂಥ ಒಂದು ವಾತಾವರಣವನ್ನು ಕಲ್ಪಿಸದೇ ಹೋದರೆ, ರಾಜ್ಯದಲ್ಲಿ ಬಡವರ ಕಲ್ಯಾಣವಾಗುವುದಿಲ್ಲವೆನ್ನುವ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ನಾನು ಸತ್ಯವಂತ, ಧರ್ಮಿಷ್ಟ ಎಂದು ಹೇಳುತ್ತಿಲ್ಲ. ನಾನು ಎಲ್ಲಿಯವರೆಗೆ ಮಂತ್ರಿಯಾಗಿದ್ದೆ, ಅಲ್ಲಿಯವರೆಗೆ ಧರ್ಮವನ್ನು ನೀತಿಯನ್ನು ಪರಿಪಾಲನೆ ಮಾಡಿಕೊಂಡು ಬಂದಿದ್ದೆ ಎನ್ನುವ ಮಾತನ್ನು ಎದೆಬಡಿದು ಹೇಳುತ್ತೇನೆ. ನಾನು ದಾರಿತಪ್ಪಿ ಹೋಗಿ ಆಸ್ತಿಪಾಸ್ತಿಗಳನ್ನು ಮಾಡಿಕೊಂಡಿದ್ದರೆ, ಎನ್‌ಕ್ವೈರಿ ಮಾಡಲಿ.

ಶ್ರೀ ಎಂ. ರಘುಪತಿ.—ಆ ರೀತಿ ಯಾರು ಹೇಳಿದರು?

ಶ್ರೀ ಬಿ. ಬಸವಲಿಂಗಪ್ಪ.—ನಾನು ಏತಕ್ಕೆ ಈ ಮಾತು ಹೇಳುತ್ತಿದ್ದೇನೆಂದರೆ, ಬಾಟ್ಲಿಂಗ್ ಹಗರಣ ಬಂತು. ಇದರ ಬಗ್ಗೆ ಸುಪ್ರೀಂ ಕೋರ್ಟು ಮತ್ತು ಹೈಕೋರ್ಟು ತೀರ್ಪು ಕೊಟ್ಟವು. ಅದರಿಂದ ರಾಜೀನಾಮೆ ಕೊಟ್ಟರು. ನಾನು ನಿಜವಾಗಿಯೂ ಸ್ನೇಹಿತನಾಗಿ ಹೇಳುತ್ತಿದ್ದೇನೆ, ಬಾಟ್ಲಿಂಗ್ ಹಗರಣದ ಮೇಲೆ ಅವರು ರಾಜೀನಾಮೆ ಕೊಟ್ಟು ಮತ್ತೆ ಅಧಿಕಾರಕ್ಕೆ ಬರದಿದ್ದರೆ ಈ ರಾಷ್ಟ್ರದಲ್ಲಿ ಮಹಾನಾಯಕರಾಗುತ್ತಿದ್ದರು. ಆದರೆ ಪುನಃ ತಗಲಿಕೊಂಡರು. ನ್ಯಾಯಾಲಯಕ್ಕೆ ತಲೆಬಾಗುತ್ತೇನೆಂದು ಹೇಳಿ ಪುನಃ ಅಧಿಕಾರಕ್ಕೆ ತಗಲಿಕೊಂಡರು. ಇವೊತ್ತು ಪರಿಸ್ಥಿತಿ ಏನಾಗಿದೆ, ಈ ಬಗ್ಗೆ ನಾವು ಟೀಕೆ ಮಾಡುತ್ತಿಲ್ಲ, ನಿಮ್ಮ ಪಕ್ಷದವರೇ ಟೀಕೆ ಮಾಡುತ್ತಿದ್ದಾರೆ. ಕಳೆದ ೧೫-೨೦ ದಿವಸಗಳಿಂದ ಬರತಕ್ಕ ಪೇಪರ್‌ಗಳನ್ನು ನೋಡಿದರೆ ನಾವು ನಿಮ್ಮ ಮೇಲೆ ಹೇಳಬೇಕಾಗಿಲ್ಲ. ಅವರೇ ಎಲ್ಲವನ್ನೂ ಹೇಳಿದ್ದಾರೆ, ಅದನ್ನು ನೀವೆಲ್ಲಾ ಓದಿರಬೇಕು. ಅದಕ್ಕೆ ಗಲಾಟೆ ಎಂದು ಅಲ್ಲ, ಹಾಗೆ ಅಂಥ ನಿಮ್ಮನ್ನು ಕೆಸರಿನಲ್ಲಿ ಸಿಕ್ಕಿಸಿಕೊಂಡರು. ಹಿಂದೆ ದೇವರಾಜ್ ಅರಸರ ಕಾಲದಲ್ಲಿಯೂ ಇದೇ ತರಹ ಗಲಾಟೆ ಆಯಿತು. ಏನೋ ನಾವು ಕೆಸರಿನಲ್ಲಿ ಸಿಕ್ಕಿಹಾಕಿಕೊಂಡುಬಿಟ್ಟೆವು. ಆಮೇಲೆ ಮುಂದೆ ಏನು ಆಯಿತು ಎಂಬುದು ಬೇರೆ ಮಾತು. ಈಗ ತಾವು ಬಾಟ್ಲಿಂಗ್ ಹಗರಣದಿಂದ ಆಗಲೇ ಅಧಿಕಾರಬಿಟ್ಟು ಹೋಗಿದ್ದರೆ, ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ನನಗೆ ಒಬ್ಬ ಹೆಮ್ಮೆ ಪಡತಕ್ಕ ನಾಯಕರು ಆಗುತ್ತಿದ್ದರು. ಮಹಾನ್ ನಾಯಕರಾಗಿ ಇವೊತ್ತು ರಾರಾಜಿಸುತ್ತಿದ್ದರು. ಇವೊತ್ತು ಅದೆಲ್ಲಾ ಏನಾಗಿದೆ, ಇರಲಿ ಪರವಾಯಿಲ್ಲ ನೋಡೋಣ ಅಂದುಕೊಂಡು ಸುಮ್ಮನಾದರು. ಸ್ವಾಮಿ, ಬಾಟ್ಲಿಂಗ್ ಹಗರಣ ಆಯಿತಲ್ಲಾ ಆ ಸಂದರ್ಭದಲ್ಲಿ ರಾಜೀನಾಮೆ ಕೊಟ್ಟಾಗ ಎಷ್ಟು ಜನ ಎಂ.ಎಲ್.ಎ.

ಗಳು ಕಣ್ಣೀರು ಬಿಟ್ಟರು. ಇವರ ಚಪ್ಪಲಿ ತೆಗೆದುಕೊಂಡು ತಮ್ಮ ಜೇಬಿನಲ್ಲಿಟ್ಟುಕೊಂಡು ಹೋದರು. ಅವೊತ್ತಿನ ದಿವಸ ನಡೆದದ್ದು ಪೇಪರ್‌ನಲ್ಲಿ ಬಂತು. ಏನಪ್ಪ ಇಂತಹ ಹೊತ್ತು ಎಂ.ಎಲ್.ಎ ಗಳಿಗೆ ಬಂತಲ್ಲ ಅಂತ ನನಗೆ ಬಹಳ ಸಂಕಟ ಆಯಿತು. ಅದೇ ಜನ ಇವೊತ್ತಿನ ದಿವಸ ಏನು ಮಾಡಿದ್ದಾರೆ. ಅವೊತ್ತಿನ ದಿವಸ ಕಣ್ಣೀರು ಬಿಟ್ಟರಲ್ಲ, ಆ ಜನ ಇವೊತ್ತಿನ ದಿವಸ ಏನು ಮಾಡಿದ್ದಾರೆ? ಜನಗಳ ವಿಚಾರದಲ್ಲಿ ತಮಗೆ ಏನು ಪರಿಜ್ಞಾನ ಇದೆಯೋ ನನಗೆ ಗೊತ್ತಿಲ್ಲ. ರಾಜಕೀಯ ಜೀವನದಲ್ಲಿ ಯಾರು ನಿಮ್ಮನ್ನು ಶಿಫಾರಸು ಮಾಡುತ್ತಾರೆ ಅವರು ನಿಮ್ಮ ಹತ್ತಿರ ಇಲ್ಲ ಎಂದು ತಿಳಿದುಕೊಳ್ಳಬೇಕು. ಯಾರು ನಿಮ್ಮನ್ನು ಹೊಗಳುತ್ತಾರೆ ಅವರು ನಿಮ್ಮ ಕಡೆ ಇಲ್ಲ ಎಂದು ತಿಳಿದುಕೊಳ್ಳಬೇಕು. ಯಾರು ನಿಮ್ಮನ್ನು ಬಿಡಬಿಡದೆ ಎತ್ತಿಕೊಂಡು ಪಲ್ಲಕ್ಕಿಯಲ್ಲಿ ಕೂರಿಸಿಕೊಂಡು ತಿರುಗುತ್ತಾರೆ ಅವರು ನಿಮ್ಮ ಮೊದಲನೆಯ ಶತ್ರುಗಳು. ಜನರ ಬಗ್ಗೆ ನನಗೆ ಅನುಭವ ಇದೆ. ನಾನು ಹಿಂದೆ ಮಂತ್ರಿಯಾಗಿದ್ದಾಗ ಮಂತ್ರಿಯ ಸ್ನೇಹಿತರು ಯಾರು ಎಂದು ಒಂದು ಪಟ್ಟಿಯನ್ನು ಮಾಡಿದ್ದೆ. ಬಸವಲಿಂಗಪ್ಪನವರ ಸ್ನೇಹಿತರು ಯಾರು ಎಂದು ಮತ್ತೊಂದು ಪಟ್ಟಿಯನ್ನು ಮಾಡಿದ್ದೆ. ಇವೊತ್ತು ನನಗೆ ಆಗಿನ ಮಂತ್ರಿಯ ಸ್ನೇಹಿತರು ಒಬ್ಬರೂ ಇಲ್ಲ. ಬಸವಲಿಂಗಪ್ಪನವರ ಸ್ನೇಹಿತರು ಮಾತ್ರ ಇದ್ದಾರೆ. ಈಗ ತಾವು ಚೆನ್ನಾಗಿ ರಾಜ್ಯಭಾರ ಮಾಡುತ್ತಿದ್ದೇವೆಂದು ತಿಳಿದುಕೊಂಡಿದ್ದೀರಿ. ಇವೊತ್ತು ಎನ್‌ಕ್ವಯಿರಿ ಕಮಿಷನ್ಸ್ ಬಹಳ ಇವೆ. ಆದರೆ ಬೇರೆಯವರ ಮೇಲೆ ಸಾವಿರ ಆಗಲಿ. ಆದರೆ ನಿಮ್ಮ ಮನೆಯವರ ಮೇಲೆ ಆಗಿಬಿಟ್ಟರೆ ? ಅದು ಸುಳ್ಳೋ, ನಿಜವೋ ಎಂಬುದು ಬೇರೆ ಪ್ರಶ್ನೆ, ಸುಳ್ಳು ನಿಜ ಎನ್ನುವ ಪ್ರಶ್ನೆ ಅಲ್ಲ. ಸುಳ್ಳು ಆದರೂ ಕೂಡ ಕೇಸ್ ಆದರೆ ಅದು ನಿಮಗೆ ಅಪವಾದ. ಅಂದರೆ ರಾಜಕೀಯ ಜೀವನದಲ್ಲಿ ನಿಮ್ಮ ಅಧಿಕಾರದ ವ್ಯಾಪ್ತಿಯಲ್ಲಿ ನಿಮ್ಮ ಮನೆಯವರಿಗೆ ಕೈ ಆಡಲಿಕ್ಕೆ ಅವಕಾಶ ಕೊಡತಕ್ಕಂಥ ಒಂದು ಪ್ರಸಂಗ ರಾಜ್ಯದಲ್ಲಿ ಇದೆ. ಆದ್ದರಿಂದ ತಾವು ಯೋಚನೆ ಮಾಡಬೇಕು. ನಿಜವಾಗಿ ನ್ಯಾಯವಾಗಿ ನೀವು ಕೆಲಸ ಮಾಡಿದ್ದೀರಾ ಎಂಬುದನ್ನು ದಯಮಾಡಿ ಹೇಳಿ. ನಿನ್ನೆಯ ದಿವಸ ರೇವಜಿತು ಪ್ರಕರಣದ ಬಗ್ಗೆ ಶ್ರೀಮಾನ್ ಮಲ್ಲಿಕಾರ್ಜುನ ಖಾರ್ಗೆಯವರು ಹಾಗೂ ನಮ್ಮ ಪಕ್ಷದವರು ಮಾತನಾಡುತ್ತಾ ನಿಮ್ಮ ಮನೆಯವರೆಂದು ಹೇಳಿದ್ದಾರೆ, ಪತ್ರಿಕೆಯಲ್ಲೂ ಹೇಳಿದ್ದಾರೆ. ಅದು ಸುಳ್ಳೋ ನಿಜವೋ ಎಂದು ಹೇಳಿ. ಪತ್ರಿಕೆಯಲ್ಲಿ ಬಂದಿರುವುದನ್ನು ನಮ್ಮ ನಾಯಕರು ಹೇಳಿದ್ದಾರೆ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ನಿನ್ನೆ ಚರ್ಚೆ ಆಗಿದ್ದರ ಬಗ್ಗೆ ಹೈಕೋರ್ಟಿನಲ್ಲಿದೆ. ಹೈಕೋರ್ಟ್‌ನಲ್ಲಿ ಏನು ತೀರ್ಮಾನ ಆಗುತ್ತದೆ ಎಂಬುದನ್ನು ಕಾದು ನೋಡಿ. ನೀವು ಇಲ್ಲಿ ಬಾಯಿಗೆ ಬಂದ ಹಾಗೆ ಮಾತನಾಡಲಿಕ್ಕೆ ಬರುತ್ತದೆಯೇ ?

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.—ತಾವು ಸಿಟ್ಟು ಆಗಬೇಡಿ. ನೀವು ಇಲ್ಲೇ ಬೆಳೆದವರು, ಸಿಟ್ಟು ಆಗುವುದು ಅನಾವಶ್ಯಕ. ರಾಜಕೀಯ ಜೀವನದಲ್ಲಿ ಇಂತಹ ಆಪಾದನೆಗಳು ನಮ್ಮಲ್ಲೂ ಬರುತ್ತವೆ, ನಿಮ್ಮಲ್ಲೂ ಬರುತ್ತವೆ.

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಈ ತರಹ ಮಾತನಾಡಿದರೆ ಯಾರು ಬೇಕಾದರೂ ಏನು ಬೇಕಾದರೂ ಮಾತನಾಡಬಹುದು. ಅದಕ್ಕೂ ಏನಾದರೂ ಒಂದು ಮಿತಿ ಬೇಡವೇ ? ಮನೆಯವರು ಅಂದರೆ, ನಮ್ಮ ಮನೆಯವರು ಏನು ಮಾಡಿದ್ದಾರೆ ? ನಿಮ್ಮ ಮನೆಯವರ ಬಗ್ಗೆ ನಾನು ಹೇಳಿದರೆ ಏನು ಮಾಡುತ್ತೀರಿ ನೀವು ?

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.—ನೀವು ಹೇಳಿ, ನಾನು ಓಪನ್ ಆಗಿ ಹೇಳುತ್ತಿದ್ದೇನೆ......

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಇವರು ಬಾಕಿಯವರ ಹಾಗೆ ಅಲ್ಲ ಬಹಳ ಗಂಭೀರವಾಗಿ ಮಾತನಾಡುತ್ತಾರೆ, ಇವರು ಯೋಗ್ಯರಾಗಿ ಮಾತನಾಡುತ್ತಾರೆಂದು ತಿಳಿದುಕೊಂಡಿದ್ದೆ. ಅವರು ಟೀಕೆ ಮಾಡಲಿ, ಟೀಕೆ ಮಾಡಲಿಕ್ಕೆ ನಾನು ವಿರೋಧ ಮಾಡುವುದಿಲ್ಲ, ಆದರೆ.. ......

(ಗೊಂದಲ)

ನೀವು ರಾಜಕೀಯದಲ್ಲಿ ಇಲ್ಲವೇ, ನೀವು ಈ ರೀತಿ ಮಾತನಾಡಬಹುದೇ ?

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ.—ನಾವು ಅಧಿಕಾರದಲ್ಲಿ ಇದ್ದಾಗ ನಮ್ಮ ಮನೆಯವರಿಗೆ ಯಾರಿಗೂ ಅಧಿಕಾರದಲ್ಲಿ ದುರುಪಯೋಗ ಮಾಡಿಕೊಳ್ಳಲಿಕ್ಕೆ ಅವಕಾಶ ಕೊಡಲಿಲ್ಲ......

(ಗೊಂದಲ)

ಛೇರ್ಮನ್.—ಮನೆಯವರ ವಿಚಾರ ಇಲ್ಲಿ ಬೇಡ.

ಶ್ರೀ ರಾಮಕೃಷ್ಣ ಹೆಗಡೆ.—ನಿಮ್ಮದು ಬ್ಯಾಕ್‌ಗ್ರೌಂಡ್ ನೋಡೋಣ. ನಮ್ಮದು ಬ್ಯಾಕ್‌ಗ್ರೌಂಡ್ ನೋಡೋಣ.

(ಗೊಂದಲ)

SRI B. BASAVALINGAPPA.—I offer all my acts to the public enquiry. ಸಾರ್ವಜನಿಕ ಬೀದಿಯಲ್ಲಿ ಇರತಕ್ಕ ಮಾತು ಏನೆಂದರೆ ನೀವು ಸಿಂಧಿ ಜನಗಳಿಗೆ ಪ್ರೋತ್ಸಾಹ ಕೊಡುತ್ತಿದ್ದೀರೆಂಬು......

** ** **

ಶ್ರೀ ಎ. ಲಕ್ಷ್ಮೀಸಾಗರ್.—ನೀವು ಕಟುವಾಗಿ ಟೀಕೆ ಮಾಡುವುದನ್ನು ನಾವು ಯಾರೂ ವಿರೋಧ ಮಾಡುವುದಿಲ್ಲ. ಮುಖ್ಯಮಂತ್ರಿಗಳು ಸಹ ವಿರೋಧ ಮಾಡುವುದಿಲ್ಲವೆಂದು ಈಗಾಗಲೇ ಹೇಳಿದ್ದಾರೆ. ತಮ್ಮ ವಾದದಲ್ಲಿ ಇರತಕ್ಕ ದೋಷ ಏನೆಂಬುದನ್ನು ಹೇಳುತ್ತೇನೆ. ನಿಮ್ಮ ವಾದವನ್ನು ಈ ಸಭೆಯ ಮುಂದೆ ಇಡುವಾಗ ನೀವು ಏನು ಹೇಳುತ್ತೀರಿ ಎಂದು ನಾನು ತಿಳಿದುಕೊಂಡಿದ್ದು ಏನು ಅಂದರೆ ''ನನಗೆ ಬಂದ ತಿಳುವಳಿಕೆಯ ಆಧಾರದ ಮೇಲೆ ಅಂಕಿಅಂಶಗಳ ಆಧಾರದ ಮೇಲೆ ತಾವು ಟೀಕೆ ಮಾಡುತ್ತಿದ್ದೀರಿ'' ಎಂದು. ಈ ರೀತಿ ನೀವು ಹೇಳಿದರೆ ಅದಕ್ಕೆ ಮನ್ನಣೆ ಸಿಕ್ಕುತ್ತದೆಂದು ನಾನು ತಿಳಿದುಕೊಂಡಿದ್ದೆ. ಆದರೆ ತಾವು ಏನು ಹೇಳುತ್ತಿದ್ದೀರಿ ಎಂದರೆ ''ಜನ ಅಂದುಕೊಂಡಿದ್ದಾರೆ'' ಎಂದು. ಅದಕ್ಕೆ ನಿಮ್ಮ ಹತ್ತಿರ ಏನಾದರೂ ಪುರಾವೆ ಇದೆಯೇ ? ಬರವಣಿಗೆ ಇದೆಯೇ ? ಇದನ್ನು ಸ್ವಲ್ಪ ದಯಮಾಡಿಟ್ಟು ಯೋಚನೆ ಮಾಡಿ. ನಾನಾ ರೀತಿಯ ಜನ ಇದ್ದಾರೆ, ನಾನಾ ರೀತಿಯಲ್ಲಿ ಮಾತನಾಡಿಕೊಳ್ಳತಕ್ಕ ಜನ ಇದ್ದಾರೆ. ತೆಗಳತಕ್ಕ ಜನ ಇದ್ದಾರೆ, ಹೊಗಳತಕ್ಕ ಜನ ಇದ್ದಾರೆ. ಎಲ್ಲಾ ವಿಧವಾದ ಜನ ಈ ಪ್ರಪಂಚದಲ್ಲಿ ಹಾಗೂ ಈ ರಾಜ್ಯದಲ್ಲಿ ಇದ್ದಾರೆ. ಆದರೆ ತಾವು ಜವಾಬ್ದಾರಿಯಿಂದ ಮಾತನಾಡತಕ್ಕ ಸಂದರ್ಭದಲ್ಲಿ ಜನ ಹೇಳುತ್ತಾರೆ ಎನ್ನತಕ್ಕ ಒಂದು ಮಾತಿನ ಆಧಾರದ ಮೇಲೆ ಟೀಕೆ ಮಾಡುವುದು ಸಮಂಜಸವಲ್ಲ. ನಮ್ಮ ಈ ಸಭೆಯ ನಡವಳಿಕೆಗಳ ಆಧಾರದ ಮೇಲೆ ಹಿಂದಿನ ಅಧ್ಯಕ್ಷರುಗಳ ತೀರ್ಮಾನದ ಮೇಲೆ ಜನ ಹೇಳುತ್ತಾ ಇದ್ದಾರೆ ಅನ್ನತಕ್ಕ ಆಧಾರದ ಮೇಲೆ ಟೀಕೆ ಮಾಡುವುದು ಸರಿಯಲ್ಲ ಎಂದು ಈಗಾಗಲೇ ತೀರ್ಮಾನವಾಗಿದೆ. ನೀವು ಏನಾದರೂ ಟೀಕೆ ಮಾಡಿ, ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಜನ ಹೇಳುತ್ತಾರೆ ಎಂದರೆ ಅದು ಸರಿಯಲ್ಲ. ಜನ ನಿಮ್ಮ ವಿಚಾರವನ್ನೂ ಹೇಳುತ್ತಾರೆ, ನಮ್ಮ ವಿಚಾರವನ್ನೂ ಹೇಳುತ್ತಾರೆ, ಬೇರೆಯವರ ವಿಚಾರವನ್ನೂ ಹೇಳುತ್ತಾರೆ. ಮೇಲುಗಡೆ ಕುಳಿತಿರತಕ್ಕವರ, ರಸ್ತೆಯಲ್ಲಿ ಹೋಗತಕ್ಕವರ ವಿಚಾರವನ್ನೂ ಜನ ಹೇಳುತ್ತಾರೆ, ನಾವು ಈ ಸಭೆಯಲ್ಲಿ ಮಾತನಾಡುವ ಸಮಯದಲ್ಲಿ ಗಂಭೀರತೆ ಇರಬೇಕು ಮತ್ತು ಪ್ರತಿಪಾದಿಸಿರತಕ್ಕ ಶಕ್ತಿಯ ಆಧಾರದ ಮೇಲೆ ಮಾತನಾಡತಕ್ಕ ಮೇಲೆ ಚಾತುರ್ಯವನ್ನು ತೋರಿಸಬೇಕು.

ಶ್ರೀ ಬಿ. ಬಸವಲಿಂಗಪ್ಪ.—ಶ್ರೀಮಾನ್ ಲಕ್ಷ್ಮೀಸಾಗರ್ ಅವರು ಹೇಳಿದ್ದು ಸರಿ.

ಶ್ರೀ ಜೆ.ಹೆಚ್. ಪಟೇಲ್.—ಮಾನ್ಯ ಸದಸ್ಯರಾದ ಬಸವಲಿಂಗಪ್ಪನವರು ಉಪಯೋಗಿಸಿದ 'ತಲೆ ಕೆಟ್ಟವರು' ಎನ್ನುವ ಪದವನ್ನು ಕಡತದಿಂದ ತೆಗೆದುಹಾಕಬೇಕು.

ಛೇರ್ಮನ್.—ನಾನು ಈಗಾಗಲೇ ಆ ಪದವನ್ನು ಕಡತದಿಂದ ತೆಗೆದುಹಾಕಿದ್ದೇನೆ. It is expunged from the records.

SRI RAMAKRISHNA HEGDE.—It is a reflection on the Members of this House, i.e., on the wisdom of this House because he has been elected by the Members of this House. What has happened to Mr. Basavalingappa to-day, I don't know. ನಾನು ನಿಮ್ಮ ಬಗ್ಗೆ ಹೇಳಲೇ ಎಷ್ಟೆಷ್ಟು ಸೈಟು ಮಾಡಿದ್ದೀರಿ ಎಂದು, ಯಾರ್ಯಾರ ಹೆಸರಿನಲ್ಲಿ ಮಾಡಿದ್ದೀರೆಂದು, ಅದು ಪ್ರಯೋಜನವಾಗುವುದಿಲ್ಲ. ಏತಕ್ಕೆ ಹಾಗೆ ಮಾತನಾಡುತ್ತೀರಿ ?

(ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಎ. ಲಕ್ಷ್ಮೀಸಾಗರ್.—ಇವರು ೧೯೭೨ರಲ್ಲಿ ಮಂತ್ರಿಗಳಾಗಿದ್ದವರು. ಸತತವಾಗಿ ಅನೇಕ ಕಾರ್ಯಕ್ರಮಗಳನ್ನು ಅನೌನ್ಸ್ ಮಾಡಿ, ಕಾರ್ಯಗತ ಮಾಡಿದ್ದೇನೆಂದು ಹೇಳುವವರು ಇವರು. ಒಂದು ಧೀರ ದಿಟ್ಟತನದ ಸಕ್ರಿಯ ಕಾರ್ಯಕ್ರಮಗಳನ್ನು ಮಾಡಿಸಿ ತೋರಿಸಿದ ಧೀಮಂತ ವ್ಯಕ್ತಿ ಶ್ರೀ ಬಸವಲಿಂಗಪ್ಪನವರು ಈ ಮಟ್ಟಕ್ಕೆ ಇಳಿಯಬಾರದು,

ಶ್ರೀ ಎಸ್. ಬಂಗಾರಪ್ಪ.—ನೀವು ಮರೆತ್ತಿದ್ದೀರಿ, ಅದಕ್ಕೆ ಅವರು ಹೇಳುತ್ತಿದ್ದಾರೆ.

ಶ್ರೀ ಆರ್. ರೋಷನ್ ಬೇಗ್.—ಇವರಿಗೆ ೧೬ ಸಾವಿರ ಬಾಡಿಗೆ ಹಣ ಬರುತ್ತದೆಂದು ಜನ ಹೇಳುತ್ತಾರೆ.

ಶ್ರೀ ಬಿ. ಬಸವಲಿಂಗಪ್ಪ.—ಏತಕ್ಕೆ ಕಡಿಮೆ ಮಾಡುತ್ತೀರಿ ? ೧೬ ಸಾವಿರ ಬರುತ್ತದೆ. It is all subject to scrutiny i.e., public scrutiny. I admit it is more than that you say.
ಇವತ್ತು ಜನರು ಏನು ಹೇಳುತ್ತಿದ್ದಾರೆಂಬುದು ಗೊತ್ತೆ ? ಈಗ ಜನರ ಬಗ್ಗೆ ಇಷ್ಟು ಹಗುರವಾಗಿ ಮಾತನಾಡಬೇಡಿ. ಜನರು ಒಳ್ಳೆಯವರೋ ಅಥವಾ ಕೆಟ್ಟವರೋ ಆ ಮಾತು ಬೇರೆ. ಆದರೆ ಜನರ ಹೆಸರಿನಲ್ಲಿ ನೀವು ರಾಜ್ಯಭಾರವನ್ನು ಮಾಡುತ್ತಿದ್ದೀರಿ. ಜನರು ನಮ್ಮನ್ನು ಕೇಳುತ್ತಿದ್ದಾರೆ.

ಶ್ರೀ ವೇದಾಂತ ಹೆಮ್ಮಿಗೆ.—ಜನರ ಬಗ್ಗೆ ಹಗುರವಾಗಿ ನಾವು ಮಾತನಾಡಿಲ್ಲ. ಜನರ ಬಗ್ಗೆ ಜವಾಬ್ದಾರಿಯಿಂದ ಮಾತನಾಡಿದ್ದಕ್ಕೇ ಈಗ ಅವರು ಉತ್ತರವನ್ನು ಕೊಟ್ಟಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಈ ರಾಜ್ಯಭಾರ ಸರಿಯಾಗಿ ನಡೆಯುತ್ತಿದೆಯೋ-? ಇಲ್ಲವೇ ? ಎಂಬ ಪ್ರಶ್ನೆ ಇಲ್ಲಿ ಬರುತ್ತದೆ. ನಾನು ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ಬುದ್ಧಿವಾದವನ್ನು ಹೇಳುತ್ತಿಲ್ಲ.

(ಮಾನ್ಯ ಅಧ್ಯಕ್ಷರವರು ಅಧ್ಯಕ್ಷ ಪೀಠಕ್ಕೆ ಬಂದರು)

ಅಧ್ಯಕ್ಷರು.—ಮಾನ್ಯ ಬಸವಲಿಂಗಪ್ಪನವರೇ, ನೀವು ಪ್ರಾರಂಭ ಮಾಡಿ ಒಂದು ತಾಸು ಆಯಿತು. ಮೊದಲು ರಾಣೆಯವರು, ಮೊಯ್ಲಿಯವರು, ಖರ್ಗೆಯವರು ಅನಂತರ ಶ್ರೀನಿವಾಸ್‌ರವರು ಮಾತನಾಡಬೇಕೆಂದು ಹೇಳಿದ್ದೆ. ನಿಮಗೆ ಅರ್ಧ ತಾಸು ಎಂದು ನಾನು ಹೇಳಿದ್ದೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ರಾಣೆಯವರು ಇಲ್ಲ.

MR. SPEAKER.—You are over-raiding the rights of others. ನೀವು ೧ ಗಂಟೆಯನ್ನು ತೆಗೆದುಕೊಂಡಿದ್ದೀರಿ. ನಾನು ನಿಮಗೆ ಅರ್ಧ ತಾಸು ಎಂದು ಹೇಳಿದ್ದೇನೋ ಇಲ್ಲವೋ ?

ಶ್ರೀ ಬಿ. ಬಸವಲಿಂಗಪ್ಪ.—ಈ ಸರ್ಕಾರ ಸರಿಯಾಗಿ ನಡೆಯಬೇಕೆಂದು ನಮ್ಮ ಇಚ್ಛೆ. ಈ ಸರ್ಕಾರ ಸರಿಯಾಗಿ ನಡೆಯುತ್ತಿದೆಯೋ, ಇಲ್ಲವೇ ಎಂಬ ಒಂದು ಪ್ರಶ್ನೆ ಇಲ್ಲಿ ಬರುತ್ತದೆ. ನಾನು ತಮಗೆ ಹೇಳುತ್ತಿದ್ದೇನೆ, ನಮ್ಮ ಪಕ್ಷದವರೂ ಹೇಳುತ್ತಿದ್ದಾರೆ, ಜನರೂ ಹೇಳುತ್ತಿದ್ದಾರೆ, ಈ ಸರ್ಕಾರ ಸರಿಯಾಗಿ ನಡೆಯುತ್ತಿಲ್ಲ ಎಂದು. ಏತಕ್ಕೆ ಸರಿಯಾಗಿ ನಡೆಯುತ್ತಿಲ್ಲ ಎಂದರೆ ಕಳೆದ ವರ್ಷ

**ಅಧ್ಯಕ್ಷರ ಆದೇಶದ ಮೇರೆಗೆ ತೆಗೆದುಹಾಕಲಾಗಿದೆ.

ನಾನು ಇದೇ ಸದನದಲ್ಲಿ ಒಂದು ಮಾತನ್ನು ಹೇಳಿದ್ದೇನೆ, ಮೆಕ್‌ವೆಲ್ಲಿ ಬರೆದಿರತಕ್ಕ ಪ್ರಿನ್ಸ್ ಎನ್ನುವ ಒಂದು ಪುಸ್ತಕ ಇದೆ. ಅದನ್ನು ಮಾನ್ಯ ಪಟೇಲ್‌ರವರು ಓದಿದ್ದಾರೋ, ಇಲ್ಲವೋ ನನಗೆ ಗೊತ್ತಿಲ್ಲ. ಆ ಪುಸ್ತಕದಲ್ಲಿ ಮಂತ್ರಿಗಳು ಯಾವರೀತಿ ಇರಬೇಕು ಎನ್ನತಕ್ಕದ್ದರ ಬಗ್ಗೆ ಅವರು ಹೇಳಿದ್ದಾರೆ. ನಾನು ಅದನ್ನು ಓದಿದ್ದೇನೆ. ಅದರಲ್ಲಿ ಮಂತ್ರಿಗಳನ್ನು ಶಕ್ತಿವಂತರನ್ನಾಗಿ ಮಾಡಬಾರದು, ಬೆಳೆಯುವುದಕ್ಕೆ ಬಿಡಬಾರದು, ಅವರು ದಾಂತಪ್ಪುವ ರೀತಿಯಲ್ಲಿ ಅವಕಾಶ ಮಾಡಿಕೊಡಬೇಕು. ಅವರು ತಪ್ಪು ಮಾಡಿದಾಗ ನಮ್ಮ ಕೈಗೆ ಸಿಕ್ಕಿ ಹಾಕಿಕೊಳ್ಳುತ್ತಾರೆಂದು ಮೆಕ್‌ವಲ್ಲಿಯವರು ಹೇಳಿದ್ದಾರೆ. ತಮ್ಮ ಮಂತ್ರಿಮಂಡಲದಲ್ಲಿ ೩ ಜನರ ಮೇಲೆ ಭ್ರಷ್ಟಾಚಾರದ ಆರೋಪವನ್ನು ತಂದರು. ಆ ಆರೋಪದ ಮೇಲೆ ಇಬ್ಬರು ಮಂತ್ರಿಗಳು ರಾಜೀನಾಮೆಯನ್ನು ಕೊಟ್ಟಿದ್ದಾರೆ. ಇನ್ನೊಬ್ಬರು ಕೊಟ್ಟಿಲ್ಲ. ಈ ವಿಚಾರದಲ್ಲಿ ನಾನು ಭ್ರಷ್ಟಾಚಾರ ನಡೆದಿದೆ ಎಂದು ಹೇಳುವುದಿಲ್ಲ. It is a matter of allegation. ಈಗ ಸರ್ಕಾರ ಸುಲಲಿತವಾಗಿ ನಡೆಯಬೇಕು. ಸರ್ಕಾರ ಸುಲಲಿತವಾಗಿ ನಡೆಯಬೇಕಾದರೆ ನಿಮ್ಮ ಮಂತ್ರಿಗಳು ಪರಸ್ಪರ ಅನ್ಯೋನ್ಯವಾಗಿ ಆಡಳಿತವನ್ನು ನಿರ್ವಹಣೆ ಮಾಡುತ್ತಾರೆನ್ನತಕ್ಕ ಭಾವನೆ ಜನರ ಮನಸ್ಸಿನಲ್ಲಿರಬೇಕು. ಇವತ್ತು ಇಬ್ಬರು ರಾಜೀನಾಮೆಯನ್ನು ಕೊಟ್ಟಿದ್ದರ ಪರಿಣಾಮವೇನಾಯಿತು? ನಿಮಗೆ ಅವರಲ್ಲಿ ನಂಬಿಕೆ ಇಲ್ಲ ಎಂಬುದು ಆಯಿತು. ಅವರು ಏನಾದರೂ ತಪ್ಪು ದಾರಿಯಲ್ಲಿ ಹೋಗಿದ್ದರೆ ನೀವು ಅವರನ್ನು ಕರೆದು ಬುದ್ಧಿವಾದವನ್ನು ಹೇಳಿ ಸರಿಪಡಿಸತಕ್ಕ ಕೆಲಸವನ್ನು ಮಾಡಬಹುದಿತ್ತು. ಅದನ್ನು ನೀವು ಮಾಡಲಿಲ್ಲ. ಇವತ್ತು ಏನಾಗಿದೆ ಅವರು ಮೂರೂ ಜನರೂ ಬೀದಿಯಲ್ಲಿ ಹೋಗಿ ಈ ಸರ್ಕಾರ ಏನು ಮಾಡಿದೆ, ಏನು ಮಾಡಿಲ್ಲ ಎಂಬುದನ್ನು ಜನರಿಗೆ ಹೇಳುತ್ತಿದ್ದಾರೆ. ಇದು ಸರಿಯೋ, ತಪ್ಪೋ, ನೀವೇ ಉತ್ತರ ಕೊಡಿ. ನಾವು ಉತ್ತರ ಕೊಡುವುದಿಲ್ಲ. ಆದರೆ ಈ ಸರ್ಕಾರದಲ್ಲಿ ಕೆಲಸಮಾಡತಕ್ಕ ನೌಕರವರ್ಗ, ಅಧಿಕಾರವರ್ಗ, ಐ. ಎ. ಎಸ್. ಅಧಿಕಾರಿಗಳು ಕೆ. ಎ. ಎಸ್. ಅಧಿಕಾರಿಗಳು ಯಾರಿದ್ದಾರೆ ಅವರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಮುಂದೆ ಏನಾಗುತ್ತದೆಂದರೆ ಈ ಅಧಿಕಾರಿಗಳು ಒಂದುರೀತಿಯ ನಿರ್ಲಕ್ಷ್ಯ ಮನೋಭಾವನೆಯಿಂದ, ಸ್ವೇಚ್ಛಾ ಪ್ರವೃತ್ತಿಯಿಂದ ಇವರು ಏನು ಬೇಕಾದರೂ ಮಾಡುವುದಕ್ಕೆ ತಯಾರಾಗಿದ್ದಾರೆ, ಇಂಥ ಒಂದು ಪರಿಸ್ಥಿತಿಯಿಂದ ಏನು ಪರಿಸ್ಥಿತಿ ಉದ್ಭವವಾಗಿದೆ ಎಂದರೆ ಈ ಸರ್ಕಾರದ ವಾತಾವರಣ ಹದಗೆಟ್ಟು ಹೋಗಿದೆ ಎನ್ನತಕ್ಕ ಮಾತನ್ನು ನಾನು ತಮಗೆ ಹೇಳುತ್ತಿದ್ದೇನೆ.

ಇನ್ನು ಈ ನೌಕರವರ್ಗದ ವಿಚಾರದಲ್ಲಿ ತಾವು ಕೊಟ್ಟಿರತಕ್ಕ ಅಂಕಿಅಂಶಗಳನ್ನು ನೋಡಿದರೆ ಸ್ಪಷ್ಟವಾಗಿ ಗೊತ್ತಾಗುತ್ತದೆ.........

ಅಧ್ಯಕ್ಷರು.—ಮಾನ್ಯ ಬಸವಲಿಂಗಪ್ಪನವರೇ, ನೀವು ಎರಡು ಗಂಟೆಯವರೆಗೆ ಮಾತನಾಡಿದರೂ ನನ್ನ ತಕರಾರು ಏನೂ ಇಲ್ಲ. ಆದರೆ ಉಳಿದವರಿಗೆ ಛಾನ್ಸ್ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮ ನೌಕರವರ್ಗಕ್ಕೆ ಒಂದು ತಿಂಗಳಿಗೆ ೧೦೦ ಕೋಟಿ ರೂಪಾಯಿಗಳ ಸಂಬಳವನ್ನು ಕೊಡುತ್ತಿದ್ದೀರಿ, ಅಂದರೆ ೧ ವರ್ಷಕ್ಕೆ ೧೨೦೦ ಕೋಟಿ ರೂಪಾಯಿ ಕೇವಲ ಸಂಬಳಕ್ಕಾಗಿ ಖರ್ಚು ಆಗುತ್ತದೆ. ೧೯೮೮–೮೯ರ ೨೯೧೯.೭೮ ಕೋಟಿ ರೂಪಾಯಿಗಳ ಬಜೆಟ್ ಇದೆ ಇದರಲ್ಲಿ ಕೇಂದ್ರ ಸರ್ಕಾರದವರು ಕೊಡತಕ್ಕದ್ದು ೫೦೧.೪೬ ಕೋಟಿ ರೂಪಾಯಿ, ಅಂದರೆ ಇನ್ನು ೨೪೧೮.೩೨ ಕೋಟಿ ರೂಪಾಯಿ ಉಳಿಯಿತು. ಇದರಲ್ಲಿ ಟ್ಯಾಕ್ಸಸ್ ಅಂಡ್ ಡ್ಯೂಟೀಸ್ ಎಂದು ೧೬೪೫.೫೦ ಕೋಟಿ ರೂಪಾಯಿಗಳನ್ನು ಕಳೆದರೆ ಜಾತ ಇನ್ನು ೭೭೨.೮೨ ಕೋಟಿ ರೂಪಾಯಿ ಉಳಿಯುತ್ತದೆ. ಇದರಲ್ಲಿ ತಾವು ಹೇಳುತ್ತಿರುವ ಪ್ರಕಾರ ಸ್ಟೇಟ್ ಟ್ಯಾಕ್ಸ್ ಅಂಡ್ ಡ್ಯೂಟೀಸ್‌ನಲ್ಲಿ ೧೬೪೫.೭೫ ಕೋಟಿ ರೂಪಾಯಿಗಳು ಇದೆ, ಇದರಲ್ಲಿ ಬರೀ ನೌಕರರಿಗೆ ಯಾರು ನಮ್ಮ ಪ್ರಜೆಗಳು ಇದ್ದಾರೆ. ಅವರುಗಳು ಕೊಡತಕ್ಕಂಥ ಟ್ಯಾಕ್ಸ್‌ನಲ್ಲಿ ಸುಮಾರು ೧೨೦೪ ಕೋಟಿ ರೂಪಾಯಿಗಳವರೆಗೆ ಸಂಬಳ ಕೊಟ್ಟು ಇನ್ನು ಉಳಿದ ೪೦೦ ಕೋಟಿ ರೂಪಾಯಿಗಳಲ್ಲಿ ರಾಜ್ಯಭಾರವನ್ನು ನಡೆಸಿಕೊಂಡು ಹೋಗಬೇಕು, ನಿಮ್ಮ ಸರ್ಕಾರದ ಆರ್ಥಿಕ ವ್ಯವಸ್ಥೆ ಏತಕ್ಕೆ ಹಿಂದುಳಿದಿದೆ ಎನ್ನುವುದಕ್ಕೆ ಇಂಡಸ್ಟ್ರಿಯಲ್ ಮಿಸ್ ಮ್ಯಾನೇಜ್‌ಮೆಂಟ್ ಮತ್ತು ಫೈನಾನ್ಸಿಯಲ್ ಮಿಸ್‌ಮ್ಯಾನೇಜ್‌ಮೆಂಟ್ ಕಾರಣ ಎಂದು ಪಿ. ಎ. ಸಿ. ಯವರು ೧೫–೪–೮೨ ರಂದು ತಮ್ಮ ೯ನೇ ರಿಪೋರ್ಟ್‌ನಲ್ಲಿ ಹೇಳಿದ್ದಾರೆ. ಎಲ್ಲಾ ಹಣವನ್ನು ಅಂದರೆ ಪ್ರಜೆಗಳು ಕೊಡತಕ್ಕಂಥ ಹಣವನ್ನು ಬರೀ ನೌಕರವರ್ಗಕ್ಕೆ ಕೊಟ್ಟು ತಿನ್ನಿಸಿಬಿಟ್ಟಿದ್ದೀರಿ. ಅವರು ಸುಖವಾಗಿ ಜೀವನ ಮಾಡಿಕೊಂಡು ಹೋಗಲಿ ಎಂದು ಹೇಳಿದ್ದರಿಂದ ಅವರು ಸುಖವಾದ ಜೀವನ ಮಾಡಲಿಕ್ಕೆ ಪ್ರಾರಂಭ ಮಾಡಿದ್ದಾರೆ. ನೌಕರರು ಗಲಾಟೆ ಮಾಡಿದರೆ ಅವರಿಗೆ ಸಂಬಳ ಜಾಸ್ತಿ ಕೊಡುತ್ತೇವೆಂದು ಹೇಳಿ ಆಯೋಗಗಳನ್ನು ನೇಮಿಸುವ ಅಭ್ಯಾಸಮಾಡಿ ಸ್ವೇಚ್ಛಾನುಸಾರ ಸಂಬಳವನ್ನು

ಹೆಚ್ಚು ಮಾಡಿರುತ್ತೀರಿ, ಇನ್ನು ಎರಡು ಪಟ್ಟು ಸಂಬಳವನ್ನು ಜಾಸ್ತಿ ಮಾಡಿದರೂ ಅವರಿಗೆ ತೃಪ್ತಿ ಬರುವುದಿಲ್ಲ ಬಹಳ ದಿವಸಗಳಿಂದ ಈ ವರ್ಗವನ್ನು ಇವರು ತಮ್ಮ ಸ್ವಂತದ್ದನ್ನಾಗಿ ಮಾಡಿಕೊಂಡಿದ್ದಾರೆ. ಅವರು ಬೇಡಿಕೆಯನ್ನು ಮುಂದಿಟ್ಟಾಗಲೆಲ್ಲಾ ಹಣವನ್ನು ಕೊಟ್ಟು ಪ್ರಜೆಗಳಿಗೆ ಬರೀ ಬಜೆಟ್ ಮಾಡುತ್ತೀರಾ ? ಏತಕ್ಕೆ ಇದರ ಬಗ್ಗೆ ಗಮನ ಕೊಟ್ಟಿಲ್ಲ ? ಸರ್ಕಾರ ನಡೆಸಬೇಕಾದರೆ ಇಂಥದಕ್ಕೆಲ್ಲಾ ಗಮನ ಕೊಡಬಾರದು. ಸ್ವಾಮಿ ನಾನು ಹೇಳುತ್ತೇನೆ, ಈವೊತ್ತು ಚಿನ್ನಪ್ಪರೆಡ್ಡಿ ಎಂಬ ಮಹಾ ನ್ಯಾಯಾಧೀಶರನ್ನು ನೇಮಕ ಮಾಡಿದ್ದೀರಿ. ಬಹಳ ಸಂತೋಷ ಆದರೆ ನಿಮ್ಮ ೫ ವರ್ಷಗಳ ಅವಧಿಯಲ್ಲಿ ಈ ರೀತಿ ಆಯೋಗಗಳನ್ನು ನೇಮಕ ಮಾಡಿಕೊಂಡರಲ್ಲ ಇನ್ನೂ ಎಷ್ಟು ದಿವಸಗಳವರೆಗೆ ನೀವು ಇರಬೇಕೆಂದು ಮಾಡಿದ್ದೀರಿ. ಬ್ಯಾಕ್‌ವರ್ಡ್‌ಕ್ಲಾಸ್‌ಗೆ ಅನುಕೂಲವಾಗಬೇಕೆಂದು ಒಂದು ಕಮಿಷನ್ ಬೇಕೆಂದು ಕಮಿಷನ್ ಅಪಾಯಿಂಟ್‌ಮಾಡಿ ೫ ವರ್ಷಗಳಾಗುತ್ತಾ ಬಂತು. ಬರೇ ನೇಮಕ ಮಾಡಿದಷ್ಟೇ ಆಯಿತು. ಅವರು ಯಾವಾಗ ರಿಪೋರ್ಟ್ ಕೊಡುತ್ತಾರೋ ಕೊಡಲಿ, ಜನರೂ ಕೂಡಾ ಹೇಳಿಕೊಳ್ಳುತ್ತಿದ್ದಾರೆ ಹಿಂದುಳಿದವರ್ಗದವರು ನತದೃಷ್ಟರು ಎಂದು.

ಪ್ರೊ:॥ ಎ. ಲಕ್ಷ್ಮೀಸಾಗರ್.—ಮಂಡಲ್ ಕಮಿಷನ್ ವರದಿ ಏನಾಯಿತು ? ಅದರ ಬಗ್ಗೆ ಮಾನ್ಯ ಬಸವಲಿಂಗಪ್ಪನವರು ಹೇಳಬೇಕು.

ಶ್ರೀ ಬಿ, ಬಸವಲಿಂಗಪ್ಪ.—ಕಾಲೇಲ್‌ಕರ್ ರಿಪೋರ್ಟ್‌ನ್ನು ನೀವು ಜಾರಿಗೆ ಕೊಡಲಿಲ್ಲ. ಅಸ್ಸಾಂನಲ್ಲಿ ಜಾರಿಗೆ ಕೊಟ್ಟರು. ಮಂಡಲ್ ಕಮಿಷನ್ ರಿಪೋರ್ಟ್ ಬಂದಮೇಲೆ ಜಾರಿಗೆ ಕೊಡುತ್ತೇವೆಂದು ಮಾನ್ಯ ಹೆಗಡೆಯವರು ಹೇಳಿದರು. ಕೊಡಿ, ಯಾರು ಬೇಡವೆಂದು ಹೇಳಿದರು. ಏತಕ್ಕೆ ಈ ಕಮಿಷನ್‌ಗಳು ? ಈಗ ಕೊಟ್ಟಿರುವ ರಿಪೋರ್ಟ್‌ಗಳನ್ನು ಎಷ್ಟು ದಿವಸಗಳ ಕಾಲ ಮುಂದಕ್ಕೆ ಹಾಕಿಕೊಂಡು ಹೋಗುತ್ತೀರಿ ? ಬಹಳ ನತದೃಷ್ಟರು ಹಿಂದುಳಿದ ವರ್ಗದವರು. ಅವರನ್ನು ಏನು ಮಾಡಬೇಕೆಂದಿದ್ದೀರಿ ? ಅವರ ಉದ್ಧಾರಕ್ಕಾಗಿ ಏನುಮಾಡಬೇಕೆಂದಿದ್ದೀರಿ ? ಇನ್ನು ಎಷ್ಟು ದಿವಸ ಅಧಿಕಾರದಲ್ಲಿರಬೇಕೆಂದು ಇದ್ದೀರಿ ?

ಶ್ರೀ ಬಿ. ರಾಚಯ್ಯ.—ಜಸ್ಟೀಸ್ ಚಿನ್ನಪ್ಪರೆಡ್ಡಿಯವರನ್ನು ಅಪಾಯಿಂಟ್‌ಮಾಡಿದಾಗ ಮಾನ್ಯ ಸದಸ್ಯರು ಬಹಳ ಸಂತೋಷವೆಂದು ಹೇಳಿ ಹೊಗಳಿದರು. ಮತ್ತೆ ಇನ್ನು ಎಷ್ಟುದಿವಸ ಇರುತ್ತೀರೆಂದು ಹೇಳಿದರು. ಜನರು ಎಲ್ಲಿಯವರೆಗೆ ಓಟು ಕೊಡುತ್ತಾರೋ ಅಲ್ಲಿಯವರೆಗೆ ಇರುತ್ತೇವೆ.

ಶ್ರೀ ಎಸ್. ಬಂಗಾರಪ್ಪ,—ಕರೆಕ್ಟ್ ಆಗಿ ಇರಬೇಕಲ್ಲ ?

ಶ್ರೀ ಬಿ. ರಾಚಯ್ಯ.—ಕರೆಕ್ಟಾಗಿಯೇ ಇದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಚಿನ್ನಪ್ಪರೆಡ್ಡಿಯವರನ್ನು ಹಾಕಿದಕ್ಕೆ ಪ್ರಶಂಸೆ ಮಾಡುತ್ತೇನೆ ಆದರೆ ಅವರನ್ನು ವೆಂಕಟಸ್ವಾಮಿಯವರ ಸ್ಥಾನದಲ್ಲಿ ನೇಮಕ ಮಾಡಬೇಕಾಗಿತ್ತು. ಅವರು ಬಡವರ ಬಗ್ಗೆ ಮತ್ತು ಹಿಂದುಳಿದವರ ಬಗ್ಗೆ ಬಹಳ ಕಾಳಜಿ ಇರತಕ್ಕಂಥವರು.

೧೨.೩೦ ಪಿ. ಎಂ.

ಆದರೆ ವೆಂಕಟಸ್ವಾಮಿಯವರನ್ನು ನೇಮಕ ಮಾಡಿ೫ ವರ್ಷ ಕಾಲ ಕಳೆದರಲ್ಲ ಎಂದು ಹೇಳಿದೆ' ಇನ್ನು ವಿಜಿಲೆನ್ಸ್ ಕಮಿಷನ್ ಬಗ್ಗೆ ಹೇಳಬಯಸುತ್ತೇನೆ. ಈಗ ಇದು ಲೋಕಾಯುಕ್ತ ಎಂದು ಆಗಿದೆ. ಹಿಂದೆ ಆ್ಯಂಟಿ ಕರಪ್ಷನ್ ಡಿಪಾರ್ಟ್‌ಮೆಂಟ್ ಎಂದು ಇತ್ತು, ಆಮೇಲೆ ವಿಜಿಲೆನ್ಸ್ ಕಮಿಷನ್ ಎಂದು ಆಯಿತು, ಈಗ ಲೋಕಾಯುಕ್ತ ಆಗಿದೆ. ನನಗೇನು ಅದರಲ್ಲಿ ವ್ಯತ್ಯಾಸ ಕಂಡಿಲ್ಲ. ಆದರೆ ಈಗ ಸಂಬಳ ಜಾಸ್ತಿ ಕೊಡುತ್ತಿದ್ದೀರಿ, ಸಿಬ್ಬಂದಿ ಎಲ್ಲಾ ಕೊಟ್ಟಿದ್ದೀರಿ ಅಷ್ಟೆ .ಲೋಕಾಯುಕ್ತಕ್ಕೆ ಖರ್ಚು ಮಾಡಿರುವುದನ್ನು ನೋಡಿದರೆ ಅದರ ಸರಿಸಮಾನವಾಗಿ ಕರಪ್ಷನ್ ಹೋಗಬೇಕಾಗಿತ್ತು. ಕರೆಪ್ಷನ್ ಹೋಗುವುದಕ್ಕೆ ಬದಲಾಗಿ ಹೆಗಡೆಯವರು ಒಂದು ಸುತ್ತೋಲೆ ಹೊರಡಿಸಿದರು. ಏನೆಂದರೆ ಎಲ್ಲಾ ಹಂತದಲ್ಲಿ ಭ್ರಷ್ಟಾಚಾರ ಅಡಗಿದೆ ಎಂದು ಏತಕ್ಕೆ ಆಯಿತು ಭ್ರಷ್ಟಾಚಾರ ? ಕೋಟಿಗಟ್ಟಲೆ ಹಣ ಖರ್ಚು ಮಾಡಿ ಲೋಕಾಯುಕ್ತವನ್ನು ಅಪಾಯಿಂಟ್ ಮಾಡುವುದು, ಮತ್ತೆ ಭ್ರಷ್ಟಾಚಾರ ಇದೆ ಅನ್ನುವುದು. ಮಗುವನ್ನು ಚಿವುಟುವುದು ತೊಟ್ಟಿಲು ತೂಗುವುದು ಇದೇ ನಿಮ್ಮ ಕೆಲಸವಾಗಿದೆ.

ಇದು ರಾಜ್ಯಕ್ಕೆ ಅನುಕೂಲವಾಗದ ಕೆಲಸ. ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಮಾನ್ಯ ಕಡಪಟ್ಟಿಯವರು ಏನು ವರದಿ ಕೊಟ್ಟಿದ್ದಾರೆ. ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕು. ಪಟ್ಟಣಗಳಲ್ಲಿರತಕ್ಕ ಜನರಿಗೆ ಸರ್ಕಾರಿ ನೌಕರಿ ಕೊಡುತ್ತಿದ್ದೀರಿ, ಅದೇ ಹಳ್ಳಿ ಜನರಿಗೆ ಕೊಡುತ್ತಿಲ್ಲ, ಕಾರಣ ಅವರು ಬಡವರಿದ್ದಾರೆ, ಹೆಚ್ಚು ಅಂಕಗಳನ್ನು ಗಳಿಸಿರುವುದಿಲ್ಲ. ಮುಂಬೈ ಕರ್ನಾಟಕ ಇದೆ, ಹೈದರಾಬಾದ್ ಕರ್ನಾಟಕ ಇದೆ ಮೈಸೂರು ಡಿವಿಜನ್ ಇದೆ ಹೀಗೆ ಎಷ್ಟು ಹಿಂದುಳಿದ ಪ್ರದೇಶಗಳು ಇವೆ, ಅಲ್ಲಿಂದ ಬಂದಿರತಕ್ಕ ರೈತರ ಮಕ್ಕಳು ಏನಿದ್ದಾರೆ ಬಡವರ ಮಕ್ಕಳು ಏನಿದ್ದಾರೆ ಅವರೂ ಕೂಡ ವಿದ್ಯಾವಂತರಾಗಿರುತ್ತಾರೆ. ಆದರೆ ಅವರಿಗೆ ಸಿಟಿಯಲ್ಲಿರತಕ್ಕ ಮಕ್ಕಳ ಜೊತೆ ಪೈಪೋಟಿ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಅಂಥವರಿಗೂ ಉದ್ಯೋಗ ದೊರಕಿಸುವ ವ್ಯವಸ್ಥೆ ಮಾಡಬೇಕು. ಅದಕ್ಕಾಗಿ ಸಿಟಿ ಜನಗಳಿಗೆ ಒಂದು ರೆಕ್ರೂಟ್‌ಮೆಂಟ್ ಪಾಲಿಸಿ ಮತ್ತು ರೈತರ ಹಾಗೂ ಬಡವರ ಮಕ್ಕಳಿಗೆ ಒಂದು ರೆಕ್ರೂಟ್‌ಮೆಂಟ್ ಪಾಲಿಸಿಯನ್ನು ಇಡಬೇಕು. ಕಾರಣ ಸಿಟಿಯವರು ಬುದ್ಧಿವಂತರಿರುತ್ತಾರೆ, ಅಧಿಕಾರಿಗಳ ಮಕ್ಕಳು ಒಳ್ಳೊಳ್ಳೆಯ ಶಾಲೆಗಳಲ್ಲಿ ಚೆನ್ನಾಗಿ ಓದಿರುತ್ತಾರೆ, ಬುದ್ಧಿವಂತರ ಮಕ್ಕಳು ಅಧಿಕಾರಕ್ಕೆ ಬಂದು ೨೦-೩೦ ವರ್ಷಗಳಿಂದ ದೇಶದಲ್ಲಿ ರಾಜ್ಯಭಾರ ಮಾಡಿದರೂ ಬಡವರು ಅದೇ ಸ್ಥಾನದಲ್ಲಿದ್ದಾರೆ. ಆದ್ದರಿಂದ ನಿಮ್ಮ ಅಧಿಕಾರ ನಿಮಗೆ ಅಂದ ಹಾಗೆ ಇದರಲ್ಲೂ ಆ ತತ್ವವನ್ನು ಅನುಸರಿಸಿ ಬಡವರ ಉದ್ಧಾರವನ್ನು ಬಡವರ ಕೈಗೆ ಕೊಟ್ಟು ಬಡವರ ಮಕ್ಕಳು ಏನಿದ್ದಾರೆ, ಅಂಥವರಿಗೆ ವಿಶೇಷ ರಿಯಾಯಿತಿ ಹಾಗೂ ಮೀಸಲಾತಿ ಇಟ್ಟು ಸರ್ಕಾರಿ ನೌಕರಿಯಲ್ಲಿ ಅವಕಾಶ ಕಲ್ಪಿಸಿಕೊಡಬೇಕೆಂದು ಹೇಳಿ, ನನಗೆ ಹೆಚ್ಚು ಹೊತ್ತು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತು ಮುಗಿಸುತ್ತೇನೆ.

† ಶ್ರೀ ಎಂ. ವೀರಪ್ಪ ಮೊಯ್ಲಿ (ಕಾರ್ಕಳ).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಯವರಿಗೆ ಸಂಬಂಧಪಟ್ಟಂಥ ಮತ್ತು ಕೆಲವು ಅವರಿಗೆ ಸಂಬಂಧಪಡದೆ ಇರತಕ್ಕ ಇಲಾಖೆಗಳೆಲ್ಲಾ ಸೇರಿ ಇವತ್ತು ಚರ್ಚೆ ನಡೆಯುತ್ತಿದೆ. ಇವತ್ತು ಮುಖ್ಯ ಮಂತ್ರಿಗಳು ಉತ್ತರ ಕೊಡುವುದರಿಂದ ನಮಗೆ ಮಾತನಾಡಲಿಕ್ಕೆ ಅವಕಾಶ ಇಲ್ಲವೆಂದು ಭಾವಿಸಿ ಹೆಚ್ಚಿನ ತಯಾರಿ ಏನೂ ಮಾಡಿಲ್ಲ. ಆದರೂ ಕೂಡ ತಾವು ನಮಗೆ ಅವಕಾಶ ಕೊಟ್ಟಿದ್ದೀರಿ, ಅದಕ್ಕೆ ಅಭಿನಂದನೆಗಳು. ಮುಖ್ಯ ಮಂತ್ರಿಯವರು ಅನೇಕ ಇಲಾಖೆಗಳನ್ನು ಇವತ್ತು ನಿಭಾಯಿಸುತ್ತಿದ್ದಾರೆ. ಈ ಸದನದಲ್ಲಿ ಮತ್ತು ಆ ಸದನದಲ್ಲಿ ಅನೇಕ ಪ್ರಶ್ನೆಗಳು ಬಂದು ಮುಖ್ಯ ಮಂತ್ರಿಯವರು ರಾಜ್ಯದಲ್ಲಿ ಇರುವುದಿಲ್ಲ, ಎರಡು ವರ್ಷಗಳಲ್ಲಿ ಒಂದು ವರ್ಷ ಕಾಲ ರಾಜ್ಯದ ಹೊರಗಡೆ ಇದ್ದರು ಎಂದು ಹೇಳಿದ್ದನ್ನು ಕೇಳಿದ್ದೇವೆ. ಸರಾಸರಿ ಲೆಕ್ಕ ಹಾಕಿದರೆ ೫ ವರ್ಷಗಳ ಅವಧಿಯಲ್ಲಿ ಮುಖ್ಯ ಮಂತ್ರಿಗಳು ಏನು ಆಡಳಿತ ನಡೆಸಿದ್ದಾರೆ ಅದರಲ್ಲಿ ಎರಡೂವರೆ ವರ್ಷಗಳ ಕಾಲ ಅವರು ರಾಜ್ಯದ ಹೊರಗಡೆ ಇದ್ದು ಈ ರಾಷ್ಟ್ರದ ಮತ್ತು ಹೊರ ರಾಷ್ಟ್ರಗಳ ವಿಚಾರದಲ್ಲಿ, ಚಿಂತನೆಯಲ್ಲಿ ತೊಡಗಿದ್ದಾರೆ. ನಾವು ಏನು ತಿಳಿದುಕೊಂಡಿದ್ದೆವು ಅಂದರೆ ಮುಖ್ಯ ಮಂತ್ರಿಗಳು ಒಂದು ಥಿಂಕ್ ಟ್ಯಾಂಕ್ ಎಂದು ಮಾಡಿದ ಮೇಲೆ ಈ ರಾಷ್ಟ್ರದ ಚಿಂತನೆ, ರಾಜ್ಯದ ಚಿಂತನೆ ಮತ್ತು ವಿಶ್ವದ ಚಿಂತನೆಯನ್ನು ಥಿಂಕ್ ಟ್ಯಾಂಕ್‌ಗೆ ಬಿಟ್ಟು ರಾಜ್ಯದ ಕೆಲಸದಲ್ಲಿ ಗಂಭೀರವಾಗಿ ಸನ್ಮಾನ್ಯ ಮುಖ್ಯಮಂತ್ರಿಯವರು ತೊಡಗುತ್ತಾರೆಂದು ಹಾಗೂ ಆಡಳಿತ ವಿಚಾರದಲ್ಲಿ ಮತ್ತು ರಾಜ್ಯಕ್ಕೆ ಹೊಸ ಸ್ವರೂಪ ಕೊಡುವುದರಲ್ಲಿ ಏನಾದರೂ ಅವರು ಆಲೋಚನೆ ಮಾಡಬಹುದು ಎಂದು ನಾವೂ ನಿರೀಕ್ಷೆ ಮಾಡಿದ್ದೆವು, ಜನರೂ ನಿರೀಕ್ಷೆ ಮಾಡಿದ್ದರು. ಆದರೆ ಏಕೋ ಏನೋ ಥಿಂಕ್ ಟ್ಯಾಂಕ್‌ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಸರಿಹೋಗಲಿಲ್ಲ. ಥಿಂಕ್ ಹೋಗಿ ಬರೀ ಟ್ಯಾಂಕ್ ಮಾತ್ರ ಉಳಿಯಿತೋ ಏನೋ.

ಶ್ರೀ ಎಸ್. ಬಂಗಾರಪ್ಪ.—ಟ್ಯಾಂಕೂ ಇಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಟ್ಯಾಂಕೂ ಇಲ್ಲವೋ ಏನೋ ? ಅಥವಾ ಥಿಂಕ್ ಟ್ಯಾಂಕ್‌ಗೆ ಅಧಿಕಾರವನ್ನು ವಿಕೇಂದ್ರೀಕರಣ ಮಾಡತಕ್ಕ ಆಲೋಚನೆ ಕೂಡ ಅವರು ಮಾಡಲಿಕ್ಕೆ ಹೋಗಲಿಲ್ಲವೋ ಏನೋ ? It is left to your subjective thinking, ಅದರ ವಿಚಾರ ನಾವಂತೂ ಹೇಳುವುದಕ್ಕಾಗುವುದಿಲ್ಲ. ಥಿಂಕ್ ಟ್ಯಾಂಕ್ ನಿಮಗಾಗಿ ಇರತಕ್ಕದ್ದು. ರಾಜ್ಯದ ಜನರ ಹಿತದೃಷ್ಟಿಯಿಂದ ಇದೆ ಎಂದು ನಾವು ನಂಬುವುದಿಲ್ಲ. ಕಡೇ ಪಕ್ಷ ನಿಮ್ಮ ಹಿತ ಆದರೂ ಸಾಧನೆ ಮಾಡುತ್ತದೆಂದರೆ They have let you also down very badly. ಅದುಹೇಗೋ ಇರಲಿ, ತಾವು ಬಹಳ ಒಳ್ಳೆಯ ಕೆಲಸ ಅಥವಾ ಒಂದು ಕೆಲಸ ಮಾಡಿದ್ದೀರಿ. ಈ ಬಗ್ಗೆ ಹಿರಿಯ ಸದಸ್ಯರಾದ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ಬಸಲಿಂಗಪ್ಪನವರು ಸಾಕಷ್ಟು ವಿವರಗಳನ್ನು ಹೇಳಿದ್ದಾರೆ. ನಾನು ವಿವರಕ್ಕೆ ಹೋಗುವುದಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಕ್ಕೆ ಬಂದಮೇಲೆ ಏನು ಮಾಡಿದ್ದಾರೆಂದರೆ ಪ್ರತಿವಾರ ಒಂದೊಂದು ಸುಂದರವಾದ ಚೌಕಳಿಯುಳ್ಳಂಥ ಸುಂದರ ಮುದ್ರಣವುಳ್ಳಂಥ ಕೆಲವು ಪಬ್ಲಿಕೇಷನ್ಸ್ ಹೊರಡಿಸಿದ್ದಾರೆ. ಬಹುಶಃ ಸನ್ಮಾನ್ಯ ಮುಖ್ಯಮಂತ್ರಿಗಳು he has burnt the midnight oil very well ಎಂದು ನನಗನ್ನಿಸುತ್ತದೆ. ಕೆಲವು ಸಾರಿ ಜನರು ಕೇಳಿದ್ದೂ ಇದೆ. ಏಕೆಂದರೆ ಅವರು ಹಿಂದೆ ಫೈನಾನ್ಸ್ ಮಿನಿಸ್ಟರ್ ಆಗಿದ್ದರು, ಚುರುಕಾಗಿರುವ ಮುಖ್ಯಮಂತ್ರಿಗಳು ಆಡಳಿತಾತ್ಮಕವಾಗಿ ರಾಜಕೀಯವಾಗಿ ಏನೋ ಮಾಡುತ್ತಾರೆಂದು ಜನರು ನಿರೀಕ್ಷಿಸಿದ್ದರು. ಆದರೆ ಏತಕ್ಕೆ ಈ ಕೆಲಸ ಕುಸಿದಿಹೆ ಎಂದರೆ ಮಾನ್ಯ ಮುಖ್ಯ ಮಂತ್ರಿಗಳು ಸಾಕಷ್ಟು ಇಂಟೆಲೆಕ್ಚುಯಲ್ ಥಿಂಕಿಂಗ್‌ನಲ್ಲಿ ಪುಸ್ತಕ ಬರೆಯುವುದರಲ್ಲಿ ಕಾಲ ವ್ಯಯ ಮಾಡಿದ್ದರಿಂದ ಆಡಳಿತ ನಡೆಸಲು ಪುರಸೊತ್ತು ಆಗಲಿಲ್ಲ. ಆದ್ದರಿಂದ ಆಡಳಿತ ಸರಿಯಾಗಿ ನಡೆಸುವುದಕ್ಕೆ ಆಗಲಿಲ್ಲ ಎಂದು ಜನ ಆಲೋಚನೆ ಮಾಡುತ್ತಿದ್ದಾರೆ. I don't think a man like the Hon. Chief Minister will take recourse to straight writing. ಏಕೆಂದರೆ ಅವರ ಹೆಸರು ಅದರಲ್ಲಿದೆ. ಅವರೇ ಬರೆದದ್ದು ಎಂದಿದೆ. ಸನ್ಮಾನ್ಯ ಮುಖ್ಯಮಂತ್ರಿಯವರು ರಾಷ್ಟ್ರದ ರಾಜಕಾರಣ ಮಾಡಿ ಕೆಲವು ಸಾರಿ ವಿಶ್ವ ಸಂಚಾರ ಕೂಡ ಮಾಡಿದ್ದಾರೆ. ಸುಮಾರು ೪೦ ದಿವಸ ವಿಶ್ವ ಸಂಚಾರ ಮಾಡಿದ್ದಾರೆ. ೪೦ ದಿವಸ ವಿಶ್ವ ಸಂಚಾರ ಮಾಡಿದ ಮುಖ್ಯಮಂತ್ರಿಗಳು ಈ ದೇಶದ ಇತಿಹಾಸದಲ್ಲಿ ಯಾರೂ ಇಲ್ಲ. ಅದರಲ್ಲೂ ಕೂಡ ದೊಡ್ಡ ದಾಖಲೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಸಾಧನೆ ಮಾಡಿದ್ದಾರೆ. ಇದರ ಬಗ್ಗೆ ಹೊಗಳಬೇಕು, ನಗುವಂಥದ್ದಲ್ಲ, ೪೦ ದಿವಸ ವಿಶ್ವ ಸಂಚಾರ ಮಾಡಿದ ಮುಖ್ಯಮಂತ್ರಿಗಳು ರಾಷ್ಟ್ರದ ಇತಿಹಾಸದಲ್ಲಿ ಇದ್ದರೆ, ಈಗಿರುವವರಲ್ಲಿ, ಆಗಿಹೋದವರಲ್ಲಿ ಮತ್ತು ಮುಂದೆ ಆಗುವವರಲ್ಲಿ ಯಾರಾದರೂ ಇದ್ದರೆ ಅವರಲ್ಲಿ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ಮೊದಲಿಗರು ಎಂದರೆ ಅತಿಶಯೋಕ್ತಿ ಕೂಡ ಆಗಲಾರದು. ಇದು ಒಂದು ಮಾದರಿ ಎಂದು ಹೇಳಬೇಕು. ಇಷ್ಟೆಲ್ಲಾ ಇದ್ದರೂ ಡಿಸಿಡೆಂಟ್ಸ್ ತಮ್ಮ ಆಕ್ಟಿವಿಟೀಸ್ ಪ್ರಾರಂಭ ಮಾಡಿದ ಮೇಲೆ ಒಂದು ಪುಸ್ತಕ ಹೊರಬಂತು. Dissidents have stopped him writing. ಡಿಸಿಡೆಂಟ್ಸ್ ಈ ದೇಶಕ್ಕೆ ದೊಡ್ಡ ನಷ್ಟ ಮಾಡಿದರು. ಇಷ್ಟೆಲ್ಲಾ ಪುಸ್ತಕಗಳನ್ನು ಇಡೀ ದೇಶದ ಎಲ್ಲಾ ಕಡೆ ಹಂಚಿದ್ದಾರೆ. ಅವರ ಚಿಂತನೆ ಚಿಲುಮೆಯನ್ನು ಆಫ್ ಮಾಡಿಬಿಟ್ಟಿರಿ ನೀವು.

ಶ್ರೀ ಬಿ. ಬಸವಲಿಂಗಪ್ಪ.—ಕೆರೆ ಅದು.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದು ಟ್ಯಾಂಕ್. ಇದು ಚಿಲುಮೆ. ಅದನ್ನು ಡಿಸಿಡೆಂಟ್ಸ್ ಆಕ್ಟಿವಿಟೀಸ್‌ನಿಂದ ಆಫ್ ಮಾಡಿಬಿಟ್ಟಿರಿ. ಮಾನ್ಯ ದೇವೇಗೌಡರು ಅವರ ಚಿಲುಮೆಯನ್ನು ಕಸಿದುಬಿಟ್ಟರು ಎನ್ನಿಸುತ್ತದೆ. He is a total Teetollar. Is it not? ಆದ್ದರಿಂದ ದೇವೇಗೌಡರು ಅದನ್ನು ಕಸಿದಿದ್ದಾರೆಂದು ನಾನು ಹೇಳುವುದಿಲ್ಲ. ಆದರೆ ಏನಾಯಿತೆಂದರೆ, ಡಿಸಿಡೆಂಟ್ ಆಕ್ಟಿವಿಟೀಸ್ ಇವರ ಚಿಂತನ ಚಿಲುಮೆಯನ್ನೇ ಸ್ಟಾಪ್ ಮಾಡಿಸಿತು. ಟ್ಯಾಂಕ್ ಬತ್ತಿ ಹೋಗಿತು. ಈಗ ಒಂದು ಪುಸ್ತಕ ಮಾತ್ರ ಡಿಸಿಡೆಂಟ್ಸ್ ಚಟುವಟಿಕೆ ಪ್ರಾರಂಭ ಆದ ಮೇಲೆ ಹೊರಗೆ ಬಂತು. ಬಾಕಿ ಪುಸ್ತಕಗಳ ಗತಿ ಏನಾಗಿದೆ ಎಂಬುದನ್ನು ನೋಡಬೇಕು. ಎಷ್ಟು ಪುಸ್ತಕಗಳು ಇವೆ ಎಂಬುದನ್ನು ತಾವು ದಯಮಾಡಿ ಹೇಳಬೇಕು. ಈ ಪುಸ್ತಕಗಳನ್ನು ಪ್ರಿಂಟ್ ಮಾಡಿಸಿರುವ ಬಗ್ಗೆ ತಾವು ಹೇಳಬಹುದು. ಅದೇನೆಂದರೆ, ಪುಸ್ತಕಗಳನ್ನು ಪಕ್ಷದ ಹಣದಿಂದ ಪ್ರಿಂಟ್ ಮಾಡಿಸಿದ್ದೇವೆ, ಅಥವಾ ಸರ್ಕಾರಿ ಖರ್ಚಿನಲ್ಲಿ ಪ್ರಿಂಟ್ ಮಾಡಿಸಿದ್ದೇವೆ, ಅಥವಾ ಸ್ವಂತ ಖರ್ಚಿನಿಂದ ಮಾಡಿದ್ದೇನೆಂದು ಹೇಳಬಹುದು. ಮುಖ್ಯಮಂತ್ರಿಯಾಗಿ ತಾವು ಅಧಿಕಾರಕ್ಕೆ ಬಂದ ಮೇಲೆ ಎಷ್ಟು ಪುಸ್ತಕಗಳನ್ನು ಪ್ರಿಂಟ್ ಮಾಡಿಸಿದ್ದೀರಿ? ಇದಕ್ಕೆ ಎಷ್ಟು ಖರ್ಚಾಯಿತು? ಮುಖ್ಯಮಂತ್ರಿಗಳಾಗಿ ಮಾಡಿರಲಿ, ಖಾಸಗಿಯಾಗಿ ಮಾಡಿರಲಿ ಅಥವಾ ಪಕ್ಷದ ಹೆಸರಿನಲ್ಲಿ ಮಾಡಿರಲಿ. ಆ ಎಲ್ಲಾ ಪುಸ್ತಕಗಳಲ್ಲಿಯೂ, ತಮ್ಮ ಹೆಸರು ಇದೆ. ಯಾವ ಪುಸ್ತಕಕ್ಕೆ ಎಷ್ಟು ವೆಚ್ಚವಾಯಿತು ಎಂಬುದನ್ನು ಬಹುಶಃ ಸಾರ್ವಜನಿಕರು ಕೇಳತಕ್ಕ ಹಕ್ಕು ಇದೆ. ಅವನ್ನು ದಯಮಾಡಿ ತಾವು ಹೇಳಬೇಕಾಗುತ್ತದೆ. ಇದರಿಂದ ರಾಜ್ಯದ ಜನರ ಹಿತಾಸಕ್ತಿಗೆ, ರಾಜ್ಯದ ಹಿತಾಸಕ್ತಿಗೆ ಸಂಬಂಧಿಸಿದ ಪುಸ್ತಕಗಳು ಎಷ್ಟು? ಮತ್ತು ಅವುಗಳಿಗೆ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎಂಬುದನ್ನು ದಯಮಾಡಿ ಹೇಳಿ. ಈ ಪುಸ್ತಕಗಳು ಹೊರಬಂದದ್ದರಿಂದ ರಾಜ್ಯದ ಹಿತಾಸಕ್ತಿಗೆ, ರಾಜ್ಯದ ಅಭಿವೃದ್ಧಿಗೆ ಎಷ್ಟರಮಟ್ಟಿಗೆ ಪೂರಕವಾಗಿದೆ ಎಂಬುದನ್ನು ತಿಳಿದುಕೊಳ್ಳತಕ್ಕ ಹಕ್ಕು ಈ ಸದನಕ್ಕೂ ಕೂಡ ಇದೆ. ಈ ರಾಜ್ಯದ ಜನತೆಗೂ ಕೂಡ ಇದೆ. ಆದ್ದರಿಂದ ಅದನ್ನು ದಯಮಾಡಿ ಹೇಳತಕ್ಕ ಪ್ರಯತ್ನವನ್ನೂ ತಾವು ಮಾಡಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಇನ್ನು ವಿಶೇಷವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ೧೯೮೩ರಲ್ಲಿ ಅಧಿಕಾರವನ್ನು ವಹಿಸಿಕೊಂಡ ಮೇಲೆ ಪತ್ರಿಕಾ ಗೋಷ್ಠಿಯಲ್ಲಿ ಒಂದು ಮಾತನ್ನು ಸ್ಪಷ್ಟವಾಗಿ ಹೇಳಿದರು. ಅದು ಏನೆಂದರೆ, ನನ್ನ ಮಂತ್ರಿಮಂಡಲದಲ್ಲಿ ಇರತಕ್ಕ ಎಲ್ಲಾ ಮಂತ್ರಿಗಳ ಆಸ್ತಿ ಮತ್ತು ಅದರ ವಿವರವನ್ನು ಮತ್ತು ಅವರ ಲೆಕ್ಕಪತ್ರಗಳನ್ನು ಪ್ರತಿವರ್ಷ ಬಹಿರಂಗ ಗೊಳಿಸುತ್ತೇವೆ. ಎಂದು ಆ ರೀತಿಯಾದಂತಹ ಒಂದು ಮಾತನ್ನು ಕೊಟ್ಟಿದ್ದಾರೆ. ಈಗ ಉತ್ತರ ಹೇಳಬಹುದು, ಲೋಕಾಯುಕ್ತರು ಆ ಬಗ್ಗೆ ವಿವರಗಳನ್ನು ಕಾಲ್‌ಫಾರ್ ಮಾಡುತ್ತಾರೆ, ಅದರಂತೆ ಅವರು ಕೊಟ್ಟಿರುತ್ತಾರೆ, ಆದ್ದರಿಂದ ಅದಕ್ಕೆ ನಾವು ಜವಾಬ್ದಾರನಲ್ಲ ಎಂದು ಹೇಳಬಹುದು. ಅದು ಪ್ರಶ್ನೆಯಲ್ಲ. ಕೊಟ್ಟಂತಹ ಮಾತಿನ ಪ್ರಕಾರ ಪ್ರತಿ ವರ್ಷ ಬಹಿರಂಗ ಮಾಡುತ್ತೇವೆ ಎಂಬ ಮಾತನ್ನು ಮುಖ್ಯಮಂತ್ರಿಗಳು ತಮ್ಮ ಪ್ರಥಮ ಪತ್ರಿಕಾ ಗೋಷ್ಠಿಯಲ್ಲಿ ಏನು ಹೇಳಿದ್ದಾರೆ, ಆ ಮಾತನ್ನು ತಪ್ಪಿದ್ದಾರೆ, ನಿಜಕ್ಕೂ ತಪ್ಪಿದ್ದಾರೆಂದು ಹೇಳುವುದಕ್ಕೆ ಬಯಸುವುದಿಲ್ಲ. ಆದರೆ ಹೇಳಿರತಕ್ಕ ಮಾತನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಉಳಿಸಿಕೊಳ್ಳಲಿಲ್ಲ. ಕೊನೆಗೆ ಸನ್ಮಾನ್ಯ ಮುಖ್ಯಮಂತ್ರಿಗಳಾದರೂ ತಮ್ಮ ಆಸ್ತಿಯ ಬಗ್ಗೆಯಾದರೂ ಪ್ರತಿ ವರ್ಷ ಬಹಿರಂಗಗೊಳಿಸತಕ್ಕ ಕೆಲಸವನ್ನೂ ಮಾಡುತ್ತಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಯವರು ಆ ವಿಚಾರವನ್ನು ಇವತ್ತಾದರೂ ಹೇಳಬೇಕಾಗುತ್ತದೆ.

ಇಡೀ ರಾಜ್ಯದ ಸಂಚಾರದ ಬಗ್ಗೆ ಹೇಳುವುದಾದರೆ, ಏಕೆಂದರೆ, ಆ ಪ್ರಶ್ನೆ ಆಗಾಗ ಬಂದಿದ್ದು ಅದಕ್ಕೆ ಉತ್ತರವನ್ನೂ ಕೂಡ ಕೊಟ್ಟಿದ್ದಾರೆ. ಆ ಬಗ್ಗೆ ವಿಶ್ಲೇಷಣೆ ಮಾಡುತ್ತೇನೆ. ವಿವರವಾದ ಅಂಕಿ ಸಂಖ್ಯೆಗಳನ್ನು ಹೇಳುವುದಕ್ಕೆ ಹೋಗುವುದಿಲ್ಲ, ನನಗೆ ಇರತಕ್ಕ ಸಮಯ ಬಹಳ ಕಡಿಮೆ. ಅವರ ಕ್ಷೇತ್ರಕ್ಕೆ ಹೋಗಲು ಅವರಿಗೆ ಆಗುತ್ತಿಲ್ಲ. ರಾಜ್ಯದಲ್ಲಿ ಸಂಚಾರ ಮಾಡತಕ್ಕಂತಹದ್ದು ಬೇಡ. ಏಕೆಂದರೆ ಅನೇಕ ಘಟನೆಗಳು, ಬರಗಾಲದ ಸಂದರ್ಭ ಆಗಿರಬಹುದು, ನೆರೆಬಂದಂತಹ ಸಂದರ್ಭ ಇರಬಹುದು, ಕಮ್ಯುನಲ್ ಕ್ಲಾಸಸ್ ಬಂದಂತಹ ಸಂದರ್ಭ ಇರಬಹುದು, ಅಂತಹ ಸಂದರ್ಭದಲ್ಲಿ ಸ್ವತಃ ಆ ಕ್ಷೇತ್ರಕ್ಕೆ ಭೇಟಿಕೊಟ್ಟು ಆ ಪ್ರದೇಶದಲ್ಲಿ ಸಂಚಾರ ಮಾಡಿ ಸಮಸ್ಯೆಗಳನ್ನು ಖುದ್ದು ಅಧ್ಯಯನ ಮಾಡಿ ಅದನ್ನು ಪರಿಹಾರ ಮಾಡತಕ್ಕ ಪ್ರಶ್ನೆ ಈಗ ಉದ್ಭವವಾಗುವುದಿಲ್ಲ. ಆದರೆ ಸನ್ಮಾನ್ಯ ಮುಖ್ಯ ಮಂತ್ರಿಗಳು, ಕನ್ನಡ ಸಮ್ಮೇಳನ ಮಾಡುವುದಕ್ಕಾಗಿ, ಮ್ಯಾಂಚೆಸ್ಟರ್–ಇಂಗ್ಲೆಂಡಿಗೆ ಹೋಗುತ್ತಿದ್ದಾರೆ. ಇವರ ಜೊತೆಗೆ ಹಲವಾರು ಜನಗಳನ್ನು ಅಲ್ಲಿಗೆ ಕರೆದೊಯ್ಯುತ್ತಿದ್ದಾರೆ. ಇದಕ್ಕಾಗಿ ಲಕ್ಷಾಂತರ ರೂಪಾಯಿಗಳು ಖರ್ಚಾಗುತ್ತಿದೆ. ಇದಕ್ಕಾಗಿ ಖರ್ಚು ಮಾಡತಕ್ಕ ಹಣವನ್ನು ಅಂದರೆ ಕರ್ನಾಟಕ ರಾಜ್ಯದ ಹೊರಗಡೆ ನಡೆಯುತಕ್ಕ ಚಟುವಟಿಕೆಗಳ ಬಗ್ಗೆ ಎಷ್ಟು ಆಸಕ್ತಿ ವಹಿಸಿದ್ದಾರೋ ಅಷ್ಟೇ ಆಸಕ್ತಿಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಇಲ್ಲಿನ ಆಡಳಿತದ ಬಗ್ಗೆ ತೋರಿಸಿ ಕೊಟ್ಟಿದ್ದರೆ ಬಹುಶಃ ಈ ರಾಜ್ಯದ ಜನತೆಗೆ ಆಗ ಒಳ್ಳೆಯದಾಗುತ್ತಿತ್ತು. ಈ ರಾಜ್ಯದ ಆಡಳಿತಕ್ಕೆ ಬಹಳ ಒಳ್ಳೆಯ ದಾಗುತ್ತಿತ್ತು ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನೊಂದು ವಿಚಾರ, ಪಾವಗಡದ ಘಟನೆಯಾಯಿತು. ಇದು ಆದ ಮೇಲೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಪೋಲೀಸ್ ಅಧಿಕಾರಿಗಳ, ಉನ್ನತ ಪೋಲೀಸ್ ಅಧಿಕಾರಿಗಳ ಒಂದು ಸಭೆಯನ್ನು ಕರೆದರು. ಡಿ.ಜಿ.ಪಿ. ಐ.ಜಿ. ಇವರಲ್ಲದೆ, ಡಿ.ಐ.ಜಿ. ಹಾಗೂ ಎಸ್.ಪಿ. ಎಲ್ಲರನ್ನೂ ಒಳಗೊಂಡಂತಹ ಒಂದು ಸಭೆಯನ್ನು ಕರೆದರು. ಅಲ್ಲಿ ಬಹಳ ಸ್ಪೋರ್ಟೀವ್ ಆಗಿ ಒಂದು ಮಾತು ಕೊಟ್ಟರು ಎನ್ನುವುದು ಪತ್ರಿಕೆಗಳಲ್ಲಿ ಇದೆ. ಅದನ್ನು ದಯಮಾಡಿ ತಾವು ತರಿಸಿ ನೋಡಬೇಕು. ಇನ್ನು ಮುಂದೆ ಯಾವುದೇ ಪೋಲೀಸ್ ಅಧಿಕಾರಿಗಳ ವರ್ಗಾವಣೆಯ ವಿಚಾರದಲ್ಲಾಗಲಿ, ಅಥವಾ ಯಾವುದೇ ಕ್ರೈಮ್ ಡಿಟೆಕ್ಷನ್ ವಿಚಾರದಲ್ಲಾಗಲಿ ನಾವು ರಾಜಕೀಯ ಹಸ್ತಕ್ಷೇಪ ಮಾಡುವುದಿಲ್ಲ. ಈ ವರ್ಗಾವಣೆಯ ವಿಚಾರದಲ್ಲಿ, ಪೋಲೀಸ್ ಅಡ್ಮಿನಿಸ್ಟ್ರೇಷನ್ ವಿಚಾರದಲ್ಲಿ you will have a free hand ಎಂದು ಆ ದಿವಸ ಪೋಲೀಸ್ ಅಧಿಕಾರಿಗಳ ಸಮ್ಮೇಳನದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಅವರಿಗೆ ಹೇಳಿದರು. ಆದರೆ ಅವತ್ತಿನಿಂದ ಇವತ್ತಿನವರೆಗೂ ಕೂಡಾ ಆ ಹೇಳಿಕೆ ನಿಜವಾಗಿಲ್ಲ. ಆ ಹೇಳಿಕೆ ಬರಿ ಸಾರ್ವಜನಿಕರ ಒಂದು ಕನ್‌ಸಮ್ಷನ್ ಆಯಿತೇ ಹೊರತು ಅಥವಾ ಹಿಪೋಕ್ರಾಟಿಕಲ್ ಸ್ಟೇಟ್‌ಮೆಂಟ್ ಆಯಿತೇ ಹೊರತು ಯಾವುದೇ ರೀತಿಯಲ್ಲಿ ಇವತ್ತಿನವರೆಗೂ ಕೂಡಾ ಸಬ್ ಇನ್ಸ್‌ಪೆಕ್ಟರ್ ವರ್ಗಾವಣೆ ಆಗಬೇಕಾಗಿದ್ದರೂ ಕೂಡಾ ಡಿ. ಐ. ಜಿ. ಯವರಿಗೆ ಅಧಿಕಾರ ಇಲ್ಲವಾಗಿದೆ. ಇವತ್ತು ಡಿ. ಐ. ಜಿ. ಯವರು ಪ್ರಪೋಸಲ್ ಕಳುಹಿಸಿದರೂ ಕೂಡಾ ಅದನ್ನು ಸಂಪೂರ್ಣ ಬದಲಾವಣೆ ಮಾಡತಕ್ಕ ವಾತಾವರಣ ನಿರ್ಮಾಣ ಆಗಿದೆ. ಯಾವುದೇ ಎಸ್. ಐ. ವರ್ಗಾವಣೆ ಬಗ್ಗೆ ಹಿಂದೆ ಎಸ್. ಪಿ. ಯವರು ಒಂದು ರೆಕಮೆಂಡ್ ಮಾಡಿದರೆ ಅದರ ಮೇಲೆ ಅಂತಿಮ ನಿರ್ಣಯ ಡಿ. ಐ. ಜಿ. ಯವರಿಂದ ಆಗುತ್ತಾ ಇತ್ತು. ಇವತ್ತಿನದಿವಸ ಅಧಿಕಾರಿಗಳ ವರ್ಗಾವಣೆ ವಿಷಯದಲ್ಲಿ, ಅದರಲ್ಲೂ ಪೋಲೀಸ್ ಅಧಿಕಾರಿಗಳ ವರ್ಗಾವಣೆ ವಿಷಯದಲ್ಲಿ ರಾಜಕೀಯ ಹಸ್ತಕ್ಷೇಪ ಇರಬಹುದು, ಉನ್ನತ

ಅಧಿಕಾರಿಗಳ ಹಸ್ತಕ್ಷೇಪ ಇರಬಹುದು. ಇದು ಧಾರಾಳವಾಗಿ ಆಗುತ್ತಾ ಇದೆ. ಇವತ್ತಿನದಿವಸ ತಾವು ಲಾ ಅಂಡ್ ಆರ್ಡರ್ ಕಂಟ್ರೋಲ್‌ನಲ್ಲಿ ಇದೆ ಎಂದು ತಾವು ಪೇಜ್ ೮೭ರಲ್ಲಿ ಹೇಳಿದ್ದರೂ ಕೂಡಾ ಇವತ್ತು ನೀವು ಕೊಟ್ಟಿರತಕ್ಕ ಅಂಕಿಅಂಶಗಳನ್ನು ನೋಡಿದರೆ ಕ್ರೈಮ್ ರೇಟ್‌ಜಾಸ್ತಿಯಾಗಿದೆ ಎಂದು ಹೇಳಬೇಕಾಗುತ್ತದೆ. The total number of murders in 1986-1071 and in 1987-88 it is 1423. Robberies were 475 in 1986 and 656 in 1987-88, House Breaking thefts were 7206 in 1986 and 8946 in 1987-88. Thefts (ordinary) - 16396 in 1986 and 18995 in 1987-88, Criminal Breach of Trust - 797 in 1986 and 1043 in 1987-88, Offencesunder 304 (A) - 2555 in 1986 end 3232 in 1987-88. Miscellaneous I. P. S., -44,148 in 1986 and 57,611 in 1987-88. Total- 81,540 in 1987 and 1,03,952 in 1987-88, ಇದು ಎಲ್ಲಿ ಕಡಿಮೆಯಾಗಿದೆ ? ವಿಪರೀತವಾಗಿ ಹೆಚ್ಚಾಗಿದೆ. ಇವತ್ತು ತಾವು ಪೋಲೀಸ್ ಅಧಿಕಾರಿಗಳಿಗೆ ಅವರು ಡಿ. ಐ. ಜಿ. ಇರಬಹುದು, ಎಸ್. ಪಿ. ಇರಬಹುದು ಅವರಿಗೆ ಸಂಪೂರ್ಣವಾಗಿ ರಾಜ್ಯದ ಲಾ ಅಂಡ್ ಆರ್ಡರನ್ನು ನಿಭಾಯಿಸತಕ್ಕ ಅಧಿಕಾರವನ್ನು ಕೊಡಿ. ನೀವು ಹಸ್ತಕ್ಷೇಪ ಮಾಡುವುದಕ್ಕೆ ಹೋಗಬೇಡಿ. ಅವರಿಗೆ ಸಂಪೂರ್ಣ ಅಧಿಕಾರ ಕೊಟ್ಟರೆ ಉನ್ನತ ಪರಂಪರೆಯುಳ್ಳ ರಾಜ್ಯದ ಪೋಲೀಸ್ ಪಡೆ ಅಥವಾ ಪೋಲೀಸ್ ಅಧಿಕಾರಿಗಳು ಖಂಡಿತವಾಗಿಯೂ ಕಾನೂನನ್ನು ಖಂಡಿತವಾಗಿಯೂ ಹತೋಟಿಗೆ ತರುತ್ತಾರೆ. ಇದರಿಂದ ನಮ್ಮಲ್ಲಿ ವಿಶೇಷವಾಗಿ ಒಂದು ಹತೋಟಿಯನ್ನು ತರುವುದಕ್ಕೆ ಸಾಧ್ಯವಾಗುತ್ತದೆ. ಅಧ್ಯಕ್ಷರೇ ಈ ಬಗ್ಗೆ ಒಂದೇ ಒಂದು ಸ್ಯಾಂಪಲ್ ಕೊಡುತ್ತೇನೆ. ಸಿ. ಒ. ಡಿ. ಯಾವ ರೀತಿ ಕೆಲಸ ಮಾಡುತ್ತಿದೆ ಎನ್ನುವ ಬಗ್ಗೆ ಪೇಜ್ ೮೭ನ್ನು ನೋಡಿ. "During the year the COD has taken up 571 cases for investigation out of this one case was B-reported, 192 'C' sheeted, 3 otherwise disposed off, 339 are under investigation and 36 were chargesheeted. So, they have charge-sheeted only 35 cases. ಇವತ್ತು ೯೦ ದಿವಸಗಳಲ್ಲಿ ಚಾರ್ಜ್‌ಶೀಟ್ ಹಾಕಬೇಕು. ೯೦ ದಿವಸಗಳಾದ ಮೇಲೂ ಚಾರ್ಜ್‌ಶೀಟ್ ಹಾಕದೇ ಇರುವ ವಿವರ ಎಷ್ಟು ಇದೆ ಎಂಬುದು ನಮಗೆ ಬೇಕಾಗಿದೆ. ಇನ್ನು ಪೋಲೀಸ್ ಮಾಡ್ರನೈಸೇಷನ್ ಬಗ್ಗೆ ಕಂಟ್ರೋಲರ್ ಜನರಲ್‌ರವರು ಪಾರ್ಲಿಮೆಂಟಿಗೆ ಒಂದು ವರದಿಯನ್ನು ಕೊಟ್ಟಿದ್ದಾರೆ. ಅದರಲ್ಲಿ ಕೆಲವು ರಾಜ್ಯಗಳು ಹಣವನ್ನು ವೆಹಿಕಲ್ಸ್ ಪರ್ಚೇಸ್ ಮಾಡುವುದಕ್ಕೆ ಉಪಯೋಗ ಮಾಡಿದ್ದಾರೆಯೇ ಹೊರತು ನಿಜವಾದ ಮಾಡ್ರನೈಸೇಷನ್‌ನಲ್ಲಿ ಕೂಡ ಉಪಯೋಗ ಮಾಡುತ್ತಿಲ್ಲ, ಕರ್ನಾಟಕ ಕೂಡ ಈ ರೀತಿ ಸರಿಯಾಗಿ ಉಪಯೋಗ ಮಾಡದೇ ಮಾಡ್ರನೈಸೇಷನ್ ಸ್ಕೀಮ್ ಇಂಪ್ಲಿಮೆಂಟ್ ಮಾಡದೇ ಇರತಕ್ಕ ರಾಜ್ಯಗಳಲ್ಲಿ ಕರ್ನಾಟಕ ರಾಜ್ಯ ಕೂಡಾ ಮೇಲ್ಪಂಕ್ತಿಯಲ್ಲಿದೆಯೆಂದು ಕಂಟ್ರೋಲರ್ ಜನರಲ್‌ರವರು ತಮ್ಮ ವರದಿಯನ್ನು ಪಾರ್ಲಿಮೆಂಟಿಗೆ ಕೊಟ್ಟಿದ್ದಾರೆ. ಈ ಐದು ವರ್ಷಗಳಲ್ಲಿ ಮಾಡ್ರನೈಸೇಷನ್ ಸ್ಕೀಮ್ ಕೆಳಗೆ ಕೇಂದ್ರ ಸರ್ಕಾರದಿಂದ ಬಂದ ಹಣದಲ್ಲಿ ತಾವು ಯಾವ ಯಾವ ರೀತಿಯಲ್ಲಿ, ಯಾವ ಯಾವ ಬಾಬಿನಲ್ಲಿ ಉಪಯೋಗ ಮಾಡಿದ್ದೀರಿ ಎಂಬ ಬಗ್ಗೆ ತಮ್ಮ ಉತ್ತರದಲ್ಲಿ ಹೇಳಬೇಕಾಗುತ್ತದೆ. ಏಕೆಂದರೆ ೧೯೮೭-೮೮ರಲ್ಲಿ ಕೇಂದ್ರಸರ್ಕಾರದಿಂದ ಮಾಡ್ರನೈಸೇಷನ್ ಆಫ್ ಪೋಲೀಸ್ ಸಂಬಂಧದಲ್ಲಿ ಪೋಲೀಸ್ ಇಲಾಖೆಗೆ ೪೨.೦೩ ಲಕ್ಷ ರೂಪಾಯಿ ಬಂದಿದೆ. ಅದನ್ನು ಸರಿಯಾಗಿ ಉಪಯೋಗ ಮಾಡಿಕೊಂಡರೆ We will have a claim for enhanced amount. from the centre, ಇನ್ನು ಹೆಚ್ಚು ಹಣವನ್ನು ಕೊಡಿಯೆಂದು ಕೇಳತಕ್ಕ ನೈತಿಕ ಶಕ್ತಿ ಕೂಡ ನಮ್ಮ ರಾಜ್ಯಕ್ಕೆ ಬರುತ್ತದೆ. ಪೋಲೀಸ್ ಹೌಸಿಂಗ್ ಬಗ್ಗೆ ನೋಡಿದರೆ Basic, miuimum needs, who has got to be provided to the police. Constabulary and other police Officers. ಮಿನಿಮಮ್ ನೀಡ್ಸ್ ಅನ್ನು ತಾವು ಉಪಯೋಗ ಮಾಡದಿದ್ದರೆ ಯಾವ ರೀತಿಯ ಶಕ್ತಿಯನ್ನು ಪೋಲಿಸ್ ಇಲಾಖೆಯಲ್ಲಿ ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಿದೆ ? ನಿಮ್ಮಿಂದ ಸಹಾ ನಾವು ನಿರೀಕ್ಷೆ ಮಾಡುವುದಕ್ಕೆ ಸಾಧ್ಯವಿದೆಯೇ ? ಕಳೆದ ವರ್ಷ ೧೯೮೭-೮೮ನೇ ಸಾಲಿನಲ್ಲಿ ಪೋಲಿಸ್ ಹೌಸಿಂಗ್‌ಗೋಸ್ಕರ ರಾಜ್ಯಸರ್ಕಾರ ಕೊಟ್ಟಂತಹ ಹಣ ೧೮೩ ಲಕ್ಷ ಆದರೆ ನಿಜವಾಗಿಯೂ ಆನ್ ಗೋಯಿಂಗ್ ವರ್ಕ್‌ಗೆ ಖರ್ಚು ಮಾಡಿರುವಂತಹದ್ದು ೩೦ಲಕ್ಷ ಮಾತ್ರ. ಉಳಿದ ಹಣವನ್ನು ಬಾಡಿಗೆ ಮತ್ತೊಂದಕ್ಕೆ ಕೊಟ್ಟಿದ್ದಾರೆ ನಿಜವಾಗಿಯೂ ಕನ್‌ಸ್ಟ್ರಕ್ಷನ್ ಆಫ್ ವರ್ಕ್ಸ್‌ಗೆ ಖರ್ಚುಮಾಡಿರತಕ್ಕದ್ದು ೩೦ ಲಕ್ಷ. ಪ್ರತಿ ವರ್ಷ ಇಷ್ಟು ಖರ್ಚು ಮಾಡಿದರೆ ಯಾವ ಪುರುಷಾರ್ಥ ಸಾಧಿಸಲಿಕ್ಕೆ ಆಗುತ್ತದೆ ? ಪೋಲೀಸ್‌ನವರು ರಾತ್ರಿ ಹಗಲು ದುಡಿಯುತ್ತಾರೆ. ಅವರು ತಮ್ಮ ಪ್ರಾಣದ ಹಂಗು ತೊರೆದು

ದುಡಿಯತಕ್ಕವರು. ಅವರು ತಮ್ಮ ಸಂಸಾರದ ಸಂಕಷ್ಟ ಏನೇ ಇದ್ದರೂ ಅವರು ಯಾರಿಗೋಸ್ಕರ ಕೆಲಸ ಮಾಡುತ್ತಿದ್ದಾರೆ ? ರಾಜ್ಯದ ಸಂರಕ್ಷಣೆಯನ್ನು ಮಾಡತಕ್ಕ ಜವಾಬ್ದಾರಿ ಅವರ ಮೇಲೆ ಇದೆ. ಅವರ ಬಗ್ಗೆ ಸ್ವಲ್ಪ ಅನುಕಂಪ ಕನಿಕರ ಇಡತಕ್ಕ ರೀತಿಯಲ್ಲಿ ಕೆಲಸ ಮಾಡಬೇಕೆಂದು ಹೇಳುತ್ತೇನೆ. ಪೋಲಿಸ್‌ಹೌಸಿಂಗ್ ಕಾರ್ಪೊರೇಷನ್ ಎಂದು ಮಾಡಿದ್ದಾರೆ. ಅಲ್ಲಿ ಬರೀ ಸ್ಟಾಫ್ ಕೂರಿಸುವುದು ಅಲ್ಲ, ನಿಮಗೆ ಬೇಡವಾದ ಅಧಿಕಾರಿಗಳನ್ನು ಕೂಡಿಸಲಿಕ್ಕೆ ಪೋಲೀಸ್ ಹೌಸಿಂಗ್ ಕಾರ್ಪೊರೇಷನ್ ಮಾಡುವುದಲ್ಲ. ನಿಜವಾಗಿಯೂ ಕೆಲಸಮಾಡತಕ್ಕವರು ಅಲ್ಲಿರಬೇಕು. ೩೦ ಲಕ್ಷ ರೂಪಾಯಿಗಳನ್ನು ಪ್ರತಿ ವರ್ಷ ಪೋಲೀಸ್ ಹೌಸಿಂಗ್ ಕಾರ್ಪೊರೇಷನ್‌ನ ಚಟುವಟಿಕೆಗೆಕೊಡತಕ್ಕದ್ದು ಇದ್ದರೆ ಪೋಲಿಸ್ ಹೌಸಿಂಗ್‌ನ ಕಾರ್ಪೊರೇಷನ್ ಅಗತ್ಯವಿಲ್ಲ. ಬರುವ ವರ್ಷ ಕೊಡತಕ್ಕ ಹಣ ಎಷ್ಟು ಅಂದರೆ ೨೦ ೦ಲಕ್ಷ ಮಾತ್ರ. ಹೆಚ್ಚೆಂದರೆ ೩೦ ಲಕ್ಷ ೩೫ ಲಕ್ಷ ಇದರಲ್ಲಿ ನಿಜವಾಗಿಯೂ ಕನ್‌ಸ್ಟ್ರಕ್ಷನ್ ವರ್ಕ್‌ಸ್‌ಗೆ ಖರ್ಚಾಗ ಬಹುದು ಅದಕ್ಕಿಂಥ ಹೆಚ್ಚಾಗುವುದಿಲ್ಲ. ಇದರಿಂದ ಯಾವ ಒಂದು ಪುರುಷಾರ್ಥವನ್ನು ಸಹ ಸಾಧಿಸಿ ದಂತಾಗುವುದಿಲ್ಲ. ಹಿಂದೆ ನಾವು ಅಧಿಕಾರದಲ್ಲಿದ್ದಾಗ ಅನೇಕ ಸಲ ಪೋಲಿಸ್ ಅಧಿಕಾರಿಗಳ ಸಮ್ಮೇಳನಕ್ಕೆ ನಮ್ಮನ್ನು ಕೇಂದ್ರ ಸರ್ಕಾರ ಕರೆದಾಗ ನಾವು ಹೋದದ್ದು ಇದೆ. ಅಲ್ಲಿಗೆ ಹೋದಾಗ ಅಲ್ಲಿ ಹೇಳಿದಂತಹ ಮಾತಗುಳು, ಕರ್ನಾಟಕ ರಾಜ್ಯದ ಪೋಲೀಸ್‌ನವರ ಬಗ್ಗೆ ಕರ್ನಾಟಕ ಪೋಲೀಸ್ ಕೇಡರ್ ಬಗ್ಗೆ ಎಷ್ಟು ಅಭಿಮಾನದಿಂದ ಹೇಳುತ್ತಿದ್ದರು. ಇವತ್ತು ಅವರು ಏನು ಹೇಳುತ್ತಾರೆಂದರೆ ಯಾರು ಹೊಸದಾಗಿ ಐ. ಪಿ. ಎಸ್. ಅಧಿಕಾರಿಗಳು ಬಂದಾಗ ಫಸ್ಟ್ ಪ್ರಿಫರನ್ಸ್ ಕರ್ನಾಟಕಕ್ಕೆ ಕೊಡುತ್ತಿದ್ದಾರೆ. ಕರ್ನಾಟಕದ ಪರಂಪರೆ ಅಂತಹ ಒಂದು ಗುಣಮಟ್ಟವಿರತಕ್ಕ ಪರಂಪರೆಯನ್ನು ಇಟ್ಟುಕೊಂಡಿರತಕ್ಕ ಕರ್ನಾಟಕ ರಾಜ್ಯದ ಪೋಲಿಸ್‌ನವರು There has been least political interfeerence in terms of transfer or interms of investigation. ಆ ಒಂದು ಪರಿಸ್ಥಿತಿ ಕರ್ನಾಟಕ್ಕೆ ಇತ್ತು. ಇವತ್ತು ಆ ಪರಿಸ್ಥಿತಿ ಬದಲಾವಣೆಯಾಗಿದೆ. ಉನ್ನತ ಅಧಿಕಾರಿಗಳಾದ ಡಿ. ಐ. ಜಿ. ಸ್ಪೆಷಲ್ ಡಿ. ಐ. ಜಿ. ಅಡಿಶನಲ್ ಐ. ಜಿ. ಪಿ., ಎಸ್. ಪಿ. ಇವರುಗಳ ಟ್ರಾನ್ಸ್‌ಫರ್ ಆದದ್ದು ಪತ್ರಿಕೆಗಳಲ್ಲಿ ಬರುತ್ತದೆ. ಬಂದ ಒಂದೆರಡು ದಿವಸಗಳಲ್ಲಿಯೇ ಅಥವಾ ಮೂರನೇ ದಿವಸವೇ ಬದಲಾವಣೆಯಾಗುತ್ತದೆ. ಒಂದು ವರ್ಷ ಕೂಡ ಒಬ್ಬರನ್ನು ಒಂದು ಜೋನ್ ಅಥವಾ ಒಂದು ರೇಂಜ್‌ನಲ್ಲಿ ಇಡತಕ್ಕದ್ದು ಇಲ್ಲ. ಇವತ್ತು ಸಿಕ್ಕಾಪಟ್ಟೆ ಅಲ್ಲ, ಹುಚ್ಚಾಪಟ್ಟೆ ಅಲ್ಲ, ಹುಚ್ಚಾಬಟ್ಟೆ ಎಂದು ಹೇಳಿದರೂ ಕೂಡ ಈ ಸರ್ಕಾರಕ್ಕೆ ಏನಾದರು ತಗಲುತ್ತದೆಯೋ ಏನೋ ಗೊತ್ತಿಲ್ಲ ಈ ರೀತಿ ಮಾಡಿದರೆ ಏನಾಗುತ್ತದೆ ? ಕೊನೆಗೆ ಡಿಮಾರಲೈಸ್ ಆಗುತ್ತದೆ. You will be demoralising the whole police force ಇಲ್ಲಿಂದ ಕೇಂದ್ರಕ್ಕೆ ಹೋದಂತಹ ನಮ್ಮ ಅಧಿಕಾರಿಗಳು, ಇಲ್ಲಿಂದ ಹೋದ ಹರ್ಲಂಕರ್‌ರವರು ಅತ್ಯಂತ ಉನ್ನತ ಮಟ್ಟದಲ್ಲಿದ್ದಾರೆ. ಇಡೀ ದೇಶದ ಜವಾಬ್ದಾರಿಯನ್ನು ಒಬ್ಬ ಅಧಿಕಾರಿ ವಹಿಸಿಕೊಳ್ಳುತ್ತಾರೆ. ಜೋಗಿಂದರ್ ಸಿಂಗ್ ಇಲ್ಲಿಗೆ ಬಂದರು, ಪುನಃಚಂಡಿಗಡಕ್ಕೆ ಹೋಗಿ ಪ್ರಮುಖವಾದ ಹುದ್ದೆಯಲ್ಲಿದ್ದಾರೆ. ರಾಷ್ಟ್ರದ ರಕ್ಷಣೆ ಪ್ರಾಣಹಾನಿ ಮತ್ತಿತರ ಹೊಣೆಗಾರಿಕೆ ಕೆಲಸಗಳನ್ನು ನಿರ್ವಹಿಸಿದಂತಹ ಅಧಿಕಾರಿಗಳು ಅನೇಕರು ಇದ್ದಾರೆ. ಪೋಲಿಸ್ ಅಧಿಕಾರಿಗಳು ಬೇರೆ ಬೇರೆ ರೀತಿಯಲ್ಲಿ ಕೆಲಸ ಮಾಡಿದ್ದಾರೆ. ಕೇಂದ್ರದ ಪೋಸ್ಟಿಂಗ್ ಬಂದರೆ ಓಡಿ ಹೋಗತಕ್ಕ ಪರಿಸ್ಥಿತಿಯಲ್ಲಿ ನಮ್ಮ ಅಧಿಕಾರಿಗಳು ಇದ್ದಾರೆ. ಅಂತಹ ಪರಿಸ್ಥಿತಿಯನ್ನು ತಾವು ನಿರ್ಮಾಣ ಮಾಡಿದರೆ ನೈತಿಕ ಧೈರ್ಯದಿಂದ ಕೆಲಸ ಮಾಡುವುದಕ್ಕೆ ಸಾಧ್ಯವಿಲ್ಲ. ಈ ರೀತಿಯಾದರೆ ಯಾವರೀತಿಯಲ್ಲಿ ಕ್ರೈಮ್ ರೇಟನ್ನು ಕಡಿಮೆ ಮಾಡುವುದಕ್ಕೆ ಸಾಧ್ಯ ? ಇದರಿಂದ ಕಾನೂನಿನ ವ್ಯವಸ್ಥೆಯನ್ನು ಸರಿಮಾಡುವುದಕ್ಕೆ ಆಗುತ್ತದೆಯೋ ಎಂಬುದನ್ನು ತಾವು ನೋಡಬೇಕು. ನಮಗೆ ಬೇಸರ ಎನಿಸುತ್ತದೆ, ಏಕೆಂದರೆ ಕೆಲವು ದಿವಸಗಳ ಹಿಂದೆ ಪತ್ರಿಕೆಯಲ್ಲಿ ಲೀಡ್ ಆರ್ಟಿಕಲ್ ಬಂದಿತ್ತು. ಯಾವ ಪತ್ರಿಕೆ ಎಂಬುದು ನನಗೆ ಮರೆತು ಹೋಗಿದೆ, ಐ.ಎ.ಎಸ್. ವರ್ಸಸ್ ಐ.ಪಿ.ಎಸ್. ಈ ರೀತಿಯಲ್ಲಿ ಪರಸ್ಪರ ಕ್ಲಾಶ್ ಮಾಡತಕ್ಕಂಥ, ಸಂಘರ್ಷಣೆ ಮಾಡತಕ್ಕಂಥ ಹಂತಕ್ಕೆ ಈ ಅಧಿಕಾರಿಗಳನ್ನು ತಂದುಬಿಟ್ಟರೆ ಅವರು ಐ. ಎ. ಎಸ್. ಅಧಿಕಾರಿಗಳು ಇರಬಹುದು ಅಥವಾ ಐ. ಪಿ. ಎಸ್. ಅಧಿಕಾರಿಗಳು ಇರಬಹುದು ಅಷ್ಟು ಸೌಹಾರ್ದಯುತವಾದ ವಾತಾವರಣ ಇದ್ದುದನ್ನು, ಸಂಪೂರ್ಣವಾಗಿ ಆಡಳಿತ ವ್ಯವಸ್ಥೆಯನ್ನು ಇವತ್ತು ಹಾಳುಗೆಡವಿದ್ದೀರೆಂದು ಹೇಳಿದರೆ ತಪ್ಪಾಗಲಾರದು, ಅತಿಶಯೋಕ್ತಿಯಾಗಲಾರದು. ಏಕೆಂದರೆ ಅವರಿಗೆ ಸರಿಯಾದ ಪ್ರಮೋಶನಲ್ ಅಪಾರ್ಚುನಿಟೀಸ್ ಇಲ್ಲ. ಈ ತರಹ ತಾರತಮ್ಯ ಆಗುವಹಾಗೆ ನೋಡತಕ್ಕ, ಅಂದರೆ ಐ. ಎ. ಎಸ್. ಅಧಿಕಾರಿಗಳಿಗೆ ಹೆಚ್ಚಿನ ಅವಕಾಶ ಮಾಡಿಕೊಟ್ಟಿದ್ದೇವೆ ಅಥವಾ ಐ. ಪಿ. ಎಸ್. ಅಧಿಕಾರಿಗಳಿಗೆ ಕಡಿಮೆ ಗಮನ ಕೊಟ್ಟಿದ್ದೇವೆ ಎಂದು ಈ ರೀತಿ ಮಾಡುವುದಲ್ಲ. ಇವತ್ತು ಸಂಪೂರ್ಣವಾಗಿ ಆಡಳಿತ ವೈಖರಿಯನ್ನು ನೋಡಿದರೆ ಒಂದುಕಡೆ ಐ. ಎ. ಎಸ್, ಐ. ಪಿ. ಎಸ್:. ಮತ್ತೊಂದು ಕಡೆ ಐ. ಎ. ಎಸ್, ನಾನ್ ಐ. ಎ. ಎಸ್, ಕೆ. ಎ. ಎಸ್. ಕೇಡರ್ ಈ ರೀತಿ ಪ್ರತಿಹಂತದಲ್ಲೂ ಸಂಘರ್ಷಕ್ಕೆ ದಾರಿಮಾಡಿಕೊಂಡು ಅವರವರ ಆಡಳಿತದಲ್ಲಿ ಸಂಘರ್ಷಣೆ ಬಂದುಬಿಟ್ಟರೆ ಅವರು ಅವರವರ ಹಕ್ಕನ್ನು ಅವರವರ ಆಸಕ್ತಿ

ಯನ್ನು ಕಾಪಾಡುವುದರಲ್ಲಿ ತೊಡಗುತ್ತಾರೆಯೇ ಹೊರತು ಆಡಳಿತವನ್ನು ಚುರುಕುಮಾಡುವಂಥ ಅಥವಾ ಧಕ್ಷ ಆಡಳಿತವನ್ನು ಕೊಡತಕ್ಕಂಥ ಪರಿಸ್ಥಿತಿ ಬರುವುದಿಲ್ಲ. ಆದರೆ ರಾಜಕಾರಣಿಗಳು ಬಹಳ ಸುಲಭವಾಗಿ ಹೇಳಬಹುದು. ಅವರ ಆಸಕ್ತಿ ಕಡೆಗೆ ಹೆಚ್ಚು ಗಮನ ಕೊಡುತ್ತಾರೆ ಎಂದು. ಹೌದು When it comes to their own interest, it has got to be taken care of by the people who are in the higherups in administration. ಇದು ನಮ್ಮ ಕರ್ತವ್ಯ. ರಾಜಕೀಯವಾಗಿ ಒಂದು ಪಕ್ಷ ಅಧಿಕಾರದಲ್ಲಿ ಇರುವಾಗ ಎಲ್ಲಾ ಹಂತದ ಅಧಿಕಾರಿಗಳನ್ನು ಸರಿಸಮಾನವಾಗಿ ನೋಡಿ ಅವರಲ್ಲಿ ಯಾವುದೇ ರೀತಿಯ ನೈತಿಕ ಧೈರ್ಯ ಕುಸಿಯದಂತೆ ನೋಡತಕ್ಕಂಥ ಜವಾಬ್ದಾರಿ ಅಧಿಕಾರದಲ್ಲಿರತಕ್ಕಂಥವರಿಗೆ ಇರಬೇಕು. ಆದರೆ ಒಬ್ಬ ಅಧಿಕಾರಿಯನ್ನು ಮತ್ತೊಬ್ಬ ಅಧಿಕಾರಿಯ ಮೇಲೆ ಎತ್ತಿಕಟ್ಟತಕ್ಕಂಥ ಕೆಲಸವನ್ನು ಅಧಿಕಾರದಲ್ಲಿ ಕುಳಿತಿರತಕ್ಕಂಥ ರಾಜಕೀಯ ಶಕ್ತಿಗಳು ಮಾಡಿದರೆ ಇವೆಲ್ಲ ಸಮಸ್ಯೆಗಳು ಬರುತ್ತವೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇವತ್ತು ಅತ್ಯುತ್ತಮವಾದಂಥ ಪೋಲೀಸ್ ಜಿಲ್ಲಾಧಿಕಾರಿ ಅವರು ಒಂದು ವರ್ಷ ಕೂಡ ಇರಲಿಲ್ಲ. ಅವರನ್ನು ಟ್ರಾನ್ಸಫರ್ ಮಾಡಿದ್ದಾರೆ, ಯಾರೋ ನನಗೆ ಹೇಳಿದರು, ಏನೆಂದರೆ ಜಿಲ್ಲಾಧಿಕಾರಿಗಳನ್ನು ಕೂಡ ವರ್ಗಾವಣೆ ಮಾಡಬೇಕೆಂದು ಇದ್ದಾರಂತೆ. ಇವತ್ತು ಇಬ್ಬರು ಅಧಿಕಾರಿಗಳು ಅವರವರೊಳಗೇ ಹೆಚ್ಚುಕಡಿಮೆ ಇದೆಯೋ ಅಥವಾ ಇದ್ದರೂ ಕೂಡ It is for the Chief Minister. You must call them. Please don't demoralise young offcers. ನಿಮಗೆ ಬಹಳ ಸುಲಭ. ಒಬ್ಬರನ್ನು ಎತ್ತಿಹಾಕಬಹುದು ಮತ್ತು ಅವರು ಬೇರೆ ಕಡೆಗೆ ಹೋಗ ಬಹುದು. ಆದರೆ A day will come when they will lose interest. ಮೈನಾರಿಟಿ ಕಮ್ಯುನಿಟಿಗಳಿಗೆ ಸೇರಿದಂಥ ಅಧಿಕಾರಿಗಳನ್ನು ಅಥವಾ ಹಿಂದುಳಿದ ವರ್ಗಗಳಿಗೆ ಸೇರಿದಂಥ ಅಧಿಕಾರಿಗಳನ್ನು ಫುಟ್‌ಬಾಲ್ ಕಿಕ್ ಮಾಡಿದಹಾಗೆ ಅವರನ್ನು ಕಿಕ್ ಮಾಡಿಕೊಂಡು ಸ್ವೇಚ್ಛಾನುಸಾರ ವಾಗಿ ವರ್ಗಾವಣೆ ಮಾಡತಕ್ಕಂಥ ನಿಮ್ಮ ನೀತಿ ಏನಿದೆ, ಅದು ಇಡೀ ರಾಜ್ಯದ ಆಡಳಿತ ವ್ಯವಸ್ಥೆಗೆ ಮಾರಕಪ್ರಾಯವಾಗುತ್ತದೆ ಎಂಬುದನ್ನು ಇವತ್ತು ನೆನಪಿನಲ್ಲಿಟ್ಟುಕೊಳ್ಳಬೇಕು. ಇದನ್ನು ರಿಪೇರಿ ಮಾಡುವುದಕ್ಕೆ ಬಹಳ ಕಷ್ಟವಾಗಬಹುದು, ಇವತ್ತು ಈ ರಾಜ್ಯದಲ್ಲಿ ಆಡಳಿತವನ್ನು ನಡೆಸತಕ್ಕಂಥ ವೈಖರಿಯನ್ನು ನೋಡಿದರೆ ನಿಮಗೆ ಯಾವುದೇ ರೀತಿಯ ಒಂದು ಒಳ್ಳೆಯ ರಿಸಲ್ಟ್ ಕೂಡ ಆಡಳಿತದಲ್ಲಿ ಬರುವುದಕ್ಕೆ ಸಾಧ್ಯವಿರುವುದಿಲ್ಲ. ಇದು ಎಲ್ಲಾ ಹಂತದಲ್ಲೂ ಕೂಡ ಇದೆ ಎಂಬುದನ್ನು ನೀವು ಇವತ್ತು ನೋಡಬೇಕಾಗುತ್ತದೆ.

ಅಧ್ಯಕ್ಷರೇ, ಈಗ ಫೈನಾನ್ಸ್ ಇಲಾಖೆ ಬಗ್ಗೆ ಎರಡು ಮಾತು, ಇವರ ವರದಿಯನ್ನು ನಾವು ನೋಡಿದರೆ ಈಗ ಕರ್ನಾಟಕ ಮಾರಾಟ ತೆರಿಗೆ ವಿಷಯ ೫ನೇ ಪುಟದಲ್ಲಿದೆ. ಇದರಲ್ಲಿ ಅರಿಯರ್ಸ್ ೮೩ ರಿಂದ ೮೪ವರೆಗೆ ನೋಡಿದರೂ ಕೂಡ ವರ್ಷದ ಕೊನೆಯಲ್ಲಿ ಇದ್ದಂಥ ಶಿಲ್ಕು ಜಾಸ್ತಿಯಾಗುತ್ತಲೇ ಇದೆ. ೮೬-೮೭ರಲ್ಲಿ ವರ್ಷದ ಕೊನೆಗೆ ೧ ಲಕ್ಷ ೯೭ ಸಾವಿರ ೬೦೦ ಕೇಸಸ್ ಇದ್ದರೆ ೮೭-೮೮ ರಲ್ಲಿ ಡಿಸೆಂಬರ್‌ವರೆಗೆ, ಮಾರ್ಚ್‌ನಲ್ಲಿ ಕೂಡ ಅಲ್ಲ, ಇದು ೨ ಲಕ್ಷ ೨೪ ಸಾವಿರದ ೩೭೦ ಇವೆ ಬಹುಶಃ ಮಾರ್ಚಿ ೮೮ಕ್ಕೆ ಹೋದಾಗ ಇದು ಮತ್ತೆ ಜಾಸ್ತಿಯಾಗುತ್ತದೆ. ಹೀಗಾದರೆ ಎಫಿಶಿಯೆನ್ಸಿ ಎಲ್ಲಿದೆ ? ಇಷ್ಟೆಲ್ಲ ಕಂಪ್ಯೂಟರ್ ಸಿಸ್ಟಮ್, ಮಾಡರನೈಸೇಶನ್ ಇದ್ದರೂ ಕೂಡ ಇಷ್ಟು ಬಾಕಿ ಇದ್ದರೆ ಯಾವರೀತಿ ಕೆಲಸ ಮಾಡುವುದಕ್ಕೆ ಆಗುತ್ತದೆ ಎಂಬುದನ್ನು ಇವತ್ತು ತಾವು ಪರಿಶೀಲನೆ ಮಾಡಬೇಕು.

೧-೦೦ ಪಿ. ಎಂ.

ಇದೇರೀತಿಯಲ್ಲಿ ಪೇಜ್ ೫ರಲ್ಲಿ ೧೯೮೨-೮೩ರಿಂದ ೧೯೮೭-೮೮ರ ವರೆಗೆ ಮಾರಾಟ ತೆರಿಗೆಯ ಬೇಡಿಕೆ ಸಂಗ್ರಹಣೆ ಮತ್ತು ಶಿಲ್ಕು ಅಂಕಿಗಳು ಈ ಕೆಳಕಂಡತಿವೆ. ೧೯೮೨-೮೩ರಲ್ಲಿ ಅರಿಯರ್ಸ್ ಎಷ್ಟಿತ್ತು ಎಂದರೆ ೬೭.೦೧ ಕೋಟಿ ರೂಪಾಯಿಗಳು. ಈಗ ಏಪ್ರಿಲ್‌ನಿಂದ ಸೆಪ್ಟಂಬರ್‌ವರೆಗೆ ೧೫೨.೮೭ ಕೋಟಿ ರೂಪಾಯಿಗಳು. ಇದಕ್ಕೆ ನೀವು ಏನು ಉತ್ತರ ಕೊಡುತ್ತೀರಿ ಎಂದರೆ ಹೈಕೋರ್ಟ್‌ನಲ್ಲಿ ಮತ್ತು ಬೇರೆ ಬೇರೆ ಕಡೆಗಳಲ್ಲಿ '' ಸ್ಟೇ '' ಇದೆ ಅದರಿಂದ ವಸೂಲ್ಮಾಡುವುದಕ್ಕೆ ಆಗಲಿಲ್ಲ ಎಂದು ಹೇಳಬಹುದು, ಯಾವರೀತಿಯಲ್ಲಿ ಸ್ಟೇ ಇದೆ ಎಂಬುದು ತಮಗೂ ಗೊತ್ತಿದೆ. ನಮಗೂ ಗೊತ್ತಿದೆ. ಈ ಸ್ಟೇ ವೆಕೇಟ್ ಮಾಡುವುದಕ್ಕೆ ಪ್ರಯತ್ನ ಮಾಡದಿದ್ದರೆ, ಆಡಳಿತದಲ್ಲಿ ಸರಿಯಾದ ರೀತಿ ವ್ಯವಹಾರ ಮಾಡದಿದ್ದರೆ ಆ ಕೆಂಪು ಬಿಲ್ಡಿಂಗ್‌ನಲ್ಲಿ ಕೇಸಸ್ ಇನ್ನು ಜಾಸ್ತಿ ಯಾಗುತ್ತವೆ. ರಿಟ್ ಪಿಟಿಷನ್‌ಗಳು ಮತ್ತು ಅವಕ್ಕೆ ಸ್ಟೇ ಸಿಗತಕ್ಕಂತಾದ್ದು, ಆಡಳಿತದಲ್ಲಿ ಎಷ್ಟು ಲೋಪದೋಷಗಳನ್ನು ಮಾಡುತ್ತೇವೆ, ಅಷ್ಟು ಈ ಸ್ಟೇ ಆರ್ಡರುಗಳು ಸಿಗುತ್ತವೆ. ಮುಖ್ಯ ಮಂತ್ರಿಗಳು ಸರ್ಕಾರದ ಪರವಾಗಿ ಉತ್ತರ ಕೊಡುವಾಗ ಹೈಕೋರ್ಟಿನಲ್ಲಿ ಸ್ಟೇ ಇದೆಯೆಂದರೆ, ಅದ

ತಮ್ಮ ಅವಿವೇಕ ಮತ್ತು ಅದಕ್ಷತೆಯನ್ನು ತೋರಿಸುತ್ತದೆಯೇ ಹೊರತು, ಇದರಿಂದ ತಾವು ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಹಿಂದಿನ ೫ ವರ್ಷಗಳಲ್ಲಿ ಆದ ಆದಾಯದ ಜಮೆಗಳನ್ನು ನೋಡಿದರೆ, ೧೯೮೬-೮೭ರಲ್ಲಿ Growth Rate in terms of Sales Tax is only 9.6 ಪರ್ಸೆಂಟ್ ಆದರೆ, ೧೯೮೬-೮೭ರಲ್ಲಿ ವಸೂಲಾದ ಆದಾಯ ಮತ್ತು ವಾರ್ಷಿಕ ಬೆಳವಣಿಗೆ ಕರ್ನಾಟಕ ಮಾರಾಟ ತೆರಿಗೆ ಮತ್ತು ಕೇಂದ್ರ ಮಾರಾಟ ತೆರಿಗೆ ಎರಡೂ ಸೇರಿ ೮.೫ ಪರ್ಸೆಂಟ್, ೧೯೮೫-೮೬ರಲ್ಲಿ ೧೧.೮ ಪರ್ಸೆಂಟ್, ೧೯೮೭-೮೮ರಲ್ಲಿ it is a provisional one not a final one. This is not a sound financial management. Even in the all India picture ನೋಡಿದರೆ, ಸೇಲ್ಸ್ ಟ್ಯಾಕ್ಸ್ ಆಗಲೀ, ಇನ್‌ಕಮ್ ಟ್ಯಾಕ್ಸ್ ಆಗಲೀ ನೋಡಿದರೆ, you see Central picture also. There is some manipulation every where just to suit. ಫೆಬ್ರವರಿ, ಮಾರ್ಚಿಗೆ ನೀವು ಅಡ್ವಾನ್ಸ್ ಟ್ಯಾಕ್ಸ್ ವಸೂಲ್ಮಾಡುತ್ತೀರಿ. With adhoc approach in the management of finance ಅದರೂ ಖಾಯಂ ಆಗಿ ಆರ್ಥಿಕ ಸ್ಥಿತಿ ನುಚ್ಚುನೂರಾಗಿದೆ. It is predominant, for the destruction of financial system in Karnataka. ಇವತ್ತು ಇನ್ನೂ ಅನೇಕ, ಟ್ಯಾಕ್ಸ್ ಕಲೆಕ್ಷನ್ ಇರಬಹುದು, ಎಕ್ಸೈಸ್ ಕಲೆಕ್ಷನ್ ಇರಬಹುದು, ಬೇರೆ ಯಾವುದೇ ಇರಬಹುದು, ಇವೆಲ್ಲವೂ ತಾತ್ಕಾಲಿಕ, ಇವತ್ತು ಖಜಾನೆ ಖಾಲಿ ಆಗಿದೆ. ಹಣ ತುಂಬಿಸಬೇಕೆಂದು ಏನಾದರೂ ಮಾಡಿ ವಸೂಲ್ಮಾಡಬೇಕು. It will demoralise the officers, paying public. ಇವತ್ತು ಸಾಕಷ್ಟು ಅನಾಹುತವಾಗುತ್ತಿದೆ, ಸಾಕಷ್ಟು ತೊಂದರೆಯಾಗುತ್ತಿದೆ. They cannot manage because they will be having their own budget. Each industrialist, businessman has got his own budget. He must have to provide for 1987-88 some component for payment of tax. ನೀವು ಏನು ಮಾಡುತ್ತೀರಿ, ಫೆಬ್ರವರಿ, ಮಾರ್ಚಿನಲ್ಲಿ ಅವನ ಹಣ ವಸೂಲ್ಮಾಡುತ್ತೀರಿ, in that particular year ಏನಾಗುತ್ತದೆ, you will be chasing the problems, or sometimes you are chased after the problems. ಇದರಿಂದ ಏನಾಗುತ್ತದೆ ಎಂದರೆ ಸಮಸ್ಯೆಗಳ ಸುಳಿಯಿಂದ ೫ ವರ್ಷ ಕೂಡ ಹೊರಗೆ ಬರುವುದಕ್ಕಾಗುವುದಿಲ್ಲ ಎಂದು ಹೇಳಿದರೆ, ಇದು ಯಾವ ತರಹದ ಮ್ಯಾನೇಜ್‌ಮೆಂಟ್ ? It is not a good management system. ಇವತ್ತು ಈ ಒಂದು ಕಾರ್ಯಕ್ರಮವನ್ನು ತಾವು ನಿಲ್ಲಿಸಬೇಕಾಗಿದೆ. ಈಗ ಅನೇಕ ಸಂದರ್ಭಗಳಲ್ಲಿ ಇಲ್ಲಿ ಪ್ರಶ್ನೆಗಳನ್ನು ಎತ್ತಿದಾಗ ತಾವು ರೆಡಿಮೇಡ್ ಉತ್ತರ ಹೇಳುತ್ತೀರಿ. ಯಾವುದೇ ಚೆಕ್ ಬೌನ್ಸ್ ಆಗುತ್ತಿಲ್ಲ, ನೀವು ನನಗೆ ಚೆಕ್ ಹಿಂದೆ ಹೋಗಿರುವುದಕ್ಕೆ ನಿದರ್ಶನ ಕೊಡಿ ಎಂದು ಹೇಳುತ್ತೀರಿ. ತಾವು ವರದಿ ತರಿಸಿ ನೋಡಬಹುದು. ಜಿಲ್ಲಾಪರಿಷತ್ ಅಕೌಂಟ್ಸ್ ಇರಬಹುದು, ಮಂಡಲ್ ಪಂಚಾಯತ್ ಅಕೌಂಟ್ಸ್ ಇರಬಹುದು, ಈಗಲೂ ಕೂಡಾ ಮಂಡಲ್‌ಗಳು ಒಂದು ತಿಂಗಳಲ್ಲಿ ಐದು ಸಾವಿರಕ್ಕಿಂಥ ಹೆಚ್ಚು ಖರ್ಚು ಮಾಡುವ ಹಾಗೆ ಇಲ್ಲ. There is a ban even now. Since April the Ban is there. ಏನು ಇದರ ಅರ್ಥ ಅವರ ಹಣವನ್ನು ಖರ್ಚು ಮಾಡುವುದಕ್ಕೆ ಅವರಿಗೇ ಆಗುತ್ತಿಲ್ಲ. ಚೆಕ್ ಬೌನ್ಸ್ ಆಗದೇ ಇದ್ದರೂ ಬಿಲ್ಲನ್ನು ಕಳುಹಿಸಿದರೆ ಅ ಬಿಲ್ಲನ್ನು ಟ್ರೆಜರಿಯವರು ಸ್ವೀಕಾರ ಮಾಡುತ್ತಿಲ್ಲ, ಇದರಲ್ಲಿ ಬೌನ್ಸ್ ಪ್ರಶ್ನೆಯೇ ಇಲ್ಲ, ಆದರೆ ಟ್ರೆಜರಿಯವರು ಬಿಲ್ಲನ್ನೇ ಸ್ವೀಕಾರ ಮಾಡುತ್ತಿಲ್ಲ. ಇವತ್ತು ಖಜಾನೆ ಇಲಾಖೆಯನ್ನು ತಾವು ಸಂಪೂರ್ಣವಾಗಿ ದುರುಪಯೋಗ ಮಾಡಿರುತ್ತೀರಿ. ಟ್ರೆಜರಿ ಮ್ಯಾನ್ಯುಯಲ್ ಏನಿದೆ ಅದನ್ನು ಡಿಸ್ಪ್ಯಾಟ್ ಮಾಡತಕ್ಕ ಕೆಲಸ ತಾವು ಮಾಡಿರುತ್ತೀರಿ. ಇದು ಇಲ್ಲಿಗೇ ನಿಲ್ಲುವುದಿಲ್ಲ. ಒಂದು ರೀತಿಯಿಂದ ಇದು ವಿಶಸ್ ಸರ್ಕಲ್. ಈ ವಿಶಸ್ ಸರ್ಕಲ್‌ನ್ನು ತಾವು ಪ್ರವೇಶ ಮಾಡಿ ಆಗಿದೆ. They cannot come out of it. That is how it has happened. ಈ ವಿಶಸ್ ಸರ್ಕಲ್‌ನ್ನು ಸ್ನ್ಯಾಪ್ ಮಾಡಿ. ಇದನ್ನು ನಾನು ತಮಾಷೆಯಾಗಿ ಹೇಳುತ್ತಿಲ್ಲ. ಬಹಳ ಗಂಭೀರವಾಗಿ ಹೇಳುತ್ತಿದ್ದೇನೆ. We have excellent cadre of officers. ಇಲ್ಲಿ ದಕ್ಷತೆ ಇಲ್ಲದಿರತಕ್ಕ ಅಧಿಕಾರಿಗಳು ಯಾರು ಇಲ್ಲ. ಫೈನಾನ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಇರಬಹುದು, ಸೇಲ್ಸ್‌ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ನಲ್ಲಿ ಇದ್ದಾರೆ, ಅಥವಾ ಜಿ. ಎ. ಡಿ. ನಲ್ಲಿ ಇದ್ದಾರೆ. ಎಲ್ಲಾ ಕಡೆಯಲ್ಲೂ ಇದ್ದಾರೆ. We are proud of them. They can deliver goods but you don't allow them to deliver goods. ನಿಮ್ಮ ತಾಳಕ್ಕೆ ಸರಿಯಾಗಿ ಕುಣಿಯುತಕ್ಕ ಪರಿಸ್ಥಿತಿ ಆಗಬೇಕು. ನಿಮ್ಮ ಡೈರಕ್ಷನ್ ಇಲ್ಲದೆ ಆಡಳಿತ ಮಾಡತಕ್ಕ ಪರಿಪಾಠ ತಾವು ಬೆಳೆಸಿಕೊಟ್ಟಿಲ್ಲ ಅಥವಾ ತಾವು ಅವರಿಗೆ ಆಡಳಿತ ನಡೆಸುವುದಕ್ಕೆ ಬಿಡುತ್ತಿಲ್ಲ. ಇವತ್ತು ಈ ಪರಿಸ್ಥಿತಿ ಎಲ್ಲಾ ವಿಚಾರದಲ್ಲೂ ಕೂಡಾ ಬಂದಿದೆ. ಇದನ್ನು

ನಿಲ್ಲಿಸದೇ ಇದ್ದರೇ ತಾವು ಆಡಳಿತ ರಥವನ್ನು ಮುಂದೆನಡೆಸಿಕೊಂಡು ಹೋಗಲಿಕ್ಕೆ ಖಂಡಿತವಾಗಿ ಸಾಧ್ಯವಾಗುವುದಿಲ್ಲ, They have lost all initiative because they look for your direction. Now a few wods on posting of officers. ನಾನು ಈಗಾಗಲೇ ಹೇಳಿದೆ. ಪ್ರತಿಜಿಲ್ಲೆಯೂ ಕೂಡ ಒಂದೊಂದು ರೀತಿಯ ಜಿಲ್ಲೆಗಳಾಗಿವೆ. ಒಂದೊಂದು ರೀತಿಯ ಜನಾಂಗ ಇದೆ. ಜಾತಿ ಇದೆ, ಇದೆಲ್ಲಾ ಇರುವಂತಹದ್ದೇ. ಹಿಂದೆಲ್ಲಾ ಒಂದು ಸಂಪ್ರದಾಯ ವನ್ನು ನಾವು ಇಟ್ಟುಕೊಂಡಿದ್ದೆವು. ದೇವರಾಜ ಅರಸರು ಇರುವಾಗ ನಾವು ಏನು ಮಾಡುತ್ತಿದ್ದೇವೆ ಎಂದರೆ, ಪರ್ಟಿಕ್ಯುಲರ್ ಆಗಿ ಒಂದು ಜಿಲ್ಲೆಯಲ್ಲಿ ಒಂದು ಮೇಜರ್ ಕಮ್ಯುನಿಟಿ ಇದ್ದರೆ ಡಾಮಿನೆಂಟ್ ಕಮ್ಯುನಿಟಿ ಇದ್ದರೆ From top to bottom ಎಸ್. ಪಿ. ಯಿಂದ ಸಬ್‌ಇನ್ಸ್‌ಪೆಕ್ಟರ್‌ವರೆಗೆ ಕೂಡ ನಾವು ಪರಿಶೀಲನೆ ಮಾಡಿಕೊಂಡು ಅಂತಹ ಕಡೆಯಲ್ಲಿ We never used to have a person who belongs to dominant or major community so that the downtrodden could be protected. ಪೋಲೀಸ್ ಇಲಾಖೆಯನ್ನು ತೆಗೆದುಕೊಳ್ಳಿ. ಹೇಗೆ ಪೊಲಿಟಿಕಲ್ ಇಂಟರ್‌ಫಯರೆನ್ಸ್ ನಡೆಯುತ್ತಿದೆ. ನಾವು ಎಂ. ಎಲ್. ಎ. ಗಳು ಏನು ಮಾಡುತ್ತೇವೆಂದರೆ here the political interference comes because we want our own community menposted. ಇದು ನಾವು ಹೇಳಿದಹಾಗೆ ನಡೆಯುವ ಸಬ್‌ಇನ್ಸ್‌ಪೆಕ್ಟರ್, ತಹಸೀಲ್ದಾರ್ ಬೇಕೆಂದು ಅದೊಂದು ಕಾಲದಲ್ಲಿ ಎಂ. ಎಲ್. ಎ. ಗಳು ಹೇಳುವಂತಹದ್ದು ಇತ್ತು. It has again been degraded. ನಮ್ಮ ಜಾತಿ ಆಗಬೇಕು ಈ ಪರಿಸ್ಥಿತಿ ಕೂಡ ಇವತ್ತು ಬಂದಿದೆ. ಹೀಗಾದರೆ ಯಾವರೀತಿ ಅಡ್ಮಿನಿಸ್ಟ್ರೇಷನ್ ತಾವು ಮಾಡುತ್ತೀರಿ? Any officer will do for any job. ಇಂತಹ ಪರಿಸ್ಥಿತಿ ಸರಕಾರ ದಲ್ಲಿ ಬಂದಿದೆ. ನಿಮ್ಮ ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಕೂಡ ನೋಡುವುದಿಲ್ಲ. ಹೋಮ್ ಡಿಪಾರ್ಟ್‌ಮೆಂಟ್ ಕೂಡ ನೋಡುವುದಿಲ್ಲ. ಯಾರಿಗೂ ಪ್ರೊಟೆಕ್ಷನ್ ಕೊಡುವುದಕ್ಕೆ ಆಗುವುದಿಲ್ಲ. ಯಾರಿಗೆ ಕೊಡುತ್ತೀರಿ. ಇದಕ್ಕಾಗಿ Many police officers get into problems, from top to bottom. ಈ ಪರಿಸ್ಥಿತಿ ಇವತ್ತು ಬರುತ್ತಿದೆ. ಇದನ್ನು ತಾವು ಬದಲಾವಣೆ ಮಾಡದೇ ಇದ್ದರೆ you can't provide efficient administration, which can really sereve the people at the bottom level of the society. ಇವತ್ತು ಬ್ಯಾಕ್‌ವರ್ಡ್ ಕ್ಲಾಸಸ್ ಬಗ್ಗೆ ನಮ್ಮ ಬಸವಲಿಂಗಪ್ಪನವರು ಹೇಳಿದರು. The whole philosophy has been destroyed by this present Government. ವೆಂಕಟಸ್ವಾಮಿ ಕಮಿಷನ್ ರಚನೆ ಮಾಡಿ ೩೦-೪೦ ಲಕ್ಷ ರೂಪಾಯಿ ಖರ್ಚು ಮಾಡಿದಿರಿ. ಆ ವರದಿಯನ್ನು ಅನ್‌ಲೈಸ್ ಮಾಡಲಿಕ್ಕೆ ನಿಮ್ಮ ಅಧಿಕಾರಿಗಳು ಇದ್ದರು, ತಮ್ಮ ಮಂತ್ರಿಗಳು ಇದ್ದರು. ಆದ್ದರಿಂದ ಆ ವರದಿಯನ್ನು ವಿಶ್ಲೇಷಣೆ ಮಾಡಿಕೊಂಡು ಯಾವುದನ್ನು ಅನುಷ್ಠಾನ ಮಾಡಬೇಕು ಯಾವುದನ್ನು ಬಿಡಬೇಕು ಎಂದು ತಾವು ಯೋಚನೆ ಮಾಡಲುಹೋಗಲಿಲ್ಲ. You have become pawns in the hands of dominant communities. ಇದನ್ನು ತಾವು ಮಾಡಿರುತ್ತೀರಿ. ಇದು ಎಲ್ಲರಿಗೂಗೊತ್ತಿದೆ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಒಂದು ನಿಮಿಷ ಈಲ್ಡ್ ಆಗುವುದಾದರೆ......

ಶ್ರೀ ಎಂ. ವೀರಪ್ಪಮೊಯ್ಲಿ.—ಇಲ್ಲ ಟೈಮ್ ಇರುವುದೇ ಬಹಳ ಕಡಿಮೆ. ತಾವೇನ ಹೇಳುತ್ತೀರಿ ಎನ್ನುವುದು ನನಗೆ ಗೊತ್ತಿದೆ. You have a ready made answer. I will proceed.

SRI G. BASAVANNAPPA.—Some members have given a dissent note It was not a unanimous report.

ಶ್ರೀ ಎಂ. ವೀರಪ್ಪಮೊಯ್ಲಿ:—ಇದು ಯುನಾನಿಮಸ್ ರಿಪೋರ್ಟ್ ಆದರೆ ಅದರಲ್ಲಿ ಕೆಲವರು ಬರುವುದಿಲ್ಲವೆಂದು ಹೇಳಿ ನೀವು ಹೆದರಿಕೊಂಡು ಮತ್ತೊಂದು ಆಯೋಗವನ್ನು ರಚನೆ ಮಾಡಿದಿರಿ. If any Ministers had interest interest in the backward class in their heart, they would have immediately come out of this Ministry That is why.........

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಈಗ ಕೇಂದ್ರ ಸರ್ಕಾರದ ಮುಂದೆ ಮಂಡಲ್ ಆಯೋಗದ ವರದಿ ಇದೆ. ಆ ಬಗ್ಗೆ ಗಲಾಟೆ ಮಾಡುವವರೆಲ್ಲಾ ಪ್ರತಿ ದಿವಸ ರಾಜೀನಾಮೆ ಕೊಡಬೇಕು. ಆದರೆ ಅದಾಗುವುದಿಲ್ಲ. ಅದನ್ನು ಮಾತ್ರ ಮಾತನಾಡಬಾರದು ? ಬ್ಯಾಕ್‌ವರ್ಡ್ ಕ್ಲಾಸಸ್ ಬಗ್ಗೆ, ಮೈನಾರಿಟಿ ಬಗ್ಗೆ ಎಸ್. ಸಿ. ಎಸ್. ಟಿ. ಬಗ್ಗೆ ಬಡವರ ಬಗ್ಗೆ ಗುತ್ತಿಗೆ ಇರತಕ್ಕಂಥಾದ್ದು ನಿಮಗೆ ನಮಗೇನೂ ಇಲ್ಲ. ನಾವೇನು ಮಾಡಿಲ್ಲ. ನಿಮಗೆಲ್ಲ ವೆಸ್ಟೆಡ್ ಇಂಟ್ರೆಸ್ಟ್ ಇದೆ- ನೀವೇ ಛಾಂಪಿಯನ್ಸ್.

ಶ್ರೀ ಎಂ. ವೀರಪ್ಪಮೊಯ್ಲಿ.—ಮಾನ್ಯ ಸಿಂಧ್ಯಾರವರಿಗೆ ನಾನು ಹೀಲ್ಡ್ ಆದರೆ ಅವರ ರಾಜಕೀಯ ಭಾಷಣವನ್ನೇ ಮಾಡಿದರು. ಆಲ್ ರೈಟ್. ಸನ್ಮಾನ್ಯ ಅಧ್ಯಕ್ಷರೇ ಬ್ಯಾಕ್‌ವರು ಕ್ಲಾಸಸ್ ಬಗ್ಗೆ, ನಾನು ಹಿಲ್ಡ್ ಆಗಿಲ್ಲ. ಮಾನ್ಯ ಅಧ್ಯಕ್ಷರೇ ಬ್ಯಾಕ್ ವರ್ಡ್ ಕ್ಲಾಸಸ್‌ನ ಗುತ್ತಿಗೆ ಅವರಿಗೇ ಇರಲಿ ಎಂದು ಬೇಕಾದರೆ ಕರಾರು ಬರೆದುಕೊಡುತ್ತೇವೆ. ಒಳ್ಳೆಯದು ಮಾಡಿದರೆ ಸಾಕುಗೆ have yielded only to SRI P. G. R. Scindhia thinking that he will. contribute some thing. Alright. ಮಾನ್ಯ ವೆಂಕಟಸ್ವಾಮಿ ರಿಪೋರ್ಟ್‌ನಲ್ಲಿ ಬಹಳ ಒಳ್ಳೆಯ ಅಂಕಿಅಂಶಗಳನ್ನು ಕಲೆಕ್ಟ್ ಮಾಡಿದ್ದರು. ನಾನು ಅದನ್ನೇ ಡಿಟೋ ಫಾಲೋ ಮಾಡಬೇಕೆಂದು ಹೇಳುತ್ತಿಲ್ಲ. ಅದನ್ನು ತಾವೇನು ಮಾಡಿದಿರಿ ? But, you have categorised 99% of the population is backward-classes. ನಿಮ್ಮ ಚಮತ್ಕಾರದಿಂದ ಬ್ಯಾಕ್‌ವರ್ಡ್ ಕ್ಲಾಸಸ್ ಅನ್ನು ತುಳಿದು ಹಾಕಿದಿರಿ, You have gone back to 1974 i.e., earlier period. The egostic aim of the exploitation has set in Karnataka.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ಈಗ ನಾವೊಂದು ಇಂಟೀರಿಯಂ ಆರ್ಡರ್ ಹೊರಡಿಸಿ ಆ ಆಜ್ಞೆಯಲ್ಲಿ ಮೀಸಲಾತಿಯನ್ನು ತಾತ್ಕಾಲಿಕವಾಗಿ ಕೊಟ್ಟಿದ್ದೇವೆ. We have given more weightage to the real backward class, ಎ.ಬಿ. ಗ್ರೂಪ್‌ಗಳಲ್ಲಿ Just verify it. We have given more weightage. We have constituted one-man Commission. The real backward class will be helped now.

ಶ್ರೀ ಎಂ. ವೀರಪ್ಪಮೊಯ್ಲಿ.—ಹೌದು ಅದು ಕಾಣುತ್ತಿದೆ, ಬೆಕ್ಕು ಕೋತಿ ಹುಲಿ ಮತ್ತು ಸಿಂಹ ಇವೆಲ್ಲವನ್ನು ತಾವು ಒಂದೇ ಬೋನ್‌ನಲ್ಲಿ ಹಾಕಿ we have given weightage to ಬೆಕ್ಕು we have given weightage to ಸಿಂಹ ಎಂದು ಹೇಳುತ್ತೀರಿ ಇದರ ಪರಿಣಾಮವಾಗಿ ಇವತ್ತು ಬಡವರು ಹಳ್ಳಿಗಳಲ್ಲಿ ಮತ್ತು ಗ್ರಾಮಗಳಲ್ಲಿ ಹೆದರಿಸುತ್ತಿರುವವರು ಆದ್ದರಿಂದ You have totally destroyed the philosopihy. and the concept of the backward classes. No doubt about it. ಅವರು ಮಂಡಲ ರಿಪೋರ್ಟ್ ಬಗ್ಗೆ ಹೇಳುತ್ತಿದ್ದಾರೆ ಹಾವನೂರು ಕಮಿಷನ್ ರಿಪೋರ್ಟ್ ಜಾರಿಗೆ ಬಂತು. ಆಗ ಸನ್ಮಾನ್ಯ ದಿವಂಗತ ದೇವರಾಜ ಅರಸರಿಗೆ ಪ್ರತಿಭಟನೆ ಬಂತು. He did say in one of the places 'You may be voter to-day. But, there are invisible voters who will support my government. Invisible voters ಇವೊತ್ತು ಮೂಖರಾಗಿರಬಹುದು, ಮಾತನಾಡುವುದಕ್ಕೆ ಬರದೆ ಇರಬಹುದು, ಇಲ್ಲಿಗೆ ಬಂದು ಹೇಳುವ ಶಕ್ತಿ ಇಲ್ಲದೆ ಇರಬಹುದು, ಅವರನ್ನೆಲ್ಲಾ ತಾವೀಗ ಘಟಾರಕ್ಕೆ ತಳ್ಳಿದ್ದೀರಿ, ಹಾವನೂರು ಕಮಿಷನ್ ರಿಪೋರ್ಟ್ ಒಂದು progressive report ಆಗಿತ್ತು. ಸಾಮಾಜಿಕ ನ್ಯಾಯ ಕೊಡತಕ್ಕಂಥ ಮತ್ತು ಆರ್ಥಿಕ ನ್ಯಾಯ ಕೊಡತಕ್ಕಂಥಾದ್ದು ಕೆಲಸ ಮಾಡಿದ್ದು ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಗಳಾಗಿದ್ದಾಗ, ನಮ್ಮ ಕಾಂಗ್ರೆಸ್ ಪಕ್ಷ ಮಾಡಿದ್ದು. ಬೇರೆಯವರು ಯಾರೂ ಮಾಡಿದ್ದು ಅಲ್ಲ. ಹಾವನೂರು ಕಮಿಷನ್ report was progressive, more forward looking, more scientific than the Mandal Commission report. There are certain vested interests who want the Mandal Commission report to be implemented. ಅದು ಗೊತ್ತಿದೆ ಏತಕ್ಕೆಂದರೆ ಅದು to envy the benefit of the backward classes. ತಾವು ಆ ಮಂಡಲ ರಿಪೋರ್ಟ್‌ನ್ನು ಓದಿ. ತಮಗೆ ಗೊತ್ತಾಗುತ್ತದೆ. Havanur Commission report is more forward-looking and

more progressive: ಇದೆಲ್ಲವನ್ನು ತಾವು ಆಲೋಚನೆ ಮಾಡಬೇಕಾಗುತ್ತದೆ. ಇದರ ಜೊತೆಗೆ ಮತ್ತೊಂದು ವಿಷಯವನ್ನೂ ಕೂಡ ತಾವು ಆಲೋಚನೆ ಮಾಡಬೇಕು. ನಮ್ಮಲ್ಲಿ ಸೈಂಟಿಫಿಕ್ ಅನಾಲಿಸಿಸ್ ಸೊಸೈಟಿಗಳ ಕ್ರಾಸ್ ಸೆಷನ್ ನೋಡಿದರೆ ತಮಗೆ ಗೊತ್ತಾಗುತ್ತದೆ. ಕೆಲವು ಕಮ್ಯೂನಿಟಿಗಳು ಒಂದು ಪ್ರದೇಶದಲ್ಲಿ ಬ್ಯಾಕ್‌ವರ್ಡ್ ಇದ್ದರೆ ಇನ್ನೊಂದು ಪ್ರದೇಶದಲ್ಲಿ ಫಾರ್ವರ್ಡ್ ಇರುತ್ತವೆ. ಇನ್ನೊಂದು ಕಡೆ ಫಾರ್ವರ್ಡ್ ಇದ್ದರೆ ಮತ್ತೊಂದು ಕಡೆ ಬ್ಯಾಕ್‌ವರ್ಡ್ ಇರುತ್ತದೆ. ಇದು ರಾಜ್ಯ ರಾಜ್ಯಕ್ಕೇ ವ್ಯತ್ಯಾಸ ಇರುತ್ತದೆ. ದೇಶ ದೇಶಕ್ಕೇ ವ್ಯತ್ಯಾಸ ಇರುತ್ತದೆ. There should be a national debate as to how far a uniform backward class philosophy could be adopted for the country. ತಾವು ಇದರ ಬಗ್ಗೆ ವಾದ ಕೂಡ ಮಾಡಬಹುದು. ಹೇಳುವುದು ಬಹಳ ಸುಲಭ. Academically you can announce it. Each state should have a backward class reservation order. ಇದನ್ನು ತಾವು ಕ್ಯಾನ್‌ವಾಸ್ ಮಾಡಿ. I can agree. ಎಷ್ಟರಮಟ್ಟಿಗೆ ಇದರ ಬಗ್ಗೆ ರಾಷ್ಟ್ರದಲ್ಲಿ ಚಿಂತನೆ ಮಾಡುವುದಕ್ಕೆ ಸಾಧ್ಯ ಇದೆ ? I do not want to name a particular section of the community. Can you imagine that because of certain anomalies even a section of the Brahmin community has been classified as Scheduled Caste. This has happened. Anomaly is there. I want you to set right that. ಮಂಡಲ ಸಮಿತಿಗಳನ್ನು ಇವತ್ತು ಯೂನಿಫಾರ್ಮ್ ಆಗಿ ಮಾಡಬೇಕೆಂದರೆ Perhaps many more anomalies may come out. I am telling you. ಆ ರಿಪೋರ್ಟ್‌ನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ನಿಮ್ಮ ಕೈಯಲ್ಲಿ ಆಗಲಿಲ್ಲ. ನೀವು ಹೇಳಬಹುದು. ಮತ್ತೊಂದು ಕಮಿಷನ್‌ನ್ನು ಜಸ್ಟೀಸ್ ಚಿನ್ನಪ್ಪರೆಡ್ಡಿಯವರ ಅಧ್ಯಕ್ಷತೆಯಲ್ಲಿ ಮಾಡಿದ್ದೇವೆಂದು. ಈಗಾಗಲೇ ಕೆಲವರು ಈ ಕಮಿಷನ್‌ನಲ್ಲಿ ಪ್ರತಿಯೊಂದು ಜಾತಿಯ ಪ್ರತಿನಿಧಿಗಳನ್ನು ಹಾಕಿ ಎಂದು ಹೇಳಿದ್ದಾರೆ. ಎಲ್ಲಾ ಜಾತಿಯ ಪ್ರತಿನಿಧಿಗಳನ್ನು ಅದರಲ್ಲಿ ಹಾಕುತ್ತೀರೆಂದು ನನಗೂ ಗೊತ್ತಿದೆ. I know there is a pressure. You have no independent decision. You are governed by pressures. You are a pawn in the hands of the dominant castes and communities and the political pressure. It will be a pious work that you want to be so. ಆಮೇಲೆ ಪ್ರತಿ ಜಾತಿಗೆ ಒಂದರಂತೆ ಮೆಡಿಕಲ್ ಕಾಲೇಜ್ ಕೊಡಬೇಕೆಂದು ಸಹಾ ತಾವು ಹೇಳಲು ಹೊರಟಿದ್ದೀರಿ. ಪ್ರತಿಯೊಂದು ಜಿಲ್ಲೆಗೂ ಮೆಡಿಕಲ್ ಕಾಲೇಜ್‌ನ್ನು ಕೊಡಬೇಕೆಂದು ಹೊರಟಿದ್ದೀರಿ.

SRI G. BASAVANNAPPA.—We have already appointed one-man commissin. But, if any more member.. ...

ಶ್ರೀ ಎಂ. ವೀರಪ್ಪ ಮೊಯ್ಲಿ.—We can just see the efficacy of it. ಹೌದು ಹೌದು. ತಾವು ಹೇಳಿದ್ದೀರಿ. ತಮ್ಮ ಹೇಳಿಕೆಯನ್ನು ತರಿಸಿ ನೋಡಬೇಕಾ ? ಲಕ್ಷ್ಮೀಸಾಗರ್‌ರವರೂ ಕೂಡ ಇದರ ಬಗ್ಗೆ ಹೇಳಿದ್ದಾರೆ. "Venkataswamy Commission report will be implenented." Where it isimpelemented ? Is there any sanctity for what you have stated. That has happened. ಶ್ರೀ ಬಸವಣ್ಣಪ್ಪನವರು ಇವತ್ತು ಮಾತನಾಡುತ್ತಾರೆ. ಇದರ ಬಗ್ಗೆ ಬೇರೆ ಬೇರೆ ಕಡೆಯಿಂದ ಮುಖ್ಯ ಮಂತ್ರಿಯವರಿಗೆ ಒತ್ತಡ ಇರುತ್ತದೆ. ಅದು ಅವರಿಗೆ ಮಾತ್ರ ಅರ್ಥವಾಗುತ್ತದೆ. ಅವರು ಆ ಒತ್ತಡದಿಂದ ಬೇಯುತ್ತಿದ್ದಾರೆ. ನೀವು ಜಸ್ಟೀಸ್ ಚಿನ್ನಪ್ಪರೆಡ್ಡಿಯವರ ಆಯೋಗವನ್ನು ನೇಮಕ ಮಾಡಿದ್ದೀರಿ. ಈ ಕಮಿಷನ್ ರಿಪೋರ್ಟ್ ಮುಂದೆ ಬರುವ ಚುನಾವಣೆಗಿಂತ ಮುಂಚಿತವಾಗಿ ಬರುವುದಿಲ್ಲ. ನಾವು ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಚಿನ್ನಪ್ಪರೆಡ್ಡಿ ಕಮಿಷನ್ ನೇಮಕ ಮಾಡಿದ್ದೇವೆಂದು ನೀವು ಚುನಾವಣೆಯ ಸಂದರ್ಭದಲ್ಲಿ ಹೇಳಬೇಕಾಗುತ್ತದಲ್ಲಾ. Once the benefit is given to a particular section is it easy to withdraw it politically ? ಯಾವುದೋ ಒಂದು ಟ್ರೇಡ್ ಯೂನಿಯನ್ ಇರುತ್ತದೆ, ಅವರು ೪೦ ರೂಪಾಯಿಗಳಿಗೆ ಒತ್ತಾಯ ಮಾಡಿದಾಗ ನಾವು ೩೦ ರೂಪಾಯಿ ಕೊಡುತ್ತೇವೆ ಎಂದು ಹೇಳುವುದಕ್ಕೆ ಸಾಧ್ಯವಾಗುತ್ತದೆಯೇ ? Its will never happen. When you have loosened up the whole concept of the backward class ಕೆಲವು ಜಾತಿಯವರಿಗೆ ಬೆನಿಫಿಟ್ ಕೊಟ್ಟು, ಅದನ್ನು

ಈಗ ಕಿತ್ತು ಹಾಕುತ್ತೇವೆ ಎಂದರೆ, ಚಿನ್ನಪ್ಪರೆಡ್ಡಿ ಅಲ್ಲ ಇನ್ನೂ ಒಂದು ಸಾವಿರ ಚಿನ್ನಪ್ಪರೆಡ್ಡಿಯವರ ವರದಿಗಳು ಬಂದರೂ ನೀವೂ ಅಧಿಕಾರದಲ್ಲಿ ಇರುವವರೆಗೂ ವರದಿಗಳನ್ನು ಅನುಷ್ಠಾನಕ್ಕೆ ತರುವುದ ಕ್ಕಾಗುವುದಿಲ್ಲ. ವರದಿಯನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ನಿಮಗೆ ಶಕ್ತಿ ಇಲ್ಲ. ನಿಜವಾಗಿ ಸಾಮಾಜಿಕ ನ್ಯಾಯ ಕೊಡಬೇಕೆಂಬ ಎದೆಗಾರಿಕೆ ನಿಮಗೆ ಇದ್ದರೆ ಚಿನ್ನಪ್ಪರೆಡ್ಡಿ ಅವರ ರಿಪೋರ್ಟ್ ಬರುವವರೆಗೂ ವೆಂಕಟಸ್ವಾಮಿ ಆಯೋಗದ ರಿಪೋರ್ಟ್‌ನ್ನು ಅನುಷ್ಠಾನಗೊಳಿಸಿ. ಆದರೆ ಅದನ್ನು ಅನುಷ್ಠಾನಗೊಳಿಸುವ ಮನಸ್ಸೂ ಕೂಡ ಇಲ್ಲ. You have trampled the entire cross section of backward classes, ಇದು ಕಾಣುತ್ತದೆ. ಲೋಕಸೇವಾ ಆಯೋಗದ ನೇಮಕಾತಿ ವಿಚಾರದಲ್ಲಿ ಆಗಿರಲಿ, ಮತ್ತು ಇತರ ನೇಮಕಾತಿ ವಿಚಾರಗಳಲ್ಲಿಯೂ ಮತ್ತು ಮೆಡಿಕಲ್ ಹಾಗೂ ಇಂಜಿನೀಯರಿಂಗ್ ಕಾಲೇಜುಗಳ ಬಗ್ಗೆಯೂ ನಡೆದಿರತಕ್ಕಂಥ ಪರಿಸ್ಥಿತಿಯನ್ನು ನೋಡಿದರೂ ಕೂಡ ಇಂತಹ ಒಂದು ಅನಾಹುತವನ್ನು ನಾವು ಕಾಣುತ್ತಾ ಇದ್ದೇವೆ. ಯಾವ ಮಟ್ಟದಲ್ಲಿ ಹಿಂದುಳಿದ ವರ್ಗಗಳಿಗೆ ಮತ್ತುತರರಿಗೆ ಎತ್ತರಿಸಿದ ಧ್ವನಿ ಏನಿತ್ತು ಅದನ್ನು ಈಗ ನೀವು ಒಣಗಿಸಿ ಬಿಟ್ಟಿದ್ದೀರಿ. You have silenced the voice of the backward classes. This charge will always be there. It is a curse on your part from the backward classes. ಈ ರೀತಿಯಲ್ಲಿ ನೀವು ಆಡಳಿತವನ್ನು ಮಾಡಿಕೊಂಡು ಹೋಗುವುದು ಒಳ್ಳೆಯದಲ್ಲ.

ಅಧ್ಯಕ್ಷರು.—ಮಾನ್ಯ ವೀರಪ್ಪ ಮೊಯಿಲಿಯವರೇ, ಇನ್ನೂ ಮೂರು ಜನ ಮಾನ್ಯ ಸದಸ್ಯರು ಮಾತನಾಡುವವರು ಇದ್ದಾರೆ. ತಾವು ಬೇಗ ಮುಗಿಸಬೇಕು.

SRI M. VEERAPPA MOILY.—There arei nterests of the State, many ಅದು ಕೃಷ್ಣ ನದಿ ನೀರಿನ ವಿಚಾರದಲ್ಲಿ ಇರಬಹುದು, ಕಾವೇರಿ ನದಿ ನೀರಿನ ವಿಚಾರದಲ್ಲಿ ಇರಬಹುದು, ಗಡಿಪ್ರದೇಶದ ವಿಚಾರದಲ್ಲಿಯೇ ಇರಬಹುದು, What is the picture today after the present government came into Power ? ತೆಲುಗು ಗಂಗಾ ಯೋಜನೆಯನ್ನು ಆಂಧ್ರದವರು ಮುಂದುವರಿಸಿಕೊಂಡು ಹೋಗುತ್ತಾ ಇದ್ದಾರೆ. ಅದನ್ನು ನಿಲ್ಲಿಸತಕ್ಕಂಥ ಒಂದು ಶಕ್ತಿ ಈ ನಮ್ಮ ಸರಕಾರಕ್ಕಾಗಲೀ, ನಮ್ಮ ಮುಖ್ಯಮಂತ್ರಿಗಳಿಗಾಗಲಿ ಇಲ್ಲವಾಗಿದೆ. ಅದು ಹಾಗೆಯೇ ನಡೆಯುತ್ತಾ ಇದೆ. They are going ahead with the projects. Conflicting statements, soft-peddling, etc this kind of charge still remains. Because of political resons, beacause of his national political ambitions he is undermining the interest of the State. ಅದೇ ಪ್ರಕಾರ ಮಹಾರಾಷ್ಟ್ರದವರು ಇವೊತ್ತು ೧೦೦ ಕೋಟಿ ರೂಪಾಯಿಗಳನ್ನು ನಾವು ನಿಮಗೆ ಕೊಡುತ್ತೇವೆ ನಮಗೆ ಬೆಳಗಾವಿಯನ್ನು ಬಿಟ್ಟು ಕೊಡಿ ಎಂದು ಹೇಳತಕ್ಕಂಥ ಶಿಥಿಲ ಪರಿಸ್ಥಿತಿಯಿದೆ. ಗಡಿ ಸಮಸ್ಯೆ ಬಗೆ ಬರುವುದಕ್ಕೆ ಕಾರಣಕರ್ತರು ನೀವುಗಳು, ಅಧಿಕಾರದಲ್ಲಿರತಕ್ಕಂಥ ಜನತಾ ಸರಕಾರ ಎಂದು ಹೇಳ ಬೇಕಾಗಿದೆ. ನಿಮಗೆ ಧೈರ್ಯವಿರದ ಕಾರಣ ಇಂತಹ ಸಮಸ್ಯೆಗಳು ಇವೊತ್ತು ಕೂಡ ತೂಗಾಡುತ್ತಾ ಇವೆ. ಕಾವೇರಿ ನದಿ ವಿಚಾರದಲ್ಲಿ ಬೆಂಗಳೂರಿನಲ್ಲಿ ನೆಗೋಶಿಯೇಶನ್ ಆದಾಗಲೂ ಕೊಡ ಇವೊತ್ತು ಫೇಲ್ ಆಗಿದ್ದಾರೆ. We feel that this government has failed to discharge its legitimate duties to protect the interests of the State, Whether it is inter-State water problem. or inter-State border probleem. ಇಕಾನಮಿ ಆರ್ಡರ್ಸ್ ಬಗ್ಗೆ ಇವೊತ್ತು ಇಲ್ಲಿ ಮತ್ತು ಅಲ್ಲಿಯೂ ಕೂಡ ಪ್ರಶ್ನೆಗಳು ಬಂದಿವೆ. ಮಂತ್ರಿಮಂಡಳದವರ ಟೆಲಿಫೋನ್‌ಗಾಗಿ ೪೦ ಲಕ್ಷ ರೂಪಾಯಿ ಗಳನ್ನು ಖರ್ಚು ಮಾಡಿದ್ದಾರೆಂದು ಇಲ್ಲಿಯೂ ಉತ್ತರವನ್ನು ಕೊಟ್ಟಿದ್ದಾರೆ ಮತ್ತು ಪತ್ರಿಕೆಗಳಲ್ಲಿಯೂ ಬಂದಿದೆ. ನಿಮಗೆ ರಾಜ್ಯದ ಜನರ ಸಮಸ್ಯೆಗಳು ಎದುರು ಬಂದಾಗ, ರಾಜ್ಯದ ಅಭಿವೃದ್ಧಿಯ ವಿಚಾರ ನಿಮ್ಮ ಎದುರು ಬಂದಾಗ ನಿಮಗೆ ಇಕಾನಮಿ ಆರ್ಡರ್ ವಿಚಾರ ಬರುತ್ತದೆ. Economy order should be practised by your Ministry first ರಾಜ್ಯದಲ್ಲಿ ಇಕಾನಮಿ ಆರ್ಡರ್‌ನ್ನು ಜಾರಿ ಮಾಡಿ, ಈ ರೀತಿಯಲ್ಲಿ ನಿಮ್ಮ ಟೆಲಿಫೋನ್‌ಗೆ ೪೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ, ಆ ಆರ್ಡರ್‌ನ್ನು ತರುವ ಒಂದು ನೈತಿಕ ಹಕ್ಕು ನಿಮಗೆ ಇದೆಯೇ ಎನ್ನುವುದನ್ನು ನಾವು ವಿಚಾರ ಮಾಡಬೇಕಾಗಿದೆ.

ಇನ್ನು ಕ್ಯಾಪಿಟೇಶನ್ ಫೀಸ್ ಬಗ್ಗೆ ದೊಡ್ಡದಾದ ಭಾಷಣವನ್ನು ಮಾಡಿದ್ದಾರೆ. ಆದರೆ ಇವೊತ್ತಿನವರಗೂ ಅದು ರದ್ದಾಗಲಿಲ್ಲ. ಈಗ ಏನೋ ೧೧ನೇ ತಾರೀಖಿಗೆ ರದ್ದಾಗುತ್ತದೆ ಎಂದು

ಹೇಳಿದ್ದಾರೆ. ಅಂತಹ ೧೧ನೇ ತಾರೀಖುಗಳು ಬಹಳ ಆಗಿಹೋದವು. ಈಗ ವರ್ಷಕ್ಕೆ ೩೦ ಸಾವಿರ ರೂ.ಗಳ ಫೀಸನ್ನು ವಸೂಲು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದಾರೆ. ಹೀಗಾಗಿ ಐದು ವರ್ಷಗಳಿಗೆ ಒಂದೂವರೆ ಲಕ್ಷ ರೂಪಾಯಿಗಳನ್ನು ವಸೂಲು ಮಾಡುವುದಕ್ಕೆ ಅಲೋ ಮಾಡಿದ್ದೀರಿ. ಅಷ್ಟು ಮಾತ್ರವಲ್ಲ, ಹಿಂದೆ ಕೊಟ್ಟ ಹಣಕ್ಕೆ ರಸೀದಿಯನ್ನು ಕೊಟ್ಟು ವಸೂಲು ಮಾಡುತ್ತಾ ಇದ್ದರು, ಈಗ ಅದನ್ನು ಕೂಡ ಕೊಡುವುದಿಲ್ಲ. These colleages will be the breeding ground for black money, which will be abetted, supported by this government. ಈ ಪರಿಸ್ಥಿತಿಯಿಂದಾಗಿ ಹಿಂದೆ ಸರಕಾರಿ ಸೀಟುಗಳು ಖಾಸಗಿ ಮೆಡಿಕಲ್ ಕಾಲೇಜುಗಳಲ್ಲಿ ಎಷ್ಟು ಇದ್ದವೋ ಅವುಗಳನ್ನು ಕೂಡ ಕಡಿಮೆ ಮಾಡುತ್ತಾರೆ. ಸರಕಾರಿ ಸೀಟುಗಳನ್ನು ಅಬಾಲಿಶ್ ಮಾಡುತ್ತಾರೆ. ಇದರಿಂದಾಗಿ ಏನಾಗುತ್ತದೆ ಎಂದರೆ ಇನ್ನು ಮುಂದೆ ಖಾಸಗಿ ಮೆಡಿಕಲ್ ಕಾಲೇಜುಗಳಿಗೆ ಯಾವ ಬಡಮಕ್ಕಳೂ ಹೋಗುವುದಕ್ಕೆ ಸಾಧ್ಯವಾಗದ ಸಂದರ್ಭ ಬರುತ್ತದೆ. That is in the process according to the Bill. ಮಾನ್ಯ ರಾಚಯ್ಯನವರು ಆರೋಗ್ಯ ಮಂತ್ರಿಯಾಗಿರುವಾಗ ಈ ಆಜ್ಞೆ ಮಾಡುವುದಕ್ಕೆ ಬಿಡಬಾರದು.

ಶ್ರೀ ಬಿ. ರಾಚಯ್ಯ.—ಏನು ಮಾಡಬೇಕು ಹೇಳಿ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಏನು ಮಾಡಬೇಕು ಅಂದರೆ ಕ್ಯಾಪಿಟೇಷನ್ ಫೀಸನ್ನು ಅಬಾಲಿಷ್ ಮಾಡಿ ಪ್ರೈವೇಟ್ ಮೆಡಿಕಲ್ ಕಾಲೇಜಸ್‌ಗಳಲ್ಲಿ ಗವರ್ನಮೆಂಟ್ ಕೋಟಾ ಏನಿತ್ತು if you have courage if you have concern for the Backward classes and down-trodden you enhance the quota in the private medical colleges ಒಮ್ಮೆ ಮಾಡಿದರೆ ಮತ್ತೆ ರೆಡ್ಯೂಸ್ ಮಾಡುವುದಕ್ಕಾಗುವುದಿಲ್ಲ. ಈ ಸಲ ೩೦ ಸಾವಿರಕ್ಕೆ ಪರ್ಮಿಶನ್ ಕೊಟ್ಟರೆ ಬರುವ ವರ್ಷ ೩೦ ಸಾವಿರ ಸಾಕಾಗುವುದಿಲ್ಲ, ೫೦ ಸಾವಿರ ಬೇಕು ಎನ್ನುತ್ತಾರೆ. ಅದರ ಮುಂದಿನ ವರ್ಷ ೧ ಲಕ್ಷ ಬೇಕು ಎಂದು ಕೇಳುತ್ತಾರೆ. ಇದರಿಂದ ಈ ಪಿಡುಗನ್ನು ಖಾಯಂವಾಗಿ ನಿಲ್ಲಿಸಿದಂತಾಗುವುದಿಲ್ಲ. This will go on and it will escalate. ಆದ್ದರಿಂದ ಅಬಾಲಿಷ್‌ನ್ ಆಫ್ ಕ್ಯಾಪಿಟೇಷನ್ ಫೀಸ್ ಎಂದು ಏನು ಹೇಳುತ್ತೀರಿ. ಅದು ಸರ್ಕಾರದ ಹಿಪಾಕ್ರಸಿ ಎಂದು ಹೇಳಬೇಕು. ಏಕೆಂದರೆ ನಿಮ್ಮ ಆಕ್ಟಿನ ಪ್ರಕಾರ ಎಫೆಕ್ಟಿಗೆ ಬರುವುದು ಜುಲೈ ೧೧ರ ಂದು. ಅಷ್ಟರಲ್ಲಿ ಈ ಸಲದ್ದು ಕಲೆಕ್ಟ್ ಮಾಡಿಕೊಂಡು ಫೀಸ್ ಎಂದು ೩೦ ಸಾವಿರವನ್ನು ಕಲೆಕ್ಟ್ ಮಾಡುವ ಮೂಲಕ ಈ ವ್ಯವಸ್ಥೆಯಲ್ಲಿ ಬ್ಲಾಕ್‌ಮನಿ ಜನರೇಟ್ ಮಾಡುವ ಗುರಿಯನ್ನು ನೀವು ತೋರಿಸಿಕೊಟ್ಟಿದ್ದೀರಿ ಎಂದು ಹೇಳಬೇಕಾಗುತ್ತದೆ.

ಶ್ರೀ ಬಿ. ರಾಚಯ್ಯ.—ಕೇಂದ್ರ ಸರ್ಕಾರ ಕ್ಯಾಪಿಟೇಷನ್ ಫೀಸನ್ನು ಅಬಾಲಿಷ್ ಮಾಡುವುದಕ್ಕಾಗಿ ನನ್ನ ಅಧ್ಯಕ್ಷತೆಯಲ್ಲಿ ಒಂದು ಸಬ್ ಕಮಿಟಿ ಮಾಡಿದ ನಂತರ ನಾವು ಕೊಟ್ಟ ನಿರ್ಣಯಗಳನ್ನು ಇಂಪ್ಲಿಮೆಂಟ್ ಮಾಡಲು ಈ ಸರ್ಕಾರ ಹಿಂದೆ ಮುಂದೆ ನೋಡುತ್ತಿದೆ. ಇಂಥಾ ಸ್ಥಿತಿಯಲ್ಲಿ ಕ್ಯಾಪಿಟೇಷನ್ ಫೀಸನ್ನು ತೆಗೆದುಹಾಕಿದ ಮೇಲೆ ಆಲ್ಟರ್ನೇಟಿವ್ ಸೋರ್ಸನ್ನು ಪ್ರೈವೇಟ್ ಕಾಲೇಜಿಗೆ ತೋರಿಸಿದರೆ ತಾನೇ, ಅವರು ತಾವು ವ್ಯಕ್ತಪಡಿಸಿದ ಕನ್‌ಸರ್ನ್ ಬಿ.ಸಿ. ಮತ್ತು ಎಸ್.ಸಿ. ಎಸ್.ಟಿ. ಕ್ಯಾಂಡಿಡೇಟ್ಸ್‌ಗೆ ಸೀಟ್‌ಗಳನ್ನು ಕೊಡಲು ಆಗುವುದು ?

ಶ್ರೀ ಕೆ. ಹೆಚ್. ಪಾಟೀಲ್.—ಅವರು ಹೇಳುವುದು ಏನೆಂದರೆ ಕ್ಯಾಪಿಟೇಷನ್ ಫೀಸನ್ನು ತೆಗೆದು ಹಾಕಿ, ನಿಮಗಿರುವ ಕೋಟಾ ಇಟ್ಟುಕೊಂಡು ರೀಸನಬಲ್ಲಾದ ಫೀಸನ್ನು ವಸೂಲು ಮಾಡಲು ಹೇಳಿ ಎಂದು.

ಶ್ರೀ ಬಿ. ರಾಚಯ್ಯ.—ಕ್ಯಾಪಿಟೇಷನ್ ಫೀಸ್ ತೆಗೆದುಕೊಳ್ಳದೆ ಬರೀ ಫೀಸಿನಿಂದಲೇ ಯಾರೂ ಕಾಲೇಜ್ ನಡೆಸುವುದಕ್ಕಾಗುವುದಿಲ್ಲ. ಈ ವ್ಯವಸ್ಥೆಯಲ್ಲಿ ತೊಂದರೆ ಪಡುವ ಎಸ್‌ಸಿ ಎಸ್‌ಟಿ ಮತ್ತು ಬಿಸಿ ಕ್ಯಾಂಡಿಡೇಟ್ಸ್‌ಗೆ ಸಹಾಯ ಮಾಡಲು ಬೇರೆ ಯೋಜನೆ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಒಂದೂವರೆ ಲಕ್ಷ ಫೀಸ್ ಕೊಟ್ಟು ಓದಲು ಯಾವ ಎಸ್‌ಸಿ ಅಥವಾ ಬಿಸಿ. ವಿದ್ಯಾರ್ಥಿ ಮುಂದೆ ಬರುತ್ತಾನೆ ಹೇಳಿ ? ಅಲ್ಲದೆ ಅಂಥ ವಿದ್ಯಾರ್ಥಿಗಳಿಗೆ ಸಬ್ಸಿಡೈಸ್ಡ್ ಬ್ಯಾಂಕ್ ಲೋನ್ ಕೊಡಿಸುತ್ತೇವೆಂದು ಹೇಳಿದ್ದೀರಿ, ಅದು ನನಗೆ ಗೊತ್ತು. That is not a practical solution.

ಶ್ರೀ ಬಿ. ರಾಚಯ್ಯ.—ಇದುವರೆಗೂ ನಾಲ್ಕು ಗವರ್ನಮೆಂಟ್ ಕಾಲೇಜುಗಳಲ್ಲಿ ಓದುವ ಎಸ್‌ಸಿ, ಬಿಸಿ ಮತ್ತು ಬ್ಯಾಕ್‌ವರ್ಡ್ ಜನಾಂಗದವರಿಗೆ ಈ ಫೆಸಿಲಿಟಿ ಸಿಗುತ್ತಿತ್ತು. ಈಗ ಆ ಫೆಸಿಲಿಟಿ ಎಲ್ಲರಿಗೂ ಸಿಗಬೇಕಾದರೆ ಫೀಸನ್ನು ಹೆಚ್ಚಿಸದೆ ಮಾಡಲು ಬರುವುದಿಲ್ಲ. ಈಗ ಬರುವ ಆದಾಯದಿಂದ ಉಪಾಧ್ಯಾಯರ ಸಂಬಳ ಕೊಡುವುದಕ್ಕೆ ಸಹ ಸಾಧ್ಯವಾಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ನೀವು ಶ್ರೀಮಂತರ ಮಕ್ಕಳಿಂದ ಎಷ್ಟು ಬೇಕಾದರೂ ವಸೂಲು ಮಾಡಿ, ಯಾರು ಹಣವಂತರಲ್ಲವೋ ಅವರನ್ನು ಬಿಡಿ.

ಶ್ರೀ ಬಿ. ರಾಚಯ್ಯ.—ನೀವೇ ಒಂದು ಫಾರ್ಮುಲಾ ಕೊಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಂಥ ಜೆಸ್ಚರ್ ತಮ್ಮಲ್ಲಿಲ್ಲ ಬಿಡಿ. ಏಕೆಂದರೆ ಹಿಂದೆ ನಾನು ಅಪೋಜಿಷನ್ ಲೀಡರಾಗಿದ್ದಾಗ ಫೀ ಸ್ಟ್ರಕ್ಚರ್ ವಿಷಯ ಬಂತು. Then both the Leader of the Opposition and other opposition leaders were called for a disscussion and then the fees structure was decided. Now you are asking us to give a formula. But you never consulted us. ಕನ್‌ಸಲ್ಟ್ ಮಾಡುವ ವಿಷಯ ಬಿಡಿ. ಪ್ರೆಸೆಂಟ್ ಸಿಸ್ಟಮ್ ಏನಿದೆ, ಆದರಿಂದ ಬಿಡವರ ಉದ್ಧಾರವಾಗುವ ಬದಲು ಶ್ರೀಮಂತರ ಕಡೆ ನೀವು ನೋಡುತ್ತಿದ್ದೀರಿ ?

೧.೩೦ ಪಿ. ಎಂ.

Ultimately after 5 or 10 years there will be doctors and engineers who hail only from the affluent class of people. ಸೋಷಿಯಲ್ ಜಸ್ಟೀಸ್ ಏನು ಕೊಡಬೇಕೆಂದು ಇದೆ, ಅದು ಸಂಪೂರ್ಣವಾಗಿ ನಾಶವಾಗತಕ್ಕಂತಹ ಪರಿಸ್ಥಿತಿಯನ್ನು ತಾವು ನಿರ್ಮಾಣ ಮಾಡಿದ್ದೀರಿ. This is the society you are going to create. This will bey our contribution. ಅದು ಮಾನ್ಯ ರಾಚಯ್ಯನವರ ಮಾನ್ಯುಮೆಂಟ್ ಆಗ ಬಾರದು. ಬಾಕಿಯುವರೆಲ್ಲಾ ಮಾಡಲೀ, ಅವರು ತೆಗೆದುಕೊಳ್ಳಬಹುದು That is what I am worried. I am not making a political speech. As a social scient-ist please think about it. Forget about politics. You can call all of us for a discssion. Uniform fees structure ಮಾಡುವುದು ಸಂಪೂರ್ಣ ವಾಗಿ ಸರಿಯಲ್ಲ. You dont ‘ think of men in the bottom of the society. ಇವರ ಬಗ್ಗ ಮೊದಲು ಯೋಚನೆ ಮಾಡಿ. Affluent man running the college. ಅದಕ್ಕೆ ಏನು ಬೇಕೋ ಮಾಡಿ. ಆತನು ಬ್ಯಾಂಕಿನಿಂದ ಸಾಲವನ್ನು ತಂದು ಕೊಡಲೀ ಎಂದು ಹೇಳಿದರೆ ಸರಿಯಾಗುವುದಿಲ್ಲ. ಬ್ಯಾಂಕಿನವರು ೧೫, ೧೬ ಪರ್ಸೆಂಟ್ ಬಡ್ಡಿ ಹಾಕುತ್ತಾರೆ, ಸ್ಕಾಲರ್‌ಷಿಪ್‌ಗೋಸ್ಕರ ಅವರು ತೆಗೆದುಕೊಂಡು ಕೊಡುವುದಕ್ಕಾಗುವುದಿಲ್ಲ. ಚಕ್ರಬಡ್ಡಿಯನ್ನು ಕೂಡ ಅವರು ಹಾಕುತ್ತಾರೆ. ಸರಕಾರದ ಕೋಟಾವನ್ನು ರೆಡ್ಯೂಸ್ ಮಾಡಿದರೆ ಹಿಂದುಳಿದವರ್ಗದವರಿಗೆ, ಹರಿಜನ ಗಿರಿಜನರ ಇಂಟರೆಸ್ಟ್‌ಗೆ ಕೊಡಲಿ ಏಟು ಹಾಕಿದ ಹಾಗಾಗುತ್ತದೆ. ಅದನ್ನು ಮಾಡಬೇಡಿ. You please don't do it. You have reduced to 30%. That is the announcement.

ಶ್ರೀ ಬಿ. ರಾಚಯ್ಯ.—ಸರಕಾರದ ಆಸ್ಪತ್ರೆಗಳಿಗೆ ಕೊಡುತ್ತಿದ್ದೇವೆ. ಯಾರುಯಾರು ಕ್ಲಿನಿಕಲ್ ಫೆಸಿಟೀಸ್ ಅನ್ನು ಉಪಯೋಗಿಸುತ್ತಿದ್ದಾರೆ ಅವರಿಗೆ ೪೦ ಪರ್ಸೆಂಟ್ ಏನು ಕೊಡುತ್ತೇವೆ ಅದನ್ನು ಕೊಡಲೇಬೇಕೆಂದು ಕೂಡ ಹೇಳಿದ್ದೇವೆ. ಹೊಸದಾದ ಕೆಲವು ಕಾಲೇಜುಗಳು ಏನು ಇವೆ, ಅವರು ಸ್ವಂತ ಕ್ಲಿನಿಕ್ ಫೆಸಿಲಿಟೀಸ್ ಅನ್ನು ಮಾಡಿಕೊಂಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಂಜಿನಿಯರಿಂಗ್ ಕಾಲೇಜುಗಳಲ್ಲಿ ೪೦ ಪರ್ಸೆಂಟ್ ಇದ್ದುದನ್ನು ೩೦ ಪರ್ಸೆಂಟ್ ಮಾಡಿದ್ದಾರೆ ಇದನ್ನು ಇನ್ನೂ ಹೆಚ್ಚು ಮಾಡಿಲ್ಲ. ಅವರಿಗೆ ರಾಜ್ಯಾಂಗ ಬದ್ಧವಾಗಿ ೨೦ ಪರ್ಸೆಂಟ್ ಕೊಡಬೇಕೆಂದು ಇನ್‌ಸಿಸ್ಟ್ ಮಾಡುತ್ತಿದ್ದೇವೆ. ಮಣಿಪಾಲ್ ಮತ್ತು ಬೇರೆ ಬೇರೆ ಕಾಲೇಜುಗಳಲ್ಲಿ ಈ ರಿಸರ್ವೇಷನ್ ಅನ್ನು ಪಾಲಿಸಿಲ್ಲ. ರಾಜ್ಯಾಂಗ ಬದ್ಧವಾಗಿ ಅಲ್ಲಿಯೂ ಕೊಡಬೇಕೆಂದು ನಾವು ಇನ್‌ಸಿಸ್ಟ್ ಮಾಡುತ್ತಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದನ್ನು ಜಾರಿ ಮಾಡಿ ಕ್ಲೋಸ್ ಮಾಡಿದರೆ ು ದಿಲ್ಲ

ಶ್ರೀ ಬಿ. ರಾಚಯ್ಯ.—ನಾವು ಇನ್‌ಸಿಸ್ಟ್ ಮಾಡುತ್ತಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸ್ಟೇಟ್ಸ್‌ಮೆನ್ ಹೇಳಿಕೆ ನೋಡಿದ ಕರ್ನಾಟಕದ ಲಂಕೇಷ್ ಪತ್ರಿಕೆಯ ಸಂಪಾದಕರಾದ ಶ್ರೀ ಲಂಕೇಶ್‌ರವರು ಮಾನ್ಯ ರಾಜ್ಯಪಾಲರಿಗೆ ಮೆಮೊರ್‍ಯಾಂಡಂ ಒಂದನ್ನು ಮಾನ್ಯ ಮುಖ್ಯಮಂತ್ರಿಗಳ ವಿಚಾರದಲ್ಲಿ ಕೊಟ್ಟಿದ್ದಾರೆ. ಅದು ಏನೆಂದರೆ "Honb'le Chief Minister has Committed porjury." ಎಂದು ಕೊಟ್ಟಿದ್ದಾರೆ. ಯಾವಾಗಲೂ ಇಂತಹ ಹೇಳಿಕೆಗಳು ಬಂದರೆ ಮಾನ್ಯ ಮುಖ್ಯ ಮಂತ್ರಿಗಳು ರಿ-ಆಕ್ಟ್ ಮಾಡುತ್ತಾರೆ, ಆದರೆ ಈ ಬಗ್ಗೆ ಆ ರಿ-ಆ್ಯಕ್ಷನ್ ಯಾವ ಪತ್ರಿಕೆಯಲ್ಲೂ ಇಲ್ಲಿಯವರೆಗೂ ಕಾಣಲಿಲ್ಲ. ಆದ್ದರಿಂದ ಈ ವಿಚಾರದ ಬಗ್ಗೆ ನಾವು ಯೋಚನೆ ಮಾಡಬೇಕಾಗುತ್ತದೆ. ಈ ಸರಕಾರ ಇವೊತ್ತು ರಾಜಕೀಯವಾಗಿ ಶಿಥಿಲ ವಾಗಿದೆ, ಆರ್ಥಿಕವಾಗಿ ಶಿಥಿಲವಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಸಾಂಸ್ಕೃತಿಕವಾಗಿ......

ಶ್ರೀ ಎಂ. ವೀರಪ್ಪ ಮೊಯಿಲಿ.—ಸಾಮಾಜಿಕವಾಗಿ ಇಡೀ ಕರ್ನಾಟಕದ ಸಾಮಾಜಿಕ ಚಿತ್ರವನ್ನೇ ಶಿಥಿಲ ಮಾಡತಕ್ಕಂತಹ ಪರಿಸ್ಥಿತಿಗೆ ಈ ಸರಕಾರ ಬಂದಿದೆ. ಈ ಸರಕಾರ ಎಷ್ಟರ ಮಟ್ಟಿಗೆ ಗಟ್ಟಿಯಾಗಿದೆ, ಎಂಬುದನ್ನು ತಾವು ಹೇಳಬೇಕು. ಸಾಂಸ್ಕೃತಿಕವಾಗಿ ಎಂದು ನಾವು ಹೇಳುವುದಕ್ಕಾಗುವುದಿಲ್ಲ. You have assiduously maintained that national press. ಜನತಾ ಕಾನ್‌ಫರೆನ್ಸ್ ಆಗುವಾಗ ಕೂಡ ದೊಡ್ಡ ನ್ಯಾಷನಲ್ ಪ್ರೆಸ್ ಎಡಿಟರ್ಸ್, ಸೀನಿಯರ್ಸ್ ಎಡಿಟರ್ಸ್ ಅನ್ನು ಕರೆಯಿಸಿ ಪಂಚ-ತಾರ ಹೋಟೆಲಿನಲ್ಲಿ ಕೂಡಿಸಿ ೫-೬ ದಿವಸ ಎಲ್ಲಿ ಬೇಕೋ ಅಲ್ಲಿ ತಿರುಗಿ ಎಂದು ಅವರನ್ನು ಸುತ್ತಾಡಿಸಿ ಹಿಂದಕ್ಕೆ ವಾಪಸ್ ಕಳಿಸಿದ್ದೀರಿ. ಆದ್ದರಿಂದ ನೀವು ಸಾಂಸ್ಕೃತಿಕವಾಗಿ ಶಿಥಿಲವಾಗಿದ್ದೀರಿ ಎಂದು ಹೇಳಿದರೆ perhaps the national press may not agree with me. ಆದ್ದರಿಂದ ಅದನ್ನು ಹೇಳತಕ್ಕಂತಹ ಧೈರ್ಯ ಕೂಡ ಆಗಲಿಕ್ಕಿಲ್ಲ. ತಾವು, ತಮ್ಮ ಮಂತ್ರಿಮಂಡಲ ಅಥವಾ ತಮ್ಮ ಸದಸ್ಯರಲ್ಲಿ ಶಿಥಿಲತೆಯು ಪ್ರವೇಶವಾಗಿದೆಯೋ ಇಲ್ಲವೇ ಎಂದು ತಾವು ಹೇಳಬೇಕು. But any way this government now is in ruins. That is all I can Say.

ಅಧ್ಯಕ್ಷರು.—ನೆಕ್ಸ್ಟ್ ಪ್ರಭಾಕರ್ ರಾಣೆ ಆಬ್ಸೆಂಟ್. ನೆಕ್ಸ್ಟ್ ಖರ್ಗೆಯವರು. ಇನ್ನು ಕೆ. ಹೆಚ್. ಶ್ರೀನಿವಾಸ್ ಮತ್ತು ಇದಿನಬ್ಬ ಅವರು ಇದ್ದಾರೆ. ಮುಖ್ಯಮಂತ್ರಿಗಳಿಂದ ಮೂರು ಗಂಟೆಗೆ ಉತ್ತರ ಮಾನ್ಯ ಖರ್ಗೆಯವರೇ ತಾವು ಪ್ರಾರಂಭ ಮಾಡಿ.

† ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರು ಮಿಟಕಲ್).—ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಅನೇಕ ಸದಸ್ಯರು ಮತ್ತು ನಮ್ಮ ನಾಯಕರು ಕೂಡಾ ಮಾನ್ಯ ಮುಖ್ಯಮಂತ್ರಿಯವರ ಬೇಡಿಕೆಗಳ ಮೇಲೆ ಮಾತನಾಡಿದ್ದಾರೆ. ಮತ್ತು ಅನೇಕ ವಿಷಯಗಳನ್ನು ಕೂಡಾ ಈ ಸದನದ ಮುಂದೆ ಪ್ರಸ್ತಾಪ ಮಾಡಿದ್ದಾರೆ. ನಮ್ಮ ಮುಂದೆ ಗೃಹ ಖಾತೆ ಹಾಗೂ ಹಣಕಾಸು ಇಲಾಖೆ ಮತ್ತು ಇನ್ನು ಎರಡು ಮೂರು ಸಣ್ಣಪುಟ್ಟ ಖಾತೆಗಳು ಕೂಡಾ ಈ ಮುಖ್ಯಮಂತ್ರಿಯವರ ಜೊತೆಯಲ್ಲಿ, ಇವತ್ತಿನ ದಿವಸ ಇವೆ. ಮಾನ್ಯ ಮುಖ್ಯಮಂತ್ರಿಗಳು ಏಪ್ರಿಲ್ ತಿಂಗಳಿಂದ ನಿನ್ನೆಯವರೆಗೂ ಸ್ವಲ್ಪ ಸುಸ್ತಾಗಿದ್ದರು. ಅಲಹಾಬಾದ್‌ಗೆ ಹೋಗಿ ಬಂದಮೇಲೆ ಟೈಮ್ಸ್ ಆಫ್ ಇಂಡಿಯಾದ ಪತ್ರಿಕೆಯಲ್ಲಿ ಫೋಟೋ ಬಂದಿದೆ.

ಅಧ್ಯಕ್ಷರು.—ಲೀಡ್ ಇದೆಯೋ ಹೇಗೆ ಇದ್ದರೆ ಹೇಳಿ, ಸ್ವಲ್ಪ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರಿಗೆ ಖುಷಿ ಇದೆ.

ಅಧ್ಯಕ್ಷರು.—೭೦ ಸಾವಿರವೋ ೭೫ ಸಾವಿರವೋ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ.—ಅಲಹಾಬಾದ್‌ಗೆ ಹೋಗಿ ಬಂದು ೭೮ ಸಾವಿರ ಲೀಡ ಇದೆ ಎಂದು ಹೇಳತಕ್ಕಂಥ ಖುಷಿಯಲ್ಲಿ ನಿನ್ನೆಯಿಂದಲೂ ಇದ್ದಾರೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಅಧ್ಯಕ್ಷರು.—ಅದಕ್ಕೆ ತಾವು ಕಾಂಪ್ಲಿಮೆಂಟ್ಸ್ ಕೊಡುತ್ತೀರಾ ಏನು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇಲ್ಲದಿದ್ದರೆ ಏಪ್ರಿಲ್ ತಿಂಗಳಿಂದ ನಿನ್ನೆಯವರೆಗೂ ಸುಸ್ತು ಆಗಿದ್ದರು. ಸ್ವಲ್ಪ ಮಟ್ಟಿಗೆ ನಿನ್ನೆಯಿಂದ ಸ್ವಲ್ಪ ಉಸಿರಾಡುತ್ತಿದ್ದಾರೆ. ಏಕೆಂದರೆ ಅವರಿಗೂ ಕೂಡ ಸ್ವಲ್ಪ ರಾಜಕೀಯವಾಗಿ ಮಾನಸಿಕವಾಗಿ ಸ್ವಲ್ಪ ಲಿಬರೇಟ್ ಆದ ಹಾಗೆ ಕಾಣುತ್ತಾರೆ. ಈಗ ಅದಕ್ಕೆ ಇವೊತ್ತು ನಿಮಗೆ ಏನು ಎಂದರೆ, ಅಲ್ಲಿ ಏನಾದರೂ ಆದರೆ ಇಲ್ಲಿ ಎಫೆಕ್ಟ್ ಆಗುತ್ತದೆ. ಇಲ್ಲಿ ನಿಮಗೆ ಸ್ವಂತ ಮಾಡತಕ್ಕಂಥ ಶಕ್ತಿ ಇವತ್ತು ಇಲ್ಲ. ಅದೆಲ್ಲವನ್ನೂ ಕೂಡಾ ನೀವು ಕಳೆದುಕೊಂಡಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಅಲ್ಲಿಯೂ ಕೂಡಾ ಅದೇ ರೀತಿ ಹೇಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆ ಮಾನ್ಯ ಮುಖ್ಯಮಂತ್ರಿಗಳು ಖುಷಿಯಲ್ಲಿದ್ದಾರೆ. ೧೫ನೇ ತಾರೀಖಿನ ದಿವಸ ಪೋಲಿಂಗ್ ಡೇ, ದಿವಸ ಅಲ್ಲಿ ಏನು ವ್ಯವಸ್ಥೆಯನ್ನು ಮಾಡಬೇಕಾಗಿತ್ತು, ಅದನ್ನು ಮಾಡಿ ಬಂದಿದ್ದಾರೆ, ಅದಕ್ಕೆ ನನ್ನ ತಕರಾರು ಇಲ್ಲ. ಪ್ರತಿಯೊಂದು ವಿರೋಧ ಪಕ್ಷದವರು ಮಾಡುತ್ತಾರೆ. ಆದರೂ ಕೂಡಾ ಇವರು ಅವರಿಗೆ ಏನು ಬೇಕಾಗಿತ್ತೋ ಅದೆಲ್ಲವನ್ನೂ ಸಂಗ್ರಹಿಸಿ ಕೊಂಡು ಹೋಗಿ ಮಾಲಾಮಸಾಲಾವನ್ನು ಕೊಟ್ಟು ಬಂದಿದ್ದಾರೆ. ಅದಕ್ಕೆ ನಮ್ಮದೇನೂ ಅಡ್ಡಿ ಇಲ್ಲ.

Sri RAMAKRISHNA HEGDE.—This is not correct. ಈಗ ಅವರ ಪಕ್ಷದ ಜನರಲ್ ಸೆಕ್ರೆಟರಿಯವರು ಯಾವ ಒಂದು ಜವಾಬ್ದಾರಿ ರಹಿತವಾದಂಥ ಮಾತನ್ನು ಹೇಳಿದ್ದಾರೋ ಅದೇ ತರಹದ ಮಾತನ್ನು ಇವರೂ ಹೇಳಬೇಕಾದ ಅಗತ್ಯ ಇಲ್ಲ. ಅವರು ಹೇಳಿದ್ದಾರೆ, ವಿ. ಪಿ. ಸಿಂಗ್‌ರವರು ಒಂದು ಕೋಟಿ ಅರವತ್ತು ಲಕ್ಷ ರೂಪಾಯಿಯನ್ನು ಈ ಚುನಾವಣೆಯಲ್ಲಿ ಖರ್ಚು ಮಾಡಿದ್ದಾರೆ ಎಂದು. ಇದಕ್ಕಿಂತ ಫೆಂಟಾಸ್ಟಿಕ್ ಫಾಲ್ಸ್ ಬೇರೆ ಯಾವುದೂ ಇರಲಿಕ್ಕಿಲ್ಲ, ಅದನ್ನೇ ಟಿ.ವಿ. ಯಲ್ಲಿ ಸ್ವತಃ ನಾನು ನೋಡಿದ್ದೇನೆ. ಆಗ ಅವರು ನೀವು ಎಷ್ಟು ಖರ್ಚು ಮಾಡಿದ್ದೀರಿ ಎಂದು. ಪ್ರಶ್ನೆಯನ್ನು ಕೇಳಿದಾಗ ನಮ್ಮವರೆಲ್ಲಾ ವಾಲೆಂಟರಿ ಆಗಿ ಬಂದು ವಾಲೆಂಟರಿ ಆಗಿ ಕೆಲಸ ಮಾಡಿದರು, ತಮ್ಮ ಖರ್ಚಿನಿಂದಲೇ ತಾವು ಊಟ ಮಾಡಿದರು, ತಮ್ಮ ಖರ್ಚಿನಿಂದಲೇ ಪ್ರವಾಸ ಮಾಡಿದರು ಎಂದು ಹೇಳಿದರು. ಆದ್ದರಿಂದ ಆ ಒಂದು ವಿಚಾರಕ್ಕೆ ತಾವು ಹೋಗುವುದು ಬೇಡ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದು ಏನೇ ಇರಲಿ. ನೀವು ವಿ. ಪಿ. ಸಿಂಗ್ ಅವರ ಸನ್–ಇನ್‌ಲಾ ಹೇಳಿದ್ದನ್ನು ಕೇಳಿದಿರಾ ? ೩೫ ಸಾವಿರ ರೂಪಾಯಿ ಖರ್ಚು ಮಾಡಿದ್ದಾರೆಂದು ಡಾ॥ ಸಂಜಯ್‌ಸಿಂಗ್‌ಹೇಳಿದರು. ಅದು ಕೂಡಾ ಟಿ. ವಿ. ಯಲ್ಲಿ ಬಂತು, ಅದಕ್ಕೆ ನೀವು ಏನೂ ಹೇಳುವುದು ಬೇಡ. ನೀವು ಹೋಗಿದುದ್ದು ನಿಜ. ನೀವು ಮಾಲ್‌ಮಸಾಲ ತೆಗೆದುಕೊಂಡು ಹೋಗಿದುದ್ದು ನಿಜ. ಅದು ಏನಾದರಾಗಲಿ. ಒಟ್ಟಿನಲ್ಲಿ ನಿಮಗೆ ಸಂತೋಷ ಆಗಿದೆ, ವಿ. ಪಿ. ಸಿಂಗ್‌ರವರಿಗೆ ಲೀಡ್ ಬಂದಿದೆ ಎಂದು ತಮಗೆ ಖುಷಿ ಅದು ಅಡ್ವಾನ್ಸ್ ಆಗಿ ಹೋಗಿರಬಹುದೋ ಅಥವಾ ಆ ಮೇಲೆ ಹೋಗಿರಬಹುದು, ಅದನ್ನು ಬಿಡಿ.

(ಗೊಂದಲ)

ಪ್ರೊ॥ ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಹೆಗಡೆಯವರು ಹೋಗಿದುದ್ದು ಚುನಾವಣಾ ಪ್ರಚಾರ ನಿಂತು ಹೋದಮೇಲೆ ಅವರು ಭಾಷಣ ಮಾಡುವುದಕ್ಕೆ ಆಗಲಿಲ್ಲ. ಓಟು ಕೇಳುವುದಕ್ಕೆ ಆಗಲಿಲ್ಲ. ಅದನ್ನೂ ಸಹ ತಾವು ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಪ್ರಚಾರದಲ್ಲಿದ್ದರೆಂದು ಫೋಟೋ ಬಂದಿದೆ. ಪೋಲಿಂಗ್ ಡೇ ವ್ಯವಸ್ಥೆಯಲ್ಲಿದ್ದರು ಎಂದು ಹೇಳಿ ಟೈಮ್ಸ್ ಆಫ್ ಇಂಡಿಯಾದಲ್ಲಿದೆ. ಅದನ್ನು ತಂದು ತಮಗೆ ತೋರಿಸಲೇ ?

ಶ್ರೀ ಎಂ.ಪಿ. ಪ್ರಕಾಶ್.—ಅಧ್ಯಕ್ಷರೇ, ೧೬ನೇ ತಾರೀಖಿನ ದಿವಸ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಹೋದರೆ ಮಾಲ್ ಮಸಾಲೆ ತೆಗೆದುಕೊಂಡು ಹೋಗುವ ಪ್ರಶ್ನೆಯೇ ಬರುವುದಿಲ್ಲ. ಆದರೆ ಡೆಲ್ಲಿಯಿಂದ ಇದನ್ನು ಮೊದಲೇ ಅವರ ಕಡೆಯವರು ತೆಗೆದುಕೊಂಡು ಹೋಗಿದ್ದರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮಗೆ ಏನಿದ್ದರೂ ಹರಿಯಾಣದಿಂದ ಮತ್ತು ಕರ್ನಾಟಕ ದಿಂದಲೇ ಹೋಗಬೇಕು. ಅದು ಏನೇ ಇರಲಿ, ಈಗ ನಮ್ಮ ಮುಂದೆ ಇರತಕ್ಕ ಮುಖ್ಯವಾದ ಪ್ರಶ್ನೆ

ಬಗ್ಗೆ ಈಗಾಗಲೇ ಮಾನ್ಯ ಮೊಯಿಲಿಯವರು, ಮಾನ್ಯ ಬಸವಲಿಂಗಪ್ಪನವರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇವೊತ್ತು ಜಿಲ್ಲೆಗಳಲ್ಲಿ ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್ ಏನು ಆಗಿದೆ ಎಂದರೆ ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಮಂತ್ರಿಗಳು ಕರ್ನಾಟಕ ಸರ್ಕಾರದ ಕಾರ್ಯಕ್ರಮಗಳನ್ನು ನೋಡಬೇಕು, ಅದನ್ನು ಇಂಪ್ಲಿಮೆಂಟ್ ಮಾಡಬೇಕು. ಕರ್ನಾಟಕ ರಾಜ್ಯದ ಡೆವಲಪ್‌ಮೆಂಟ್ ಪ್ರೋಗ್ರಾಂ ಎಂದು, ಹಿಂದೆ ೨೦ ಅಂಶಗಳ ಕಾರ್ಯಕ್ರಮಗಳಿದ್ದವು. ಅದನ್ನು ಸರಿಯಾದ ರೀತಿಯಿಂದ ನಿರ್ವಹಿಸಬೇಕು ಎಂದು ಹೇಳಿ ಜಿಲ್ಲಾ ಮಂತ್ರಿಗಳನ್ನು ಪ್ರತಿ ಜಿಲ್ಲೆಯಲ್ಲಿ ಉಸ್ತುವಾರಿ ಮಂತ್ರಿಗಳಾಗಿ ನೇಮಕ ಮಾಡಿದ್ದೀರಿ. ಆದರೆ ನಾನು ಕೇಳುವುದು ಏನು ಎಂದರೆ, ಎಷ್ಟು ಮಂತ್ರಿಗಳು ಪ್ರತಿ ಜಿಲ್ಲೆಯಲ್ಲಿ ಕರ್ನಾಟಕ ಡೆವಲಪ್‌ಮೆಂಟ್ ಪ್ರೋಗ್ರಾಂ ಅನ್ನು ರಿವ್ಯೂ ಮಾಡಿ ಸರ್ಕಾರಕ್ಕೆ ವರದಿಗಳನ್ನು ಸಲ್ಲಿಸಿದ್ದಾರೆ. ಯಾಕೆಂದರೆ ನನಗೆ ಗೊತ್ತಿದ್ದ ಹಾಗೆ ಈ ಪ್ರಶ್ನೆಯನ್ನು ನಾನು ಸದನದಲ್ಲಿ ಹಲವಾರು ಬಾರಿ ಕೇಳುತ್ತಿದ್ದೇನೆ. ಕರ್ನಾಟಕ ಡೆಟ್ ರಿಲೀಫ್ ಆಕ್ಟ್ ಕೆಳಗೆ ಬರುವ ಬಡವರಿಗೆ ಮತ್ತು ಯಾರಿಗೆ ವಾರ್ಷಿಕ ಆದಾಯವು ಮೂರು ಸಾವಿರದ ಆರು ನೂರಕ್ಕಿಂತ ಕಡಿಮೆ ಇದೆ ಅಂಥವರಿಗೆ ಏನು ರಿಲೀಫ್ ಕೊಡಬೇಕು ಎಂದು ಕೇಳಿ, ಕಾನೂನಿನಲ್ಲಿ ಇದೆ, ಅವರು ಅಗ್ರಿಕಲ್ಚರ್ ಲೇಬರರ್ಸ್ ಆಗಿರಬಹುದು ಅಥವಾ ಅಗ್ರಿಕಲ್ಚರಿಸ್ಟ್ ಆಗಿರಬಹುದು ಅದನ್ನು ಯಾರು ಇಂಪ್ಲಿಮೆಂಟ್ ಮಾಡಬೇಕು ಯಾವ ಖಾತೆ ಅದನ್ನು ನಿರ್ವಹಿಸುತ್ತದೆ ಎಂದು ಕೇಳಿದರೆ, ಪ್ರತಿ ಸಲ ಬಜೆಟ್ ಪಾಸ್ ಆಗುವಾಗ ಅವರು ಅಧಿಕಾರಿಗಳಿಗೆ ಕೇಳುತ್ತಾರೆ, ನಂತರ ಅದು ನನ್ನ ಖಾತೆಗೆ ಬರುವುದಿಲ್ಲ, ರೆವಿನ್ಯೂ ಖಾತೆಗೆ ಬರುತ್ತದೆ ಎಂದು ಹೇಳುತ್ತಾರೆ. ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರನ್ನು ಕೇಳಿದರೆ ಅದು ನಮಗೆ ಬರುವುದಿಲ್ಲ ಎಂದು ಹೇಳುತ್ತಾರೆ, ಅಂದರೆ ಯಾವ ಕಾನೂನಿನ ಅಡಿಯಲ್ಲಿ ಇದು ಬರುತ್ತದೆ ಅಂದು ತಿಳಿದುಕೊಳ್ಳುವುದಕ್ಕೆ ಮೂರು ಸಾರಿ ಇದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಇವರು ಬಡವರ ಬಗ್ಗೆ ಯಾವ ರೀತಿ ಚಿಂತನೆ ಮಾಡುತ್ತಿದ್ದಾರೆ ಎಂಬುದನ್ನು ತಮ್ಮ ಗಮನಕ್ಕೆ ತಂದಿದ್ದೇನೆ. ಈ ಆಕ್ಟ್ ಬಗ್ಗೆ ಇವರಿಗೆ ಸರಿಯಾದ ಮಾಹಿತಿ ಇಲ್ಲ. ಯಾವ ರೀತಿ ಇದು ರಚನೆ ಆಗಿದೆ. ಯಾರಿಗೆ ರಿಲೀಫ್ ಸಿಕ್ಕಿದೆ, ಅದು ಕೂಡ ಗೊತ್ತಿಲ್ಲವೆಂದ ಮೇಲೆ ಮಂತ್ರಿಗಳು ಅಧಿಕಾರ ಚಲಾವಣೆಯನ್ನು ಯಾವ ರೀತಿ ಮಾಡುತ್ತಾರೆ ? ರಿವ್ಯೂ ಹೇಗೆ ಮಾಡುತ್ತಾರೆ ? ಇದನ್ನು ಅಸಿಸ್ಟೆಂಟ್ ಕಮಿಷನರ್‌ರವರಿಗೆ ನೇರವಾಗಿ ಅವರ ಅಪ್ಲಿಕೇಷನ್ ಅನ್ನು ತೆಗೆದುಕೊಂಡು ಅವರಿಗೆ ರಿಲೀಫ್ ಕೊಡತಕ್ಕಂಥ ಕೆಲಸ ಮಾಡಬೇಕು. ಇದು ಸಹಕಾರ ಇಲಾಖೆ ಕೆಳಗೆ ಬರುತ್ತದೆ, ಆದರೆ ಅದು ಇವರಿಗೆ ಗೊತ್ತಿಲ್ಲ. ಹೀಗೆ ಆಡಳಿತ ಇಂತಹ ಒಂದು ಸ್ಥಿತಿಯಲ್ಲಿ ಇದೆ. ಈ ಒಂದು ಸ್ಥಿತಿಯಲ್ಲಿ ನೀವು ಆಡಳಿತವನ್ನು ನಡೆಸುತ್ತಿದ್ದೀರಿ. ಮಾನ್ಯ ಏಕಾಂತಯ್ಯನವರು ನನಗೆ ಈ ವಿಚಾರ ಗೊತ್ತಿರಲಿಲ್ಲ, ಈಗ ಮಾಹಿತಿ ಬಂದಿದೆ, ತರಿಸಿ ಹೇಳುತ್ತೇನೆ ಎಂದರು. ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ, ಏನೆಂದರೆ ಆವರು ಉಸ್ತುವಾರಿ ಮಂತ್ರಿಗಳು, ಅಂದರೆ ಡಿಸ್ಟ್ರಿಕ್ಟ್ ಇನ್‌ಛಾರ್ಜ್ ಮಂತ್ರಿಗಳ ಸಭೆಗಳನ್ನು ಕರೆದು ನೀವು ಜಿಲ್ಲೆಗಳಲ್ಲಿ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ, ಏಕೆ ಸಭೆ ಕರೆಯಲಿಲ್ಲವೆಂದು ಸಂಬಂಧಪಟ್ಟ ಮಂತ್ರಿಗಳನ್ನು ಕೇಳಿದ್ದರೆ, ಈ ಪ್ರಶ್ನೆಗಳನ್ನು ನಾನು ಕೇಳುವ ಅಗತ್ಯ ಇರುತ್ತಿರಲಿಲ್ಲ. ಅದು ಆಗಿಲ್ಲ. ಅದು ಯಾಕೆ ಆಗಿಲ್ಲವೆಂದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಪುರಸೊತ್ತು ಇಲ್ಲ. ನಮ್ಮ ರಾಜ್ಯದಲ್ಲಿ ಅರ್ಧ ದಿವಸ ಇದ್ದರೆ ಇನ್ನು ಉಳಿದ ಅರ್ಧ ದಿವಸ ಹೊರಗಡೆ ಇರುತ್ತಾರೆ. ಹೊರಗಡೆ ಟೂರ್‌ನಲ್ಲಿ ಪರದೇಶಗಳಲ್ಲಿ ದೆಹಲಿಯಲ್ಲಿ ಇರುತ್ತಾರೆ. ಅಂದರೆ ಆಡಳಿತವನ್ನು ಯಾವ ರೀತಿ ನಡೆಸುತ್ತಿದ್ದಾರೆ ಎಂದು ಇದರಿಂದ ಅರ್ಥವಾಗುತ್ತದೆ. ನೀವು ಆಡಳಿತದ ಬಗ್ಗೆ ಗಮನ ಹರಿಸದೇ ಹೋದರೆ ಜಿಲ್ಲೆಗಳಲ್ಲಿ, ತಾಲ್ಲೂಕುಗಳಲ್ಲಿ, ಹಳ್ಳಿಗಳಲ್ಲಿ ಏನು ಆಗುತ್ತಿದೆ ಎಂದು ಒಬ್ಬರಿಗೂ ಕೂಡ ಗೊತ್ತಾಗುವುದಿಲ್ಲವೆಂದು ಹೇಳುತ್ತೇನೆ. ಇದೇ ಕಾರಣದಿಂದ ಈ ಬಗ್ಗೆ ನಮ್ಮನ್ನು ಕೇಳುವವರಿಲ್ಲವೆಂದುಕೊಂಡು ಮಂತ್ರಿಗಳೂ ಸಹ ಈ ಕೆಲಸ ಮಾಡುತ್ತಿಲ್ಲ. ಜಿಲ್ಲೆಯ ಅಭಿವೃದ್ಧಿ ಬಗ್ಗೆ ಆಯಾ ಜಿಲ್ಲೆಯ ಉಸ್ತುವಾರಿ ಮಂತ್ರಿಗಳು ರಿವ್ಯೂ ಮಾಡದೇ ಹೋದರೆ, ಆ ಜಿಲ್ಲೆಯ ಡಿ.ಸಿ. ಅವರು, ಸ್ಪೆಷಲ್ ಡಿ.ಸಿ. ಅವರು, ಎ.ಸಿ. ಅವರು, ತಹಸೀಲ್ದಾರರು ಹಾಗೂ ಬೇರೆ ಬೇರೆ ಇಲಾಖೆಗಳ ಅಧಿಕಾರಿಗಳು ಕೂಡ ಇದರ ಕಡೆಗೆ ಗಮನಹರಿಸುವುದಿಲ್ಲ. ಈ ಬಗ್ಗೆ ತಾವು ಎಲ್ಲಾ ಜಿಲ್ಲೆಗಳಿಂದ ವಿವರಗಳನ್ನು ತರಿಸಿಕೊಳ್ಳಬೇಕು. ಎಷ್ಟು ಜನರು ಇದನ್ನು ರಿವ್ಯೂ ಮಾಡಿದ್ದಾರೆ, ಎಷ್ಟು ಮೀಟಿಂಗ್‌ಗಳನ್ನು ನಡೆಸಿದ್ದಾರೆ, ನೀವು ಕೊಟ್ಟಂತಹ ಗುರಿಯನ್ನು ಎಷ್ಟರಮಟ್ಟಿಗೆ ಸಾಧನೆ ಮಾಡಿದ್ದಾರೆಂಬ ವಿವರಗಳನ್ನು ತಾವು ಈ ಸದನಕ್ಕೆ ತಿಳಿಸಬೇಕು ?

ಇನ್ನು ಅಡ್ಮಿನಿಸ್ಟ್ರೇಷನ್‌ನಲ್ಲಿ ಎಲ್ಲರೂ ಸಹ ಪಾಲ್ಗೊಳ್ಳುವಂತಹ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂದು ನಾವು ಅನೇಕ ಸಲ ಈ ಸದನದ ಮುಂದೆ ಹೇಳಿದ್ದೇವೆ. ಈ ದೇಶದಲ್ಲಿರತಕ್ಕಂಥ

ಪ್ರತಿಯೊಬ್ಬ ಪ್ರಜೆಯು ಮನಸ್ಸಿನಲ್ಲಿಯೂ ಸಹ, ''ಈ ಸರ್ಕಾರ ಇರುವುದು ನನಗಾಗಿ'' ಏನಾದರು ಹೇಳಿದರೆ ಅದನ್ನು ಕೇಳುವವರಿದ್ದಾರೆಂಬ ಭಾವನೆ ಮತ್ತು ವಿಶ್ವಾಸ ಮೂಡುವ ರೀತಿಯಲ್ಲಿ ನಾವು ಆಡಳಿತವನ್ನು ನಡೆಸಬೇಕಾಗುತ್ತದೆ. ಇದು ಎಲ್ಲ ಕಡೆ ಜಾರಿಗೆ ಬರಬೇಕಾದರೆ ತಾಲ್ಲೂಕ್ ಮಟ್ಟದಲ್ಲಿಯೇ ಆಗಲಿ, ಜಿಲ್ಲಾ ಮಟ್ಟದಲ್ಲಿಯೇ ಆಗಲೀ ಒಂದೇ ಜನಾಂಗದವರನ್ನು ಎಕ್ಸಿಕ್ಯುಟೀವ್ ಪೋಸ್ಟ್‌ಗಳಿಗೆ ನೇಮಕ ಮಾಡಬಾರದು. ಎಕ್ಸಿಕ್ಯುಟೀವ್ ಪೋಸ್ಟ್‌ಗಳು ಅಂದರೆ, ಅದು ಎಸ್.ಪಿ. ಪೋಸ್ಟ್ ಇರಬಹುದು, ಡಿ.ಸಿ. ಪೋಸ್ಟ್ ಇರಬಹುದು, ''ಸ್ಪೆಷಲ್ ಡಿ.ಸಿ. ಪೋಸ್ಟ್ ಇರಬಹುದು'' ಜಿಲ್ಲಾಪರಿಷತ್ ಚೀಫ್–ಸೆಕ್ರೆಟರಿ ಪೋಸ್ಟ್ ಇರಬಹುದು, ''ಎಕ್ಸಿಕ್ಯುಟೀವ್ ಇಂಜಿನೀಯರ್ ಪೋಸ್ಟ್ ಇರಬಹುದು'', ಇಂತಹ ಪೋಸ್ಟ್‌ಗಳಿಗೆ ಒಂದೇ ಜಾತಿಯವರನ್ನು ನೇಮಕ ಮಾಡಬಾರದು. ಎಲ್ಲಿಯಾದರೂ ಈ ರೀತಿ ಮಾಡಿದ್ದರೆ, ಅದನ್ನು ಬದಲಾವಣೆ ಮಾಡುವುದು ಉಚಿತ. ಎಲ್ಲೆಲ್ಲಿ ಡಾಮಿನೆಂಟ್ ಕಮ್ಯುನಿಟಿ ಜನರಿರುತ್ತಾರೆ ಅಲ್ಲಿಗೆ ಬೇರೆ ಬೇರೆ ಕಮ್ಯುನಿಟಿ ಜನರನ್ನು ಹಾಕಬೇಕು. ಎಸ್.ಪಿ. ಡಿ.ಸಿ. ಮುಂತಾದವರು ಬೇರೆ ಬೇರೆ ಜನಾಂಗದವರಾಗಿರಬೇಕು. ಇವರಲ್ಲಿ ಜಾತೀಯ ಭಾವನೆ ಇರುವುದಿಲ್ಲ, ಇವರು ಯಾರಿಗೂ ತಾರತಮ್ಯ ಮಾಡುವುದಿಲ್ಲವೆಂದು ತಾವು ಹೇಳಿದರೂ ಸಹ ಈ ನಮ್ಮ ಸಮಾಜದಲ್ಲಿ ಶೋಷಣೆ ಮಾಡುವುದು ಮಾತ್ರ ನಿಂತಿಲ್ಲ ಕೆಲವರು ತಮ್ಮ ಕೆಲಸ ಮಾಡಿಸಿಕೊಳ್ಳಲು ರಾಜಕೀಯವಾಗಿ ಇನ್‌ಫ್ಲ್ಯೂಯೆನ್ಸ್ ಮಾಡಿಸಬಹುದು, ಮತ್ತೆ ಕೆಲವರು ತಮ್ಮ ತಮ್ಮ ಸಂಬಂಧೀಕರನ್ನು ಕರೆದುಕೊಂಡು ಹೋಗಿ ಕೆಲಸ ಮಾಡಿಸಿಕೊಳ್ಳಲು ಇನ್‌ಫ್ಲೂಯೆನ್ಸ್ ಮಾಡಿಸುತ್ತಾರೆ. ಇದನ್ನು ತಪ್ಪಿಸಬೇಕಾದರೆ ಎಕ್ಸಿಕ್ಯುಟೀವ್ ಪೋಸ್ಟ್‌ಗಳಿಗೆ ಬೇರೆ ಬೇರೆ ಜಾತೀಯ ಅಧಿಕಾರಿಗಳನ್ನು ಹಾಕುವುದು ಒಳ್ಳೆಯದು.

ಶ್ರೀ ರಾಮಕೃಷ್ಣ ಹೆಗಡೆ.—ಈಗ ನಾವು ಅದೇ ರೀತಿ ಮಾಡುತ್ತಿರುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಜಿಲ್ಲಾ ಮಟ್ಟದಲ್ಲಿ ನೀವು ಆ ರೀತಿ ಮಾಡಿರಬಹುದು. ಆದರೆ ತಾಲ್ಲೂಕ್ ಮಟ್ಟದಲ್ಲಿ ಇನ್ನೂ ಈ ಪದ್ಧತಿ ಜಾರಿಗೆ ಬಂದಿಲ್ಲ. ಕೆಲವು ಸಲ ಶಾಸಕರು ಇಲ್ಲವೇ ಮಂತ್ರಿಗಳು ಇಲ್ಲವೇ ಬೇರೆ ಯಾರಾದರು ತಮ್ಮ ಬಳಿ ಬಂದು ತಮ್ಮ ಜಿಲ್ಲೆಗೆ ಇಲ್ಲವೇ ತಮ್ಮ ತಾಲ್ಲೂಕ್‌ಗೆ ಇಂತಹದವರನ್ನೇ ನೇಮಕ ಮಾಡಬೇಕೆಂದು ತಮ್ಮ ಮೇಲೆ ಪ್ರಭಾವ ಬೀರಬಹುದು, ಆಗ ತಾವು ಅವರ ಪ್ರಭಾವಕ್ಕೆ ಒಳಗಾಗಿ ತಹಶೀಲ್‌ದಾರರ ಹುದ್ದೆಗಳಿಗೆ, ಸರ್ಕಲ್ ಇನ್ಸ್‌ಪೆಕ್ಟರ್ ಹುದ್ದೆಗಳಿಗೆ, ಡಿವೈಎಸ್‌ಪಿ ಹುದ್ದೆಗಳಿಗೆ, ಎಕ್ಸಿಕ್ಯೂಟೀವ್ ಇಂಜೀನೀಯರ್ ಹುದ್ದೆಗಳಿಗೆ, ಜಿಲ್ಲಾಪರಿಷತ್‌ನ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ ಹುದ್ದೆಗಳಿಗೆ ಅಂದರೆ ಈ ಎಕ್ಸಿಕ್ಯುಟೀವ್ ಪೋಸ್ಟ್‌ಗಳಿಗೆ ಒಂದೇ ಜಾತಿಯವರನ್ನು ಮಾತ್ರ ಹಾಕಬಾರದು. ಒಂದು ವೇಳೆ ಜಿಲ್ಲಾಪರಿಷತ್‌ನಲ್ಲಿ ಕೆಲಸ ಮಾಡುವಂತಹ ಚೀಫ್ ಸೆಕ್ರೆಟರಿ ಮತ್ತು ಇನ್ನಿತರ ಅಧಿಕಾರಿಗಳು ಏನಾದರು ಒಂದೇ ಜಾತಿಯವರಾಗಿ ಬಿಟ್ಟರೆ ಅವರೆಲ್ಲರೂ ಸೇರಿಕೊಂಡು ರಾತ್ರೋರಾತ್ರಿ ಬಿಲ್ ತಯಾರಿಸಿ ದುಡ್ಡನ್ನು ಡ್ರಾ ಮಾಡಿ ತಮಗಿಷ್ಟ ಬಂದಂತೆ ಖರ್ಚು ಮಾಡಬಹುದು. ಅನಂತರ ನಾವು ಈ ಬಗ್ಗೆ ಇಲ್ಲಿ ಏನೇ ಹೇಳಿದರೂ ಪ್ರಯೋಜನವಾಗುವುದಿಲ್ಲ. ಅವರೆಲ್ಲರೂ ಸೇರಿಕೊಂಡು ಹಣ ತಿಂದು ಹಾಕಿದ ಮೇಲೆ ನಾವು ತನಿಖೆ ಮಾಡಿಸಿ ಎಂದು ಕೇಳುತ್ತೇವೆ. ನೀವು ಸಿ.ಓ.ಡಿ. ತನಿಖೆಗೆ ಏರ್ಪಾಡು ಮಾಡುತ್ತೀರಿ. ಆಗ ಈ ಜನರು ಸಿ.ಓ.ಡಿ. ಅಧಿಕಾರಿಗಳ ಮೇಲೂ ಸಹ ಪ್ರಭಾವ ಬೀರಬಹುದು. ಕೊನೆಗೆ ತಪ್ಪು ಮಾಡಿದ ಕೆಲವು ಅಧಿಕಾರಿಗಳನ್ನು ಆ ಜಾಗದಿಂದ ಬೇರೆ ಕಡೆಗೆ ವರ್ಗ ಮಾಡುತ್ತೀರಿ. ಇದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಆಡಳಿತದಲ್ಲಿ ಮೊದಲು ಬಿಗಿ ಬರಬೇಕು. ಎಲ್ಲರಿಗೂ ಆಡಳಿತದಲ್ಲಿ ನ್ಯಾಯ ಸಿಗುವಂತಿರಬೇಕು. ಇದು ನಮ್ಮ ಸರ್ಕಾರವೆಂಬ ವಿಶ್ವಾಸವೆಲ್ಲಾ ಜನರಲ್ಲಿಯೂ ಮೂಡಬೇಕಾದರೆ ಎಕ್ಸಿಕ್ಯುಟೀವ್ ಪೋಸ್ಟ್‌ಗಳಲ್ಲಿ ಒಂದೇ ಜಾತಿಯವರನ್ನು ನೇಮಕ ಮಾಡುವುದನ್ನು ಕೈಬಿಡಬೇಕು. ಈ ನಮ್ಮ ಸಮಾಜದಲ್ಲಿರುವ ಎಲ್ಲಾ ಜನರಿಗೂ ಆಡಳಿತದಲ್ಲಿ ನ್ಯಾಯವನ್ನು ದೊರಕಿಸಿ ಕೊಡುವಂತಹ ಕೆಲಸವನ್ನು ತಾವು ಮಾಡಬೇಕು. ಅದನ್ನು ಬಿಟ್ಟು ತಾವೇನಾದರೂ ಭಿನ್ನಮತೀಯ ಶಾಸಕರನ್ನು ಫ್ರೀಜ್ ಮಾಡಬೇಕು ಜೊತೆಗೆ ನಿಮ್ಮ ಶಾಸಕರನ್ನು ಸಹ ಫ್ರೀಜ್ ಮಾಡಬೇಕು ಎಂದು ಅವರು ಹೇಳಿದ್ದನ್ನೆಲ್ಲಾ ಕೇಳಿಕೊಂಡು ನೀವು ಆಡಳಿತ ನಡೆಸಿದ್ದೇ ಆದರೆ, ಈಗಿರುವಂತಹ ಕರಪ್ಷನ್ ಅನ್ನು ತೆಗೆದುಹಾಕುವುದಕ್ಕಾಗುವುದಿಲ್ಲ. ನಿಮ್ಮ ಮೇಲೆ ಕೆಲವರ ಇಂಟರ್‌ಫಿಯರೆನ್ಸ್ ಜಾಸ್ತಿಯಾದರೆ, ನೀವು ಏನು ಸಾಧನೆ ಮಾಡಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದೀರೋ ಅದನ್ನು ಸಾಧನೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತೇನೆ. ತಾಲ್ಲೂಕ್ ಮಟ್ಟದಲ್ಲಿ ಬೇರೆ ಬೇರೆ ಜಾತಿಗೆ ಸೇರಿದವರನ್ನು ಎಕ್ಸಿಕ್ಯುಟೀವ್ ಪೋಸ್ಟ್‌ಗಳಿಗೆ ನೇಮಕ ಮಾಡುವಂತಹ ಕೆಲಸ ಇನ್ನೂ ಜಾರಿಗೆ ಬಂದಿಲ್ಲ. ಇದಕ್ಕೆ ಕಾರಣವೆಂದರೆ, ಅನೇಕ ಜನ ಶಾಸಕರ

ಆಡಳಿತದಲ್ಲಿ ಇಂಟರ್‌ಫಿಯರೆನ್ಸ್ ಮಾಡಿ ತಮಗೆ ಬೇಕಾದವರನ್ನೇ ತಮ್ಮ ತಾಲ್ಲೂಕ್‌ಗಳಿಗೆ ಹಾಕಿಸಿಕೊಳ್ಳುವಂತಹ ಕೆಲಸ ಮಾಡಿದ್ದಾರೆ, ಇಂತಹವರ ಒತ್ತಡಕ್ಕೆ ಮಣಿದು ಮುಖ್ಯಮಂತ್ರಿಗಳು ಇಂತಹ ಒಂದು ಕೆಲಸ ಮಾಡಿದ್ದಾರೆಂದು ಇವೊತ್ತಿನ ದಿವಸ ನಾನು ಹೇಳಬೇಕಾಗುತ್ತದೆ. ಈಗ ಕಳೆದ ೫ ವರ್ಷಗಳಲ್ಲಿ ನಾವು ಜಿಲ್ಲಾಪರಿಷತ್ ಎಲೆಕ್ಷನ್‌ನಲ್ಲಿ ಗೆಲ್ಲುತ್ತೇವೆ, ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ಮುಂದೆ ಬರುತ್ತೇವೆ ಅಥವಾ ನಾವು ಮಂಡಲ ಪಂಚಾಯಿತಿಯಲ್ಲಿ ಗೆಲ್ಲುತ್ತೇವೆ ಎಂಬ ಇಷ್ಟೆಲ್ಲಾ ಆಸೆಗಳನ್ನು ಇಟ್ಟುಕೊಂಡು ನಿಮಗೆ ಬೇಕಾದವರಿಗೆ ಅನುಕೂಲ ಮಾಡಿಕೊಂಡಿರಿ. ಆದರೆ ಇಲ್ಲಿಯವರೆಗೆ ನೀವು ಎಷ್ಟೇ ಪ್ರಯತ್ನ ಮಾಡಿದರೂ ಕೂಡ. ನಾವು ಸ್ವಚ್ಛ ಆಡಳಿತ ಕೊಡುತ್ತೇವೆ ಎಂದು ಹೇಳಿದರೂ ಕೂಡ ನಿಮ್ಮ ಕೈಯಿಂದ ಕೊಡಲಿಕ್ಕೆ ಆಗಲಿಲ್ಲ, ಇಂಟರ್‌ಫಿಯರೆನ್ಸ್ ಜಾಸ್ತಿಯಾಯಿತು. ಇವತ್ತು ಅನೇಕರು, ತಹಶೀಲ್ದಾರರು, ಬಿ.ಡಿ.ಒ. ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ಸ್ ಮುಂತಾದವರು ಏನು ಹೇಳುತ್ತಾರೆ ಅಂದರೆ, ಏನಪ್ಪ ಎಂತಹ ಸರ್ಕಾರ ಬಂತು ಎಂದು ? ನಾವು ಅನೇಕ ಶಾಸಕರು ಕೇಳಿಕೊಳ್ಳುತ್ತೇವೆ, ಆ ಶಾಸಕರಿಗೆ ಬೇಕಾದವರು ಮಾತ್ರ ಆ ತಾಲ್ಲೂಕಿನಲ್ಲಿ ಇರುತ್ತಾರೆ, ಬೇಕಾದವರನ್ನು ಮೂರು ದಿವಸ ಕಳಿಸುತ್ತಾರೆ ಎನ್ನತಕ್ಕ ಅಭಿಪ್ರಾಯವನ್ನು ತಾವು ಕೊಡುತ್ತಾ ಇದ್ದೀರಿ. ಬೇಕಾದರೆ ತಮ್ಮ ಅನೇಕ ಶಾಸಕರನ್ನು ಕೇಳಿಕೊಳ್ಳಿ. ಯಾರು ಇಂಪಾರ್ಷಿಯಲ್ ಇದ್ದಾರೋ ಅವರ ಅಭಿಪ್ರಾಯ ಏನಿದೆ ಎಂದು ತಿಳಿದುಕೊಳ್ಳಿ. ಇಂತಹ ಒಂದು ಕರಪ್ಟ್ ಆಡಳಿತ ಇವತ್ತು ತಾಲ್ಲೂಕು ಮಟ್ಟದಲ್ಲಿ ವಿಲೇಜ್ ಮಟ್ಟದಲ್ಲಿದೆ. ಇವತ್ತು ಜಿಲ್ಲಾಮಟ್ಟದಲ್ಲಿ ಸ್ವಲ್ಪ ಐ.ಎ.ಎಸ್. ಐ.ಪಿ.ಎಸ್. ಆಫೀಸರ್ಸ್ ಇದ್ದ ಕಾರಣ ಅಲ್ಲಿ ನಾವು ಮಾಡತಕ್ಕಂಥ ಈ ಒಂದು ಆಪಾದನೆ ಅಲ್ಲಿ ಬರಲಿಕ್ಕೆ ಇನ್ನೂ ಸಾಧ್ಯ ಆಗಿಲ್ಲ. ಅವರು ಯಾರೇ ಇರಬಹುದು, ನಮ್ಮ ಕಾಲದಲ್ಲೆ ಇರಬಹುದು, ನಿಮ್ಮ ಕಾಲದಲೇ ಇರಬಹುದು, ನಿಮ್ಮ ಗತ್ತು, ಕಾಲದಲ್ಲೆ ಇರಬಹುದು ನಿಮ್ಮ ತೂಕ ಆ ಮಟ್ಟದಲ್ಲಿದೆ. ಉಳಿದ ಮಟ್ಟದಲ್ಲಿ ಅಂದರೆ ಅದು ಪಿ.ಡಬ್ಲ್ಯು.ಡಿ. ಆಗಬಹುದು, ಜಿಲ್ಲಾ ಪರಿಷತ್ ಇರಬಹುದು ಅಥವಾ ಪಿ.ಹೆಚ್.ಸಿ. ಆಗಬಹುದು, ಅಲ್ಲಿ ಎಲ್ಲವೂಕೂಡ ವಿಪರೀತವಾದಂಥ ಕರಪ್‌ಷನ್ ಇವತ್ತಿನ ದಿವಸ ಇದೆ.ಅದನ್ನು ತೆಗೆದುಹಾಕಬೇಕು ಎಂದು ಇಲ್ಲಿಯವರೆಗೆಯಾವ ಪ್ರಯತ್ನವನ್ನೂ ಕೂಡ ತಾವು ಮಾಡಲಿಲ್ಲ, ಆದಾರಿಯಲ್ಲಿ,ದಿಕ್ಕಿನಲ್ಲಿ ಇವತ್ತಿನದಿವಸ ನೀವುಹೋಗಿಲ್ಲ. ನಾನು ಒಂದು ವಿಷಯವನ್ನು ಹೋದ ಸಲ ಈ ಸದನದ ಗಮನಕ್ಕೆ ತಂದೆ. ಕೆಲವು ಜಿಲ್ಲಾ ಪರಿಷತ್‌ನಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ಸ್, ಎಕ್ಸಿಕುಟೀವ್ ಇಂಜಿನಿಯರ್ಸ್ ಫಾಲ್ಸ್ ಬಿಲ್ ಮಾಡಿ ಎನ್.ಆರ್.ಇ.ಪಿ. ಯಲ್ಲಿ, ಆರ್.ಎಲ್.ಇ.ಜಿ.ಪಿ. ಯಲ್ಲಿ ತಿಂದು ಹಾಕುತ್ತಾ ಇದ್ದಾರೆ, ರಸ್ತೆಗಳೇ ಇಲ್ಲ, ಏಕೆಂದರೆ, ತಮಗೆ ಗೊತ್ತಿದೆ, ಮಡ್ ರೋಡ್ ನಾವು ಮಾಡಿದ್ದೇವೆ ಎಂದು ಹೇಳಿ ಬಿಡುತ್ತಾರೆ, ಹೇಳಿದ ಮೇಲೆ ಒಂದು ಮಳೆ ಬಂದರೆ, ಮೊನ್ನೆ ಮಳೆ ಬಂದಿತು ಎಲ್ಲಾ ಕೊಚ್ಚಿಕೊಂಡು ಹೋಯಿತು ಏನು ಮಾಡೋಣ ಎಂದು ಹೇಳುತ್ತಾರೆ. ಇನ್‌ಸ್ಪೆಕ್ಷನ್‌ಗೆ ಹೋದಾಗ ಈ ಕಾರಣ ಹೇಳುತ್ತಾರೆ, ಆ ಕಾರಣವನ್ನು ನಾವು ಅಕ್ಸೆಪ್ಟ್ ಮಾಡುತ್ತೇವೆ ಅಥವಾ ನಮ್ಮ ಮನಸ್ಸಿಗೆ ಒಪ್ಪಿಗೆಯಾಗದಿದ್ದರೂ ಕೂಡ ಅನೇಕ ಸಲ ನಮ್ಮ ಶಾಸಕರ ಒತ್ತಡಕ್ಕಾಗಿ, ಪಕ್ಷದ ಮುಖಂಡರ ಒತ್ತಡಕ್ಕಾಗಿ ನಾವು ಅದನ್ನು ಒಪ್ಪಿಕೊಂಡು ಬಿಡುತ್ತೇವೆ, ಇನ್‌ಆಕ್ಟೀವ್ ಆಗಿಬಿಡುತ್ತೇವೆ. ಅದಕ್ಕೆ ನೀವು ಕನಿಷ್ಟ ಪಕ್ಷ ಡಿಫರೆಂಟ್ ಪೀಪಲ್ಸ್ ಅನ್ನು, ಸ್ವಲ್ಪ ಕಮಿಟೆಡ್ ಇರತಕ್ಕವರನ್ನು ಹಾಕಬೇಕು. ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಅಧಿಕಾರಿಗಳನ್ನು ಹಾಕುವಾಗ ಎಂತಹ ಅಧಿಕಾರಿಗಳನ್ನು ಹಾಕಬೇಕು ಅಂದರೆ ಯಾರಿಗೆ ಬಡವರ ಬಗ್ಗೆ ಸ್ವಲ್ಪ ಕನಿಕರ ಇದೆ, ಕಳಕಳಿ ಇದೆ, ಕಾಳಜಿ ಇದೆ ಅಂತಹ ಅಧಿಕಾರಿಗಳನ್ನು ಹಾಕತಕ್ಕಂಥ ಪ್ರಯತ್ನ ಮಾಡಬೇಕು, ಸರ್ಕಾರದ ಕಾರ್ಯಕ್ರಮವನ್ನು ಯಾರು ಕಟ್ಟುನಿಟ್ಟಾಗಿ ಇಂಪ್ಲಿಮೆಂಟ್ ಮಾಡುತಾರೋ ಅಂಥವರನ್ನು ಹಾಕಬೇಕು. ಬರೀ ರೆಕಮೆಂಡೇಷನ್ ಮೇಲೆ ಜಾತಿಯ ರೆಕಮಂಡೇಷನ್ ಇದ್ದು ಅಥವಾ ನಿಮಗೆ ಬೇಕಾದವರು ಅಥವಾ ನಿಮ್ಮ ಬೆಂಬಲದವರು ಮಾತು ಕೇಳಿ ಹಾಕಿದರೆ ಆ ತಾಲ್ಲೂಕನ್ನು ಹಾಳುಮಾಡಿ ಬಿಡುತ್ತಾರೆ, ಆ ಜನರನ್ನು ಹಾಳು ಮಾಡುತ್ತಾರೆ, ಶೋಷಣೆ ಮಾಡುತ್ತಾರೆ. ಅದುದರಿಂದ ದಯವಿಟ್ಟು ಪ್ರೆಷರ್‌ನಿಂದ ಅಧಿಕಾರಿಗಳನ್ನು ಹಾಕತಕ್ಕಂಥ ಕೆಲಸ ಮಾಡಬಾರದು ಎಂದು ತಮ್ಮಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ ಇನ್ನೊಂದು ಮಾತನ್ನು ನಾವು ಹೇಳುತ್ತೇವೆ ಎಂದು ಅಲ್ಲ, ಆ ಕಡೆ ಇರತಕ್ಕಂಥ ೯೯ ಜನ– ಅವರೂ ಕೂಡ ಒಂದು ಮನವಿಯನ್ನು ಮುಖ್ಯ ಮಂತ್ರಿಗಳಿಗೆ ಕೊಟ್ಟಿದ್ದಾರೆ. ಏನೆಂದರೆ ಈ ಆಡಳಿತದಲ್ಲಿ ಕರಪ್‌ಷನ್ ಇದೆ, ಅನೇಕ ಅಧಿಕಾರಿಗಳು ಕರಪ್ಟ್ ಇದ್ದಾರೆ, ಇದನ್ನು ನೀವು ಸುಧಾರಿಸಬೇಕು. ಆಡಳಿತ ವ್ಯವಸ್ಥೆಯನ್ನು ಬದಲಾವಣೆ ಮಾಡಬೇಕು, ನಿಮ್ಮ ಸ್ಟೈಲ್ ಆಫ್ ಫಂಕ್ಷನಿಂಗ್ ಬದಲಾಯಿಸಬೇಕು ಎಂದು ಹೇಳಿದ್ದು ನಾವಲ್ಲ, ಆ ಕಡೆಯವರು. ನಾವಂತು ಹೇಳುತ್ತೇವೆ, ನಾವು ಹೇಳಿದರೆ, ಇದು ರಾಜಕೀಯದ ಮಾತು ಪೊಲಿಟಿಕಲ್ ಸ್ಟೇಟ್‌ಮೆಂಟ್, ಹೊಟ್ಟೆ ಕಿಚ್ಚಿಗಾಗಿ ಹೇಳುತ್ತಾರೆ ಎಂದು ಹೇಳುತ್ತೀರಿ. ಆದರೆ ಇದನ್ನು ಆ ಕಡೆಯ ೯೯ ಜನ ಸಿಗ್ನೇಚರ್‌ಮಾಡಿ ಕೊಟ್ಟಿದ್ದಾರೆ. ಈಗ ಗಟ್ಟಿಯಾಗಿ ಹೇಳುತ್ತಾ ಇದ್ದಾರೆ.

ಶ್ರೀ ಬಿ. ರಾಚಯ್ಯ.—ಅಲ್ಲ ಈಗ ೯೯ ಜನರೂ ಹೀಗೆ ಹೇಳುವುದಿಲ್ಲ, ಇದು ಸತ್ಯಕ್ಕೆ ದೂರವಾಗಿ ರತಕ್ಕಂಥಾದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಿನ್ನೆ ಮಂಡ್ಯದಲ್ಲಿ ಭಾಷಣವಾಗಿದೆ, ಕುಣಿಗಲ್‌ನಲ್ಲಿ ಭಾಷಣ ಆಯಿತು. ನಿಮ್ಮ ಆಡಳಿತದಲ್ಲಿ ಇರತಕ್ಕವರು ಭಾಗಿಯಾಗಿರತಕ್ಕವರು ನಿಮ್ಮ ಜೊತೆಯಲ್ಲಿದ್ದು, ಬೆಂಬಲ ಮಾಡತಕ್ಕವರು ಈ ಮಾತನ್ನು ಹೇಳುತ್ತಿದ್ದಾರೆ. ಅವರ ಬೆಂಬಲದಿಂದ ನೀವು ರಾಜ್ಯವನ್ನು ನಡೆಸುತ್ತಿದ್ದೀರಿ. ಸುಮಾರು ಮೂರನೆಯ ಒಂದು ಭಾಗದ ಜನ ಶಾಸಕರು ಓಪನ್ನಾಗಿ ಹೇಳುತ್ತಿದ್ದಾರೆ. ಮೊದಲು ೯೯ ಜನ ಹೇಳಿದರು, ನಂತರ ೧೦೨ ಜನ ಆಡಳಿತ ಸಂಪೂರ್ಣವಾಗಿ ಕೆಟ್ಟಿದೆ ಎಂದು ನಿಮ್ಮ ಪಕ್ಷದವರೇ ಒಪ್ಪಿಕೊಂಡಿದ್ದಾರೆ. ೧೩೯ ಜನ ಸದಸ್ಯರಲ್ಲಿ ೧೦೨ ಜನ ಈ ಮಾತನ್ನು ಒಪ್ಪಿದ್ದಾರೆ. ಎಲ್ಲರೂ ಆಡಳಿತ ಕೆಟ್ಟಿದೆ ಎಂದು ಹೇಳುವಾಗ, ಮುಖ್ಯಮಂತ್ರಿಗಳು ಮಾತ್ರ ಒಪ್ಪಿಕೊಂಡಿಲ್ಲ, ನಾನು ಸರಿಯಾಗಿ ನಡೆಸುತ್ತಿದ್ದೇನೆಂದು ಹೇಳುತ್ತಿದ್ದಾರೆ. ಇವರ ಅಧಿಕಾರಾವಧಿಯಲ್ಲಿ ೨೬ ಕಮೀಷನ್‌ಗಳನ್ನು ನೇಮಿಸಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—೯೧ ಜನ ಆಡಳಿತ ಸರಿಯಿಲ್ಲವೆಂದು ಬರೆದು ಕೊಟ್ಟಿದ್ದಾರೆಂದು ಹೇಳಿದರು. ಇದರ ಅರ್ಥ ಇಷ್ಟೆ, ಅವರು ಏನುಬೇಕಾದರೂ ಮಾಡಲಿ ಅವರು ಮಾಡುವುದು ಸರ್ಕಾರದ ಆಡಳಿತದ ಮೇಲೆ ಪ್ರಭಾವ ಬೀರಿ, ಸರ್ಕಾರದ ಯಂತ್ರ ಕುಸಿಯುತ್ತದೆ ಎನ್ನುವ ಭಾವನೆಯಿಂದ, ಬೇರೆ ಅಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನ್ಯಾಚುರಲ್ಲಾಗಿ ಎಲ್ಲರೂ ಇದೇರೀತಿ ಹೇಳುತ್ತಿದ್ದಾರೆ. ಮುಖ್ಯಮಂತ್ರಿಗಳು ಕೂಡ ಆಡಳಿತ ಕುಸಿದು ಬಿದ್ದಿದೆ, ಆಡಳಿತ ಶಿಥಿಲವಾಗಿದೆಯೆಂದು ಹಿರಿಯ ಅಧಿಕಾರಿಗಳಿಗೆ ಎಚ್ಚರಿಕೆ ಮಾತನ್ನು ಹೇಳಿದ್ದಾರೆ. ಅವರ ಸದಸ್ಯರು ಹೇಳುತ್ತಿದ್ದಾರೆ, ನಾವು ಯಾವಾಗಲೂ ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ. ಆದರೂ ನೀವು ಹೇಳಿದ್ದೇ ಸರಿ ಎಂದು ತಿಳಿದುಕೊಂಡರೂ ಸಹ, ಇವತ್ತು ಮುಖ್ಯಮಂತ್ರಿಗಳು ಬರೆದಂಥ ಆರ್ಡರನ್ನು ಇಂಪ್ಲಿಮೆಂಟ್ ಮಾಡಲು ಎರಡು ವರ್ಷ ಬೇಕಾಯಿತು. ವಿರೋಧ ಪಕ್ಷದ ನಾಯಕರು ಒಂದು ಕೆಲಸದ ಬಗ್ಗೆ ಮುಖ್ಯಮಂತ್ರಿಗಳಿಗೆ ತಿಳಿಸಿದಾಗ, ಅವರು ಆ ಕೆಲಸವನ್ನು ಮಾಡಿ ಎಂದು ಪತ್ರ ಬರೆದರೆ ಅದು ಒಂದೆರಡು ವರ್ಷಗಳ ಕಾಲ ಮೇಲಿನಿಂದ ಕೆಳಗೆ, ಕೆಳಗಿನಿಂದ ಮೇಲೆ ಓಡಾಡಿದೆ. ಅದು ಚಾಲ್ತಿಯಲ್ಲಿ ಬರಬೇಕಾದರೆ ಎರಡು ವರ್ಷವಾಗಿದೆ. ವಿರೋಧ ಪಕ್ಷದವರು ಏನು ಹೇಳಿದರೂ ಅಧಿಕಾರಿಗಳು ಕೇಳುವುದಿಲ್ಲ. ಈ ರೀತಿ ನಿಮ್ಮ ಆಡಳಿತದ ವೈಖರಿ ನಡೆಯುತ್ತಿದೆ. ವಿರೋಧ ಪಕ್ಷದ ನಾಯಕರು ೮೩ ರಿಂದ ಸಾರ್ವಜನಿಕ ವಿಷಯಕ್ಕೆ ಸಂಬಂಧಿಸಿದಂತೆ ಎಷ್ಟು ವಿಚಾರಣ ಆಯೋಗಗಳನ್ನು ರಚಿಸಿದೆ ಎಂದು ಕೇಳಿದಕ್ಕೆ ೨೬ ಎಂದು ಹೇಳಿದ್ದಾರೆ. ಅವುಗಳಲ್ಲಿ ಎಷ್ಟು ಆಯೋಗಗಳು ವರದಿಯನ್ನು ಕೊಟ್ಟಿವೆ ಎಂದು ಕೇಳಿದಕ್ಕೆ ೨೦ ಆಯೋಗಗಳು ವರದಿಯನ್ನು ಕೊಟ್ಟಿವೆ ಎಂದು ಹೇಳಿದ್ದಾರೆ. ಇದರಲ್ಲಿ ಏಷ್ಟು ವರದಿಗಳನ್ನು ಸ್ವೀಕೃತವಾಗಿದೆ ಎಂದು ಕೇಳಿದಕ್ಕೆ, ಅದು ಅನುಭಂದದಲ್ಲಿದೆ ಎಂದು ಹೇಳಿದ್ದಾರೆ. ಅದನ್ನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಯಾವ ಯಾವ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಇಂಡಿಕ್ಟ್ ಮಾಡಿದ್ದಾರೋ, ಅವರ ಬಗ್ಗೆ ಇದುವರೆಗೂ ಕ್ರಮ ತೆಗೆದುಕೊಂಡಿಲ್ಲ. ಅಂಥವರನ್ನು ಸಸ್ಪೆನ್‌ಷನ್ ಸಹ ಮಾಡಿಲ್ಲ, ಈ ವಿಚಾರಗಳನ್ನು ಈ ಸದನಕ್ಕೆ ತಿಳಿಸತಕ್ಕ ಕೆಲಸವನ್ನು ಕೂಡ ಮಾಡಿಲ್ಲ. ಇವತ್ತು ರಂಗನಾಥಚಾರಿ ಆಯೋಗ, ಅಗ್ನಿಹೋತ್ರಿ ಆಯೋಗ, ಮಹಮದ್ ಆಸೀಫ್ ಕಮಿಟಿ, ಎಂ.ಎಸ್. ಬ್ಯಾಡಗಿ ಆಯೋಗ, ನಾರಿಗೌಡ ಆಯೋಗ, ಶ್ಯಾಂಸುಂದರ್ ಆಯೋಗ, ಬಾಲಸುಬ್ರಮಣ್ಯಂ ಆಯೋಗ, ದೇಸಾಯಿ ಆಯೋಗ, ವೆಂಕಟಸ್ವಾಮಿ ಆಯೋಗ, ಎನ್.ಡಿ. ವೆಂಕಟೇಶ್ ಆಯೋಗ, ವೈದ್ಯನಾಥ ಆಯೋಗ, ಕುಲಕರ್ಣಿ ಆಯೋಗ, ಡಿ. ಪಿ. ಹಿರೇಮಠ್ ಆಯೋಗ, ಬೋಪಣ್ಣ ಆಯೋಗ ಹೀಗೆ ೨೦ ಆಯೋಗಗಳ ವರದಿ ಈಗಾಗಲೇ ಬಂದಿದೆ.

(ಶ್ರೀಮತಿ ಶಕುಂತ ಚೌಗಲೆ ಅವರು ಅಧ್ಯಕ್ಷ ಪೀಠದಲ್ಲಿದ್ದರು)

ಹೀಗೆ ವರದಿ ಕೊಟ್ಟಮೇಲೆ ಮಾನ್ಯ ಮುಖ್ಯಮಂತ್ರಿಗಳು ಅವುಗಳನ್ನು ರಿವ್ಯೂ ಮಾಡಿದ್ದಾರೆಯೇ ?

೨-೦೦ ಪಿ. ಎಂ.

ಇದರ ಬಗ್ಗೆ ಏನಾದರೂ ಒಂದು ಮೀಟಿಂಗ್ ಮಾಡಿ ಏನೇನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಸಂಬಂಧಪಟ್ಟವರನ್ನು ಕೇಳಿದ್ದೀರಾ ? ಒಂದು ದಿವಸವೂ ಇದರ ಬಗ್ಗೆ ವಿಚಾರ ಮಾಡಿಲ್ಲ ಅಂದಮೇಲೆ

ಆಯೋಗ ರಚನೆ ಮಾಡಿ ಪ್ರಯೋಜನ ಇಲ್ಲ. ಸ್ಟ್ರೈಕ್ ಕೊಟ್ಟು ಕಾರು ಕೊಟ್ಟು. ಅಲ್ಲಿ ಹೈಕೋರ್ಟ್‌ನಲ್ಲಿ ಅವರ ಕೆಲಸವನ್ನು ನಿಲ್ಲಿಸಿ, ಈ ಕೆಲಸ ಮಾಡಬೇಕೆಂದು ಹೇಳಿ ಅವರ ರಿಸಲ್ಟ್ ಬಂದಮೇಲೆ ಅದನ್ನು ಇಂಪ್ಲಿಮೆಂಟ್ ಮಾಡದೇ ಹೋದರೆ ಆಯೋಗ ರಚನೆ ಮಾಡಿದ್ದುದು ಏತಕ್ಕೆ ? ಈ ಇಷ್ಯೂ ಪೋಸ್ಟ್‌ಪೋನ್ ಮಾಡಲಿಕ್ಕೋಸ್ಕರ ಈ ಆಯೋಗಗಳನ್ನು ರಚಿಸುತ್ತಿದ್ದೀರಿ, ಜಸ್ಟ್ ಟು ಕಿಲ್ ದಿ ಟೈಮ್ ಜಸ್ಟ್ ಟು ಡೈವರ್ಟ್ ದಿ ಪಬ್ಲಿಕ್ ಅಟೆನ್‌ಷನ್, ಅದಕ್ಕೋಸ್ಕರ ನೀವು ಈ ಕೆಲಸವನ್ನು ಮಾಡುತ್ತಿದ್ದೀರಿ. ಎನ್ನುವ ಮಾತನ್ನು ನಾನು ಹೇಳಬೇಕಾಗುತ್ತದೆ. ಇಲ್ಲದೇ ಹೋದರೆ, ನಿಮ್ಮಲ್ಲಿ ಧೈರ್ಯ ಇದ್ದರೆ ಯಾವ ಯಾವ ಅಧಿಕಾರಿಗಳು ಇದರಲ್ಲಿ ಇನ್‌ವಾಲ್ವ್ ಆಗಿದ್ದಾರೆ, ಯಾವ ಯಾವ ಅಧಿಕಾರಿಗಳ ಮೇಲೆ ಸ್ಟ್ರಿಕ್ಚರ್ ಪಾಸಾಗಿದೆ. ಯಾರ ಯಾರ ಮೇಲೆ ಡಿಸಿಪ್ಲಿನರಿ ಆಕ್ಷನ್ ತೆಗೆದು ಕೊಳ್ಳಲಿಕ್ಕೆ ಹೇಳಿದ್ದಾರೆ, ಅಂತಹವರ ಮೇಲೆ ಕ್ರಮ ತೆಗೆದುಕೊಂಡಿರುವುದನ್ನು ಈ ಸದನದ ಮುಂದೆ ತಾವು ಹೇಳಬೇಕಾಗುತ್ತದೆ. ಇಲ್ಲದೇ ಹೋದರೆ ಇದರಿಂದ ಪ್ರಯೋಜನ ಆಗುವುದಿಲ್ಲ. ಇನ್ನೊಂದು ವಿಷಯ ಹೇಳಬೇಕೆಂದರೆ, ಈಗ ನಿಮ್ಮ ಆಡಳಿತ ಅವಧಿಯಲ್ಲಿ ಈ ಹರಿಜನ ಗಿರಿಜನರ ಮೇಲೆ ಆಗತಕ್ಕ ಅನ್ಯಾಯ ಅತ್ಯಾಚಾರಗಳು ದಿನೇ ದಿನೇ ಹೆಚ್ಚಾಗುತ್ತಿವೆ ಅದಕ್ಕೆ ಕಾರಣ ಎಕ್ಸ್‌ಕ್ಲೂಸೀವ್‌ಲಿ ಸರ್ಕಾರ ಎಂದು ನಾನು ಹೇಳುವುದಿಲ್ಲ, ಅದಕ್ಕೆ ಪೋಲೀಸರ ನಿರ್ಲಕ್ಷ್ಯದಿಂದಾಗಿ ಆಗುತ್ತಿದೆ ಎಂದು ಸಂಪೂರ್ಣವಾಗಿ ಹೇಳುವುದಿಲ್ಲ, ಆದರೆ ಇದರಲ್ಲಿ ಏನಾಗಿದೆ, ನಿಮ್ಮ ಆಡಳಿತ ವ್ಯವಸ್ಥೆಯಲ್ಲಿ ಅವರಿಗೆ ರಕ್ಷಣೆಯನ್ನು ಕೊಡತಕ್ಕ ಮನಸ್ಸು ನಿಮ್ಮಲ್ಲಿ ಇಲ್ಲದ ಕಾರಣ ಅಲ್ಲಿ ಅಧಿಕಾರಿಗಳು ಮನಸ್ಸು ಮಾಡುತ್ತಿಲ್ಲ. ಈ ನಮ್ಮ ಜಿಲ್ಲಾಪರಿಷತ್ ಮತ್ತು ಮಂಡಲ್ ಪಂಚಾಯತ್‌ಗಳು ಬಂದಮೇಲೆ ಈ ಒಂದು ಡೀಸೆಂಟ್ರಲೈಜೇಷನ್ ಆಫ್ ಪವರ್ ಎಂದು ಹೇಳಿ ನಾವು ಅವರಿಗೆ ಸಂಪೂರ್ಣವಾದ ಅಧಿಕಾರವನ್ನು ಕೊಟ್ಟಿದ್ದೇವೆಂದು ಹೇಳಿದಾಗ ಹಳ್ಳಿಗಳಲ್ಲಿ ಮತ್ತು ಜಿಲ್ಲಾಪರಿಷತ್‌ಗಳಲ್ಲಿ ಏನಾಗುತ್ತಿದೆ ಎಂದರೆ ವೈಮನಸ್ಸು ಜಾಸ್ತಿ ಬೆಳೆಯುತ್ತಿದೆ, ಮೊದಲೇ ಈ ಸಮಾಜದಲ್ಲಿ ವೀಕರ್‌ಸೆಕ್ಷನ್, ಯಾರು ದಲಿತ ಜನಾಂಗ, ಬಡವರು, ಹರಿಜನ ಗಿರಿಜನರು ಇದ್ದಾರೆ ಅವರ ಬಗ್ಗೆ ಪ್ರಿಜ್ಯುಡಿಸ್ ಆದ ಪರಿಸ್ಥಿತಿ ಹಳ್ಳಿಯಲ್ಲಿ ಮೊದಲಿಂದಲೇ ಬೆಳೆದಿತ್ತು.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಆ ರೀತಿಯಲ್ಲಿ ಬೆಳೆದಿರುವಾಗ ನಾವು ತಕ್ಷಣ ಯಾವುದಾದರೂ ನ್ಯಾಯವನ್ನು ನೇರವಾಗಿ ಮಂಡಲ್ ಪ್ರಧಾನ್ ಮತ್ತು ಜಿಲ್ಲಾಪರಿಷತ್‌ನಲ್ಲಿ ಕೇಳಿದಾಗ ಸಿಕ್ಕುವುದಿಲ್ಲ, ಇದು ತಮಗೂ ಗೊತ್ತಿದೆ, ಅನೇಕ ಮಾನ್ಯ ಸದಸ್ಯರಿಗೂ ಗೊತ್ತಿದೆ, ಎಲ್ಲರಿಗೂ ಇದರ ಅನುಭವ ಇದೆ, ಇನ್ನು ಕೆಲವು ಕಡೆ ಹಳ್ಳಿಗಳಲ್ಲಿ ಟೀ ಅಂಗಡಿಗಳಲ್ಲಿ ಕಾಫಿ ಸಾಸರ್ ಹೊರಗಡೆ ಇಟ್ಟಿರುತ್ತಾರೆ. ಅನೇಕ ಮಂಡಲ್ ಪಂಚಾಯತ್‌ಗಳಲ್ಲಿ ಎಷ್ಟೋ ಜನ ಸದಸ್ಯರು ಇನ್ನೂ ಕೂಡ ಬೆಂಚು, ಮತ್ತು ಕುರ್ಚಿಯ ಮೇಲೆ ಕುಳಿತುಕೊಳ್ಳುವುದಿಲ್ಲ. ಆಯಿತು ಗೌಡ್ರೆ ನಾನು ಇಲ್ಲಿಯೇ ಕುಳಿತುಕೊಳ್ಳುತ್ತೇನೆ, ನೀವು ಪ್ರಾರಂಭ ಮಾಡಿ ಎಂದು ಹೇಳುತ್ತಾರೆ. ಈ ರೀತಿಯಲ್ಲಿ ಇರುವಾಗ ಅನ್ಯಾಯ ಆಗಿರತಕ್ಕದ್ದನ್ನು ಪ್ರತಿಭಟಿಸತಕ್ಕ ಶಕ್ತಿ ಈ ಈ ಜನಗಳಲ್ಲಿ ಎಲ್ಲಿಂದ ಬರುತ್ತದೆ ? ಆದ್ದರಿಂದ ಒಂದು ಸಂಪೂರ್ಣವಾದ ಅಧಿಕಾರವನ್ನು ವೆಸ್ಟೆಡ್ ಇಂಟರೆಸ್ಟ್ ಕ್ಲಾಸ್ ಕಡೆ ಹಳ್ಳಿಮಟ್ಟದಲ್ಲಿ, ತಾಲ್ಲೂಕುಮಟ್ಟದಲ್ಲಿ ಕೊಡುವುದು ಬೇಡ. ಆ ಒಂದು ಅಧಿಕಾರವನ್ನು ನಿವೇಇಟ್ಟುಕೊಂಡು ಕೆಲವು ಡೆವಲಪ್‌ಮೆಂಟ್‌ಲ್ ವರ್ಕ್ಸ್ ಮಾತ್ರ ಕೊಡಿ, ಉಳಿದಂಥ ಅಧಿಕಾರವನ್ನು ಡೆಪ್ಯುಟಿ ಕಮೀಷನರ್ ಆಗಲಿ, ತಾಲ್ಲೂಕು ಮಟ್ಟದ ಅಸಿಸ್ಟೆಂಟ್ ಕಮೀಷನರ್ ಆಗಲಿ, ತಹಶೀಲ್ದಾರ್ ಆಗಲಿ, ಅಂತಹವರ ಕೈಲಿ ಅಧಿಕಾರ ಇದ್ದರೆ ಸ್ವಲ್ಪಮಟ್ಟಿಗೆ ರಿಲೀಫ್ ಸಿಗುತ್ತದೆ, ಏಕೆಂದರೆ, ಅವರಿಗೆ ಜಿಲ್ಲಾ ಮಂತ್ರಿಗಳಾಗಲಿ, ಅಥವಾ ಸರ್ಕಾರವಾಗಲಿ ನೇರವಾಗಿ ಕೇಳಬಹುದು, ಮೇಲಿನ ಅಧಿಕಾರಿಗಳು ಕೇಳುತ್ತಾರೆ ಎನ್ನುವ ಭಯದಿಂದ ಆದರೂ ಅವರು ಕೆಲಸ ಮಾಡುತ್ತಿದ್ದರು. ಇವೊತ್ತು ಏನಾಗಿದೆ, ಇವೊತ್ತು ಒಂದು ಬಾವಿ ಕೆಲಸ ಮಾಡಬೇಕಾಗಿದೆ ಅಂದರೆ ಆ ಮ್ಯಾಟರ್ ಜಿಲ್ಲಾಪರಿಷತ್‌ಗೆ ಒಪ್ಪಿಸಿದ್ದೇವೆ ಎಂದು ಹೇಳುತ್ತೀರಿ, ಈ ಮ್ಯಾಟರ್ ಮಂಡಲ್ ಪ್ರಧಾನ್ ಅವರಿಗೆ ಬರುತ್ತದೆ ಅವರು ಮಾಡುತ್ತಾರೆ ಎಂದು ಹೇಳುತ್ತೀರಿ, ಇವೊತ್ತು ಅಧಿಕಾರ ವಿಕೇಂದ್ರೀಕರಣ ಆದಮೇಲೆ ಒಂದು ಬಾವಿ ಕೊಡಬೇಕಾದರೂ ಜಿಲ್ಲಾಪರಿಷತ್‌ನವರು ಮನಸ್ಸು ಮಾಡಬೇಕು ಜಿಲ್ಲಾಪರಿಷತ್ ಮೆಂಬರ್ ಈ ಷೆಡ್ಯೂಲ್ಡ್ ಕ್ಯಾಸ್ಟ್ ಲೊಕಾಲಿಟಿಗೆ ಕೊಡಬೇಡಿ ಅಂದರೆ ಅದನ್ನು ಕೊಡಿಸುವಷ್ಟು ಅಧಿಕಾರ ನಿಮಗೆ ಇಲ್ಲ. ಅಲ್ಲಿಗೆ ಬಾವಿ ಕೊಡಬೇಡಿ, ಅವರು ನಮಗೆ ಓಟು ಕೊಟ್ಟಿಲ್ಲ ಎಂದು ಹೇಳುತ್ತಾರೆ. ಅಲ್ಲಿ ಕಾಂಗ್ರೆಸ್‌ನವರು ಇದ್ದರೆ ಜನತಾಪಕ್ಷದವರಿಗೆ ಓಟು ಕೊಟ್ಟಿದ್ದಾರೆ, ಆದ್ದರಿಂದ ಅಲ್ಲಿಗೆ ಬಾವಿ ಕೊಡಬೇಡಿ ಎಂದು ಹೇಳುತ್ತಾರೆ. ಜನತಾ ಪಕ್ಷದವರು ಇದ್ದರೆ, ಅವರು ಕಾಂಗ್ರೆಸ್‌ನವರಿಗೆ ಓಟು ಕೊಟ್ಟಿದ್ದಾರೆ, ಆದ್ದರಿಂದ ಅವರಿಗೆ ಕೊಡಬೇಡಿ ಎಂದು ಹೇಳುತ್ತಾರೆ. ಆದ್ದರಿಂದ ನಾನು ತಮಗೆ ಹೇಳುತ್ತಿದ್ದೇನೆ: ಡೀಸೆಂಟ್ರಲೈಸೇಷನ್ ಆಫ್ ಪವರ್‌ನ ಹೆಸರಿನಮೇಲೆ ಮತ್ತೆ ಇವತ್ತು ಬಡವರ ಶೋಷಣೆಯಾಗುತ್ತಿದೆ. ಇದರ ಬಗ್ಗೆ ನೀವು ಏನು ಆಸಕ್ತಿಯನ್ನು ವಹಿಸಿದ್ದೀರಿ ?

ಈ ರೀತಿ ಅನ್ಯಾಯವಾಗುತ್ತಿದೆಯೆಂದು ತಮ್ಮ ಗಮನಕ್ಕೆ ಬಂದಮೇಲೆ ತಾವು ಅವರಿಗೆ ರಕ್ಷಣೆಯನ್ನು ಕೊಡುವ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ? ತಮಗೆ ಗೊತ್ತಿರುವಂತೆ ಹೋದವರ್ಷ ಇದೇ ಸದನದಲ್ಲಿ ಬೆಂಡಿಗೇರಿ ಪ್ರಕರಣದ ಬಗ್ಗೆ ಪ್ರಸ್ತಾಪವಾಯಿತು, ಆ ಪ್ರಕರಣದಲ್ಲಿ ಮಂಡಲ ಪಂಚಾಯತಿಯ ಸದಸ್ಯರಿಂದ ಹಿಡಿದು ಶಿಕ್ಷಕರವರೆಗೂ ಕೆಲಸ ಮಾಡಿದ್ದರು. ನಂತರ ಶಿವಮೊಗ್ಗ ಜಿಲ್ಲೆಯ ಸೊರಬತಾಲ್ಲೂಕಿನ ತತ್ತೂರಿನಲ್ಲಿ ನಡೆದ ಪ್ರಕರಣದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದೆವು. ಅನಂತರ ಜೇವರ್ಗಿಯಲ್ಲಿ ಒಬ್ಬ ಷೆಡ್ಯೂಲ್ಡ್ ಕ್ಯಾಸ್ಟ್‌ನವನ ಮರ್ಡರ್ ಆಯಿತು. ಇದನ್ನೆಲ್ಲಾ ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಷೆಡ್ಯೂಲ್ಡ್ ಕ್ಯಾಸ್ಟ್‌ನವರಮೇಲೆ ಏನು ಅತ್ಯಾಚಾರ ಆಗುತ್ತಿದೆ ಅದರಲ್ಲಿ ಹೆಚ್ಚಿನ ಪಾತ್ರವನ್ನು ಮಂಡಲದಲ್ಲಿರತಕ್ಕ ಸದಸ್ಯರು ಪ್ರಧಾನ ಪಾತ್ರವನ್ನು ವಹಿಸುತ್ತಿದ್ದಾರೆ. ತಮಗೆ ಅಧಿಕಾರವಿದೆಯೆಂದು ಇಂಥ ವಿಚಿತ್ರ ರೀತಿಯ ಬಿಹೇವಿಯರನ್ನು ಅವರು ಮಾಡುತ್ತಿದ್ದಾರೆ. ಆದ್ದರಿಂದ ಈ ಸರ್ಕಾರ ಮನಸ್ಸನ್ನು ಮಾಡದಿದ್ದರೆ, ಸರ್ಕಾರ ಒಂದು ಕಮಿಟ್‌ಮೆಂಟನ್ನು ಇಟ್ಟುಕೊಂಡು ಕೆಲಸ ಮಾಡದಿದ್ದರೆ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ನ್ಯಾಯ ಸಿಕ್ಕುವುದಿಲ್ಲ. ನಿಮ್ಮ ಅಧಿಕಾರ ವಿಕೇಂದ್ರೀಕರಣದಿಂದಾಗಿ ಹರಿಜನರಿಗೆ ಲಾಭವಾಗುವುದಕ್ಕೆ ಬದಲು ನಷ್ಟವಾಗುತ್ತಿದೆ ಹಾಗೂ ತೊಂದರೆಯಾಗುತ್ತಿದೆಯೆಂದು ನಾನು ಹೇಳಬಯಸುತ್ತೇನೆ. ಮಾನ್ಯಮೊಯಿಲಿಯವರು ಈ ವಿಚಾರದಲ್ಲಿ ಸಾಕಷ್ಟು ಮಾತನಾಡಿದ್ದಾರೆ. ನಾನೂ ಕೂಡ ಒಂದೆರಡು ಮಾತುಗಳನ್ನು ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ಇದೇ ಸದನದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಅದರಲ್ಲಿ ಅವರು ಲೇಟೆಸ್ಟ್ ಫಿಗರ್ಸ್‌ನ್ನು ಕೊಟ್ಟಿದ್ದರು. ಈಗ ನನ್ನ ಹತ್ತಿರ ಆ ಫಿಗರ್ಸ್ ಇಲ್ಲ. ಆದರೂ ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಿರತಕ್ಕ ವಾರ್ಷಿಕ ರಿಪೋರ್ಟ್‌ನಲ್ಲಿ ಕೆಲವು ಅಂಕಿಅಂಶಗಳನ್ನು ಏನು ತೋರಿಸಿದ್ದಾರೆ. ಅದನ್ನೇ ಹೇಳುತ್ತೇನೆ. ಷೆಡ್ಯೂಲ್ಡ್ ಕ್ಯಾಸ್ಟ್‌ನವರಮೇಲೆ ಎಷ್ಟು ಹೆಚ್ಚಿಗೆ ಹಲ್ಲೆಗಳಾಗಿವೆ ಎಂದರೆ ಅದು ಈ ಅಂಕಿ ಅಂಶಗಳಿಂದ ಗೊತ್ತಾಗುತ್ತದೆ. ಪ್ರೊಟೆಕ್ಷನ್ ಆಫ್ ಸಿವಿಲ್ ರೈಟ್ಸ್‌ನಲ್ಲಿ ಈ ರೀತಿ ಇದೆ:

> "Civil Rights Enforcement Cell continued to do good work. The object of the creation of the cell was for the effective implementation of the provisions of the Protection of Civil Rights Act."

ಎಂದು ಷೆಡ್ಯೂಲ್ಡ್ ಕ್ಯಾಸ್ಟ್‌ನವರದ್ದು ಎಷ್ಟು ಮರ್ಡರ್ ಆಗಿದೆ ಎಂಬುದನ್ನೂ ಕೂಡ ಮಾನ್ಯ ಸದಸ್ಯರಾದ ನಾಯಕ್‌ರವರ ಪ್ರಶ್ನೆಗೆ ಉತ್ತರಿಸುತ್ತಾ ತಿಳಿಸಿದ್ದಾರೆ. ಈ ಕರ್ನಾಟಕದಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರದ್ದು ೧೭ ಮರ್ಡರ್ ಆಗಿದೆ. ತಮ್ಮ ಹಕ್ಕಿಗೋಸ್ಕರ ಹೋರಾಡಿದವರದ್ದು ೧೭ ಕೊಲೆಗಳಾಗಿವೆ. ಅನ್‌ಟಚ್ಚಬಿಲಿಟಿ ಆಕ್ಟ್‌ನ ಕೆಳಗೆ ತಮ್ಮ ಹಕ್ಕನ್ನು ಕೇಳುವುದಕ್ಕೆ ಹೋದಂಥ ಸಾವಿರಾರು ಜನರಮೇಲೆ ದೌರ್ಜನ್ಯಗಳಾಗಿವೆ. ಇಂಥ ಪರಿಸ್ಥಿತಿಯಲ್ಲಿ ನಮ್ಮ ಆಡಳಿತದಲ್ಲಿ ಬಹಳಷ್ಟು ಸುಧಾರಣೆಯಾಗಿದೆ ಎಂದು ಏತಕ್ಕೆ ನೀವು ಹೇಳಿಕೊಳ್ಳುತ್ತಿದ್ದೀರಿ ? ಇದರಲ್ಲಿ ಪೋಲೀಸರು ತಪ್ಪು ಮಾಡಿದ್ದಾರೆಂದು ನಾನು ಹೇಳುವುದಿಲ್ಲ. ಈ ಪೋಲೀಸರು ಯಾರಿದ್ದಾರೆ ಇವರು ನಮ್ಮ ಕಾಲದಲ್ಲೂ ಇದ್ದರು, ಈಗ ನಿಮ್ಮ ಕಾಲದಲ್ಲೂ ಇವರೇ ಇದ್ದಾರೆ. ನಾನು ತಮಗೆ ಹೇಳುತ್ತೇನೆ, ಇವತ್ತು ಅಧಿಕಾರವನ್ನು ನಡೆಸತಕ್ಕ ವ್ಯಕ್ತಿಗಳು ಯಾರಿದ್ದಾರೆ ಅವರು ಸರಿಯಾಗಿಲ್ಲದಿದ್ದರೆ, ಬಿಗಿಯಾಗಿಲ್ಲದಿದ್ದರೆ ನೀವು ಎಂಥ ಕಾನೂನುಗಳನ್ನು ಮಾಡಿದರೂ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಯಾರು ಇದನ್ನು ಇಂಪ್ಲಿಮೆಂಟ್ ಮಾಡುತ್ತಾರೆ ಅವರಿಗೆ ಕಮಿಟ್‌ಮೆಂಟ್ ಇಲ್ಲದಿದ್ದರೆ ಕಾನೂನು ಎಷ್ಟೇ ಒಳ್ಳೆಯದಿದ್ದರೂ ಅದರಿಂದ ಪ್ರಯೋಜನವಾಗುವುದಿಲ್ಲ. ಕಾನೂನು ಒಳ್ಳೆಯದಿರಬಹುದು, ಪೋಲೀಸರೂ ಒಳ್ಳೆಯವರಿರಬಹುದು ಆದರೆ ನಿಮಗೆ ನಿಜವಾದ ಮನಸ್ಸು ಇಲ್ಲದಿದ್ದರೆ, ಪ್ರಜೆಗಳಿಗೆ ಒಳ್ಳೆಯ ಆಡಳಿತವನ್ನು ಕೊಡಬೇಕೆಂಬ ಮನೋಭಾವನೆ ನಿಮಗೆ ಇಲ್ಲದಿದ್ದರೆ ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ. ತಾವೇ ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ಮರ್ಡರ್ ಆದವರು ೧೯೮೬ರಲ್ಲಿ ೧೦೭೧ ಇದ್ದರೆ ೧೯೮೭-೮೮ಕ್ಕೆ ೧೪೨೩ಕ್ಕೆ ಏರಿದೆ, ೩೦೦ಕ್ಕೂ ಹೆಚ್ಚಿಗೆ ಆಯಿತು. ಅನಂತರ ರಾಬರಿ ೨೩೯, ಸುಲಿಗೆ ೪೭೫, ೧೯೮೬ಕ್ಕೆ ಇದ್ದರೆ ೧೯೮೭-೮೮ಕ್ಕೆ ೬೫೬ಕ್ಕೆ ಏರಿದೆ.

ಶ್ರೀ ಜಿ. ಬಸವಣ್ಣಪ್ಪ.—ತಾವು ಪಿ. ಸಿ. ಆರ್. ಕೇಸಸ್ ಸೇರಿಸಿ ಹೇಳುತ್ತಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಾನು ಏತಕ್ಕೆ ಪೋಲೀಸ್ ಆಡಳಿತದ ಬಗ್ಗೆ ...ತ್ತಿದ್ದೇನೆಂದರೆ, ಪೋಲೀಸ್‌ನವರು ಸರಿಯಿಲ್ಲ ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು

ಹೇಳುವುದಕ್ಕೆ ಮೊದಲು ತಾವು ಸರಿಯಾಗಿದ್ದರೆ ಸರಿಯಾದ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ. ಏತಕ್ಕೆಂದರೆ ತಮಗೆ ಪುರಸತ್ತೇ ಇರುವುದಿಲ್ಲ. ನೀವು ಅವರನ್ನು ಕರೆದು ಮೀಟಿಂಗ್ ಮಾಡಿದ್ದೇ ಇಲ್ಲ, ಮಾನ್ಯ ಮುಖ್ಯಮಂತ್ರಿಗಳು ಡೆಪ್ಯುಟಿ ಕಮಿಷನರ್‌ರವರನ್ನು, ಕರೆದು ಒಂದು ಕಾನ್‌ಫೆರೆನ್ಸ್ ಆಗಲಿ, ಎಸ್. ಪಿ. ಯವರನ್ನು ಕರೆದು ಒಂದು ಕಾನ್‌ಫೆರೆನ್ಸ್ ಆಗಲಿ ಮಾಡಿದ್ದಿಲ್ಲ. ಯಾವ ಯಾವ ಜಿಲ್ಲೆಯಲ್ಲಿ ಏನೇನು ಅನ್ಯಾಯ ನಡೆದಿದೆ; ಷೆಡ್ಯೂಲ್‌ಕ್ಯಾಸ್ಟ್ ಮತ್ತು ಷೆಡ್ಯೂಲ್‌ಟ್ರೈಬ್ಸ್ ಜನಾಂಗದ ಮೇಲೆ ಎಷ್ಟೆಷ್ಟು ಅಟ್ರಾಸಿಟಿಯಾಗಿದೆ, ಈ ಬಗ್ಗೆ ಏನೇನು ಕ್ರಮ ತೆಗೆದುಕೊಂಡಿದ್ದಾರೆಂಬುದನ್ನು ವಿಚಾರಿಸುತ್ತಿದ್ದರೆ ಇಷ್ಟು ಕ್ರೈಮ್ಸ್ ಇನ್‌ಕ್ರೀಸ್ ಆಗುತ್ತಿರುತ್ತಿರಲಿಲ್ಲ, ಏತಕ್ಕೆ ಕ್ರೈಮ್ಸ್ ಇನ್‌ಕ್ರೀಸ್ ಆಗುತ್ತಿದೆ ಎನ್ನುವುದಕ್ಕೆ ಏನಾದರೂ ಕಾರಣ ಬೇಕಲ್ಲ, ಡೆತ್ ಕೇಸಸ್ ೧೬೦೦ ಇದ್ದದ್ದು ೧೭೦೦ಕ್ಕೆ ಏರಿತು ಅಂದರೆ ೧೦೦ ಜಾಸ್ತಿಯಾಯಿತು. ಆಮೇಲೆ ಚೀಟಿಂಗ್, ಮಿಸಲೇನಿಯಸ್ ಯಾವುದ್ದೆ ತೆಗೆದುಕೊಂಡರೂ ಕೂಡ ಮೇಲಕ್ಕೆ ಅಂಕಿಗಳು ಏರುತ್ತಿದೆಯೇ ಹೊರತು ಕಡಿಮೆಯಾಗಲಿಲ್ಲ. ಇದಕ್ಕೆ ಕಾರಣವೇನೆಂದರೆ ಆಡಳಿತದಲ್ಲಿ ನಿಮ್ಮ ಹತೋಟಿ ತಪ್ಪಿದೆ. ಆದಕ್ಕೆ ಕ್ರೈಮ್ಸ್ ಹೆಚ್ಚಾಗಿದೆ. ದಿನೇ ದಿನೇ ಹೆಚ್ಚಾಗುತ್ತಿರುವುದನ್ನು ಸರಿಪಡಿಸುವುದಕ್ಕೆ ನೀವು ಸೂಕ್ತ ಕ್ರಮ ಕೈಕೊಳ್ಳಬೇಕು. ಈ ಬಗ್ಗೆ ನೀವು ಕ್ರಮ ಕೈಕೊಳ್ಳದೆಹೋದರೆ ಯಾವ ಕೆಲಸವೂ ಆಗುವುದಿಲ್ಲ ಬರೇ ಪೇಪರ್ ಸ್ಟೇಟ್‌ಮೆಂಟ್, ಪುಸಕ್ತಗಳನ್ನು ಕೊಟ್ಟಿದ್ದೇವೆಂದು ಹೇಳಿದರೆ ಅದರಿಂದ ಏನು ಪ್ರಯೋಜನವಾಗುವುದಿಲ್ಲ. ನೀವು ಕುಳಿತು ನಿಮ್ಮ ಮಂತ್ರಿಗಳನ್ನು ಇಲ್ಲಿ ನಾವು ಕೊಟ್ಟಂಥ ಕಾರ್ಯಕ್ರಮಗಳು ಏನಾಗಿದೆ ಎಂದು ಕೇಳಿದರೆ ಮಾತ್ರ ಅದು ಸಾಧ್ಯವಾಗುತ್ತದೆ. ನೀವು ಹೇಳಿದಂಥ ಒಂದು ಕೆಲಸವನ್ನೂ ನಿಮ್ಮ ಮಂತ್ರಿಗಳು ಮಾಡುತ್ತಿಲ್ಲ: ಏತಕ್ಕೆಂದರೆ ಅವರಿಗೂ ಸಮಯ ಇರುವುದಿಲ್ಲ, ನೀವು ಬಿಟ್ಟವರನ್ನು ಹಿಡಿದುಕೊಂಡು ಬರುವುದೇ ನಿಮ್ಮ ಕೆಲಸವಾಗಿದೆ. ಅವರ ಬೆನ್ನು ಹತ್ತುವುದು, ಅವರು ತಮ್ಮ ಕ್ಷೇತ್ರಕ್ಕೆ ಹೋದರೆ ಅವರಿಗೆ ಕಾರುಕೊಟ್ಟು ಕರೆಸಿಕೊಳ್ಳುವುದು. ಈ ಕೆಲಸ ಮಾಡಲು ಪಾಪ ಅವರು ರಾತ್ರೋರಾತ್ರಿ ನಿದ್ದೆಗೆಟ್ಟು ಕೆಲಸ ಮಾಡುತ್ತಿದ್ದಾರೆ. ಕನಿಷ್ಟ ಪಕ್ಷ ಈಗಾಲಾದರೂ ಗಮನಕೊಟ್ಟು ಅಡ್ಮಿನಿಸ್ಟ್ರೇಷನ್ ಬಗ್ಗೆ ತಾವು ಹೆಚ್ಚು ಗಮನವನ್ನು ಕೊಡುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಈ ಸರ್ಕಾರಕ್ಕೆ ಒಂದೇ ಪಾಯಿಂಟ್ ಪ್ರೋಗ್ರಾಂ ಇದೆ. ಏನೆಂದರೆ ತಾವು ಯಾವರೀತಿ ಮುಂದುವರಿಯಬೇಕು ಎನ್ನುವ ಬಗ್ಗೆ, ಇದೊಂದೇ ಇವರ ಕಾರ್ಯಕ್ರಮವಾಗಿರುವುದರಿಂದ ಇನ್ನು ಇಪ್ಪತ್ತು ಅಂಶಗಳ ಪ್ರೋಗ್ರಾಮ್ ಕಡೆಗೆ ಹೇಗೆ ಗಮನ ಕೊಡುತ್ತೀರಿ ? ನಮ್ಮಲ್ಲಿ ಇಬ್ಬರು ಡಿ. ವೈ. ಎಸ್. ಪಿ.ಯವರನ್ನು ಕೇಳಿದೆ ಏನಾಗಿದೆ ಏನು ಕಥೆ ಎಂದು ಅವರು ಹೇಳಿದರು ಬಹಳ ಕಷ್ಟದಲ್ಲಿದ್ದೇವೆ, ನಮ್ಮ ಕಥೆ ಸರ್ಕಾರದಲ್ಲಿ ಏನಾಗಿದೆ ಎಂದರೆ, ನಾವು ಯಾವರೀತಿ ಕೆಲಸಮಾಡಿದರೂ ನಮಗೆ ರಕ್ಷಣೆ ಇಲ್ಲ, ನ್ಯಾಯವಾಗಿದ್ದರೂ ಸರ್ಕಾರದಲ್ಲಿ ನಮಗಂತೂ ಪ್ರೊಟೆಕ್ಷನ್ ಇಲ್ಲ. ನಾವು ಯಾರಾದರೂ ಒಬ್ಬ ಕಳ್ಳನನ್ನು ಹಿಡಿದುಕೊಂಡು ಬಂದು ಅವನ ಮೇಲೆ ಕ್ರಮ ತೆಗೆದುಕೊಂಡರೆ, ನಮ್ಮನ್ನೇ ಕೇಳುತ್ತಾರೆ, ಏತಕ್ಕೆ ಹೊಡೆದಿರಿ ಎಂದು ಮತ್ತೆ ಅವನನ್ನು ಕರೆಯಿಸಿ ಅವನಿಂದ ಏನಾದರೂ ವಿಷಯ ಎಕ್ಸ್‌ಟ್ರಾಕ್ಟ್ ಮಾಡಬೇಕೆಂದರೆ ಏತಕ್ಕೆ ಲೀನಿಯೆಂಟ್ ಆಟಿಟ್ಯೂಡ್ ಮಾಡಿದಿರಿ ಎಂದು ಹೇಳುತ್ತಾರೆ. ಕದ್ದಿದ್ದಾನೆಂದು ಹೊಡದರೆ ಏತಕ್ಕೆ ಹೊಡೆದಿರಿ ಎಂದು ಕೇಳುತ್ತಾರೆ, ರಿಕವರಿ ಮಾಡಲಿಲ್ಲವೆಂದರೆ ಏತಕ್ಕೆ ಮಾಡಲಿಲ್ಲವೆಂದು ಕೇಳುತ್ತಾರೆ, ಈ ರೀತಿಯಾದ ಒಂದು ಪರಿಸ್ಥಿತಿಯಲ್ಲಿರುತ್ತೇವೆ. ಈಗ ಏನು ಮಾಡಬೇಕೆಂದರೆ ಡಕಾಯಿತನನ್ನು ಹಿಡಿದಮೇಲೆ ಅವನನ್ನೇ ಕುರ್ಚಿಯ ಮೇಲೆ ಕುಳ್ಳಿರಿಸಿ ಅವನ ಎದುರಿಗೆ ನಿಂತು ನಮ್ಮಲ್ಲಿ ಬಾರಿಕೋಲ್ ಎಂದು ಹೇಳುತ್ತಾರೆ. ಆ ಬಾರಿಕೋಲ್‌ನಿಂದ ನಾವೇ ನಾಲ್ಕು ಬಾರಿಸಿಕೊಳ್ಳಬೇಕಾಗಿದೆಯೆಂದು ಹೇಳಿದರು. ಬಾರಿಕೋಲಿನಿಂದ ನಾವೇ ನಾಲ್ಕು ಸಲ ಹೊಡೆದುಕೊಂಡ ಮೇಲೆ, ಕಳ್ಳ ನೀವು ಏತಕ್ಕೆ ಹೊಡೆದುಕೊಳ್ಳುತ್ತೀರಿ, ನಾನು ಸತ್ಯ ಹೇಳುತ್ತೇನೆಂದು ಹೇಳುವುದು, ಆಗ ತಾನು ಖುರ್ಚಿಯಲ್ಲಿ ಕುಳಿತುಕೊಂಡು ಅವನು ಹೇಳಿದ್ದನ್ನು ಬರೆದುಕೊಳ್ಳತಕ್ಕ ಪರಿಸ್ಥಿತಿ ಬಂದಿದೆ, ಏಕೆಂದರೆ, ನಾವು ಹೊಡೆದರೆ ಏತಕ್ಕೆ ಹೊಡೆದಿರಿ ಎಂದು ಕೇಳುತ್ತಾರೆ, ಲಿಮಿಟ್ ದಾಟಿ ಕೆಲಸ ಮಾಡಿದ್ದಾರೆಂದು ಹೇಳುತ್ತಾರೆ. ಅದಕ್ಕೋಸ್ಕರ ಬಾರಿಕೋಲ್ ತೆಗೆದುಕೊಂಡು ತಮಗೆ ತಾವೇ ಹೊಡೆದುಕೊಳ್ಳುವುದೆಂದು ಹೇಳಿದರು. ಹಳ್ಳಿಗಳ ಕಡೆ ಬುರು ಬುರು ಅಂತ ಬಂದು ಚಾಟಿ ತೆಗೆದುಕೊಂಡು ೪-೬ ಏಟುಗಳನ್ನು ಹೊಡೆದುಕೊಂಡು ರಕ್ತ ಚಿಮ್ಮಿಸಿಕೊಂಡಾಗ ಕಳಕಳಿ ಬಂದು ೪ ಅಣೆ, ೮ ಅಣೆ ಕೊಟ್ಟು ಕಳುಹಿಸುವ ಹಾಗೆ ಇಲ್ಲಿನ ಪರಿಸ್ಥಿತಿಯೂ ಆಗಿದೆ. ಕಳ್ಳನ ಮುಂದೆ ೪ ಏಟು ಹೊಡೆದುಕೊಂಡ ಮೇಲೆ ನಾನು ಹೇಳುತ್ತೇನೆ, ನಿಮ್ಮ ಮೇಲೆ ಕರುಣೆ ಬಂದಿದೆ ಅನ್ನುತ್ತಾನೆ. ಆಗ ಇಂಥ ಕಡೆ ಸಾಮಾನು ಇಟ್ಟಿದ್ದೇನೆ, ಇಂಥವರಿಗೆ ಇಂಥ ಸಾಮಾನು ಕೊಟ್ಟಿದ್ದೇನೆ ಎಂದು ಹೇಳತಕ್ಕ ಪರಿಸ್ಥಿತಿ ಬಂದಿದೆ. ಹೀಗಾದರೂ ಅವರಿಗೆ ವಾಸಕ್ಕೆ ಮನೆ ಇಲ್ಲ, ಇರಲಿಕ್ಕೆ ಸ್ಥಳವಿಲ್ಲ. ಅನೇಕ ಸಬ್ ಇನ್ಸ್‌ಪೆಕ್ಟರ್‌ಗಳು ಸರ್ಕಲ್ ಇನ್ಸ್‌ಪೆಕ್ಟರ್‌ಗಳು ಈ ಒಂದು ಪರಿಸ್ಥಿತಿಯಲ್ಲಿದ್ದಾರೆ. ತಾಲ್ಲೂಕು ಮಟ್ಟದಲ್ಲಿ ಅಥವಾ ಹೋಬಳಿ ಮಟ್ಟದಲ್ಲಿ ಇರತಕ್ಕ ಪೋಲೀಸ್ ಸ್ಟೇಷನ್‌ಗಳಲ್ಲಿ ಸಹ ಅಲ್ಲಿ ಕೂಡುವುದಕ್ಕೆ ಜಾಗ ಇಲ್ಲ, ಬೇಂಚುಗಳು

ಇಲ್ಲ, ಸ್ಟೇಷನರಿ ಅಂತೂ ಇಲ್ಲವೇ ಇಲ್ಲ. ನಿಮಗೆ ಆಶ್ಚರ್ಯ ಅನ್ನಿಸಬಹುದು. ಯಾರಾದರೂ ದೂರು ತೆಗೆದುಕೊಂಡು ಹೋದಾಗ, ದೂರು ತಂದವರಿಗೇ ಬಿಳಿ ಹಾಳೆ ತೆಗೆದುಕೊಂಡು ಬನ್ನಿ ದೂರು ಬರೆದುಕೊಳ್ಳುವುದಕ್ಕೆ ಹಾಳೆ ಇಲ್ಲ ಅನ್ನುತ್ತಾರೆ. ಆ ಪರಿಸ್ಥಿತಿ ಇರುವಾಗ ತಾವು ಲೆಕ್ಕ ಹಾಕಿ ಹೇಳಬೇಕು. ಸಬ್ ಇನ್ಸ್‌ಪೆಕ್ಟರ್ ಕಛೇರಿಗೆ ಎಷ್ಟು ಸ್ಟೇಷನರಿಯನ್ನು ಸರಬರಾಜು ಮಾಡುತ್ತೀರಿ ? ದೂರು ಬರೆದುಕೊಳ್ಳುವುದಕ್ಕೆ ಅಲ್ಲಿ ಕಾಗದ ಇಲ್ಲ, ಇಂಕ್ ಇಲ್ಲ. ಅದಕ್ಕೆ ಬಂದವರಿಂದ ಹಣ ವಸೂಲ್ಮಾಡುತ್ತಾರೆ. ಅಲ್ಲಿಂದ ಶುರುವಾಗುತ್ತದೆ ಲಂಚ. ಇಂಥ ಪರಿಸ್ಥಿತಿಯಲ್ಲಿ ನಿಮ್ಮ ಗೃಹ ಇಲಾಖೆ ಇದೆ. ಸಬ್ ಇನ್ಸ್‌ಪೆಕ್ಟರ್‌ಗಳಿಗೆ ವಾಸಿಸುವುದಕ್ಕೆ ಮನೆಗಳು ಇಲ್ಲದೆ ಯಾರು ಶ್ರೀಮಂತರು ಇರುತ್ತಾರೋ ಅವರ ಮನೆಗಳಲ್ಲಿ ಉಳಿದುಕೊಳ್ಳುವ ಪರಿಸ್ಥಿತಿ ಇದೆ. ಊರಿನಲ್ಲಿರತಕ್ಕ ಪ್ರಭಾವಶಾಲಿ ಮನುಷ್ಯ ಮನೆಯಲ್ಲಿ ಇದ್ದ ಮೇಲೆ ಕಾನೂನು ಪ್ರಕಾರ ಇಂಪಾರ್ಷಿಯಲ್ ಆಗಿ ಅವರು ಕೆಲಸ ಮಾಡುವುದಕ್ಕಾಗುವುದಿಲ್ಲ. ಆದಕಾರಣ ಎಕ್ಸಿಕ್ಯೂಟೀವ್ ಪೋಸ್ಟ್‌ನವರಿಗೆ ಅವರು ತಹಶೀಲ್ದಾರ್‌ರಿರಬಹುದು ಸಬ್‌ಇನ್ಸ್‌ಪೆಕ್ಟರ್ ಇರಬಹುದು, ಆಸಿಸ್ಟೆಂಟ್ ಕಮಿಷನರ್ ಇರಬಹುದು ಅಂಥವರಿಗೆ ಸರ್ಕಾರದಿಂದ ಇಂಡಿಪೆಂಡೆಂಟ್ ಕ್ವಾರ್ಟರ್ಸ್ ಕೊಡಲೇಬೇಕು. ಏಕೆಂದರೆ ಅವರು ಯಾರ ಹಂಗಿನಲ್ಲೂ ಇರಬಾರದು. ಬೇರೆಯವರ ಹಂಗಿನಲ್ಲಿದ್ದರೆ ಅವರ ಅನುಕೂಲ ಪಡೆದು ರೆಕಮಂಡೇಷನ್ ಹಚ್ಚಿ ಅನೇಕ ಕೇಸ್‌ಗಳನ್ನು ಸ್ಪಾಯಿಲ್ ಮಾಡಬೇಕಾಗುತ್ತದೆ. ಹೋದ ಸಾರಿ ಮಾನ್ಯ ಮುಖ್ಯ ಮಂತ್ರಿಗಳು ಪೊಲೀಸ್ ಹೌಸಿಂಗ್ ಕಾರ್ಪೊರೇಷನ್ ಮಾಡಿದ್ದೇವೆ ಅದಕ್ಕೆ ಒಂದು ಕೋಟಿ ೮೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದ್ದರು, ಅದನ್ನು ಬಿಡಿಸಿ ನೋಡಿದಾಗ ವಾಸ್ತವವಾಗಿ ಕನ್‌ಸ್ಟ್ರಕ್ಷನ್‌ಗೆ ಕೊಟ್ಟಿದ್ದು ಕೇವಲ ೩೦ ಲಕ್ಷ ರೂಪಾಯಿಗಳು. ಉಳಿದದ್ದನ್ನು ಹುಡ್ಕೋ ಲೋನ್ ವಾಪಸ್ ಮಾಡುವುದಕ್ಕೆ ಲೋನ್‌ಗೆ ಇಂಟರೆಸ್ಟ್ ಕೊಡುವುದಕ್ಕೆ ಬಳಸಿದ್ದಾರೆ. ೩೦ ಲಕ್ಷ ರೂಪಾಯಿಗಳಲ್ಲಿ ಇವರು ಎಷ್ಟು ಕ್ವಾರ್ಟರ್ಸ್ ಕಟ್ಟಿಸುತ್ತಾರೆ ? ಗುಲ್ಬರ್ಗಾದಲ್ಲಿ ಪೊಲೀಸ್ ಕ್ವಾರ್ಟರ್ಸ್ ಕಟ್ಟಿಸಬೇಕೆಂದು ಟೆಂಡರ್ ಕಾಲ್‌ಫಾರ್ ಮಾಡಿದರು. ಅದು ಇದುವರೆಗೆ ಪತ್ತೆಯೇ ಇಲ್ಲ. ೨೦೦ ಕ್ವಾರ್ಟರ್ಸ್ ಕಟ್ಟಿಸಬೇಕೆಂದು ಮಾಡಿದ್ದನ್ನು ವಿತ್‌ಡ್ರಾ ಮಾಡಿಕೊಂಡರು. ಇವರು ಇನ್ನು ಯಾವ ರೀತಿ ಕಟ್ಟಿಸಬೇಕೆಂದು ಮಾಡಿದ್ದಾರೋ ಗೊತ್ತಿಲ್ಲ. ಒಂದು ಯೋಜನೆ ಮಂಜೂರಾದುದದನ್ನು ಈ ರೀತಿ ಮಾಡಿದರೆ ಏನು ಮಾಡಬೇಕು ? ಆ ಭಾಗಕ್ಕೆ ಹೆಚ್ಚಿನ ಸಹಾಯ ಮಾಡುತ್ತಾರೆಂದು ಅಂದುಕೊಂಡಿದ್ದುದನ್ನು ಮುಖ್ಯಮಂತ್ರಿಗಳು ಏನನ್ನೂ ಮಾಡದೆ ವಿತ್‌ಡ್ರಾ ಮಾಡಿಕೊಂಡರು. ಇವತ್ತಿನ ದಿವಸ ಈ ಪರಿಸ್ಥಿತಿ ಇದೆ. ಎರಡನೆಯದಾಗಿ ಇನ್ನೊಂದು ಮುಖ್ಯವಾದ ವಿಷಯ ಅರಿಯರ್ಸ್. ಇದರ ಬಗ್ಗೆ ಈ ಸದನದಲ್ಲಿ ಅನೇಕ ಸಾರಿ ಪ್ರಸ್ತಾಪ ಮಾಡಿದ್ದೇನೆ. ೧೩೩ ಕೋಟಿ ರೂಪಾಯಿ ಇನ್ನೂ ಅರಿಯರ್ಸ್ ಇದೆ ಎಂದು ಮುಖ್ಯ ಮಂತ್ರಿಗಳು ಹೋದ ಸಾರಿ ಹೇಳಿದ್ದರು. ಅದು ರಿಕವರಿ ಆಗಿದೆಯೋ ಇಲ್ಲವೋ ಗೊತ್ತಿಲ್ಲ. ಯಾವುದೇ ಒಂದು ಇಲಾಖೆಯನ್ನು ತೆಗೆದುಕೊಂಡರೂ ನೀವು ಹಿಂದೆ ಇದ್ದೀರಿ. ಮುಂದೆ ಹೋಗತಕ್ಕದ್ದು ಇಲ್ಲ. ಮೊನ್ನೆ ಪಬ್ಲಿಕ್ ಅಂಡರ್ ಟೇಕಿಂಗ್ ವಿಚಾರ ಪ್ರಸ್ತಾಪವಾಯಿತು. ಅದರಲ್ಲಿ ೧೨೭ ಕೋಟಿ ರೂಪಾಯಿ ಲಾಸ್ ಆಗಿದೆಎಂದು ಮಾನ್ಯ ಪಟೇಲರು ಹೇಳಿದರು. ಇದನ್ನು ಮಾಯ ಮಂತ್ರ ಮಾಡಿ ಸುಧಾರಣೆ ಮಾಡುತ್ತೇವೆಂದರೆ ಆಗುವುದಿಲ್ಲ. ಆದರೆ ಎಷ್ಟರಮಟ್ಟಿಗೆ ಲಕ್ಷ್ಯ ಕೊಟ್ಟು ಸುಧಾರಣೆ ಮಾಡಬೇಕೋ ಅದನ್ನು ಮಾಡಿಲ್ಲ ಎಂಬುದು ನನ್ನ ವಾದ. ನೀವು ಲಕ್ಷ್ಯ ಕೊಟ್ಟೇ ಇಲ್ಲ. ಏಕೆಂದರೆ ನಿಮಗೆ ಪುರುಸೊತ್ತೇ ಇಲ್ಲವಲ್ಲ. 127 ಕೋಟಿ ರೂಪಾಯಿಗಳ ನಷ್ಟವನ್ನು ಯಾವರೀತಿಯಾಗಿ ಕಡಿಮೆ ಮಾಡಬೇಕು ಎಂಬ ಬಗ್ಗೆ ಗಮನ ಹರಿಸಿದರೆ ಮಾತ್ರ ಸಾಧ್ಯವಾಗುತ್ತದೆ. ಆ ಕಡೆ ಗಮನವೇ ಇಲ್ಲ. ಹೀಗೆ ನಿಮ್ಮ ಆಡಳಿತ ದಿನೇ ದಿನೇ ಕುಸಿಯುತ್ತಿದೆ, ಜನರ ಅಭಿವೃದ್ಧಿಗಾಗಿ, ಕಲ್ಯಾಣಕ್ಕಾಗಿ ಕೆಲಸ ಮಾಡುತ್ತಿಲ್ಲ ಎಂಬುದು ನನ್ನ ನೇರವಾದ ಆಪಾದನೆ. ಇನ್ನೊಂದು ವಿಷಯ ಏನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಉತ್ತರ ಕೊಡುವಾಗ ಒಂದು ಮಾತು ಹೇಳಿದರು. ಬೆಂಡಿಗೇರಿ ಮತ್ತು ಸೊರಬದ ತತ್ತೂರು ಗ್ರಾಮದಲ್ಲಿ ಅಟ್ರಾಸಿಟೀಸ್ ಆದಾಗ ಪುಂಡುಗಂದಾಯ ಹಾಕುವುದಕ್ಕೆ ಅಮೆಂಡ್‌ಮೆಂಟ್ ತರುತ್ತೇವೆ, ಅದನ್ನು ಇದೇ ಅಧಿವೇಶನದಲ್ಲಿ ತರುತ್ತೇವೆ ಎಂದು ಹೇಳಿದ್ದರು. ಆದರೆ ಆ ಕೆಲಸ ಇದುವರೆಗೂ ಆಗಲಿಲ್ಲ. ನೀವು ಮನಸ್ಸು ಮಾಡಿ ಆರ್ಡಿನೆನ್ಸ್ ಆದರೂ ತನ್ನಿ. ಏಕೆಂದರೆ ಅದನ್ನು ತರದೇಹೋದರೆ ಅಟ್ರಾಸಿಟೀಸ್ ಮಾಡುವವರಿಗೆ ಭಯಭೀತಿ ಎಂಬುದು ಇರುವುದೇ ಇಲ್ಲ. ಆದ್ದರಿಂದ ದಯವಿಟ್ಟು ಆದಷ್ಟು ಮಟ್ಟಿಗೆ...

ಶ್ರೀ ಜಿ. ಬಸವಣ್ಣಪ್ಪ.—ಪೊಲೀಸ್ ಮ್ಯಾನುಯಲ್‌ಗೆ ಸೂಕ್ತ ತಿದ್ದುಪಡಿ ತರುವುದಕ್ಕೆ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಆದಷ್ಟು ಬೇಗ ತಂದರೆ ಭಯ ಇರುತ್ತದೆ. ಅದನ್ನು ತಂದತಕ್ಷಣ ಎಲ್ಲಾ ನಿಂತುಹೋಗುತ್ತದೆ ಎಂದು ನಾನು ಹೇಳುತ್ತಿಲ್ಲ. ಆದರೆ ಕಾನೂನಿದ್ದರೆ ಆಕ್ಷನ್ ತೆಗೆದುಕೊಳ್ಳುತ್ತಾರೆ ಎಂಬ ಭಯ ಆದರೂ ಇರುತ್ತದೆ ಆದ್ದರಿಂದ ಆದಷ್ಟು ಬೇಗ ಅದನ್ನು ತರಬೇಕೆಂದು ಕೇಳಿಕೊಂಡು ಪೊಲಿಟಿಕಲ್ ಪೆನ್‌ಷನ್ ವಿಚಾರ ಹೇಳುತ್ತೇನೆ. ಅನೇಕ ಸ್ವಾತಂತ್ರ್ಯ ಹೋರಾಟಗಾರರು ಪಾಪ ಇಲ್ಲಿ ಬಂದು ತಮ್ಮ ಕೇಸ್ ಪ್ರೋಸಸ್ ಮಾಡುವುದಕ್ಕಾಗುವುದಿಲ್ಲ. ಅಥವಾ ಅಂಡರ್ ಸೆಕ್ರೆಟರಿ, ಡೆಪ್ಯುಟಿ ಸೆಕ್ರೆಟರಿ ಹತ್ತಿರ ಹೋಗಿ ಅವರಿಗೆ ಬರತಕ್ಕ 150-200 ರೂಪಾಯಿ ಪೆನ್‌ಷನ್‌ಗೋಸ್ಕರ ಕೇಳುವುದಕ್ಕಾಗುವುದಿಲ್ಲ. ಇಲ್ಲಿ ಬಂದು ಕೆಲಸ ಮಾಡಿಸಿಕೊಂಡು ಹೋಗಬೇಕಾದರೆ ಒಂದು ಸಾವಿರ ರೂಪಾಯಿ ಖರ್ಚು ಆಗುತ್ತದೆ. ಆದ್ದರಿಂದ ದಯವಿಟ್ಟು ಯಾರ ಅಪ್ಲಿಕೇಷನ್ ಇಲಾಖೆಗೆ ಬಂದು ತಲುಪುತ್ತದೋ ಅದು ತಲುಪಿದ 15 ದಿವಸದೊಳಗೆ ಅಥವಾ 30 ದಿವಸದೊಳಗೆ ಅಪ್ಲಿಕೇಷನ್ ಡಿಸ್‌ಪೋಸ್ ಮಾಡಲೇಬೇಕು ಎಂದು ದಿನ ನಿಗದಿಪಡಿಸಿ. ಟೈಮ್ ಲಿಮಿಟ್ ಹಾಕಿ. ಮತ್ತು ಅವರಿಗೆ ಬಸ್ ಪಾಸ್ ಕೊಡುತ್ತೇವೆಂದು ಹೇಳಿದ್ದೀರಿ. ಅದು ಇನ್ನೂ ಕಾರ್ಯಗತ ಆಗಿಲ್ಲ. ಡೆಲ್ಲಿಯಿಂದ ಓಡಾಡುವುದಕ್ಕೆ ರೈಲ್ವೆ ಪಾಸ್ ಕೊಟ್ಟಿದ್ದಾರೆ. ಆದರೆ ಕೆ.ಎಸ್.ಆರ್.ಟಿ.ಸಿ. ಬಸ್‌ಪಾಸ್ ಕೊಟ್ಟಿಲ್ಲ. ಅದನ್ನು ಬೇಗ ಕೊಡುತ್ತೀರಾ ಎಂದು ಕೇಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಬಂದಮೇಲೆ ಒಂದು ಕೆಲಸ ಏನು ಮಾಡಿದರು ಅಂದರೆ, ಅವರಿಗೆ ಅನೇಕ ಕಂಪ್ಲೈಂಟ್ಸ್ ಮತ್ತು ಗ್ರಿವೆನ್ಸ್‌ಸ್ ಬಂದಾಗ ಎಲ್ಲಾ ಗ್ರಿವೆನ್ಸ್‌ಸ್ ನೋಡಿಕೊಳ್ಳುವುದಕ್ಕೆ ಒಂದು ಇಲಾಖೆ ಮಾಡಿದ್ದೇನೆ. ಆ ಮೂಲಕ ಅವರ ಎಲ್ಲಾ ಸಮಸ್ಯೆಗಳನ್ನೂ ಬಗೆಹರಿಸುತ್ತೇನೆ ಎಂದು ಹೇಳಿ ಗ್ರಿವೆನ್ಸ್‌ಸ್ ಸೆಲ್ ಮಾಡಿದರು. ಇಲ್ಲಿಯವರೆಗೆ ಅದಕ್ಕೆ ಬಂದ ಅಪ್ಲಿಕೇಷನ್ಸ್ ಪೈಕಿ 48 ಸಾವಿರ ಅಪ್ಲಿಕೇಷನ್ಸ್ ಪೆಂಡಿಂಗ್ ಇದೆ, ಈ ಅರ್ಜಿಗಳಲ್ಲಿ ಎಷ್ಟು ಅರ್ಜಿಗಳನ್ನು ಡಿಸ್‌ಪೋಸ್ ಮಾಡಿದ್ದೀರಿ. ಎಷ್ಟು ಜನರ ಗ್ರಿವೆನ್ಸ್‌ಸ್ ಸಾಲ್ವ್ ಮಾಡಿದ್ದೀರಿ ಎಂಬುದನ್ನು ಹೇಳಬೇಕು. ಅನೇಕ ಜನರಿಗೆ ನಿಮ್ಮ ಆಫೀಸಿನಿಂದ ಒಂದು ಅಕ್ನಾಲೆಡ್ಜ್‌ಮೆಂಟ್ ಹೋದರೆ ಖುಷಿಯಾಗಿರುತ್ತಾರೆ. ಮಾನ್ಯ ಮುಖ್ಯ ಮಂತ್ರಿಗಳ ಕಚೇರಿಯಿಂದ ಅಕ್ನಾಲೆಡ್ಜ್‌ಮೆಂಟ್ ಬಂದಿದೆ, ನಾನು ಹೇಳಿದ ಕೆಲಸ ಆಗುತ್ತದೆ ಎಂಬ ರೀತಿಯಲ್ಲಿ ಅವರು ತಿಳಿದುಕೊಂಡಿರುತ್ತಾರೆ. ಆದರೆ ಇನ್ನೂ 48 ಸಾವಿರ ಅಪ್ಲಿಕೇಷನ್ಸ್ ಪೆಂಡಿಂಗ್ ಇದೆ ಎಂದು ವಾರ್ಷಿಕ ರಿಪೋರ್ಟ್‌ನಲ್ಲಿದೆ. ನಾನು ಕೇಳುತ್ತೇನೆ ಅವರ ಸಮಸ್ಯೆಗಳನ್ನು ಎಷ್ಟು ಬಗೆಹರಿಸಿದ್ದೀರಿ? ಅಥವಾ ಆ ಡಿಪಾರ್ಟ್‌ಮೆಂಟ್ ಬರೀ ರಿಸೀವ್ ಮಾಡುವುದಕ್ಕೆ ಇದೆಯೊ? ಅಥವಾ ರಿಲೀಫ್ ಕೊಡುವುದಕ್ಕೂ ಇದೆಯೋ ಎಂಬುದನ್ನು ತಾವು ಹೇಳಬೇಕು. ಕೊನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚಿನ ಆಸಕ್ತಿ ವಹಿಸಿ ಅಪ್ಪರ್ ಕೃಷ್ಣ ಪ್ರಾಜೆಕ್ಟ್ ಅಥವಾ ಕೃಷ್ಣ ಬೇಸಿನ್‌ನಲ್ಲಿ ಬರತಕ್ಕ ಪ್ರಾಜೆಕ್ಟ್‌ಗಳಿಗೆ ಆದ್ಯತೆ ಕೊಡುತ್ತೇನೆ ಎಂದು ಹೇಳಿದ್ದರು. ಹಿಂದುಳಿದ ಭಾಗಕ್ಕೂ ಸಹಾಯ ಮಾಡುತ್ತೇನೆ ಎಂಬ ವಾಗ್ದಾನವನ್ನು ಅನೇಕ ಸಲ ಕೊಟ್ಟಿದ್ದಾರೆ. ಆದರೆ ಅದಕ್ಕೆ ತಕ್ಕಂತೆ ಇಲ್ಲಿಯವರೆಗೆ ನಡೆದುಕೊಂಡಿಲ್ಲ. ಪದೇ ಪದೇ ಅದನ್ನೇ ಹೇಳುವುದು ಬೇಕಾಗಿಲ್ಲ. ಆ ಬಗ್ಗೆ ಶ್ರೀಮಾನ್ ಬಸವಲಿಂಗಪ್ಪನವರು ಹೇಳಿದರು, ಶ್ರೀಮಾನ್ ವೀರಪ್ಪ ಮೊಯಿಲಿಯವರು ಹೇಳಿದರು, ಶ್ರೀಮತಿ ನಾಗರತ್ನಮ್ಮನವರೂ ಕೂಡ ಹೇಳಿದರು. 300 ಕೋಟಿ ರೂಪಾಯಿಗಳನ್ನು ಇರಿಗೇಷನ್‌ಗೆ ಕೊಡುತ್ತೇವೆ ಎನ್ನತಕ್ಕ ಮಾತನ್ನು ಒಪ್ಪಿಕೊಂಡಿದ್ದಾರೆಂದು ಶ್ರೀಮಾನ್ ದೇವೇಗೌಡರು ಹೇಳಿದರು. ಆ ಬಗ್ಗೆ ನಾವೂ ಕೂಡ ಇದೇ ಸದನದಲ್ಲಿ ಒಮ್ಮತದ ನಿರ್ಣಯವೊಂದನ್ನು ಕೂಡ ಪಾಸ್ ಮಾಡಿಕೊಟ್ಟಿದ್ದೇವೆ. ಆ ರೀತಿಯ ಠರಾವು ಆದಮೇಲೆ ಆ ದಿಕ್ಕಿನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೆಲಸ ಮಾಡಬೇಕಾಗಿತ್ತು. ಇಲ್ಲದಿದ್ದರೆ ರಿಸೋರ್ಸ್ ಮೊಬಲೈಸ್ ಮಾಡಿದ ನಂತರ ಈ ಠರಾವನ್ನು ಒಪ್ಪಿಕೊಳ್ಳುತ್ತೇವೆಂದಾದರೂ ಹೇಳಬಹುದಾಗಿತ್ತು. ಅದೂ ಅಲ್ಲದೆ ಕೇವಲ ನಮ್ಮನ್ನು ತೃಪ್ತಿ ಪಡಿಸುವುದಕ್ಕೋಸ್ಕರ ಇದನ್ನು ಅಂದು ಒಪ್ಪಿಕೊಂಡಿರೋ ಹೇಗೆ? ಇವತ್ತು ಏನಾಗಿದೆ ಎಂದರೆ ತಮ್ಮ ಪರಿಸ್ಥಿತಿಯನ್ನು ನೋಡಿದರೆ ಅದು ಗೊತ್ತಾಗುತ್ತದೆ. ನಾವು ಮೊದಲಿನಿಂದಲೂ ನಿಮ್ಮ ಕೈಯ್ಯಲ್ಲಿ ಇದು ಆಗುವುದಿಲ್ಲವೆಂದು ಹೇಳುತ್ತಿದ್ದೆವು. ಅಷ್ಟೇ ಅಲ್ಲ ಬಜೆಟ್ಟಿನಲ್ಲಿ ಪ್ರೊವೈಡ್ ಮಾಡಿರತಕ್ಕ ಹಣವನ್ನಾದರೂ ಕೂಡ ಖರ್ಚು ಮಾಡತಕ್ಕ ಯೋಗ್ಯತೆ ಈ ಸರ್ಕಾರಕ್ಕೆ ಇಲ್ಲದಿದ್ದರೆ ಏನು ಮಾಡಬೇಕು? ಬಜೆಟ್ಟಿನಲ್ಲಿ ಇಲ್ಲದೇ ಇರುವ 300 ಕೋಟಿ ರೂಪಾಯಿಗಳನ್ನು ಪ್ರೊವೈಡ್ ಮಾಡುತ್ತೇವೆ ಎಂದು ಹೇಳಲಿಕ್ಕೂ ಸಹ ಎಷ್ಟರಮಟ್ಟಿಗೆ ಸಾಧ್ಯವಿದೆ? ಇದು ಒಂದು ಕಡೆ.

ಎರಡನೆಯದಾಗಿ 2000 ಇಸವಿಯೊಳಗೆ ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ನಮ್ಮ ಪಾಲಿಗೆ ಬಚಾವತ್ ಕಮಿಷನ್ ಪ್ರಕಾರ ನೀರನ್ನು ಏನು ಅಲಾಟ್ ಮಾಡಿದ್ದಾರೆ ಅಷ್ಟೂ ನೀರನ್ನು ಉಪಯೋಗಿಸಬೇಕಾಗಿದೆ. ಇದಕ್ಕೆ ಸುಮಾರು 4,000—5,000 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ. ಇದನ್ನು ಯಾವ ರೀತಿ ಮೊಬಲೈಸ್ ಮಾಡುತ್ತೀರಿ? ಮುಂದೆ ಯಾವ ರೀತಿ ನೀರನ್ನು ಉಪಯೋಗ ಮಾಡಿಕೊಳ್ಳುತ್ತೀರಿ ಎನ್ನತಕ್ಕಂಥದ್ದು ಬಹಳ ಮುಖ್ಯವಾದುದು. ಬೇರೆ ಯಾವ

ರೂಪದಲ್ಲಿ ಇದಕ್ಕೆ ಹಣವನ್ನು ಒದಗಿಸಬೇಕೆಂಬುದನ್ನಾದರೂ ಯೋಚನೆ ಮಾಡಬೇಕಲ್ಲ. ಇಲ್ಲದಿದ್ದರೆ ತೆಲುಗು-ಗಂಗಾ ಯೋಜನೆಗಾಗಿ ಅವರು 180 ಕೋಟಿ ರೂಪಾಯಿಗಳನ್ನು ಈಗಾಗಲೇ ಖರ್ಚು ಮಾಡಿದ್ದಾರೆ. ಇನ್ನು ಕೇವಲ 200 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಅವರು ಸಂಪೂರ್ಣವಾಗಿ ಆ ಯೋಜನೆಯನ್ನು ಮುಗಿಸಬಹುದು ಎಂದು 8 ದಿವಸಗಳ ಹಿಂದೆ ಒಬ್ಬರು ಆ ಬಗ್ಗೆ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ತೆಲುಗು ಗಂಗಾ ಯೋಜನೆ ಕೆಲಸ ಬಹಳ ಫಾಸ್ಟ್ ಆಗಿ ಹೋಗುತ್ತಿದೆ. ಅವರು ಶ್ರೀಶೈಲ ಡ್ಯಾಂನ್ನು ಎತ್ತರ ಮಾಡಿಕೊಂಡು ಕೆನಾಲ್ ಕೆಲಸವನ್ನು ನೀರಾವರಿಗೋಸ್ಕರ ಪೂರ್ತಿಮಾಡಿದರೆ ಖಂಡಿತವಾಗಿ ಮುಂದೆ ನಾವು ಎಷ್ಟೇ ಪ್ರಯತ್ನ ಮಾಡಿದರೂ ಕೂಡ ನಮ್ಮ ರಾಜ್ಯಕ್ಕೆ ನ್ಯಾಯವನ್ನು ಒದಗಿಸಿಕೊಡುವುದಕ್ಕಾಗುವುದಿಲ್ಲ, ಮುಂದೆ ಯಾರೇ ಬರಬಹುದು. ಒಂದು ವರ್ಷ ಇರಬಹುದು, 2 ವರ್ಷ ಇರಬಹುದು, ಅಥವಾ ನಿಮಗೆ ಏನು ಜನರು ಎಲ್ಲಿಯವರೆಗೆ ಬೆಂಬಲ ಕೊಡುತ್ತಾರೋ ಅಲ್ಲಿಯವರೆಗೆ ಇರಬಹುದು. ಆದರೆ ಈ ದೇಶದ ಹಿತಾಶಕ್ತಿಯನ್ನು ಜನರ ಹಿತಾಶಕ್ತಿಯನ್ನು ಕಾಪಾಡಿಕೊಂಡು ಹೋಗತಕ್ಕ ದಿಸೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡದಿದ್ದರೆ ನಾಳೆ ನಿಮ್ಮ ಮೇಲೆ ಗೂಬೆ ಕೂರಿಸತಕ್ಕಂತಹ ಕೆಲಸ ಆಗುತ್ತದೆ. ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ನಿಮ್ಮ ಹೆಸರನ್ನು ಕಪ್ಪು ಅಕ್ಷರದಲ್ಲಿ ಜನ ಬರೆಯುತ್ತಾರೆ. ಏಕೆಂದರೆ ಇಂತಹ ಮುಖ್ಯಮಂತ್ರಿಗಳು ಇದ್ದಂತಹ ಕಾಲದಲ್ಲಿ ಏನು ಜನತೆಗೆ ವಾಗ್ದಾನ ಮಾಡಿ ಆ ಬಗ್ಗೆ ಪ್ರಯತ್ನ ಮಾಡುತ್ತೇವೆಂದು ಹೇಳಿದರು, ಆ ದಿಕ್ಕಿನಲ್ಲಿ ತಮ್ಮ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಿಲ್ಲ ಎಂಬ ಆಪಾದನೆ ನಿಮ್ಮ ಮೇಲೆ ಬರುತ್ತದೆ. ಆ ಒಂದು ನೀರಿನ ಬಳಕೆಯನ್ನು ಮಾಡಿಕೊಂಡಿಲ್ಲ ಎನ್ನತಕ್ಕ ಆಪಾದನೆಗೆ ಮತ್ತು ಗುರಿಗೆ ಒಳಪಡಿಸುತ್ತಾರೆ ಎನ್ನತಕ್ಕ ಎಚ್ಚರಿಕೆಯನ್ನು ನಾನು ಇವತ್ತಿನ ದಿವಸ ಕೊಡುತ್ತಿದ್ದೇನೆ. ಅದಕ್ಕಾಗಿ ಯಾವ ರೀತಿಯಾಗಿ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ ಬರತಕ್ಕ ಪೂರ್ಣ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡತಕ್ಕಂತಹದ್ದು, ಅದೇ ರೀತಿ ಕಾವೇರಿ ಜಲಾನಯದ ಪ್ರದೇಶದಲ್ಲಿ ಬರತಕ್ಕ ನೀರನ್ನು ಉಪಯೋಗ ಮಾಡಿಕೊಳ್ಳತಕ್ಕ ವಿಚಾರದಲ್ಲೂ ಕೂಡ ತಾವು ಏನು ಯೋಚನೆ ಮಾಡಿದ್ದೀರಿ ಎನ್ನತಕ್ಕಂತದನ್ನು ಈ ಮನೆಯ ಮುಂದೆ ತಾವು ಸ್ಪಷ್ಟವಾಗಿ ಹೇಳತಕ್ಕಂತಹದು ಬಹಳ ಅವಶ್ಯಕ ಇದೆ. ಏಕೆಂದರೆ ಇನ್ನು ಮುಂದೆ ಸದನ ಇರುವುದಿಲ್ಲ. ತಾವು ಪುನಃ ಈ ಸದನವನ್ನು ಕರೆಯಬೇಕಾದರೆ 6 ತಿಂಗಳ ಮೇಲಾದರೂ ಆಗುತ್ತದೆ. ಆದ್ದರಿಂದ ಇದರ ಬಗ್ಗೆ ತಮ್ಮ ನಿಲುವು ಏನು ಎಂಬುದನ್ನು ತಿಳಿಸಬೇಕು. ಈಗ ಆಬಗ್ಗೆ ವಾದ ವಿವಾದ ಏನು ನಡೆದಿದೆ, ಒಂದು ಕಡೆಯಿಂದ ಮಾನ್ಯ ಹಿರಿಯ ಸಚಿವರಾಗಿದ್ದಂತಹವರೊಬ್ಬರಿಗೆ ಸಂಪೂರ್ಣವಾಗಿ ಇರಿಗೇಷನ್ ಡಿಪಾರ್ಟ್‌ಮೆಂಟನ್ನು ಅವರಿಗೆ ವಹಿಸಿಕೊಟ್ಟಿದ್ದೀರಿ. ಒಂದು ರೀತಿಯಲ್ಲಿ ಹೇಳಬೇಕಾದರೆ ಆ ಇಲಾಖೆಯನ್ನು ಸಂಪೂರ್ಣವಾಗಿ ಅವರಿಗೆ ಹೆಚ್ಚು ಕಡಿಮೆ ಮಾರ್ಟಗೇಜ್ ಮಾಡಿಕೊಟ್ಟಿದ್ದೀರಿ ಆದರೆ ಅವರ ವಾದ ಏನು ಇದೆ ಎಂದರೆ ಮುಖ್ಯಮಂತ್ರಿಗಳು ಈ ದೇಶದ ರೈತರಿಗೆ ಮೋಸ ಮಾಡಿದ್ದಾರೆ. ಈ ದೇಶದ ಹಿತವನ್ನು ಕಾಪಾಡಿಲ್ಲ ಎನ್ನತಕ್ಕ ಗುರುತರವಾದ ಆಪಾದನೆಯನ್ನು ತಮ್ಮ ಮೇಲೆ ಮಾಡಿದ್ದಾರೆ. ನೀವು ಅವರಿಗೆ ನ್ಯಾಯವನ್ನು ದೊರಕಿಸಿ ಕೊಟ್ಟಿಲ್ಲ ಎಂಬುದು ಇದರಿಂದ ಅರ್ಥವಾಗುತ್ತದೆ. ತೆಲುಗು-ಗಂಗಾ ಆದರೆ ಕೃಷ್ಣಾ ಜಲಾನಯನದ ನೀರಿನ ಸಮಸ್ಯೆಯ ಬಗ್ಗೆ ಕೇಂದ್ರ ನೀರಾವರಿ ಸಚಿವರಾಗಿರುವಂತಹ ಶ್ರೀಮಾನ್ ದಿನೇಶ್ ಸಿಂಗ್ ಅವರ ಜೊತೆ ಮಾತನಾಡಿದ್ದೇನೆ. ಅವರಿಗೆ ಒಂದು ಫಾರ್ಮುಲಾ ಕೊಟ್ಟಿದ್ದೇನೆ, ಅದಕ್ಕವರು ಒಪ್ಪಿಕೊಂಡಿದ್ದಾರೆ, ಇದರಿಂದ ಆಂಧ್ರಕ್ಕೂ ಒಳ್ಳೆಯದು, ನಮಗೂ ಒಳ್ಳೆಯದು, ಮಹಾರಾಷ್ಟ್ರಕ್ಕೂ ಒಳ್ಳೆಯದು ಎನ್ನತಕ್ಕ ಮಾತನ್ನು ತಾವು ಹೇಳಿದ್ದೀರಿ. ಆ ಫಾರ್ಮುಲಾವನ್ನು ತಾವು ಸ್ಪೆಲೌಟ್ ಮಾಡಬೇಕು ಈ ರಾಜ್ಯದ ಜನರಿಗೆ ಅದು ಗೊತ್ತಾಗಬೇಕು. ಈ ಸದನಕ್ಕೂ ಗೊತ್ತಾಗಬೇಕು. ತಮ್ಮ ಫಾರ್ಮುಲ ಏನು ಇದೆ ? ಯಾವ ಆಧಾರದ ಮೇಲೆ ಆ ಫಾರ್ಮುಲವನ್ನು ತಯಾರು ಮಾಡಿದ್ದೀರಿ ? ನಿಮ್ಮಲ್ಲಿರತಕ್ಕ ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರ ಜೊತೆ ಸೂಕ್ತ ಸಮಾಲೋಚನೆ ಮಾಡಿ ಮಾಡಿರತಕ್ಕಂತ ಫಾರ್ಮುಲವೇ ? ಆ ಫಾರ್ಮುಲಾ ಏನು ಎಂಬುದನ್ನು ಸ್ಪೆಲೌಟ್ ಮಾಡಬೇಕು. ಇದನ್ನು ತಾವು ತಮ್ಮ ಉತ್ತರದಲ್ಲಿ ಮರೆಯಬಾರದೆಂದು

೨.೩೦ ಪಿ.ಎಂ.

ಹೇಳುತ್ತೇನೆ. ಇನ್ನು ಮತೀಯಗಲಭೆಗಳ ಬಗ್ಗೆ ಹೇಳಬೇಕೆಂದರೆ ಈ ವರ್ಷ ಸುಮಾರು ೧೪ ಇಂತಹ ಘಟನೆಗಳು ಆಗಿವೆ. ಇದನ್ನು ತಡೆಗಟ್ಟತಕ್ಕ ವ್ಯವಸ್ಥೆಯನ್ನು ಮಾಡಬೇಕು. ಇದರಲ್ಲಿ ಪಾರ್ಟಿ ಪಂಗಡ ಏನು ಇರುವುದಿಲ್ಲ. ಯಾವುದಾದರೂ ಗಡಿಯ ವಿಷಯವಾಗಿ, ಧರ್ಮದ ವಿಷಯವಾಗಿ ಇವು

(ಮಾನ್ಯ ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಪ್ರಾರಂಭವಾಗುತ್ತವೆ. ಇಂತಹ ೧೪ ಕಮ್ಯುನಲ್ ರೈಯಟ್ಸ್ ಈ ವರ್ಷ ಆಗಿದೆ. ಇಂತಹ ಘಟನೆಗಳ

ಬಗ್ಗೆ ಏನು ಕ್ರಮವನ್ನು ತಾವು ಹಾಕಿಕೊಂಡಿದ್ದೀರಿ ? ಬಿಜಾಪುರದಲ್ಲಿ, ಶಿಡ್ಲಘಟ್ಟದಲ್ಲಿ, ದೇವನಹಳ್ಳಿಯಲ್ಲಿ, ತುಮಕೂರಿನಲ್ಲಿ ಇಂತಹ ಘಟನೆಗಳು ಆದವು. ಇಲ್ಲಿ ನೊಂದವರಿಗೆ ಕಾಂಪೆನ್ಸೇಷನ್ ಕೊಡಬೇಕೆಂದು ಹೇಳಿದ್ದೇವೆ. ಮತ್ತು ಯಾರು ಇವಕ್ಕೆ ಕಾರಣಕರ್ತರಾಗಿದ್ದಾರೆ ಆ ಜನರನ್ನು ಅರೆಸ್ಟ್ ಮಾಡಬೇಕೆಂದರೂ ಕೂಡಾ ಹೇಳಿದ್ದೇವೆ. ಈಗ ಕೆಲವು ಕಡೆ ಅರೆಸ್ಟ್ ಮಾಡಿದ್ದಾರೆ. ಕೆಲವು ಕಡೆ ಅರೆಸ್ಟ್ ಮಾಡಿಲ್ಲ ಮತ್ತೆ ಕೆಲವು ಕಡೆ ರಾಜಕೀಯವಾಗಿ ಯಾರು ಚೆನ್ನಾಗಿರುವುದಿಲ್ಲ, ಯಾರ ಮೇಲೆ ರಿವೆಂಜ್ ತೀರಿಸಿಕೊಳ್ಳಬೇಕೆಂದಿರುತ್ತಾರೆ ಅಂತವರ ಮೇಲೆ ಕಂಪ್ಲೇಂಟ್ ಕೊಟ್ಟು ಅರೆಸ್ಟ್ ಮಾಡಿಸಿದ್ದಾರೆ. ಇಂತಹ ಪ್ರಯತ್ನಗಳು ಅಲ್ಲಿ ನಡೆದಿವೆ. ಅದನ್ನು ರಾಜಕೀಯ ದುರುದ್ದೇಶದಿಂದ ಅಥವಾ ರಾಜಕೀಯವಾಗಿ ಉಪಯೋಗ ಮಾಡತಕ್ಕದ್ದು ಬೇಡ. ಇದನ್ನೂ ಕೂಡ ತಾವೇ ಹೇಳಬೇಕು. ಇದರ ಬಗ್ಗೆ ಏನು ಯೋಜನೆಯನ್ನು ಹಾಕಿದ್ದೀರಿ ಎಂಬುದನ್ನು ಕೂಡ ಸ್ಪಷ್ಟವಾಗಿ ಇವತ್ತಿನ ದಿವಸ ತಾವು ತಿಳಿಸಬೇಕೆಂದು ಹೇಳಿ ಮತ್ತೆ ಈಗಾಗಲೇ ತಮಗೆ ಕೇಳಿಕೊಂಡ ಹಾಗೆ ಈ ರಾಜ್ಯದ ಜನತೆ ಕಳೆದುಕೊಂಡಿರತಕ್ಕ ಸಾಮಾಜಿಕ ನ್ಯಾಯವನ್ನು ಅವರು ಪುನಃ ಪಡೆದುಕೊಳ್ಳಬೇಕಾದರೆ ತಾವು ಏನು ಒಳ್ಳೆಯ ನಿಲುವನ್ನು ತಾಳಬೇಕೊ ಅದನ್ನು ತಾಳಬೇಕು. ಇವತ್ತು ಪ್ರತಿಯೊಂದು ಜಿಲ್ಲೆಯಲ್ಲಿ ವಿವಿಧ ಸಾಮಾಜಿಕ ವರ್ಗಕ್ಕೆ ಸೇರಿದ ಅಧಿಕಾರಿಗಳನ್ನು ಎಕ್ಸಿಕ್ಯೂಟಿವ್ ಪೋಸ್ಟ್‌ಗಳಲ್ಲಿ ಹಾಕಬೇಕು. ಶಾಸಕರ ಒತ್ತಡಕ್ಕಾಗಲೀ. ಪಕ್ಷದ ಜನರ ಒತ್ತಡಕ್ಕಾಗಲೀ ತಾವು ಮಣಿಯದೆ ನ್ಯಾಯವಾದ ಆಡಳಿತವನ್ನು ಕೊಡಬೇಕಾದರೆ ಈ ಕೆಲಸವನ್ನು ತಾವು ಮಾಡಬೇಕಾಗುತ್ತದೆ. ಮತ್ತೆ ನೀರಾವರಿ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಕೃಷ್ಣಾ ಬೇಸಿನ್ ಪ್ರಾಜೆಕ್ಟ್ ಕಂಪ್ಲೀಟ್ ಮಾಡುವುದಕ್ಕೆ ರಿಸೊರ್ಸಸ್ ಮೊಬಲೈಸ್ ಮಾಡುತ್ತೇವೆಂದು ತಾವು ಹೇಳಬೇಕು. ಮತ್ತೆ ದಿನೇಶ್ ಸಿಂಗ್ ಅವರಿಗೆ ಕೊಟ್ಟು ಫಾರ್ಮುಲಾವನ್ನು ಇಲ್ಲಿ ಹೊರಗೆಡವಬೇಕೆಂದು ಹೇಳಿ ತಮ್ಮ ಆಡಳಿತದಲ್ಲಿ ಒಂದು ಕೆಲಸ ಒಳ್ಳೆಯ ಕೂಡ ಆಗಿಲ್ಲ ಎನ್ನುವ ಮಾತನ್ನು ವ್ಯಥೆಯಿಂದ ಹೇಳಿ ಮತ್ತು ಯಾವ ಕಾರ್ಯಕ್ರಮ ಕೂಡಾ ಬರೀಹಾಕದೇ ಎಲ್ಲಾ ಕಾರ್ಯಕ್ರಮಗಳನ್ನು ಕೂಡ ಜಿಲ್ಲಾ ಪರಿಷತ್‌ಗೆ ಕೊಟ್ಟಿದ್ದೇವೆಂದು ಹೇಳಿ ಬರೀ ಪೋಸ್ಟ್‌ಮನ್ ಕೆಲಸ ಮಾಡತಕ್ಕದ್ದು ನನ್ನ ಕೆಲಸ ಎಂದು ಏನು ಹೇಳಿದ್ದಾರೆ ಅದು ಸರಿಯಲ್ಲ. ಇದರ ಬಗ್ಗೆ ನನಗೆ ಕನಿಕರ ಇದೆ. ಕಾರಣ ನಿಮ್ಮ ಪರಿಸ್ಥಿತಿ ಹಿಗಾಗಿ. ತಾವು ಇಕ್ಕಟ್ಟಿನಲ್ಲಿ ಸಿಕ್ಕಿದ್ದೀರಿ. ನಮ್ಮ ಮಾನ್ಯ ಮೊಯ್ಲಿಯವರು ಹೇಳಿದಹಾಗೆ ಎರಡು ಪವರ್‌ಫುಲ್ ಲಾಬಿಗಳ ಮಧ್ಯೆ ತಾವು ಸಿಕ್ಕಿಬಿಟ್ಟಿದ್ದೀರಿ. ಇಂಡಿಪೆಂಡೆಂಟಾಗಿ ಯಾವ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಮನಸ್ಸು ಇದ್ದರೂ ಕೂಡಾ ಅವರು ಅದನ್ನು ಮಾಡುವುದಕಾಗುವುದಿಲ್ಲ. ಇದಕ್ಕೆ ಕಾರಣ ಒತ್ತಡ. ಇವರಿಬ್ಬರನ್ನು ಕೂಡ ಮೀರಿ ಹೊರಬರತಕ್ಕ ಶಕ್ತಿ ತಮಗಿಲ್ಲ. ಇವರಲ್ಲಿ ಮೊದಲಿನ ಶಕ್ತಿ ಇದ್ದರೆ ಫೈಟ್ ಮಾಡಬೇಕು. ಎರಡೂ ಕಡೆ ಹೋರಾಡತಕ್ಕ ಶಕ್ತಿ ದೇವರಾಜ ಅರಸ್ ಅವರಲ್ಲಿ ಮಾತ್ರ ಇತ್ತು. Rightly or wrongly he is under the clutches of two powesful and dominant communities. ಈ ಕಡೆ ಹೋದರೆ ಅವರು ಬಿಡುವುದಿಲ್ಲ, ಆಕಡೆ ಹೋದರೆ ಇವರು ಬಿಡುವುದಿಲ್ಲ. ಈ ಕಡೆ ಹಳ್ಳ ಅಕಡೆ ಬಾವಿ. ಈ ಪರಿಸ್ಥಿತಿಯಲ್ಲಿದ್ದಾರೆ. ಈಗ ಇವರಿಗೆ ಸ್ವಲ್ಪ ರಿಲೀಫ್ ಸಿಕ್ಕಿದೆ. ಒಂದೇ ಒಂದು ಡಾಮಿನೆಂಟ್ ಕಮ್ಯುನಿಟಿಯವರು ಇವರಿಗೆ ಸಪೋರ್ಟ್ ಮಾಡುತ್ತಿದ್ದಾರೆ. ಅದ್ದರಿಂದ ಈಗಲೂ ಧೈರ್ಯದಿಂದ ಹೋರಾಡುತ್ತಿದ್ದಾರೆ- ಆದರೆ ಇವರು ಬರಬರುತ್ತಾ ಮೈನಾರಿಟಿ ಆಗುತ್ತಿದ್ದಾರೆ. ೧೩೯ ಜನರ ಬೆಂಬಲ ಇವತ್ತು ೮೬ ಕ್ಕೆ ಇಳಿದಿದೆ. ಇರುವವರಲ್ಲಿ ಇನ್ನೂ ಎಷ್ಟು ಜನ ಉಳಿಯುತ್ತಾರೋ ಬಿಡುತ್ತಾರೋ ಗೊತ್ತಿಲ್ಲ. ಅಧ್ಯಕ್ಷರೇ, ಇವರು ಆಡಳಿತ ಪಕ್ಷವಾಗಿ ನಡೆಯಬೇಕಾದರೆ ಅವರ ಕಡೆ ಜನ ಇರಬೇಕಾಗುತ್ತದೆ. ಇಷ್ಟು ಜನ ಬಿಟ್ಟು ಹೋಗಿರುವುದರಿಂದ ಆಡಳಿತ ಸಡಿಲವಾಗುತ್ತಿದೆ. ಇವರ ಆಡಳಿತ ಕುಸಿದು ಬೀಳುತ್ತಿದೆ. ಏಕೆಂದರೆ ಇವರಿಗೆ ಧೈರ್ಯ ಶಕ್ತಿ ಇಲ್ಲ, ಎಲ್ಲಾ ಶಾಸಕರು ಶಕ್ತಿಯನ್ನು ಕೊಟ್ಟರೆ ತಾನೇ ಇವರಿಗೆ ಧೈರ್ಯ ಬರುವುದು, ಇವರಿಗೆ ಶಕ್ತಿ ಬರುವುದು. ಇವತ್ತಿನ ದಿವ ಸರ್ಕಾರಿಗೂ ಗಾಮು ಇಲ್ಲ, ಇವರ ಆಡಳಿತ ವೈಖರಿ ಸ್ಟೈಲ್ ಆಫ್ ಫಂಕ್ಷನ್ಸ್ ಆಡಳಿತದಲ್ಲಿರತಕ್ಕ ಕರ ಪ ಎಲ್ಲಾ ನೋಡಿ ಜನರು ಸುಸ್ತಾಗಿದ್ದಾರೆ. ನಾವು ಇಲ್ಲಿ ಇರುವುದಕ್ಕೆ ಸಾಧ್ಯವಿಲ್ಲ ಹೆನ್ನುವುದು ಕಂಡುಬಂದ ಮೇಲೆ ಅವರು ಬೆಂಬಲವನ್ನು ವಾಪಸ್ಸು ತೆಗೆದುಕೊಂಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಮುಖ್ಯ ಮಂತ್ರಿಗಳು ಇದ್ದಾರೆ. ಆದಕ್ಕೆ ಈ ಆಡಳಿತವನ್ನು ಯಾವರೀತಿಯಾಗಿ ಸರಿಪಡಿಸತ್ತಾರೆಂದು ಹೇಳುವುದು ಕಷ್ಟವಾಗಿದೆ, ಇಷ್ಟು ಹೇಳಿ ತಾವು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ಇದಿನಬ್ಬಸವರು ಮಾತನಾಡಬಹುದು.

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ನಾನು ಕ್ರಿಯಾಲೋಪವನ್ನು ಎತ್ತುತ್ತೇನೆ. ಏನೆಂದರೆ......

ಅಧ್ಯಕ್ಷರು.—ಅವರು ಇನ್ನು ಭಾಷಣ ಶುರು ಮಾಡಿಲ್ಲ. ನಿಮ್ಮ ಪಾಯಿಂಟ್ ಆಫ್ ಆರ್ಡರ್ ಎಲ್ಲಿ ಬರುತ್ತದೆ? ನಾನು ಅದಕ್ಕೆ ಅವಕಾಶ ಕೊಡುವುದಿಲ್ಲ. ತಾವು ಏನೇ ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ. ಟೈಮ್ ವೇಸ್ಟ್ ಮಾಡಬೇಡಿ. ಈಗ ಮಾನ್ಯ ಇದಿನಬ್ಬರವರು ಭಾಷಣ ಮಾಡಲಿ.

ಶ್ರೀ ಬಿ. ಸ್ವಾಮಿರಾವ್.—ವಿಧಾನಸಭೆ ನಡೆಯುತಕ್ಕ ಸಂದರ್ಭದಲ್ಲಿ, ವಿಧಾನಸೌಧದ ಒಳಗಡೆ ಸಭೆ ಘೋಷಣೆಗಳು ನಡೆಯುತ್ತಿವೆ. ತಾವು ಇಲ್ಲಿ ಸಭೆ ನಡೆಸುತ್ತಿದ್ದೀರಿ. ನಾವು ಇಲ್ಲಿ ಕುಳಿತು ಕೊಂಡಿದ್ದೇವೆ. ನಮ್ಮನ್ನು ಜನ ಹೊರಗೆ ಹೋಗುವುದಕ್ಕೆ ಒಳಗೆ ಬರುವುದಕ್ಕೆ ಬಿಡುತ್ತಿಲ್ಲ.

ಅಧ್ಯಕ್ಷರು.—ಇಲ್ಲಿ ಏನೂ ಆಗಿಲ್ಲ ಕೆಲಸ ನಡೆಯುತ್ತಿದೆ, ತಾವು ದಯವಿಟ್ಟು ಕೂಡ್ರಿ.

ಶ್ರೀ ಬಿ. ಸ್ವಾಮಿರಾವ್.—ಅಲ್ಲಿ ನಾವು ಓಡಾಡುವುದಕ್ಕೆ ಆಗುವುದಿಲ್ಲ. ಇಲ್ಲಿ ಹೇಳುವವರು ಕೇಳುವವರು ಯಾರು ಇಲ್ಲವೇ?

ಅಧ್ಯಕ್ಷರು.—ಅದನ್ನು ನೋಡೋಣ ಬಿಡಿ.

† ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಅಧ್ಯಕ್ಷರೇ, ನಾನು ಸಮಯವನ್ನು ಹೆಚ್ಚಿಗೆ ತೆಗೆದುಕೊಳ್ಳುವುದಿಲ್ಲ. ಕೆಲವು ಸಲಹೆಗಳನ್ನು ಮಾತ್ರ ಕೊಡಲಿಕ್ಕೆ ಅಪೇಕ್ಷೆ ಪಡುತ್ತೇನೆ. ಅನೇಕರು ಒಳ್ಳೊಳ್ಳೆಯ ಮಾತನಾಡಿದರೂ ನನಗೂ ಅಷ್ಟೆ ಮಾತನಾಡಲಿಕ್ಕೆ ಮನಸ್ಸು ಇತ್ತು. ಆದರೆ ಸಮಯವಿಲ್ಲ. ನಾನು ಈಗ ವಕ್ಫ್ ಇಲಾಖೆಯಲ್ಲಿನ ಕೆಲವು ವಿಚಾರಗಳನ್ನು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ವಕ್ಫ್ ಇಲಾಖೆ ಅಲ್ಪ ಸಂಖ್ಯಾತರನ್ನು ರಕ್ಷಿಸತಕ್ಕ, ಅವರನ್ನು ಒಳ್ಳೆಯ ರೀತಿಯಲ್ಲಿ ನೋಡಿಕೊಳ್ಳತಕ್ಕ ಹಾಗೂ ಅವರಿಗೆ ಬೇಕಾದ ಸಲಕರಣೆಗಳನ್ನು ಅವರ ಮಸೀದಿ, ಮದರಸಗಳಿಗೆ ಸಹಾಯ ಮಾಡತಕ್ಕ ಇಲಾಖೆ ಆಗಿದೆ. ಆದರೆ ಇವತ್ತು ಏನೂ ಆಗದೆ ಬಹಳ ಸೌಮ್ಯ ಬಹಳ ಸಪ್ಪೆ ಆಗಿದೆ. ಅಲ್ಲಿ ನಡೆಯುತಕ್ಕ ಕೆಲಸಗಳು ಚುರುಕಿನಿಂದ ನಡೆಯುತ್ತಿಲ್ಲ. ಅನೇಕ ಕಡೆಯಿಂದ ನಮ್ಮ ಜಿಲ್ಲೆಯಿಂದ ಅನೇಕ ಮಸೀದಿ, ಮದರಸಗಳಿಗೆ ರಿಪೇರಿ ಮಾಡಲಿಕ್ಕೆ ಹಣ ಕೊಡಬೇಕೆಂದು ಕಾಗದ ಬರೆದಿದ್ದೇವೆ, ಅದಕ್ಕೆ ಇನ್ನೂ ಸರಿಯಾದ ವ್ಯವಸ್ಥೆಯಾಗಿಲ್ಲ. ವಕ್ಫ್ ಬೋರ್ಡ್ ಉಂಟಲ್ಲ, ಅದು ಚುರುಕಿನಿಂದ ಇರತಕ್ಕ ಬೋರ್ಡ್ ಅಲ್ಲವೆಂದು ಜನರು ಹೇಳುತ್ತಿದ್ದಾರೆ. ಅಲ್ಲಿರತಕ್ಕ ಜನ ಯಾವರೀತಿ ಮಾತನಾಡುತ್ತಾರೆಂದರೆ, ಅಲ್ಪಸಂಖ್ಯಾತರ ಹಿಂದುಳಿದವರ ಬಗ್ಗೆ ಏನು ಉಪಕಾರ ಮಾಡಬೇಕೆನ್ನುವ ಮನಸ್ಸು ಅಲ್ಲಿರತಕ್ಕ ಸಿಬ್ಬಂದಿಗೆ ಇಲ್ಲ. ಅವರು ಯಾವುದೋ ಕಾಲದ ದಿವಾನಖಾನೆಯಲ್ಲಿ ಇದ್ದಹಾಗೆ ವರ್ತಿಸುತ್ತಾರೆ. ಆ ಬೋರ್ಡಿನಲ್ಲಿದ್ದ ಅಧ್ಯಕ್ಷರು ತೀರಿಹೋಗಿದ್ದಾರೆ. ಹೊಸ ಅಧ್ಯಕ್ಷರನ್ನು ನೇಮಕ ಮಾಡಿದ್ದಾರೆ. ಆದರೆ ಅದು ಕಾನೂನು ಬಾಹಿರವೆಂದು ಹೇಳುತ್ತಿದ್ದಾರೆ. ಆ ಬೋರ್ಡಿಗೆ ಹೊಸ ಸದಸ್ಯರನ್ನು ಆದಷ್ಟುಬೇಗ ನೇಮಕ ಮಾಡಬೇಕೆಂದು ನಾನು ಸಂಬಂಧಪಟ್ಟ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಏಕೆಂದರೆ ಇಡೀ ವಕ್ಫ್ ಇಲಾಖೆಯ ಎಷ್ಟೋ ಸ್ವತ್ತುಗಳನ್ನು ಅನೇಕ ಶ್ರೀಮಂತರು ನುಂಗುತ್ತಿದ್ದಾರೆ ಗುಳುಂ ಮಾಡುತ್ತಿದ್ದಾರೆ. ಈ ತರಹ ಅಪಾದನೆಗಳು ಕೇಳಿಬರುತ್ತಿವೆಯೆಂದು ಕಳೆದ ಅಧಿವೇಶನದಲ್ಲಿ ಹೇಳಿದಾಗ, ಸಂಬಂಧಪಟ್ಟ ಮಂತ್ರಿಗಳು ಅವರನ್ನು ಬಗ್ಗು ಬಡಿಯುತ್ತೇನೆ ಎನ್ನುವ ಉತ್ತರವನ್ನು ಕೊಟ್ಟಿದ್ದಾರೆ. ಅನೇಕ ಶ್ರೀಮಂತರು ಲಕ್ಷಾಧಿಪತಿಗಳು ಬಡ ಮುಸಲ್ಮಾನರು ಪಡೆಯುತಕ್ಕ ಅವರಿಗೆ ಸಿಗತಕ್ಕ ಪಾಯಿದೆಗಳನ್ನು ಅವರ ಕಟ್ಟಡಗಳು ಹಾಗೂ ಸ್ವತ್ತುಗಳಿಂದ ಬರತಕ್ಕ ಹಣವನ್ನು ಇವರೇ ಸ್ವಾಹ ಮಾಡುತ್ತಾರೆ. ಇದು ಸರಿಯಲ್ಲ. ಬೋರ್ಡ್ ಮಾಡಿದ ಉದ್ದೇಶವೆಂದರೆ ಅಲ್ಪ ಸಂಖ್ಯಾತರಿಗೆ ಅಂದರೆ, ಬಡ ಮುಸಲ್ಮಾನರು ಯಾರಿದ್ದಾರೆ ಅವರಿಗೆ ಅನೇಕ ಉಪಕಾರ ಮಾಡಲು, ಸಹಾಯ ಮಾಡಲು, ಅವರ ಮಸೀದಿ, ಮದರಸಗಳಿಗೆ ಸಹಾಯ ಮಾಡಲು ಅವರ ಏಳಿಗೆಗೋಸ್ಕರ ಈ ಬೋರ್ಡನ್ನು ಚುರುಕುಗೊಳಿಸಬೇಕು. ವಕ್ಫ್ ಬೋರ್ಡ್‌ನ ಅಧ್ಯಕ್ಷರು ಸದಸ್ಯರುಗಳನ್ನು ನೇಮಕ ಮಾಡುವಾಗ ಒಳ್ಳೆಯ ತಿಳಿದಂತಹವರನ್ನು ಇವರ ಬಗ್ಗೆ ಕಳಕಳಿ ಇರತಕ್ಕವರನ್ನು ಇವರ ಬಗ್ಗೆ ಸಕ್ರಿಯ ಕೆಲಸ ಮಾಡುವಂತಹವರನ್ನು ನೇಮಕ

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಮಾಡುವಂತಹ ವ್ಯವಸ್ಥೆಯನ್ನು ಮಾಡಬೇಕು. ಅದೇ ರೀತಿ ಜಿಲ್ಲಾ ಸಮಿತಿಗಳನ್ನು ಮಾಡಿದ್ದಾರೆ. ಅದು ಕೂಡ ಕೆಲವುಕಡೆ ನಿಷ್ಕ್ರಿಯವಾಗಿವೆ. ಏನೂ ಕೆಲಸ ಮಾಡುತ್ತಿಲ್ಲ. ಸಭೆಗಳನ್ನು ಮಾಡುತ್ತಿಲ್ಲ. ಜನರಿಗೆ ಒಂದು ಭರವಸೆಯನ್ನು ಕೊಡುತ್ತಿಲ್ಲ. ಇದನ್ನು ಕೂಡ ಒಳ್ಳೆಯ ರೀತಿಯಲ್ಲಿ ಪುನರ್ರಚನೆ ಮಾಡಬೇಕೆಂದು ನಾನು ಹೇಳುತ್ತೇನೆ. ಅನೇಕ ಸಂಘ ಸಂಸ್ಥೆಗಳಲ್ಲಿ ಕಳೆದ ೧೩-೧೪ ವರ್ಷಗಳಿಂದ ಆಡಿಟ್ ಆಗಿಲ್ಲ. ಆಡಿಟ್ ಕೆಲಸವನ್ನು ಅದಷ್ಟು ಶೀಘ್ರವಾಗಿ ಮಾಡಿದರೆ ಯಾರು ಅನ್ಯಾಯ ಮಾಡಿದ್ದಾರೆ, ಮೋಸ ಮಾಡಿದ್ದಾರೆ ಎಂದು ಗೊತ್ತಾಗುತ್ತದೆ. ಮೋಸ ಮಾಡಿದವರನ್ನು ಹಿಡಿಯು ವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಈ ಕೆಲಸವನ್ನು ಮಾಡಬೇಕೆಂದು ಹೇಳುತ್ತೇನೆ. ಹಜ್ ಕಮಿಟಿ ಇದೆ. ಇದು ಕೂಡ ಕೆಲಸ ಮಾಡುತ್ತಿದೆ. ಅದು ಇನ್ನೂ ಕೂಡ ಚುರುಕಾಗಿ ಕೆಲಸ ಮಾಡುವ ಹಾಗೆ ಆದೇಶ ಕೊಡಬೇಕೆಂದು ಹೇಳುತ್ತೇನೆ. ಈಗ ವಕ್ಫ್ ಇಲಾಖೆಗೆ ಹಿಂದಿನ ಸರ್ಕಾರ ಕೊಟ್ಟಿದ್ದಕ್ಕಿಂತ ಈ ಸರ್ಕಾರ ಹೆಚ್ಚಿಗೆ ಹಣ ಕೊಟ್ಟಿದೆ. ನಾನು ಹೇಳುವುದು ಇದು ಸಾಲದು, ಇನ್ನೂ ಸ್ವಲ್ಪ ಹೆಚ್ಚಿಗೆ ಕೊಟ್ಟರೆ ಕರ್ನಾಟಕ ರಾಜ್ಯದಲ್ಲಿರುವ ಬಡ ಮುಸ್ಲಿಮರಿಗೆ, ಮಸೀದಿಗಳಿಗೆ, ಮದರಸಗಳಿಗೆ ಹೆಚ್ಚು ಹೆಚ್ಚು ಸಹಾಯ ಮಾಡುವುದಕ್ಕೆ ಅವಕಾಶ ಆಗುತ್ತದೆ. ಈ ರೀತಿಯಿಂದ ಹೆಚ್ಚಿನ ಹಣವನ್ನು ಮಾನ್ಯ ಮುಖ್ಯ ಮಂತ್ರಿಗಳು ಒದಗಿಸಿ ಕೊಡಬೇಕೆಂದು ಈ ಸಂದರ್ಭದಲ್ಲಿ ನಾನು ಕೇಳಿಕೊಳ್ಳುತ್ತೇನೆ. ಇನ್ನು ಟಿಪ್ಪೂಸುಲ್ತಾನ್ ಸಂತತಿಯವರು ಕಲ್ಕತ್ತಾದಲ್ಲಿ ಬಹಳ ಕಷ್ಟದಲ್ಲಿದ್ದಾರೆ, ರಿಕ್ಷಾ ಎಳೆಯುತ್ತಿದ್ದಾರೆ, ಗಾಡಿ ಎಳೆಯುತ್ತಿದ್ದಾರೆ ಎನ್ನುವಂಥ ವಿಚಾರ ನಮ್ಮ ಗಮನಕ್ಕೆ ಬಂದಿದೆ. ಆದ್ದರಿಂದ ನಮ್ಮ ಮುಖ್ಯ ಮಂತ್ರಿಗಳು ಅಲ್ಲಿಯ ಮುಖ್ಯ ಮಂತ್ರಿಗಳಿಗೆ ಅಂತಹವರು ಇದ್ದರೆ ಸಾಧ್ಯವಾದರೆ......

ಶ್ರೀ ರಾಮಕೃಷ್ಣ ಹೆಗಡೆ.—ನಾನು ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿಗಳಿಗೆ ಈ ವಿಚಾರದಲ್ಲಿ ಪತ್ರ ಬರೆದಿದ್ದೇನೆ. ಅಲ್ಲಿ ಯಾರ್ಯಾರು ಇದ್ದಾರೆ, ಅವರ ಆರ್ಥಿಕ ಪರಿಸ್ಥಿತಿ ಏನಿದೆ ಅವರಿಗೆ ಸಂಬಂಧಪಟ್ಟ ಆಸ್ತಿ ಏನಾದರೂ ಇದೆಯೇ ಎಂಬುದರ ಬಗ್ಗೆ ತನಿಖೆ ಮಾಡಿ ವಿವರಗಳನ್ನು ಕಳಿಸಿ ಕೊಡಬೇಕು, ಅವರಿಗೆ ಸಹಾಯ ಮಾಡಬೇಕೆಂದು ಪತ್ರ ಬರೆದಿದ್ದೇನೆ.

ಶ್ರೀ ಬಿ. ಎಂ. ಇದಿನಬ್ಬ.—ಸಂತೋಷ. ಏಕೆಂದರೆ ಇಂತಹ ವೀರ, ಇಡೀ ಜಗತ್ತಿನಲ್ಲೇ ಹೆಸರು ಪಡೆದಂಥ ಟಿಪ್ಪೂಸುಲ್ತಾನ್ ಸಂತತಿಯವರಿಗೆ ಸಹಾಯ ಮಾಡುವುದು ಒಳ್ಳೆಯದು. ನಾನು ಪೋಲೀಸ್ ಇಲಾಖೆ ಬಗ್ಗೆ ಕೆಲವು ಸಲಹೆಗಳನ್ನು ಮಾಡುತ್ತೇನೆ. ನನ್ನ ಕ್ಷೇತ್ರವಾದ ಉಳ್ಳಾಲದಲ್ಲಿ ಪೋಲೀಸ್ ಸ್ಟೇಷನ್ ಉಂಟು. ಒಂದು ಲಕ್ಷ ಜನರಿಗೆ ೧೫ ಗ್ರಾಮಗಳಿಗೆ ಒಳಪಟ್ಟಂಥ ಈ ಪೋಲೀಸ್ ಸ್ಟೇಷನ್‌ಗೆ ಒಂಬತ್ತು ಮಂದಿ ಪೋಲೀಸರು ಮಾತ್ರ ಒದ್ದಾರೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಎರಡು ವರ್ಷಗಳ ಹಿಂದೆ ಉಳ್ಳಾಲದ ದರ್ಗಾಕ್ಕೆ ಬಂದಾಗ ನಾವು ಇದನ್ನು ನೆನಪು ಮಾಡಿದಾಗ ಇದನ್ನು ಹೆಚ್ಚು ಮಾಡಲೇಬೇಕೆಂದು ಅವರು ಹೇಳಿದ್ದರು. ೧೫ ಪೋಲೀಸರನ್ನು ಹೆಚ್ಚು ಮಾಡುವುದಾಗಿ ಅವರು ಹೇಳಿದ್ದರು. ಆಮೇಲೆ ಬಂದ ಇಬ್ಬರು ಗೃಹಮಂತ್ರಿಗಳಿಗೆ ಹೇಳಿದಾಗ ಅವರು ಮಾಡುತ್ತೇವೆ ಎಂದು ಹೇಳಿದ್ದರು. ಆದರೆ ಏನೂ ಮಾಡಿಲ್ಲ. ೯ ಜನ ಪೋಲೀಸರಿಂದ ಏನೂ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇದನ್ನು ಹೆಚ್ಚು ಮಾಡಬೇಕು ಮತ್ತು ಈ ಪೋಲೀಸ್ ಸ್ಟೇಷನ್ ಈಗ ಬಾಡಿಗೆ ಕಟ್ಟಡದಲ್ಲಿ ಉಂಟು. ಎರಡೂವರೆ ಎಕರೆ ಭೂಮಿಯನ್ನು ಪೋಲೀಸ್ ಸ್ಟೇಷನ್ ಕಟ್ಟಡ ಕಟ್ಟಲಿಕ್ಕೆ ಮತ್ತು ಪೋಲೀಸರಿಗೆ ವಸತಿ ಸೌಕರ್ಯ ಕಲ್ಪಿಸಲಿಕ್ಕೆ ಅವರು ತೆಗೆದಿಟ್ಟಿದ್ದಾರೆ, ಅದಕ್ಕೆ ಬೇಲಿ ಹಾಕಿಟ್ಟಿದ್ದಾರೆ. ಆದಷ್ಟು ಬೇಗ ಈ ಪೋಲೀಸ್ ಸ್ಟೇಷನ್ ಕಟ್ಟಡವನ್ನು ಕಟ್ಟುವಂಥ ವ್ಯವಸ್ಥೆ ಮಾಡಿದರೆ ಬಹಳ ಉಪಕಾರ ಆಗುತ್ತದೆ. ಇದು ಕೇರಳದ ಗಡಿಯಲ್ಲಿರತಕ್ಕಂಥ ಪ್ರದೇಶ ಆಗಿರುವುದರಿಂದ ಅಲ್ಲಿ ಸುಸಜ್ಜಿತವಾದ ಪೋಲೀಸ್ ಸ್ಟೇಷನ್ ಬಹಳ ಅಗತ್ಯವಾಗಿದೆಯೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೂ ಒಂದು ವಿಷಯವೆಂದರೆ ನಮ್ಮ ಜಿಲ್ಲೆಯಲ್ಲಿ ಇಷ್ಟರವರೆಗೂ ಗೋಲಿಬಾರ್ ಆಗಿಲ್ಲ. ನನಗೆ ಬಹಳ ಸಂತೋಷ. ನಾನು ಇಲ್ಲಿರುವ ವರದಿಯನ್ನು ನೋಡಿದೆ. ಎಲ್ಲಾ ಜಿಲ್ಲೆಗಳಲ್ಲೂ ಗೋಲಿಬಾರು ಆಗಿದೆ. ಆದರೆ ಇಲ್ಲಿ ಆಗಿಲ್ಲ. ನಮ್ಮ ಜಿಲ್ಲೆಗೆ ಬಂದಂಥ ಪೋಲೀಸ್ ಅಧಿಕಾರಿಗಳು ಒಳ್ಳೆಯವರಾದ್ದರಿಂದಲೂ, ಒಳ್ಳೆಯ ರೀತಿಯಿಂದ ಅವರು ಕೆಲಸ ಮಾಡಿದ್ದರಿಂದಲೂ, ಇಲ್ಲಿಯ ಜನ ಕೂಡ ಅಷ್ಟೇ ಸಹಕಾರ ಕೊಟ್ಟು, ಶಾಂತಿ ಸಮಿತಿಗಳನ್ನು ಮಾಡಿದ್ದರಿಂದ ಗೋಲಿಬಾರ್ ಆಗದಹಾಗೆ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯ ವಾಗಿರುವುದನ್ನು ನಾವು ಕಾಣುತ್ತೇವೆ. ಆದರೆ ಇವತ್ತು ಏನಾಗಿದೆ ಎಂದರೆ ಅಲ್ಲಿಗೆ ಬಂದಿರತಕ್ಕಂಥ ಈಗಿನ ಎಸ್. ಪಿ. ಅವರು ಬಹಳ ಒಳ್ಳೆಯ ಕೆಲಸಗಾರರು ಎಂದು ಜನ ಹೇಳುತ್ತಿದ್ದಾರೆ. ಜೊತೆಗೆ ಅವರು ಅಲ್ಲಿಯೇ ಮುಂದುವರಿಯಬೇಕೆಂದು ಅನೇಕ ದಲಿತ ಸಂಘದವರು ಮುಸ್ಲಿಂ ಸಂಘದವರು

ಇಷ್ಟರಲ್ಲೇ ನಿರ್ಣಯಮಾಡಿ ಮಾನ್ಯ ಮುಖ್ಯ ಮಂತ್ರಿಯವರಿಗೆ ಕಳಿಸಿಕೊಟ್ಟಿದ್ದಾರೆ. ಆದರೂ ಸಹ ಒಂದು ವರ್ಷವಾಗುವಾಗಲೇ ಅವರನ್ನು ಅಲ್ಲಿಂದ ವರ್ಗಾವಣೆ ಮಾಡಿದ್ದಾರೆ. ಅಲ್ಪಸಂಖ್ಯಾತರ ಕೋಮು ಘರ್ಷಣೆ ಮೂರು-ನಾಲ್ಕು ಕಡೆ ಆದದ್ದನ್ನು ಅವರು ಬಹಳ ಸುಲಲಿತವಾಗಿ ನಿಲ್ಲಿಸಿದ್ದಾರೆ. ಅದೇರೀತಿ ದಲಿತವರ್ಗಕ್ಕೆ ಅನ್ಯಾಯವಾದಾಗ, ಅವರಿಗೆ ಮೋಸ ಆದಾಗ ಕೂಡ ಅದನ್ನು ತಡೆಗಟ್ಟಲು ಒಳ್ಳೆಯ ರೀತಿಯಿಂದ ಕೆಲಸ ಮಾಡಿದ್ದಾರೆ. ಇಂತಹ ಒಬ್ಬ ಒಳ್ಳೆಯ ಅಧಿಕಾರಿಯನ್ನು ಒಂದು ವರ್ಷದ ಅವಧಿಗೆ ಮುನ್ನವೇ ವರ್ಗಾವಣೆ ಮಾಡುವಂಥಾದ್ದು ಸರಿಯಲ್ಲ. ಏಕೆಂದರೆ ಅವರಿಗೆ ಇನ್ನೂ ಎರಡು-ಮೂರು ವರ್ಷ ಅವಧಿ ಇತ್ತು. ಆದರೂ ಮಾಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ ನಾನು ಮೊದಲೇ ಹೇಳಿದಹಾಗೆ ಗುಂಡು ಬೀಳದಹಾಗೆ ನೋಡಿಕೊಳ್ಳುವುದಕ್ಕೆ ಜನರು ಶಾಂತಿ ಸಮಿತಿಯವರು ಮತ್ತು ಅಧಿಕಾರಿಗಳು ಒಳ್ಳೆಯವರಾಗಿದ್ದರಿಂದ ಇದು ಸಾಧ್ಯವಾಗಿದೆ. ಆದ್ದರಿಂದ ಇಂತಹ ಒಬ್ಬ ಅಧಿಕಾರಿಯನ್ನು ಹೀಗೆ ವರ್ಗಾವಣೆ ಮಾಡಿರುವುದು ಸರಿಯಲ್ಲ. ಹಿಂದೆ ಇದ್ದ ಶ್ರೀ ಕಸ್ತೂರಿರಂಗನ್ ಅವರು ಚಂದ್ರನ್ ಕೊಲೆ ಕೇಸ್‌ನಲ್ಲಿ ಸಾಹಸ ಮಾಡಿದ್ದನ್ನು ನಾವು ಕಳೆದ ಅಸೆಂಬ್ಲಿಯಲ್ಲಿ ಹೇಳಿದ್ದೇನೆ. ಜನರು ೨೪ ಗಂಟೆಗಳ ಕಾಲ ನಿದ್ದೆಯಿಲ್ಲದೆ ಬೇಜಾರಾಗಿದ್ದಂಥ ಕಾಲದಲ್ಲಿ ಚಂದ್ರನ್‌ನನ್ನು ಹಿಡಿಯುವಂಥ ಕೆಲಸದಲ್ಲಿ ಜಯಶೀಲರಾದಂಥ ಆ ಎಸ್.ಪಿ.ಗೆ ನಾವು ಧನ್ಯವಾದಗಳನ್ನು ಕೂಡ ಕೊಟ್ಟಿದ್ದೇವೆ. ಆದ್ದರಿಂದ ಈ ಅಧಿಕಾರಿಯ ಬಗ್ಗೆ ಶ್ರೀ ವೀರಪ್ಪ ಮೊಯಿಲಿಯವರು ಸಹ ಸ್ಪಷ್ಟವಾಗಿ ಹೇಳಿದರು. ಇಂತಹ ಒಳ್ಳೆಯ ಅಧಿಕಾರಿಗಳನ್ನು ಒಂದು ವರ್ಷದಲ್ಲೇ ವರ್ಗಾವಣೆ ಮಾಡುವಂಥಾದ್ದು ಸರಿಯಲ್ಲ. ಅವರನ್ನು ಅಲ್ಲಿಯೇ ಇಡಬೇಕೆನ್ನುವ ಮಾತನ್ನು ನಾನು ಹೇಳುತ್ತೇನೆ. ಈ ಕೋಮು ಗಲಭೆಗಳು ನಮ್ಮ ರಾಷ್ಟ್ರದಲ್ಲಿ ಆಗುತ್ತಿವೆ. ಶಿಡ್ಲಘಟ್ಟದಲ್ಲಿ ಇತ್ತೀಚೆಗೆ ಆಗಿದೆ. ಇಲ್ಲಿ ಕೂಡ ಹಿಂದೂ-ಮುಸಲ್ಮಾನರು, ಕ್ರೈಸ್ತರು ಎಲ್ಲರೂ ಸಂತೋಷದಲ್ಲಿ ಇರುವಹಾಗೆ ಬೇಕಾದಂಥ ಶಾಂತಿ ವ್ಯವಸ್ಥೆಯನ್ನು ಮಾಡುವುದಕ್ಕೆ ಸರ್ಕಾರ ಮುಂದೆ ಬರಬೇಕು. ಅನ್ಯಾಯ ಮಾಡಿದವರಿಗೆ ಉಗ್ರವಾಗಿ ಶಿಕ್ಷೆ ವಿಧಿಸಬೇಕು. ಅಧಿಕಾರಿಗಳು ತಪ್ಪು ಮಾಡಿದ್ದರೆ ಅವರಿಗೂ ಕೂಡ ಉಗ್ರವಾಗಿ ಶಿಕ್ಷೆ ವಿಧಿಸಬೇಕು. ಮುಖ್ಯವಾಗಿ ನಮಗೆ ಬೇಕಾದದ್ದು ಶಾಂತಿ. ಈ ಶಾಂತಿ ಉಳಿಯಬೇಕಾದರೆ ಸೂಕ್ತ ವ್ಯವಸ್ಥೆ ಇರಬೇಕು ಮತ್ತು ಇದನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ನಾನು ಬಹಳ ದೀರ್ಘವಾಗಿ ಮಾತನಾಡುವುದಾದರೆ ಅನೇಕ ವಿಚಾರಗಳನ್ನು ಹೇಳಬಹುದು. ಮಾಜಿ ಶಾಸಕರಿಗೆ ಉಚಿತ ಬಸ್ ಪಾಸ್ ಕೊಡಬೇಕು, ಸ್ವಾತಂತ್ರ್ಯ ಯೋಧರಿಗೆ ಉಚಿತ ಬಸ್ ಪಾಸ್ ಕೊಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ಇವರ ಬಗ್ಗೆ ಖಂಡಿತವಾಗಿಯೂ ಮನಸ್ಸು ಮಾಡುತ್ತಾರೆ. ಅವರಿಗೆ ಸ್ವಾತಂತ್ರ್ಯ ಯೋಧರ ಬಗ್ಗೆ ಅಭಿಮಾನ ಉಂಟು. ಅದೇರೀತಿ ಮಾಜಿ ಶಾಸಕರ ಬಗ್ಗೆಯೂ ಅಭಿಮಾನ ಇದೆ. ಒಬ್ಬ ಶಾಸಕ ಆಗಬೇಕಾದರೆ ಜನರ ಪರಿಚಯ ಇದ್ದು, ಕ್ಷೇತ್ರಕ್ಕೆ ಅನುಕೂಲಕರ ಕೆಲಸ ಮಾಡಿರಬೇಕು. ಇಂತಹ ಕೆಲಸ ಮಾಡಿ, ತಮ್ಮ ಜೀವಮಾನವನ್ನೇ ತೊರೆದ ಮಾಜಿ ಶಾಸಕರನೇಕರು ಇದ್ದಾರೆ. ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ

ಇನ್ನು ಕನ್ನಡ ಕಾವಲು ಸಮಿತಿಯ ವಿಷಯವಾಗಿ ಹೇಳುವುದಾದರೆ, ಈ ಸಮಿತಿಯ ಅಧ್ಯಕ್ಷರಾದ ಪಾಟೀಲ್ ಪುಟ್ಟಪ್ಪನವರ ಬಗ್ಗೆ ನನಗೆ ೩೫ ವರ್ಷಗಳಿಂದ ಪರಿಚಯ ಇದೆ. ನಾನು ಅವರಲ್ಲಿರತಕ್ಕ ದೋಷಗಳ ವಿಚಾರ ಹೇಳಲಾರೆ. ಆದರೆ ಅವರು ಮಾಡಿರತಕ್ಕ ಕೆಲಸವನ್ನು ಮೆಚ್ಚಬೇಕು. ಅವರು ಅಧ್ಯಕ್ಷರಾಗಿ ಬಂದಮೇಲೆ ೬೦ ಪರ್ಸೆಂಟ್ ಕನ್ನಡ ಆಡಳಿತ ಇದ್ದುದು ಇವತ್ತು ೮೫ ಪರ್ಸೆಂಟ್‌ಗೆ ಬಂದಿದೆ. ನನ್ನ ಜಿಲ್ಲೆಯ ಎಲ್ಲಾ ಆಫೀಸುಗಳಲ್ಲೂ ಆಡಳಿತ ಇಂಗ್ಲೀಷ್‌ನಲ್ಲಿ ನಡೆಯುತ್ತಿತ್ತು. ಅನೇಕ ಬಾರಿ, ಸಭೆಗಳಲ್ಲಿ ವರದಿಗಳನ್ನು ಇಂಗ್ಲೀಷ್‌ನಲ್ಲಿ ಕೊಟ್ಟಾಗ ಸಭಾತ್ಯಾಗ ಮಾಡಿದ್ದೇವೆ. ಆದರೆ, ಇವರು ಆಗಾಗ ಅಲ್ಲಿಗೆ ಹೋಗಿ, ಅಲ್ಲಿಯ ಅಧಿಕಾರಿಗಳನ್ನು ಕಂಡು, ಕನ್ನಡದ ಕೆಲಸ ಮಾಡಿದ್ದಾರೆ. ಇವರ ಬಗ್ಗೆ ಇರುವ ಬೇರೆ ದೋಷಗಳು ನನಗೆ ಗೊತ್ತಿಲ್ಲ. ಬಹಳ ಮಟ್ಟಿಗೆ ಚೆನ್ನಾಗಿ ಕೆಲಸ ಮಾಡಿದ್ದಾರೆ. ಮತ್ತು ಪತ್ರಿಕೋದ್ಯಮದ ಮಟ್ಟಿಗೆ ಒಂದು ಕಾಲದಲ್ಲಿ ಇವರ 'ಪ್ರಪಂಚ'' ಪತ್ರಿಕೆ ಒಂದನೇ ಸ್ಥಾನ ಅಥವಾ ಎರಡನೇ ಸ್ಥಾನದಲ್ಲಿ ಇತ್ತು. ಈಗ ಅದು ಹೇಗಿದೆಯೋ ಗೊತ್ತಿಲ್ಲ. ಪಾಟೀಲ್ ಪುಟ್ಟಪ್ಪನವರು ಕನ್ನಡ ಕಾವಲು ಸಮಿತಿಯಲ್ಲಿ ಒಳ್ಳೆಯ ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಕನ್ನಡದ ಬಳಕೆ ೧೦೦ಕ್ಕೆ ೮೦ರಷ್ಟು ಆಗುವುದಕ್ಕೆ ಸಹಾಯ ಮಾಡಿದ್ದಾರೆ ಹಾಗೂ ಮಾಡುತ್ತಾ ಇದ್ದಾರೆಂದು ಹೇಳಬೇಕು.

ಇನ್ನು ನಾನು ಮೊದಲೇ ಹೇಳಿದೆ.- ಉಳ್ಳಾಲ ಕ್ಷೇತ್ರದ ಬಗ್ಗೆ, ಕೋಮು ಸೌಹಾರ್ದದ ಬಗ್ಗೆ, ಒಳ್ಳೆಯ ಅಧಿಕಾರಿಗಳನ್ನು ಉಳಿಸಿಕೊಳ್ಳುವ ಬಗ್ಗೆ, ಇಷ್ಟೆಲ್ಲಾ ವಿಚಾರ ಹೇಳಿ, ಎಕ್ಸೈಜ್ ಇಲಾಖೆಯ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದೆ. ಇವುಗಳನ್ನು ಸರಿಪಡಿಸಬೇಕೆಂದು ಮಾನ್ಯ ಮುಖ್ಯಮಂತ್ರಿ

ಗಳಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಪೋಲೀಸರು ಎಂದರೆ ಎಲ್ಲರೂ ಕೆಟ್ಟವರಲ್ಲ, ಒಳ್ಳೆಯ ಅಧಿಕಾರಿಗಳೂ ಇದ್ದಾರೆ. ಅವರ ಸಂಬಳವನ್ನು ಹೆಚ್ಚು ಮಾಡಬೇಕು. ಇದರಿಂದ ಖಂಡಿತ ವಾಗಿಯೂ ಅವರು ಸರಿದಾರಿಗೆ ಬರುತ್ತಾರೆ. ಇವತ್ತು ದವಸಧಾನ್ಯಗಳ ಬೆಲೆಗಳು ಗಗನಕ್ಕೆ ಮುಟ್ಟಿದೆ. ಮೊದಲು ಒಬ್ಬರು ಹೇಳುತ್ತಿದ್ದರು, ನಾನು ೨೦ ರೂಪಾಯಿ ಸಂಬಳಕ್ಕೆ ಸೇರಿದ್ದೆ, ಇದರಲ್ಲಿ ೧೦ ರೂಪಾಯಿ ಖರ್ಚು ಮಾಡಿದರೂ ಇನ್ನೂ ೧೦ ರೂಪಾಯಿಗಳು ಉಳಿಯುತ್ತಿತ್ತು ಎಂದು. ಏಕೆಂದರೆ ಹಿಂದೆ ಒಂದು ಆಣೆಗೆ ಊಟ ಸಿಗುತ್ತಿತ್ತು. ಎಲ್ಲಾ ಪದಾರ್ಥಗಳ ಬೆಲೆಗಳೂ ಕಡಿಮೆ ಇದ್ದವು. ದಾವಾಷಾ ಈಗ ಈ ಎಲ್ಲಾ ಬೆಲೆಗಳೂ ಹೆಚ್ಚಾಗಿರುವುದರಿಂದ, ಇವತ್ತು ಸಂಬಳಕೂಡ ಹೆಚ್ಚು ಮಾಡಬೇಕಾದ್ದು ಬಹಳ ಮುಖ್ಯ. ಅಷ್ಟು ಮಾಡಿದರೆ, ಖಂಡಿತವಾಗಿಯೂ ಪೋಲೀಸರು ಎಲ್ಲರಿಗಿಂತಲೂ ಹೆಚ್ಚು ಕೆಲಸ ಮಾಡುತ್ತಾರೆ. ಇನ್ನು ಪೋಲೀಸರ ಬಗ್ಗೆ ಕೆಲವೊಂದು ಚರಣಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

''ಸಂದರ್ಭ ಬಿದ್ದಾಗ ೨೪ ಗಂಟೆಯೂ ಕೆಲಸ
ಇವರ ಕೆಲಸ ಭಾರಿ ಕ್ಲಿಷ್ಟ ಮತ್ತು ತ್ರಾಸ
ದೊಂಬಿ, ಗಲಾಟೆ, ದರೋಡೆ, ಹಿಂಸೆ, ಅಪಘಾತ
ಕೋಮು ಗಲಭೆ, ಕಾರ್ಮಿಕರ ಗಲಭೆ, ಸಂಘರ್ಷ, ವಿಪರೀತ
ಇದ್ದಲ್ಲಿ, ಅದಲ್ಲಿ, ಇವರಿರಲೇಬೇಕು,
ಹೇಗಾದರೂ ಅವುಗಳ ನಿಭಾಯಿಸಬೇಕು.
ಇವರಲ್ಲಿ ಒಳ್ಳೆಯ ಮತ್ತು ಕೆಟ್ಟವರು ಇರಬಹುದು,

ಸಂಬಳ ಹೆಚ್ಚಾದರೆ ಇವರು ಸರಿದಾರಿಗೆ ಬರಬಹುದು—ಇಷ್ಟನ್ನು ಹೇಳಿ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೇ. ಈ ಸಭೆಯ ಮುಂದೆ ಮಾನ್ಯ ಮುಖ್ಯ ಮಂತ್ರಿಗಳು ನಿರ್ವಹಿಸುತ್ತಿರುವ ಹಲವಾರು ಇಲಾಖೆ ಬೇಡಿಕೆಗಳು ಇವೆ. ಆದರೆ ಈ ಎಲ್ಲಾ ಇಲಾಖೆಗಳ ಬಗ್ಗೆ ಮಾತನಾಡುವುದಕ್ಕೆ ಹೆಚ್ಚು ಸಮಯ ಇಲ್ಲವೆಂದು ನನಗೆ ಗೊತ್ತಿದೆ. ಒಂದೇ ಒಂದು ಇಲಾಖೆಯ ಬಗ್ಗೆ ಅವರಲ್ಲೂ ಕೂಡ ತುಂಬಾ ಸಂಕ್ಷಿಪ್ತವಾಗಿ ಕೆಲವು ವಿಚಾರಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಅದು ಪೋಲೀಸ್ ಇಲಾಖೆ. ನಮ್ಮ ರಾಜ್ಯದಲ್ಲಿ ಈ ಇಲಾಖೆ ಹೆಚ್ಚು ಕಡಿಮೆ ಅನಾಥವಾಗಿದೆ. ಮೊದಲು ಅಷ್ಟು ದಿವಸ ಮಾನ್ಯ ರಾಚಯ್ಯನ ವರು ಗೃಹ ಮಂತ್ರಿಗಳಾಗಿದ್ದರು. ಅವರು ಇದ್ದಾಗ, ಹೀಗೆ ಮಾಡಿದರೆ ಅವರಿಗೆ ಸಿಟ್ಟು ಬರುತ್ತದೆ, ಹಾಗೆ ಮಾಡಿದರೆ ಇವರಿಗೆ ಸಿಟ್ಟು ಬರುತ್ತದೆ ಎಂದು ನಮಗೆ ಹೇಳುತ್ತಿದ್ದರು. ಅದಕ್ಕೆ ನಾನು ಹೇಳಿದೆ, ಹೀಗೆ ಮಾಡಿದರೆ ಅವರಿಗಾದರೂ ಸಿಟ್ಟು ಬರಲಿ, ಹಾಗೆ ಮಾಡಿದರೆ, ಇವರಿಗಾದರೂ ಸಿಟ್ಟು ಬರಲಿ, ನಿಮ್ಮ ಮನಸ್ಸಿಗೆ ಹೇಗೆ ಬರುತ್ತದೋ, ಏನು ಬರುತ್ತದೋ ಅದನ್ನು ಮಾಡಿ ಎಂದು ಹೇಳಿದೆ. ಇಲ್ಲದೆ ಇದ್ದರೆ ಈ ಪೋರ್ಟ್ ಪೋಲಿಯೋ ಕಳೆದುಕೊಳ್ಳುತ್ತೀರಿ ಎಂದೆ. ಅದು ಸತ್ಯ ಆಯಿತು. ಅವರಿಗೆ ನಾನು ಹೇಳಿದೆ, ನೀವು ಯಾರು ಯಾರಿಗೋ ಗುರಾಣಿ ಹಿಡಿಯುವುದಕ್ಕೆ ಹೋಗಬೇಡಿ, ನಿಮ್ಮ ಕೈಯಲ್ಲಿ ನಿಜವಾದ ನ್ಯಾಯವನ್ನು ಸ್ಥಾಪನೆ ಮಾಡುವ ಒಂದು ಕತ್ತಿ ಇದೆ ಎಂಬ ಆತ್ಮ ವಿಶ್ವಾಸದಿಂದ ಕೆಲಸ ಮಾಡಿ ಎಂದು ನಾನು ಬಹಳ ಕಳಕಳಿಯಿಂದ ಇಲ್ಲೂ ಹೇಳಿದೆ, ಲಾಬಿಯಲ್ಲೂ ಹೇಳಿದೆ, ಎಲ್ಲಾ ಕಡೆ ಹೇಳಿದೆ. ಆದರೆ ಅವರು ಕೇಳಲಿಲ್ಲ. ಆಮೇಲೆ ಮಾನ್ಯ ಜಾಲಪ್ಪನವರು ಬಂದ ಮೇಲೆ ನಿಜವಾಗಲೂ ನಾನು ಆಸೆಪಟ್ಟಿದ್ದೆ, ಏಕೆಂದರೆ ಅವರು ಅಂತಹ ಒಂದು ಚಿಹ್ನೆಗಳನ್ನು ತೋರಿ ಸಿದ್ದರು. ಅವರು ಈ ಇಲಾಖೆಯನ್ನು ದಕ್ಷತೆಯಿಂದ ಬಿಗಿಯಾಗಿ ನಡೆಸುತ್ತಾರೆ ಎಂಬ ವಿಶ್ವಾಸ ಬರುವ ಹೊತ್ತಿಗೆ, ನಾನು ಮೊದಲು ಅವರಿಗೆ ಹೇಳಿದ್ದೆ, ಅವರು ಒಪ್ಪಲಿಲ್ಲ, ಪ್ರಥಮ ಚುಂಬನಮ್ ಧಂತ ಭಗ್ನಂ ಆಗುತ್ತದೆ ಎಂದು ಹೇಳಿದ್ದೆ, ಅದರಂತೆ ರಶೀದ್ ಕೇಸ್ ಬಂದು ಅವರು ಬಿಟ್ಟು ಹೋದರು. ಈಗ ಯಾರೂ ಇಲ್ಲದಂಥ ಸಂದರ್ಭದಿಂದ ಇದು ಮುಖ್ಯ ಮಂತ್ರಿಗಳ ಹತ್ತಿರ ಹೋಗಿದೆ ಅನಾಥೋ ದೈವ ರಕ್ಷಕ ಎಂದು ಹೇಳಿದಹಾಗೆ. ಈ ಇಲಾಖೆಗೆ ಯಾರೂ ಜನ ಇಲ್ಲ. ಮುಖ್ಯಮಂತ್ರಿ ಗಳಿಗೆ ಈ ಇಲಾಖೆಯ ಬಗ್ಗೆ ಏನು ಭಾವನೆ ಹಿಂದೆ ಇತ್ತು, ಅವರು ಹಿಂದೆ ಮಂತ್ರಿಯಾಗಿದ್ದಾಗ ಏನು ಇತ್ತು ಎಂಬುದು ನನಗೆ ಚೆನ್ನಾಗಿ ಗೊತ್ತಿದೆ. ಇದು ಬಹಳ ಅಪಾಯಕಾರಿಯಾದ ಇಲಾಖೆ. ಯಾರಾ

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸುತ್ತದೆ.

ದರೂ ಹೋಂ ಮಿನಿಸ್ಟರ್ ಆಗಬೇಕೆಂದು ಹೊರಟರೆ, ಏತಕ್ಕೆ ತಲೆ ಚಚ್ಚಿಕೊಳ್ಳುತ್ತಾರೋ ಹೋಂ ಮಿನಿಸ್ಟರ್ ಆಗಬೇಕು ಎಂದು ಹೇಳುತ್ತಿದ್ದರು. ಎಲ್ಲಾ ಮುಖ್ಯ ಮಂತ್ರಿಗಳೂ ಹೋಮ್ ಪೋರ್ಟ್ ಪೋಲಿಯೋನ ತಮ್ಮ ಕೈಯಲ್ಲಿ ಇಟ್ಟುಕೊಳ್ಳುವುದಕ್ಕೆ ಪ್ರಯತ್ನಪಟ್ಟರೆ, ನಮ್ಮ ಮುಖ್ಯ ಮಂತ್ರಿಗಳು ಅದನ್ನು ಮಾಡಲಿಲ್ಲ. ಇದರಲ್ಲಿ ಸ್ವಲ್ಪ ವ್ಯತ್ಯಾಸವಾದರೂ ತಲೆಹೋಗುತ್ತದೆ ಎಂಬ ಅಪಾಯದ ಪ್ರಜ್ಞೆ ಅವರಿಗಿರುವುದೇ ಇದಕ್ಕೆ ಕಾರಣ. He always wants to touch this portfolio with a pair of tongs. ಇದರ ಹೊರತಾಗಿ ಇದರಲ್ಲಿ ತಾದ್ಯಾತ್ಮ ತಂದುಕೊಂಡು ಇಲಾಖೆಯನ್ನು ನಿರ್ವಹಿಸತಕ್ಕಂತ ಮನಸ್ಥಿತಿ ಅವರಿಗೆ ಇರಲಿಲ್ಲ, ಈಗಲೂ ಇಲ್ಲ. ಅದಕ್ಕೆ ಈ ಇಲಾಖೆ ಅನಾಥವಾಗಿದೆ ಎಂದು ನಾನು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮೊದಲನೇ ಒಂದು ವರ್ಷ ಈ ಇಲಾಖೆ ನನ್ನ ಕೈಯಲ್ಲೇ ಇತ್ತು ಅದನ್ನು ಅವರಿಗೆ ಜ್ಞಾಪಿಸುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಏತಕ್ಕೆ ನಿಮಗೆ ಸರಿಯಾದ ಜನ ಸಿಗುವುದಿಲ್ಲವೋ, ಏತಕೆ ಇದನ್ನು ಇಟ್ಟುಕೊಳ್ಳುತ್ತೀರೋ ನನಗೆ ಗೊತ್ತಿಲ್ಲ. ನಿಮ್ಮ ಕೈಯಲ್ಲಿ ಈ ಇಲಾಖೆಯನ್ನು ಇಟ್ಟುಕೊಳ್ಳುವುದು ಎಂದರೆ ನೀವು ಅದನ್ನು ಮುಟ್ಟುವುದಕ್ಕೇ ಹೋಗುವುದಿಲ್ಲ, ಸುಮ್ಮನೆ ಇಟ್ಟುಕೊಳ್ಳಬಹುದಷ್ಟೆ. ಸುಮ್ಮನೆ ಇರುವುದರ ಬದಲು ನಮ್ಮ ಅಪ್ಪನ ಸೊಸೆಯಾಗಿರಲಿ ಎಂದಂತೆ ಈ ತರಹ ಇಟ್ಟುಕೊಳ್ಳುವುದೇ ಹೊರೆತು ಈ ಇಲಾಖೆಗೆ ಸಂಬಂಧಪಟ್ಟ ಯಾವ ಕೆಲಸದ ಬಗ್ಗೆಯೂ ನೀವುಕ್ರಮತೆಗೆದುಕೊಂಡಿದ್ದೀರೋ ಇಲ್ಲವೋ ಗೊತ್ತಿಲ್ಲ. ನಿಮಗೆ ಆಸಕ್ತಿ ಇದ್ದರೆ ಈ ಇಲಾಖೆಗೆ ಬಹಳ ಗೌರವ ಕೊಟ್ಟು, ನಿಮ್ಮ ಸ್ನೇಹಿತರಾದಂತ ಧರ್ಮವೀರರ ನ್ಯಾಷನಲ್ ಪೋಲೀಸ್ ಕಮಿಷನ್ ವರದಿಯಲ್ಲಿ ಬೇಕಾದಷ್ಟು ಸಲಹೆಗಳು ಇವೆ ಅದನ್ನು ಜಾರಿಗೆ ತನ್ನಿ. ನಾವು ಪ್ರತಿಸಾರಿ ಇಲ್ಲಿ ಇದನ್ನೇ ಹೇಳಿ ಚರ್ವಿತಚರ್ವಣ ಮಾಡುತ್ತೇವೆ, ಅವರು ಇದನ್ನೆಲ್ಲಾ ಚರ್ಚೆ ಮಾಡಿ ಒಳ್ಳೆಯ ರಿಪೋರ್ಟ್ ಕೊಟ್ಟಿದ್ದಾರೆ. ನೀವು ಇದನ್ನು ಕೇಂದ್ರ ಸರಕಾರ ಮಾಡಬೇಕು, ಬಿಹಾರ ಮಾಡಲಿಲ್ಲ ಉತ್ತರಪ್ರದೇಶದವರು ಮಾಡಲಿಲ್ಲ. ಎಂದು ಹೇಳುತ್ತೀರಿ, ಆದರೆ ನೀವು ಮಾಡಿ ಬೇರೆಯವರಿಗೆ ತೋರಿಸಬಹುದಾಗಿತ್ತು ಮಾದರಿಯಾಗಬಹುದಾಗಿತ್ತು, ಆದರೆ ಯಾವ ಪ್ರಯತ್ನವನ್ನೂ ನೀವು ಇದುವರೆಗೆ ಮಾಡಲಿಲ್ಲ. ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ ಸಿ. ಓ. ಡಿ, ಬಗ್ಗೆ ಹೇಳಿದಾಗ ಮಾನ್ಯ ಬೊಮ್ಮಾಯಿಯವರು ನಿಮಗೆ ಯಾವುದಾದರಲ್ಲೂ ವಿಶ್ವಾಸ ಇಲ್ಲ ಎಂದರು ವಿಶ್ವಾಸ ಅವಿಶ್ವಾಸ ಮಾಡಬೇಕೆಂದು ಬಂದಂಥಾದ್ದಲ್ಲ. ವಿಶ್ವಾಸ ಇಟ್ಟುಕೊಳ್ಳುವುದಕ್ಕೆ ಬೇಕಾದಂಥ ಕಾರ್ಯಕ್ರಮ ನೀವು ತೆಗೆದುಕೊಳ್ಳುವುದೇ ಹೋದರೆ ಹೇಗೆ ವಿಶ್ವಾಸ ಇರುವುದು ? ಇವತ್ತು ಸಿ. ಬಿ. ಐ. ನ್ನು ಯಾವ ರೀತಿ ಬೆಳೆಸುತ್ತಿದ್ದಾರೆ ನೋಡಿ. ಅವರ ರೀತಿಯಲ್ಲಿ ನೀವು ಬೆಳೆಸುವ ಪ್ರಯತ್ನ ಆಗದೇ ಇದ್ದರೆ ಹೇಗೆ ? ಆದರಲ್ಲಿ ಲೋಪದೋಷಗಳು ಇರಬಹುದು: ಆದರೆ ಚೆನ್ನಾಗಿ ಒಟ್ಟಾರೆ ನಿಷ್ಪಕ್ಷಪಾತವಾದುದ್ದು ಎನಿಸಿಕೊಳ್ಳುವಂತಹ ಒಂದು ಏಜೆನ್ಸಿಯನ್ನು ತಯಾರು ಮಾಡಬೇಕೆಂಬ ಪ್ರಯತ್ನ ಸತತವಾಗಿ ಅಲ್ಲಿನಡೆದಿದೆ. ಇವತ್ತು ಆಪ್ರಯತ್ನ ಇಲ್ಲಿಆಗಿಲ್ಲ ಇವತ್ತು ಸಿ. ಒ. ಡಿ.ಯಲ್ಲಿ ಇರುವವರು ಯಾರು ? ಇವತ್ತು ಸಿ. ಒ. ಡಿ. ಯಲ್ಲಿ ಮುಖ್ಯವಾಗಿ ಎರಡು ಕಾಟ್ಯಗರಿ ಜನ ಇದ್ದಾರೆ ಎಂದು ನನ್ನ ಸ್ನೇಹಿತರಾದ ಒಬ್ಬರು ಪತ್ರಕರ್ತರು ಹೇಳಿದರು. ಒಂದು ಪೊಲಿಟಿಕಲ್ ಇನ್‌ಫ್ಲೂಯೆನ್ಸ್ ಇಲ್ಲದಿರುವವರು, ಇನ್ನೊಂದು ಏನಾದರೂ ಆಗಲಿ ಬೆಂಗಳೂರಿನಲ್ಲಿ ಒಂದು ಕಾರಣಕ್ಕಾಗಿ ಉಳಿಯಬೇಕೆಂಬುವವರು. ಇವೆರಡು ಜನ ಬಿಟ್ಟರೆ, ನಿಷ್ಪಕ್ಷಪಾತವಾದಂಥಹ ಇನ್‌ವೆಸ್ಟಿಗೇಟಿಂಗ್ ಏಜೆನ್ಸಿಯನ್ನಾಗಿ ಅದನ್ನು ಉಳಿಸಬೇಕೆಂಬ ಶ್ರದ್ಧೆ ಯಾರಿಗೂ ಕೂಡ ಇದರಲ್ಲಿ ಇಲ್ಲ.

ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ನಡೆದಂಥ ಒಂದೆರಡು ಘಟನೆ ಮತ್ತು ನನ್ನ ಪಕ್ಕದ ಕ್ಷೇತ್ರದಲ್ಲಿ ನಡೆದಂತ ಘಟನೆಗಳನ್ನು ಪ್ರಸ್ತಾಪ ಮಾಡುತ್ತೇನೆ. ಇದರಲ್ಲಿ ಎರಡು ದೃಷ್ಟಿ ಇದೆ. ಒಂದು ಇದರ ಬಗ್ಗೆ ಕೆಲವು ಉತ್ತರಗಳು ಸರಕಾರದಿಂದ ಬೇಕು. ಇನ್ನೊಂದು ಈ ಪೋಲೀಸ್ ಇಲಾಖೆ ಮತ್ತು ಈ ಸಿ.ಒ.ಡಿ. ಯಾವ ವೇಗದಲ್ಲಿ ಕೆಲಸ ಮಾಡುತ್ತಿವೆಎನ್ನುವುದಕ್ಕೆ ಜ್ವಲಂತ ಉದಾಹರಣೆ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ತೀವ್ರ ಗಮನವನ್ನು ಈ ಕಡೆ ಕೊಡಬೇಕು, ಹತ್ತು ನಿಮಿಷಗಳ ಕಾಲ ತಮ್ಮ ಫೈಲುಗಳನ್ನು ಬದಿಗಿಡಿ ಎಂದು ನಾನು ಬಹಳ ಕಳಕಳಿಯಿಂದ ಕೇಳುತ್ತಿದ್ದೇನೆ. ತಮ್ಮ ಅವಧಾನ ಸರಿಯಾಗಿ ಇರಬಹುದು, ಒಂದೇ ಸಂಧರ್ಭದಲ್ಲಿ ಹತ್ತಾರು ವಿಚಾರ ನೋಡಿಕೊಳ್ಳುವುದಕ್ಕೆ ಆಗದೇ ಇದ್ದವರು ಮುಖ್ಯಮಂತ್ರಿಗಳಾಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಅವರು ಹೇಳಿದುದನ್ನು ನಾನು ಬರೆದುಕೊಳ್ಳುತ್ತಿದ್ದೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಬೇಸಿಕಲಿ ನೀವು ಅವಧಾನಿ ಅಲ್ಲ, ಹೆಗಡೆ ಆದುದರಿಂದ ಈ ಕಡೆ ಸ್ವಲ್ಪ ಲಕ್ಷ್ಯ ಕೊಡಬೇಕೆಂದು ಹೇಳುತ್ತೇನೆ. ತಮಗೆಲ್ಲಾ ಗೊತ್ತಿದೆ, ಕೆಲವು

ದಿವಸಗಳ ಹಿಂದೆ ಅಂದರೆ ಜನವರಿ ತಿಂಗಳು ಶಿವಮೊಗ್ಗ ಪೋಲೀಸ್ ಸ್ಟೇಷನ್‌ನಲ್ಲಿ ಗಂಭೀರವಾದ ಘಟನೆಯೊಂದು ನಡೆದು ಅದರಲ್ಲಿ ಐದು ಜನರು ಪೋಲೀಸ್ ಠಾಣೆಯಲ್ಲಿ ಗಾಯಾಳುಗಳಾಗಿ, ಉಳಿದ ಇಬ್ಬರು ಸಾವನಪ್ಪಿದರು. ಇದರ ಬಗ್ಗೆ ಇಲ್ಲೂ ಕೂಡ ದೊಡ್ಡ ಚರ್ಚೆ ಆಯಿತು, ಹೊರಗಡೆ ಸಹ ಕೆಲವು ಭರವಸೆಗಳನ್ನು ಸಂಬಂಧಪಟ್ಟವರು ಕೊಟ್ಟರು. ಈ ಘಟನೆ ಆಗಿದ್ದು ಆಗಿ ಹೋಯಿತು, ಆಗಿದ್ದು ಆದ ಮೇಲೆ ಏನು ಮಾಡುವುದೆಂದು ಹೇಳಿ, ನಾವೇನು ಮಾಡಿದೀವಿ, ಎಂದರೆ, ಸಾವನಪ್ಪಿದಂತಹ ಕುಟುಂಬದವರಿಗೆ, ಗಾಯಾಳುಗಳಿಗೆ ಪರಿಹಾರ ಸರ್ಕಾರದಿಂದ ಕೊಡಬೇಕು, ಪೋಲೀಸಿನವರು ಕೊಲೆ ಮಾಡಿದ್ದಾರೆ, ಈ ಘಟನೆ ಬಗ್ಗೆ ಸರ್ಕಾರದವರು ನಿಷ್ಪಕ್ಷಪಾತವಾಗಿ ತನಿಖೆ ಆಗಬೇಕೆಂದು ನಾವು ಪ್ರಸ್ತಾಪ ಮಾಡಿದೆವು. ಅದಕ್ಕೆ ಇಲ್ಲಿ ಒಂದು ಭರವಸೆಯನ್ನು ಕೊಟ್ಟರು, ಮಾನ್ಯ ಸ್ನೇಹಿತರಾದ ಹಾಗೂ ಮಂತ್ರಿಗಳಾದ ಶ್ರೀಮಾನ್ ಬಸವಣ್ಣಪ್ಪನವರು ಕೊಟ್ಟ ಹೇಳಿಕೆ ಇಲ್ಲಿದೆ. ಅವರೇನು ಹೇಳಿದ್ದಾರೆಂದರೆ ಪೋಲೀಸಿನವರ ದೌರ್ಜನ್ಯದ ಬಗ್ಗೆ ತನಿಖೆ ಮಾಡುತ್ತೇವೆಂದು, ಹಾಗೂ ಸತ್ತವರ ಕುಟುಂಬಗಳಿಗೆ ಸುಮಾರು ಇಪ್ಪತ್ತು ಸಾವಿರ ರೂಪಾಯಿಗಳನ್ನು, ಗಾಯಾಳುಗಳಿಗೆ ತಲಾ ಐದು ಸಾವಿರ ರೂಪಾಯಿಗಳ ಪರಿಹಾರ ಕೊಡುತ್ತೇವೆಂದು ಸ್ಪಷ್ಟವಾದ ಭರವಸೆಯನ್ನು ಕೊಟ್ಟರು. ಮತ್ತೇನು ಹೇಳಿದರೆಂದರೆ ನಿಷ್ಪಕ್ಷಪಾತವಾದ ಕಾರ್ಯಕ್ರಮ ಈಬಗ್ಗೆ ಅದಕ್ಕಾಗಿ ಅಗತ್ಯವೆಂದು, ತನಿಖೆ ಯನ್ನು ಮಾಡಿಸುತ್ತೇವೆಂದು ಹೇಳಿದರು. ಈ ಸದನದಲ್ಲಿ ನಾವು ಹೇಳಿದೆವು. ಇಂತಹ ಘಟನೆಗಳ ಬಗ್ಗೆ ಸರ್ಕಾರ ತನಿಖೆ ಮಾಡಿಸಿದರೆ, ಆಗ ಜನರಿಗೆ ಯಾರು ತಪ್ಪು ಮಾಡಿದರೂ ಅಂತಹವರನ್ನು ಯಾರಾದರೂ ಹೇಳುವವರು, ಕೇಳುವವರು ಇರುತ್ತಾರೆ, ಅದಕ್ಕಾದರೂ ತಾವು ತನಿಖೆ ಮಾಡಬೇಕೆಂದು. ಆಗ ಜನರಿಗೆ ಒಂದು ವಿಶ್ವಾಸ ತನಿಖೆಗಳ ಮೇಲೆ ಬರುತ್ತದೆ. ಘಟನೆ ಆಗಿದ್ದು ಆಗಿ ಹೋಯಿತು. ಆದರೆ ಅವರಿಗೆ ಇದುವರಿವಿಗೂ ಯಾವ ಪರಿಹಾರವೂ ಸಿಗಲಿಲ್ಲ. ನಾನು ನನ್ನ ಸ್ನೇಹಿತರು ಒಟ್ಟು ಮಾಡಿ ಕೊಟ್ಟ ಐದು ಸಾವಿರ ರೂಪಾಯಿಗಳ ಹೊರತು ಬೇರೆ ಯಾವ ಹಣವೂ ಅವರಿಗೆ ಇದುವರಿವಿಗೂ ದೊರೆತಿಲ್ಲ. ಅದು ಒಂದು ಕಡೆ ಬಿಡಿ. ನಿಷ್ಪಕ್ಷಪಾತವಾದ ತನಿಖೆ ಮಾಡುತ್ತೇವೆಂದು ಹೇಳಿದ ಕೂಡಲೆ ತಕ್ಷಣ ಅಲ್ಲಿದ್ದಂತಹ ಒಬ್ಬ ಡಿವೈ.ಎಸ್.ಪಿ.ಯವರನ್ನು ಇನ್‌ವೆಸ್ಟಿಗೇಶನ್ ಆಫೀಸರ್ ಆಗಿ ನೇಮಕ ಮಾಡಿದರು. ಡಿವೈ.ಎಸ್.ಪಿ. ಕೈ ಕೆಳಗೆ ಕೆಲಸ ಮಾಡತಕ್ಕಂಥವರನ್ನು ಅವರೇ ಇನ್‌ವೆಸ್ಟಿಗೇಷನ್ ಮಾಡತಕ್ಕಂಥಾದ್ದು ಸಾಧ್ಯವಾಗುವುದಿಲ್ಲವೆಂದು ಹೇಳಿ ಮತ್ತೆ ಸಿ.ಒ.ಡಿ. ಇನ್‌ವೆಸ್ಟಿಗೇಶನ್ ಮಾಡುತ್ತೇ ದೆಂದು ಹೇಳಿದರು. ಈಗ ಸಿ.ಒ.ಡಿ.ಯವರು ತನಿಖೆ ಮಾಡುತ್ತಿದ್ದಾರೆ. ಅದಕ್ಕಿಂತ ಹಿಂದೆ ಮಾಡಿದ ತನಿಖೆಯಾಗಿದ್ದರೆ ತಪ್ಪಿತಸ್ಥರಿಗೆ ನ್ಯಾಯವಾಗಿ ಅದೂ ಅವರ ಕೈ ಕೆಳಗೆ ಕೆಲಸ ಮಾಡತಕ್ಕಂಥವರಿಗೆ ನಿಷ್ಪಕ್ಷಪಾತವಾಗಿ ತನಿಖೆಯಾಗಿ ಶಿಕ್ಷೆ ದೊರೆಯುತ್ತಿತ್ತು ಎನ್ನುವ ವಿಶ್ವಾಸ ಎಲ್ಲಿ ಇದೆ ? ಈಗ ನನಗೆ ತುಂಬಾ ಅಧಿಕೃತ ವಲಯಗಳಿಂದ ಬಂದಿರತಕ್ಕಂಥ ಕೆಲವು ವಿಚಾರಗಳಿವೆ. ಇಲ್ಲಿ ಈ ಇಲಾಖೆಯಲ್ಲಿ ಏನು ಆಗಿದೆ ಎನ್ನುವ ಬಗ್ಗೆ ಚಿಂತನೆ ಮಾಡಬೇಕು. ಅನ್ನ ಬೆಂದಿದೆಯೋ ಇಲ್ಲವೋ ಎಂದು ನೋಡಲು ಇಡೀ ಪಾತ್ರೆ ಒಳಗೆ ಕೈ ಹಾಕಿ ನೋಡಬೇಕಿಲ್ಲ. ಕೈ ಹಾಕಿದರೆ ಕೈ ಸುಟ್ಟುಕೊಳ್ಳಬೇಕಾಗುತ್ತದೆ, ಒಂದು ಅಗಳು ಅನ್ನ ನೋಡಿದರೆ ಸಾಕು. ಆ ರೀತಿ ಇದನ್ನು ನಾವು ನೋಡಬೇಕಾಗುತ್ತದೆ. ಆ ರೀತಿ ಇದನ್ನು ತಾವು ಪರಿಗಣಿಸಬೇಕೆಂದು ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಕೇಸ್ ಯಾವಾಗ ರಿಜಿಸ್ಟರ್ ಮಾಡಬಹುದು, ಮೊದಲು ಯು.ಡಿ.ಆರ್. ಎಂದು ರಿಜಿಸ್ಟರ್ ಆಯಿತು, 'un-natural death report' ಅಂತ. ಆಮೇಲೆ ಮರ್ಡರ್ ಕೇಸ್ ಅಂತ ರಿಜಿಸ್ಟರ್ ಆಯಿತು. ಮರ್ಡರ್ ಕೇಸ್ ರಿಜಿಸ್ಟರ್ ಆಯಿತು. This U. D. R. cannot survive. This is only preliminary. ಸಿ.ಒ.ಡಿ.ಯವರು ಯಾವುದನ್ನು ಇನ್‌ವೆಸ್ಟಿಗೇಶನ್ ಮಾಡಬೇಕು ? The COD was asked to investigate and the COD said, "We will investigate only the UDR case and not the murder case". They consistently refused to investigate into the murder case. I don't know under what authority the COD refused to investigate the murder case. ಯು.ಡಿ.ಆರ್. ಕೇಸನ್ನು ಇನ್‌ವೆಸ್ಟಿಗೇಶನ್ ಮಾಡತಕ್ಕಂಥವರು ಡಿವೈ.ಎಸ್.ಪಿ. Once it was registered as a murder case, it was the duty of the COD to investigate into the murder case and not to the UDR. But the Dy.SP himself investigated the murder case and he sent the charge-sheet.

SRI RAMAKRISHNA HEGDE.—Case has been registered against the police officials under Section 302 *i.e.*, for murder.

SRI K. H. SRINIVAS.—That is not by C.O.D. Case has come to be registered with a view to save them in the court. ಅದಕ್ಕೆ ನಾನು ತಮಗೆ ಹೇಳಿದ್ದು. Government has Promised that there will be an independent investigation. It is the promise of the Government, and the same persons have also registered another assault case. ಗೌರ್ನಮೆಂಟ್‌ನವರು ಹೇಳಿದ ಮೇಲೆ ಡಿ.ವೈ.ಎಸ್.ಪಿ. ಹೇಗೆ ಮಾಡುತ್ತಾರೆ? The two cases are mutually exclusive. ಈ ಘಟನೆಯಲ್ಲಿ ಇಬ್ಬರು ಸತ್ತರು ಆಮೇಲೆ ಮೂರು ಜನರನ್ನು ಅರೆಸ್ಟ್ ಮಾಡಿ ಜೈಲಿನಲ್ಲಿಟ್ಟಿದ್ದಾರೆ. The same police have registered two cases wherein they definitely know that one case excludes the other.

3-00 ಪಿ.ಎಂ.

ಈಗ ನಿನ್ನೆ ದಿವಸ ನನ್ನನ್ನು ಮರ್ಡರ್ ಮಾಡಿದ್ದರು ಎಂದು ಇಟ್ಟುಕೊಳ್ಳಿ. ಇವತ್ತು ನಾನು ನಿಮ್ಮನ್ನು ಹೊಡೆದೆ ಎಂದು ನನ್ನ ಮೇಲೆ ಕೇಸ್ ಹಾಕುವುದಕ್ಕೆ ಆಗುತ್ತದೆಯೇ? ನೋಡಿ ಈ ಕೇಸ್ ಈ ರೀತಿ ಆಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ನಾನು ತರುವುದೇನೆಂದರೆ, ಕೋಲಾರದಲ್ಲಿ ಇಂತಹ ಮೂರ್ನಾಲ್ಕು ಕೇಸ್ ಆಗಿತ್ತು. ರೆಗ್ಯುಲರ್ ಪೋಲೀಸ್‌ನವರು ಒಂದು ತರಹ ರಿಪೋರ್ಟ್ ಕೊಡುವುದು, ಅದೇ ಕೇಸ್ ಮೇಲೆ ಸಿ.ಒ.ಡಿ.ನವರು ಬೇರೆ ತರಹ ರಿಪೋರ್ಟ್ ಕೊಡುವುದು, ಒಂದೇ ಕೇಸ್‌ನಲ್ಲಿ ಎರಡು ತರಹದ ರಿಪೋರ್ಟ್ ಇದ್ದರೆ ಏನಾಗುತ್ತದೆ? ಕೋರ್ಟಿನಲ್ಲಿ ಅಕ್ವಿಟ್ ಆಗುತ್ತದೆ. ಸಿ.ಒ.ಡಿ.ಯವರು ಮತ್ತು ರೆಗ್ಯುಲರ್ ಪೋಲೀಸಿನವರು ಜೊತೆಗೂಡಿ ಸಹಕಾರದಿಂದ ರಿಪೋರ್ಟ್ ಕೊಡುವಂತಾಗಬೇಕು. ಇಲ್ಲ ಅಂದರೆ ಎಲ್ಲಾ ವ್ಯರ್ಥವಾಗುತ್ತದೆ. ಪೋಲೀಸ್‌ನವರೇ ಅಪರಾಧಿಗಳಿಗೆ ಅನುಕೂಲ ಮಾಡಿಕೊಟ್ಟು ಹಾಗೆ ಆಗುತ್ತದೆ.

ಅಧ್ಯಕ್ಷರು.—ನೀವು ಕೂಡ್ರಿ. ಸಾಕು.

ಶ್ರೀ ಕೆ.ಹೆಚ್. ಶ್ರೀನಿವಾಸ್.—ನಾನು ಇಲ್ಲಿ ಕೇಳುವುದೇನೆಂದರೆ, ಸಿ.ಒ.ಡಿ.ಯವರು ಏಕೆ ಮರ್ಡರ್ ಕೇಸ್ ಮೇಲೆ ತನಿಖೆ ಮಾಡಲಿಲ್ಲ? ಈ ಎರಡು ವಿಚಾರವನ್ನು ತಾವು ನೋಡಬೇಕು. ಈ ಎರಡೂ ಚಾರ್ಜ್‌ಶೀಟ್‌ನ್ನು ಒಬ್ಬರೇ ಹಾಕಿದ್ದಾರೆ. ಎರಡು ಚಾರ್ಜ್‌ಶೀಟ್‌ನ್ನು ಒಬ್ಬರೇ ಹಾಕುವುದಕ್ಕೆ ಹೇಗೆ ಸಾಧ್ಯ? ಇದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಒಂದು ಟನಲ್ ತೆಗೆಯುವುದಕ್ಕೆ ಸಂಬಂಧಪಟ್ಟಂತೆ ಎರಡೂ ಕಡೆಯಿಂದ ಕೆಲಸದ ಮಾಡಿದರೆ ಬೇಗ ಆಗುತ್ತೆಂದು ಎರಡೂ ಕಡೆಯಿಂದ ಕಲಸ ಪ್ರಾರಂಭ ಮಾಡಿದರು. ಅಲ್ಲಿ ಏನಾಯಿತು ಎಂದರೆ, ಒಂದು ಕಡೆಯಿಂದ ಕೆಲಸ ಪ್ರಾರಂಭ ಮಾಡಿದವರು ಇನ್ನೊಂದು ಕಡೆಯಿಂದ ಕೊಂಡು ಬರುತ್ತಿರುವವರನ್ನು ಮೀಟ್ ಮಾಡಲೇ ಇಲ್ಲ. ಆಗ ಏನಾಯಿತು? ಇವರು ಒಂದು ಕಡೆ ಕೆಲಸ ಪ್ರಾರಂಭ ಮಾಡಿ ಇನ್ನೊಂದು ಕಡೆ ಹೊರಟರು, ಇನ್ನೊಬ್ಬರು ಇನ್ನೊಂದು ಕಡೆ ಹೊರಟರು. ಇದರಿಂದ ಒಂದು ಟನಲ್ ತೆಗೆಯುವುದಕ್ಕೆ ಹೋಗಿ ಎರಡು ಟನಲ್ ತೆಗೆದ ಹಾಗಾಯಿತು. ಮಾನ್ಯ ಅಧ್ಯಕ್ಷರೇ, ಅದು ಅಷ್ಟಕ್ಕೇ ನಿಲ್ಲಲಿಲ್ಲ. ಪೋಸ್ಟ್ ಮಾರ್ಟಮ್ ರಿಪೋರ್ಟ್‌ನಲ್ಲಿ 40ಕ್ಕೂ ಹೆಚ್ಚು ಗಾಯಗಳಾಗಿವೆ ಎಂದು ನಮೂದಾಗಿದೆ. ಆದರೆ, ರಿಜಿಸ್ಟರ್‌ನಲ್ಲಿ ಈ ಗಾಯಗಳು ಯಾವಾಗ ಆಗಿರಬಹುದೆಂಬ ಬಗ್ಗೆ ಸ್ಪಷ್ಟವಾಗಿ ಬರೆಯಲಿಲ್ಲ. ಅದನ್ನು ಬರೆಯದಿದ್ದರೆ ಏನು ಅರ್ಥ? They were all the materials as a result of which death occurred. That is the normal presumption....3 ತಿಂಗಳಾದ ಮೇಲೆ ಪೋಲೀಸಿನಿಂದ ಎನ್‌ಕ್ವಯರಿ ಮಾಡಿಸಿದ್ದಾರೆ. ಗಾಯಗಳನ್ನು ನಮೂದಿಸಿದ್ದಾರೆ. ಆದರೆ ಅದರ ಏಜ್ ಏನು ಎಂದು ನಮೂದು ಮಾಡಿಲ್ಲ. That doctor has given vague certificate they are several days old and that certificate was produced in the High Court and on behalf of procecution none-appeared. ಈ ಕೇಸ್ ಬಗ್ಗೆ ಡೈರೆಕ್ಟರ್ ಆಫ್ ಪ್ರಾಸಿಕ್ಯೂಷನ್‌ನವರು ಕೋರ್ಟಿನಲ್ಲಿ ಸರಿಯಾಗಿ ಆರ್ಗ್ಯುಮೆಂಟ್ ಮಾಡಲಿಲ್ಲ. The High

Court had no other material. They enlarged the bail to all the 7 constables and the Sub-Inspector. It did not stop at that. The S.P. who was on transfer, just on the eve of his transfer, reinstated all the 7 constables and the Sub-Inspector. ನಿನ್ನೆ ದಿವಸ ಸಸ್ಪೆಂಡ್ ಮಾಡಿ ಮತ್ತೆ ರೀಇನ್‌ಸ್ಟೇಟ್ ಮಾಡಿದರೆ ಹೇಗೆ? ಒಬ್ಬ ಎಸ್.ಪಿ. ಸಸ್ಪೆಂಡ್ ಮಾಡುವುದು. ಇನ್ನೊಬ್ಬ ಎಸ್.ಪಿ. ಬಂದು ಅವರ ಸಸ್ಪೆನ್‌ಷನ್‌ನ್ನು ರದ್ದು ಮಾಡುವುದು ಅಂದರೆ ಹೇಗೆ? ಪೋಲೀಸ್ ಇಲಾಖೆಯಲ್ಲಿ ಶಿಸ್ತು ಇಲ್ಲವೆ? ಇದನ್ನು ನೋಡಿದರೆ ಕಾನೂನು ಚೌಕಟ್ಟಿನಲ್ಲಿ ಕೆಲಸ ನಡೆಯುತ್ತದೆಂದು ಯಾರೂ ಒಪ್ಪುವುದಕ್ಕೆ ಸಾಧ್ಯವಿಲ್ಲ. ಇನ್ನೊಬ್ಬ ಎಸ್.ಪಿ. ಅವರ ಸಸ್ಪೆನ್‌ಷನ್‌ನ್ನು ಏಕೆ ರದ್ದು ಮಾಡಿದ? ಮೊದಲನೇ ಎಸ್.ಪಿ. ಸಸ್ಪೆಂಡ್ ಮಾಡಿರುವುದು ಸರಿ ಇರಬೇಕಾದರೆ ಆಮೇಲೆ ಬಂದ ಎಸ್.ಪಿ. ಆ ಸಸ್ಪೆನ್‌ಷನ್ ಏಕೆ ರದ್ದು ಮಾಡಿದ? They went to the Administrative Tribunal seeking stay against the suspension afresh. That petition was dismissed and now they are under suspension. They are enlarged on bail because of the default of the department and they are now threatening there eye witnesses ಯಾರು ಇದ್ದಾರೋ, ಅವರುಗಳಿಗೆ ಏನು ಹೇಳಿದ್ದಾರೆ ಎಂದರೆ, ನೀವು ಒಂದು ಲಕ್ಷ ರೂಪಾಯಿಗಳನ್ನು ತೆಗೆದುಕೊಂಡು ಸುಳ್ಳು ಸಾಕ್ಷಿ ಹೇಳಬೇಕು. ಇಲ್ಲಾ ಅಂದರೆ ನಿಮ್ಮನ್ನು ಫಿನಿಷ್ ಮಾಡುತ್ತೇವೆಂದು ಹೇಳಿದ್ದಾರೆ. ಈ ಕೇಸ್‌ನ್ನು ಗೆಲ್ಲುವುದಕ್ಕಾಗಿ ಜಿಲ್ಲೆಯಲ್ಲಿರುವ ಎಲ್ಲಾ ಪೋಲೀಸಿನವರು ಒಂದೊಂದು ದಿವಸದ ಸಂಬಳವನ್ನು ಕಾಂಟ್ರಿಬ್ಯೂಟ್ ಮಾಡಿ ಒಬ್ಬ ವೈರ್‌ಲೆಸ್ ಇನ್‌ಸ್ಪೆಕ್ಟರ್‌ರವರ ಹೆಸರಿನ ಮೇಲೆ ಒಂದು ಲಕ್ಷ ರೂಪಾಯಿಗಳನ್ನು ಬ್ಯಾಂಕ್‌ನಲ್ಲಿ ಹಾಕಿದ್ದಾರೆ. This is to fight the litigation on behalf of the police; Have you authorised this? ಪೋಲೀಸರೇ ಆಗಿರಲಿ ಅಥವಾ ಇತರ ಯಾರಾದರೂ ಆಗಿರಲಿ, ನಾವು ನಿಷ್ಪಕ್ಷಪಾತವಾಗಿ ಡೀಲ್ ಮಾಡುತ್ತೇವೆ ಎಂದು ಹೇಳಿದರೆ, ಪೋಲೀಸ್ ಇಲಾಖೆಯು ಇದು ನಮ್ಮದೇ ಕೇಸ್ ಎಂದು ಹೇಳಿ ಎಲ್ಲರೂ ಒಂದೊಂದು ದಿವಸದ ಸಂಬಳವನ್ನು ಒಟ್ಟು ಮಾಡಿ, ಹೀಗೆ ಒಟ್ಟು ಮಾಡಿದ ಒಂದು ಲಕ್ಷ ರೂಪಾಯಿಗಳನ್ನು ಅಧಿಕೃತವಾಗಿ ಬ್ಯಾಂಕ್ ಅಕೌಂಟ್‌ನಲ್ಲಿ ಇಟ್ಟು ಕೇಸನ್ನು ಫೈಟ್ ಮಾಡುತ್ತೇವೆ ಎಂದು ಹೇಳಿದರೆ, ಸಾಮಾನ್ಯ ಜನರಿಗೆ ಇವರಿಂದ ಹೇಗೆ ನ್ಯಾಯ ಸಿಗಬೇಕು ? ಆದುದರಿಂದ ನೀವು ಈ ಒಂದು ಕೇಸ್‌ನ್ನು ಇನ್‌ವೆಸ್ಟಿಗೇಟ್ ಮಾಡಿದರೆ ನಿಮ್ಮ ಪೋಲೀಸ್ ಇಲಾಖೆಯು ಯಾವ ತರಹದ ದುಸ್ಥಿತಿಗೆ ಹೋಗಿ ತಲುಪಿದೆ ಎನ್ನತಕ್ಕಂಥಾದ್ದನ್ನು ನೀವು ಅರ್ಥ ಮಾಡಿಕೊಳ್ಳ ಬಹುದು. ಆದುದರಿಂದ ಮಾನ್ಯ ಅಧ್ಯಕ್ಷರ ಮೂಲಕ ಸರಕಾರವನ್ನು ಕೇಳಿಕೊಳ್ಳುವುದೇನೆಂದರೆ, ಈ ಕೇಸನ್ನು ಸಮಗ್ರವಾದ ಒಂದು ತನಿಖೆಗೆ ಒಳಪಡಿಸಬೇಕು. ಆಮೂಲಕ ತಪ್ಪಿತಸ್ಥರನ್ನು ಕಂಡು ಹಿಡಿದು ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು. ಈ ಇಲಾಖೆಯಲ್ಲಿ ಯಾರೂ ಕೂಡ ಸಂಭಾವಿತರು ಇಲ್ಲ ಎಂದು ನಾನು ಹೇಳುತ್ತಾ ಇಲ್ಲ. ಅಥವಾ ಈ ಇಲಾಖೆಯಲ್ಲಿ ಯಾರೂ ಕೂಡ ಪ್ರತಿಭಾನ್ವಿತರು, ಟ್ಯಾಲೆಂಟ್ಸ್, ಇಲ್ಲ ಎಂದು ಹೇಳುವುದಿಲ್ಲ. ಆದರೆ ಇಲಾಖೆಯ ಕಾರ್ಯವೈಖರಿ ಹೇಗಿದೆ ಎಂದು ನೋಡಿದಾಗ ಈ ಮಾತುಗಳನ್ನು ನಾನು ಹೇಳಬೇಕಾಗಿ ಬರುತ್ತದೆ. ಇವೊತ್ತು ಯಾವುದೇ ಇಲಾಖೆಗೆ ತನ್ನಷ್ಟಕ್ಕೆ ತಾನೆ ಜೀವ ಬರುವುದಿಲ್ಲ. ಅದಕ್ಕೆ ನೀವು ಇಲ್ಲಿಂದ ಏನು ಚಾಲನೆಯನ್ನು ಕೊಡುತ್ತೀರಿ, ಮತ್ತು ಅದಕ್ಕೆ ಇಲ್ಲಿಂದ ಏನು ರಾಜಕೀಯ ನಾಯಕತ್ವದ ಚಾಲನೆ ಸಿಗುತ್ತದೆಯೋ ಆ ಒಂದು ಚಾಲನೆಯ ಮೂಲಕ ಆ ಹಳ್ಳಿಯಲ್ಲಿ ಅದು ಸಾಗುತ್ತದೆ. ಅದನ್ನು ಬಿಟ್ಟು ನೀವೇ ತಪ್ಪಿ ತಪ್ಪಿ ಹಳಿಯನ್ನು ಹಾಕಿ ಕೊಟ್ಟರೆ ಆ ಗಾಡಿ ಎತ್ತಲಾದರೂ ಹೋಗಿ ಡ್ಯಾಶ್ ಹೊಡೆಯುತ್ತದೆ ಇಲ್ಲದಿದ್ದರೆ ಎಲ್ಲಾದರೂ ಹೋಗಿ ಹಾಳಾಗಿ ಬೀಳುತ್ತದೆ. ಆದುದರಿಂದ ನೀವು ಯಾವುದಾದರೂ ಒಂದು ಸಮಗ್ರ ತನಿಖೆಯನ್ನು ಈ ಬಗ್ಗೆ ಮಾಡಬೇಕು. ನನಗೆ ಯಾವುದೇ ರೀತಿಯಲ್ಲಿ, ಯಾವ ಆಫೀಸರ್ಸ್ ಮೇಲೆ ದ್ವೇಷವಾಗಲಿ, ಅಸೂಯೆಯಾಗಲಿ ಇಲ್ಲ. ಅಥವಾ ಯಾರಮೇಲೆಯೂ ಇಲ್ಲದಿದ್ದ ಪ್ರೀತಿಯೂ ಕೂಡ ಇಲ್ಲ. ನಾನು ಕೂಡ ನಿಮ್ಮ ತರಹವೇ ಆ ಪೋಲೀಸ್ ಇಲಾಖೆಯಿಂದ ಆದಷ್ಟು ದೂರ ಇರಬೇಕೆಂದು ಬಯಸುತ್ತೇನೆ. ಮತ್ತು ಅದು ಕ್ಷೇಮಕರವೂ ಆಗಿರುತ್ತದೆ. ಆದರೆ ಯಾವುದೇ ಸಂದರ್ಭಗಳಲ್ಲಿ ನಮ್ಮ ಕ್ಷೇತ್ರದಲ್ಲಿ ನಡೆದ ಘಟನೆಗಳ ಬಗ್ಗೆ ನಾವು ನೋಡ ಬೇಕಾಗುತ್ತದೆ. ಆದುದರಿಂದ ಈ ಬಗ್ಗೆ ತಾವು ಏನು ಮಾಡುತ್ತೀರಿ ಎನ್ನುವ ಬಗ್ಗೆ ಒಂದು ಸ್ಪಷ್ಟವಾದ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೆ, ಶಿವಮೊಗ್ಗದಲ್ಲಿ ಪೋಲೀಸರಿಗೂ ಮತ್ತು ಜೈಲಿನ ಅಧಿಕಾರಿಗಳಿಗೂ ನಡೆದ ಒಂದು ಯುದ್ಧದ ಪ್ರಕರಣ ತಮಗೆ ಗೊತ್ತಿರ ಬಹುದು ಎಂದು ನಾನು ಅಂದುಕೊಂಡಿದ್ದೇನೆ. ಇದರ ಕುರಿತು ಒಂದೆರಡು ವಿಷಯಗಳನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇದರ ಬಗ್ಗೆ ಸದನದಲ್ಲಿ ಪ್ರಸ್ತಾಪನೆ ಬಂದಾಗ ಮಾನ್ಯ ಗೃಹಸಚಿವರಾಗಿದ್ದಂಥ ರಾಚಯ್ಯನವರು ಒಂದು ಹೇಳಿಕೆ ಯನ್ನು ಕೊಟ್ಟರು. ಅವರು ಇಲಾಖೆಯಿಂದ ಬಂದಂಥ ಒಂದು ಹೇಳಿಕೆಗೆ ತಮ್ಮ ಸ್ವಹಸ್ತಾಕ್ಷರದ ಒಂದು ಪ್ಯಾರಾವನ್ನು ಸೇರಿಸಿ, ಇಬ್ಬರು ಎಸ್. ಐ. ಗಳನ್ನು ಸಸ್ಪೆಂಡ್ ಮಾಡಿದ್ದೇನೆ ಎಂದು ಹೇಳಿದರು. ಅಂದರೆ ಆ ಹೇಳಿಕೆಯನ್ನು ಇಲ್ಲಿ ಓದಿದರು. ಇವರು ಸಸ್ಪೆಂಡ್ ಮಾಡಿದ ಒಂದು ವಾರದೊಳಗಾಗಿ ಅವರನ್ನು ಅಲ್ಲಿದ್ದಂಥ ಎಸ್. ಪಿ. ಯವರು ಪುನರ್‌ನೇಮಕ ಮಾಡಿದರು. ಅವರು ಈಗಲೂ ರೀ ಇನ್‌ಸ್ಟಾಲೇಶನ್‌ನಲ್ಲಿಯೇ ಇದ್ದಾರೆ. ಈ ಬಗ್ಗೆ ರಾಚಯ್ಯನವರಿಗೆ ಫಯಿಲ್ ಬರಲೇ ಇಲ್ಲ. ಹೀಗೆ ಒಬ್ಬ ಗೃಹಸಚಿವರಿಗೆ ಫಯಿಲ್ ಬಾರದೇ ಇಂತಹ ಒಂದು ಕ್ರಮವನ್ನು ಅಲ್ಲಿಯ ಅಧಿಕಾರಿ ತೆಗೆದುಕೊಳ್ಳ ಬಹುದೇ ? ವಿಧಾನ ಸಭೆಯಲ್ಲಿ ಒಬ್ಬ ಗೃಹಸಚಿವರು ಅಥವಾ ಮುಖ್ಯ ಮಂತ್ರಿಗಳು ಒಬ್ಬನನ್ನು ಸಕಾರಣಕ್ಕಾಗಿ ಸಸ್ಪೆಂಡ್ ಮಾಡಿದ್ದೇನೆ ಎಂದು ಹೇಳಿ ಆದೇಶವನ್ನು ಕೊಟ್ಟರೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿಯೊಬ್ಬನು ನಿಮಗೆ ತಿಳಿಸದೇ ಪುನರ್ ನೇಮಕ ಮಾಡಬಹುದೆ ? ಹಾಗೆ ಮಾಡುವಾಗ ಸಂಬಂಧಪಟ್ಟ ಮಂತ್ರಿಯವರ ಗಮನಕ್ಕೆ ತಂದು ಅವರ ರುಜು ಆಗಬೇಕಾಗಿಲ್ಲವೇ ? ಹೀಗೆ ಈ ಕೇಸ್‌ನಲ್ಲಿ ರಾಚಯ್ಯನವರ ಹತ್ತಿರ ಈ ಫಯಿಲ್ ಬರಲೇ ಇಲ್ಲ ಆ ಅಧಿಕಾರಿಯೇ ತನ್ನ ಒಂದು ಅಧಿಕಾರವನ್ನು ಚಲಾಯಿಸಿ ಪುನರ್‌ನೇಮಕ ಮಾಡಿಬಿಟ್ಟ. ನಾನು ಮಾನ್ಯ ರಾಚಯ್ಯನವರಿಗೆ ಕೇಳಿದೆ, ಹೋಂ ಮಿನಿಸ್ಟರ್ ನೀವೋ ಅಥವಾ ಎಸ್. ಪಿ. ಯೋ ಎಂದು ? ಅದಕ್ಕೆ ಅವರು ಏನಪ್ಪಾ ಮಾಡುವುದು ? ಎಂದು ಹೇಳಿದರು. ಹೀಗೆ ನೀವು ಇಂತಹ ಪ್ರಕರಣಗಳಲ್ಲಿ ಏನಪ್ಪಾ ಮಾಡುವುದು ಎಂದರೆ ಜನರ ಗತಿ ಏನಾದೀತು ? ವಿಧಾನ ಮಂಡಲದಲ್ಲಿ ಸಸ್ಪೆಂಡ್ ಮಾಡಿದ್ದೇ ನೆಂದು ನೀವು ಹೇಳಿದ ನಂತರ ಸಂಬಂಧಪಟ್ಟ ಮಂತ್ರಿಗಳಿಗೆ ಫಯಿಲ್ ಬರಬೇಕೋ ಅಥವಾ ಅಧಿಕಾರಿಯೇ ಅದನ್ನು ತೀರ್ಮಾನಿಸಬೇಕೋ ಎಂಬ ಬಗ್ಗೆ ತಾವು ಹೇಳಬೇಕು. ಅಲ್ಲಿ ಹೊಡೆತ ತಿಂದವರು ಜೈಲ್‌ನ ಅಧಿಕಾರಿಗಳು. ಹೊಡೆದವರು ಪೋಲೀಸ್‌ನವರು. ಆದರೆ ಈಗ ಪೋಲೀಸರನ್ನು ಅಲ್ಲಿಯೇ ಇಟ್ಟುಬಿಟ್ಟರು. ಇದರಲ್ಲಿ ಇದ್ದವರು ಒಬ್ಬಿಬ್ಬರು ಈ ಮರ್ಡರ್‌ಕೇಸ್‌ನಲ್ಲಿ ಸಿಕ್ಕಿಕೊಂಡು ಬಿಟ್ಟರು. ಒಂದು ವೇಳೆ ಆಗಲೇ ಅವರ ಟ್ರಾನ್ಸ್‌ಫರ್ ಮಾಡಿದ್ದರೆ ಅವರು ಬಚಾವಾಗುತ್ತಿದ್ದರೋ ಏನೋ ? ಆದರೆ ಅವರಾಗಿಯೇ ಈ ದುಸ್ಥಿತಿಯಲ್ಲಿ ಈಗ ಸಿಕ್ಕಿಹಾಕಿಕೊಂಡು ಬಿಟ್ಟರು. ಹಾಗೆಯೇ ಪೋಲೀಸರನ್ನು ಅಲ್ಲಿಯೇ ಇಟ್ಟು ಪಾಪದ ಕಾರಾಗೃಹದ ಜೈಲರ್‌ನ್ನು ದಿಕ್ಕುದಿಶೆ ಇಲ್ಲದ ಕಡೆಗೆ ಟ್ರಾನ್ಸ್‌ಫರ್ ಮಾಡಿದ್ದಾರೆ. ಮತ್ತು ಪೋಲೀಸರಿಗೆ ಅವರನ್ನು ಪ್ರಾಸಿಕ್ಯೂಟ್ ಮಾಡುವುದಕ್ಕೆ ಪರ್ಮಿಶನ್ ಕೊಟ್ಟಿದ್ದಾರೆ. ಆದರೆ ಜೈಲರ್‌ಗೆ ಪ್ರಾಸಿಕ್ಯೂಟ್ ಮಾಡುವುದಕ್ಕೆ ಪರ್ಮಿಶನ್‌ಗಾಗಿ ಕೇಳಿದ್ದರೂ ಪರ್ಮಿಶನ್ ಕೊಟ್ಟಿಲ್ಲ. ದಿನಾಂಕ ೨೪ನೇ ಅಕ್ಟೋಬರ್ ೮೬ರ ರಂದು ಕರ್ನಾಟಕ ಕಾರಾಗೃಹಗಳ ಮಹಾ ನಿರೀಕ್ಷಕರು ಹೋಂ ಸೆಕ್ರೆಟರಿಯವರಿಗೆ ಒಂದು ಕಾಗದವನ್ನು ಬರೆದಿದ್ದಾರೆ. 'ಈ ಪ್ರಕರಣದ ಮೇಲಿನ ವಿಷಯಕ್ಕೆ ಸಬಂಧಪಟ್ಟಂತೆ ಎಂ. ಎ. ಮಜೀದ್, ಶಿವಮೊಗ್ಗ ಜಿಲ್ಲಾ ಕಾರಾಗೃಹದ ಅಧೀಕ್ಷಕರು, ದಿನಾಂಕ ೧೬-೧-೧೯೮೬ ರಂದು ಒಂದು ಅರ್ಜಿ ಹಾಗೂ ಎರಡು ಅಡಕ ಗಳನ್ನು ಕಚೇರಿಗೆ ಒಪ್ಪಿಸಿದ್ದು ಪ್ರಕರಣದ ಸತ್ಯಾಸತ್ಯತೆಯು ನಿಷ್ಕರ್ಶೆಗೆ, ಸಂಸ್ಥೆಯ ಕರ್ತವ್ಯ ನಿರತರಾಗಿದ್ದ ಸಿಬ್ಬಂದಿಯ ಹಿತರಕ್ಷಣೆಯ ದೃಷ್ಟಿಯಿಂದ, ಇಲಾಖೆಯ ಸಿಬ್ಬಂದಿಯ ನೈತಿಕ ಧೈರ್ಯ ವನ್ನು ಕಾಯ್ದುಕೊಳ್ಳುವ ಆವಶ್ಯಕತೆ ಇರುವುದರಿಂದ ಪ್ರಕರಣವನ್ನು ನ್ಯಾಯಾಲಯಕ್ಕೆ ಒಪ್ಪಿಸಲು ಪರವಾನಿಗೆ ನೀಡಬಹುದು. ಎಂದು ಆ ಇಲಾಖೆಯ ಮುಖ್ಯಸ್ಥರು ಬರೆದಿದ್ದಾರೆ. ಇದನ್ನು ನೋಡಿದರೆ ಏನು ಅರ್ಥವಾಗುತ್ತದೆ?'' ನಾನು ಅವೊತ್ತೇ ಹೇಳಿದ್ದೇನೆ. ಇಲಾಖೆಯ ಎರಡೂ ಜನಕ್ಕೂ ಹೀಗೆ ಪರವಾನಿಗೆ ಕೊಡಬಾರದು ಎಂದು. ಈ ವಿಚಾರದಲ್ಲಿ ನಿಮ್ಮದೇ ಆದ ಎರಡು ಇಲಾಖೆಗಳ ಮುಖ್ಯಸ್ಥರನ್ನು ಕರೆದು ಅವರಿಗೆ ಬುದ್ಧಿ ಹೇಳಬಹುದಾಗಿತ್ತು. ಆದರೆ ನೀವು ಹಾಗೆ ಮಾಡಿಲ್ಲ. ಇದು ತೋಳನಿಗೆ ಅನುಮತಿ ಕೊಟ್ಟು ಕುರಿಯನ್ನು ಕಂಬಕ್ಕೆ ಕಟ್ಟಿ ಹಾಕಿದ ಹಾಗೆ ಆಗಿದೆ. ನಿಮ್ಮ ಇಲಾಖೆಗಳಲ್ಲಿಯೇ ಈ ರೀತಿಯ ನ್ಯಾಯಧಾನವನ್ನು ಮಾಡುವುದಾದರೆ ಜನಗಳಿಗೆ ಎಷ್ಟು ಒಳ್ಳೆಯ ನ್ಯಾಯದಾನ ಸಿಗುತ್ತದೆ ಎಂದು ನಾವು ಆಲೋಚನೆ ಮಾಡಬೇಕಾಗುತ್ತದೆ. ಈ ವಿಚಾರದಲ್ಲಿ ಸಾಕಷ್ಟು ವಿವರಗಳನ್ನು ಪಡೆದು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಭದ್ರಾವತಿಯಲ್ಲಿ ನೂರ್ ಜಹಾನ್ ಎಂಬ ಮಹಿಳೆಯನ್ನು ಯಾರೋ ಅತ್ಯಾಚಾರ ಮಾಡಿ ಕೊಲೆಮಾಡಿದರು. ಸಹ ಸ್ರಾರು ಜನ ನೋಡಿ ಅದು ಕೊಲೆನೇ ಅಂತ ತೀರ್ಮಾನಿಸಿದರು. ಅಧ್ಯಕ್ಷರೆ, ಯಾರಾದರೂ ಸ್ವತಃ ಉಟ್ಟಿರುವ ಸೀರೆ ಸೆರಗಿನಿಂದಲೇ ಆತ್ಮಹತ್ಯೆ ಮಾಡಿಕೊಳ್ಳಲು ಸಾಧ್ಯವೇ ? ಹಾಗೇದರೆ ಹಾಸ್ಯಾಸ್ಪದ ವಾಗುತ್ತದೆ. ಆದರೆ ಪೋಲೀಸರು ಅವಳು 'ನೇಣುಹಾಕಿಕೊಂಡಳು' ಎಂದರು ಅದರ ಬಗ್ಗೆ ನಾನು

ವಿವರಿಸಿದ ಮೇಲೆ ಅಂದು ಗೃಹಸಚಿವರಾಗಿದ್ದ ರಾಚಯ್ಯನವರೂ ಅದು ಸುಯಿಸೈಡ್ ಅಲ್ಲ ಎಂದು ಒಪ್ಪಿಕೊಂಡು ಸಿ. ಒ. ಡಿ. ಎನ್‌ಕ್ವಯರಿ ಮಾಡಿಸುತ್ತೇನೆಂದು ಭರವಸೆ ಕೊಟ್ಟರು. ಮೂರು ದಿವಸದ ನಂತರ The S. P. in his wisdom called a press conference and said nothing doing it is only a case of suicide. ಹೋಮ್ ಮಿನಿಸ್ಟರು ಆತ್ಮಹತ್ಯೆಯಲ್ಲಿ ಎಂದು ಸಿ. ಒ. ಡಿ ಎನ್‌ಕ್ವಯರಿಗೆ ಬರೆದರೆ ಅಲ್ಲಿರುವ ಎಸ್. ಒ. ಪತ್ರಿಕಾ ಹೇಳಿಕೆ ಕೊಟ್ಟು ಅದು ಆತ್ಮಹತ್ಯೆ ಹೊರತು ಕೊಲೆಯಲ್ಲ ಎಂದರು. ನಿಮ್ಮ ಗೃಹಇಲಾಖೆಯ ಮಿನಿಸ್ಟ್ರಾದ ರಾಚಯ್ಯನವರೇ ಹೀಗೆ ಹೇಳಿದರಲ್ಲ ಎಂದು ಅವರನ್ನು ಕೇಳಿದರೆ I have called for explanation. What is the explanation he has tendered and what action you have taken.

ಶ್ರೀ ಬಿ. ರಾಚಯ್ಯ.—ಅದೆಲ್ಲ ಹಿಂದಿನದ್ದು, ಮರೆತುಹೋಗಿಬಿಟ್ಟಿದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಆದರೆ ನಾನು ಮರೆತುಹೋಗಿಲ್ಲವಲ್ಲ. ಸಿ. ಒ. ಡಿ. ಎನ್‌ಕ್ವಯರಿಯಲ್ಲಿ ಏನಾಯಿತು ಎಂದರೆ ಯಾರೋ ಆಫೀಸರ್ ೫ ಸಾವಿರ ಲಂಚ ತಿಂದ ಎಂದು ಬೇರೆ ಆಫೀಸರನ್ನು ನೇಮಕ ಮಾಡಿದರು. ನನಗೆ ಅಧಿಕೃತವಾಗಿ ತಿಳಿದುಬಂದ ಪ್ರಕಾರ ಇನ್ನೂ ತನಿಖೆ ನಡೆಯುತ್ತಲೇ ಇದೆ. ಇದು ಯಾವತ್ತು ಮುಗಿಯುತ್ತದೋ ಗೊತ್ತಿಲ್ಲ. At one stage I have very authentically learnt that C. O. D. came to a definite conclusion it cannot be suicide. It is a muder and further it is not being investigated. I want to kohw what is the result of the investigation ? ಈ ಮೂರು ಕೇಸುಗಳನ್ನೂ ಏಕೆ ಪ್ರಸ್ತಾಪ ಮಾಡುತ್ತಿದ್ದೇನೆ ಎಂದರೆ ನಿಮ್ಮ ಪೋಲೀಸ್ ಇಲಾಖೆ ಕಥೆ ಏನಾಗಿದೆ ಎಂದರೆ ಇದನ್ನು ನೋಡಿದರೆ ಅರ್ಥವಾಗುತ್ತದೆ. ನೀವು ಸರಿಯಾದ ರೀತಿಯಲ್ಲಿ ಪರೀಕ್ಷೆ ಮಾಡಿದರೆ ನಿಮ್ಮ ಇಲಾಖೆ ಯಾವ ರೀತಿ ನರಳುತ್ತಿದೆ ಎನ್ನುವ ವಿಷಯ ನಿಮ್ಮ ಗಮನಕ್ಕೆ ಬರುವುದಕ್ಕೆ ಸಾಧ್ಯವಿದೆ. ಇವತ್ತು ಸಿ. ಒ. ಡಿ. ಇನ್‌ವೆಸ್ಟಿಗೇಷನ್ ಏಜೆನ್ಸಿಯನ್ನು ನಾವು ತುಂಬಾ ಜೋಕ್ಕವಾಗಿ ಜೋಪಾನ ಮಾಡಿ ಬೆಳೆಸಬೇಕಾದ ಅವಶ್ಯಕತೆ ಇದೆ. ನಮ್ಮ ರಾಜ್ಯದಲ್ಲಿರುವ ಎಲ್ಲರೂ ಸಿ. ಒ. ಡಿ. ಎಫಿಷಿಯಂಟಾಗಿ ಕೆಲಸ ಮಾಡಿದರೂ ಅದು ನಿಷ್ಪ್ರಯೋಜಕ ಎಂದು ಹೇಳುವುದು ಎಂದಲ್ಲ ಅಥವಾ ಇಡೀ ರಾಷ್ಟ್ರದಲ್ಲೇ ಸಿ. ಬಿ. ಐ. ಒಂದೇ ಪ್ರಾಮಾಣಿಕತೆಗೆ, ನಿಷ್ಪಕ್ಷಪಾತಕ್ಕೆ ಹೆಸರಾಗಿರಬೇಕು, ಇಂಥಾ ಏಜೆನ್ಸಿ ನಮ್ಮಲ್ಲಿ ಯಾವುದೂ ಇಲ್ಲ ಎಂದು ಹೇಳುವುದೂ ಅಲ್ಲ. ನಿಜವಾಗೂ ಸಿ. ಒ. ಡಿ. ಎಫಿಷಿಯೆಂಟ್ ಆಗಿರಲು ಏನು ಮಾಡಬೇಕೋ ಅದನ್ನು ನೀವು ಮಾಡುತ್ತಿಲ್ಲ, ನಾನು ಹಿಂದೆ ಹೇಳಿದಂತೆ ನೀವು ಸಿ. ಒ. ಡಿ. ಗೆ ಎಂಥಾ ಆಫೀಸರ್ಸ್ ಹಾಕುತ್ತೀರಿ ಎಂದರೆ ಯಾರಿಗೆ ಪೊಲಿಟಿಕಲ್ ಇನ್‌ಫ್ಲೂಯೆನ್ಸ್ ಇರುವುದಿಲ್ಲವೋ ಅಥವಾ ಯಾರು ಇನೆಫಿಶಿಯಂಟಾಗಿರುತ್ತಾರೋ ಅಂಥವರನ್ನು ಪನಿಷ್‌ಮೆಂಟ್ ಎಂದು ತಂದ ಸಿ. ಒ. ಡಿ. ಯಲ್ಲಿ ಹಾಕುತ್ತೀರಿ. ಸಿ. ಒ. ಡಿ. ಏಜೆನ್ಸಿಗೆ ಕಛೇರಿನೇ ಇಲ್ಲ. ಆ ಕಟ್ಟಡ ಅಗಲೋ ಈಗಲೋ ಬೀಳುವ ಸ್ಥಿತಿಯಲ್ಲಿದೆ, ಆಫೀಸರ್ಸ್ ಕುಳಿತುಕೊಳ್ಳುವುದಕ್ಕೆ ಸರಿಯಾದ ಕೊಟಡಿಗಳಿಲ್ಲದೆ ಯಾವುದೋ ಒಂದು ಶೆಡ್‌ನಲ್ಲಿ ಕುಳಿತುಕೊಳ್ಳುತ್ತಿದ್ದಾರೆ. ಅವರ ಪರಿಸ್ಥಿತಿಯನ್ನು ನೋಡಿದರೆ ಕನಿಕರವಾಗುತ್ತದೆ. ಅವರೊಂದು ಎಫಿಶಿಯಂಟ್ ಅಂದ ಇಂಪಾರ್ಶಿಯಲ್ ಫೋರ್ಸ್ ಆಗಿರಲು ಏನೇನು ಮಾಡಬೇಕೋ ಅದನ್ನು ವ್ಯವಸ್ಥೆ ಮಾಡಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. ನೀವು ಈ ದಿಕ್ಕಿನತ್ತ ಹೊರಟರೆ ಬೆಂಬಲ ಕೊಡಲು ನಾವಿದ್ದೇವೆ. ನಮ್ಮ ರಾಜ್ಯದಲ್ಲೂ ಕೂಡ " ಎಬನ್ನುದ " ಇನ್‌ವೆಸ್ಟಿಗೇಷನ್ ಏಜೆನ್ಸಿ ಇದೆ ಎಂದು ನಮಗೂ ಹೆಮ್ಮೆ ಇರುತ್ತದೆ. ಏಕೆ ಈ ಪೋಲೀಸ್ ಇಲಾಖೆ ಹಾಳಾಗುತ್ತಿದೆ ಎಂದರೆ ಅದರ ಬಗ್ಗೆ ಯಾವ್ಯಾವ ರೀತಿ ಕಾಳಜಿ ವಹಿಸಬೇಕಾಗಿತ್ತೋ ಅದರಂತೆ ನೀವು ವಹಿಸುತ್ತಿಲ್ಲ. ಚೆನ್ನಾಗಿ ಕೆಲಸ ಮಾಡುವ ಆಫೀಸರ್‌ಗಳನ್ನು ತಂದು ಅಲ್ಲಿ ಇರಿಸದೆ ನಾಲಾಯಕ್ ಆದವರನ್ನು ಯಾರ ಮೇಲೆ ಸಿವಿಯರ್ ಕಂಪ್ಲೆಂಟ್ಸ್ ಇದೆಯೋ, ಯಾರ ಟ್ರಾನ್ಸಫರನ್ನು ಕೇಳುವವರು ಯಾರೂ ಇಲ್ಲವೋ ಅಂಥವರನ್ನು ತಂದು ಅಲ್ಲಿಟ್ಟಿದ್ದೀರಿ. ಇದರಲ್ಲಿ ಅವರಿಗೆ ಯಾವ ಬೆಲೆಯೂ ಇಲ್ಲ. ಯಾವನೋ ಒಬ್ಬ ಹೆಡ್‌ಕಾನ್‌ಸ್ಟೇಬಲ್‌ಗೆ ಮಂತ್ರಿಗಳ ಪರಿಚಯ, ಸಂಬಂಧವಿದ್ದರೆ ಅವನೇ ಡಿ. ಐ. ಜಿ ರೀತಿ ಆಡುತ್ತಾನೆ ಅವನನ್ನು ಮಾತನಾಡಿಸುವುದಕ್ಕೆ ಯಾವ ಸಬ್‌ಇನ್ಸ್‌ಪೆಕ್ಟರ್ ಇಲ್ಲವೇ ಇನ್ಸ್‌ಪೆಕ್ಟರ್ ಡಿ. ಐ. ಜಿ. ಪಿ. ಯವರಿಗೂ ಕೂಡ ಧೈರ್ಯವಿಲ್ಲ, ಏಕೆಂದರೆ ಅವನು ನೇರವಾಗಿ ಮಂತ್ರಿಗಳ ಹತ್ತಿರ ಹೋಗುತ್ತಾನೆ ಎಂಬ ಭಯವಿರುತ್ತದೆ, ಇಂತಹ ಪರಿಸ್ಥಿತಿ ಈ ಇಲಾಖೆಯಲ್ಲಿ ಇದೆ. ಇದಕ್ಕೊಂದು ರೀತಿಯ ಸಂಬಂಧವಿರಬೇಕು. ಯಾವ ರೀತಿ ಮನುಷ್ಯನಿಗೆ ಮೇಲಿನಿಂದ ಕೆಳಕ್ಕೆ ದೇಹದ ಎಲ್ಲಾ ಭಾಗಗಳೂ ಒಂದೇ ಸಮನೇ ಕೆಲಸ ಮಾಡು [illegible] ಅದೇ ರೀತಿಯಾಗಿ ಈ ಇಲಾಖೆಯಲ್ಲೂ ಕೂಡ

ಮೇಲಿನಿಂದ ಕೆಳಕ್ಕೆ ಒಂದೇ ರೀತಿ ಯಾದ ಚಾಲನೆಯನ್ನು ಕೊಟ್ಟಿಲ್ಲ. ತಾವು ನಾನಾ ರೀತಿಯ ಗೊಂದಲದಲ್ಲಿ ಸಿಕ್ಕಿದ್ದೀರಿ. ರಾಜಕಾರಣಕ್ಕೆ ಅದರಲ್ಲೂ ಜಾತೀಯ ಶಕ್ತಿಗಳಿಗೆ ಅಲ್ಲಿ ಹುಚ್ಚುಚ್ಚಾಗಿ ಅವಕಾಶ ಮಾಡಿಕೊಟ್ಟು ಆ ಇಲಾಖೆಯಲ್ಲಿ ಇವುಗಳು ಇರುವಂತೆ ಮಾಡಿದ್ದೀರಿ. ಈ ಸ್ಥಿತಿಯನ್ನು ನೀವು ಎಲ್ಲಿಯವರೆಗೆ ಬದಲಾಯಿಸುವುದಿಲ್ಲವೋ ಅಲ್ಲಿಯವರೆಗೆ ಈ ಇಲಾಖೆಗೆ ಯಾವುದೇ ರೀತಿಯ ಚಾಲನೆ ಬರುವುದಿಲ್ಲ. ಹೋ ಕೊನೆಯ ವಾರದ ಸಂಯುಕ್ತ ಕರ್ನಾಟಕದಲ್ಲಿ ಒಂದು ಆರ್ಡರ್ ಬರೆದಿದ್ದಾರೆ, ಅದರ ವಿವರಗಳು ನನ್ನ ಹತ್ತಿರ ಇಲ್ಲ ಜಿಸ್ಟ್ ಅನ್ನು ಮಾತ್ರ ಹೇಳುತ್ತೇನೆ. ಮಲಕಣ್ಣ ಎಂಬುವವರು ಡಿ. ಐ. ಜಿ. ಆಫೀಸಿನಲ್ಲಿದ್ದರು ಅಂದರೆ ಸಿ. ಒ. ಡಿ. ಯಲ್ಲಿದ್ದರು, ಇವರನ್ನು ಗಂಗಾವತಿಗೆ ಟ್ರಾನ್ಸ್‌ಫರ್ ಮಾಡಿದರು, ಅಲ್ಲಿದ್ದ ಮಾಲೀ ಪಾಟೀಲ್ ಎಂಬುವವರನ್ನು ಲಿಂಗಸೂರಿಗೆ ಟ್ರಾನ್ಸ್‌ಫರ್ ಮಾಡಿದರು, ಅಲ್ಲಿದ್ದ ಲಿಂಗೇಗೌಡ ಎಂಬುವವರನ್ನು ಗಂಗಾವತಿಗೆ ಟ್ರಾನ್ಸ್‌ಫರ್ ಮಾಡಿದರು ಗಂಗಾವತಿಯಲ್ಲಿದ್ದವನಿಗೆ ಒಂದು ತಿಂಗಳಲ್ಲಿ ಒಟ್ಟು ೪ ಸಲ ಟ್ರಾನ್ಸ್‌ಫರ್ ಮಾಡಿದರು. ಒಂದು ಸಾರಿ ಅಲ್ಲಿದ್ದವನನ್ನು ಇತ್ತ ಕಡೆ ಹಾಕುವುದು ಇಲ್ಲಿದ್ದವನನ್ನು ಅತ್ತಕಡೆ ಹಾಕುವುದು ಈ ರೀತಿ ನಡೆಯಿತು ಕೊನೆಗೆ ಇದು ಬಗೆಹರಿಯದೆ ಅದರಲ್ಲಿ ಒಬ್ಬನನ್ನು ತೆಗೆದು ಕೋಲಾರಕ್ಕೆ ಹಾಕಿದರು. ಕೋಲಾರದಲ್ಲಿದ್ದಂತಹವನಿಗೆ ರಾಜಕೀಯ ವಾದಂತಹ ಇನ್‌ಫ್ಲೂಯೆನ್ಸ್ ಇತ್ತು, ಅವನು ಆ ಜಾಗ ವನ್ನು ಬಿಟ್ಟು ಕೊಡಲಿಲ್ಲ. ಆಮೇಲೆ ಅವನನ್ನು ತೆಗೆದುಕೊಂಡು ಹೋಗಿ ಚಿಕ್ಕಬಳ್ಳಾಪುರಕ್ಕೆ ಹಾಕಿದರು, ಅಲ್ಲಿದಂತಹ ರಾಮಯ್ಯ ಎಂಬ ಪರದೇಸಿ I understand he is a reputed man with good reputation. He belongs to Scheduled Caste. ಒಂದು ವರ್ಷದೊಳಗೆ ಅವನನ್ನು ಅಲ್ಲಿಂದ ನಿಕಾಲಿ ಮಾಡಿದರು, ಏಕೆಂದರೆ ಅವನಿಗೆ ಇನ್‌ಫ್ಲೂಯೆನ್ಸ್ ಇಲ್ಲ. ಈ ಇಲಾಖೆಯಲ್ಲಿ ಈ ರೀತಿ ವರ್ಗಾವಣೆ ಮಾಡಿದರೆ, ಅದು ಒಂದೇ ಸಾಕು ಈ ಇಲಾಖೆಯನ್ನು ಡೀಮಾರಲೈಸ್ ಮಾಡುವುದಕ್ಕೆ. ಒಂದು ತಿಂಗಳಿಗೆ ಒಬ್ಬೊಬ್ಬರಿಗೆ ೪-೪ ಟ್ರಾನ್ಸ್‌ಫರ್ ಮಾಡುವುದು ಮತ್ತೆ ಅದನ್ನು ಕ್ಯಾನ್ಸಲೇಷನ್ ಮಾಡುವುದು ಈ ರೀತಿಯಾಗಿ ಕೊನೆಗೆ ಒಂದು ವರ್ಷದಿಂದ ಯಾರು ಅಲ್ಲಿ ಕೆಲಸ ಮಾಡುತ್ತಿದ್ದರು ಅವರು ಮತ್ತೊಬ್ಬರಿಗೆ ಜಾಗ ಬಿಟ್ಟು ಕೊಡುವುದಕ್ಕೋಸ್ಕರ ಅವನನ್ನು ಒದ್ದು ಹಾಕುತ್ತೀರಿ ಎಂದು ಹೇಳುವುದಾದರೆ ಈ ಇಲಾಖೆಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುವವರಿಗೆ ಸ್ಥೈರ್ಯ ಹೇಗೆ ಇರುತ್ತದೆ ? ಆಡಳಿತ ನಡೆಸುವವರ ಬಗ್ಗೆ ಇಲಾಖೆಯಲ್ಲಿರತಕ್ಕಂತಹ ಪ್ರಾಮಾಣಿಕ ಜನಗಳಿಗೆ ಏನು ಗೌರವ ಬರುತ್ತದೆ ? ಪ್ರಾಮಾಣಿಕರು ಅಪ್ರಾಮಾಣಿಕರೂ ಇದ್ದಾರೆ. ಆದರೆ ನೀವು ಸರಿಯಾದ ಚಾಲನೆಯಿಂದ ಪ್ರಾಮಾಣಿಕರ ಕೈ ಮೇಲಾಗಿ ಅಪ್ರಾಮಾಣಿಕರ ಕೈ ಕೆಳಗೆ ಆಗುವಂತೆ ಮಾಡ ಬೇಕಾದುದು ನಿಮ್ಮ ಧರ್ಮ ಇದೆ. ಅದು ನಿಮ್ಮ ಧರ್ಮ. ಯಾರ್ಯಾರು ಹೌದು ಎಂಬುದನ್ನು ತಿಳಿದುಕೊಂಡು ಹೌದು ಅವರವರನ್ನು ನಿಜವಾಗಿ ಅವರಿಗೆ ಸಲ್ಲುವ, ಅವರು ಸರಿಯಾಗಿ ದುಡಿಯುವ ರೀತಿಯಲ್ಲಿ ಇಡಬೇಕು. ಅಲ್ಲದವರನ್ನು ಸಾಧ್ಯವಾದರೆ ಕೆಲವೊಂದು ಮುಖ್ಯ ಸ್ಥಳದಲ್ಲಿ ಯಾವರೂ ಅವರು ಇಲ್ಲದೇ ಇರತಕ್ಕಂತಹ ರೀತಿಯಲ್ಲಿ ಕಾಳಜಿಯನ್ನು ವಹಿಸದೇ ಹೋದರೆ ಈ ಇಲಾಖೆಗೆ ಎಲ್ಲಿಂದ ಚಾಲನೆ ಬರುತ್ತದೆ ? ಹೇಗೆ ಚಾಲನೆ ಬರುವುದಕ್ಕೆ ಸಾಧ್ಯ ? ಈ ಇಲಾಖೆಯನ್ನು ಸುಧಾರಿಸುವುದರ ಬಗ್ಗೆ ನಾನು ಈ ಹಿಂದೆಯೇ ಹಲವಾರು ಬಾರಿ ಪ್ರಸ್ತಾಪ ಮಾಡಿದ್ದೇನೆ. ಈ ಇಲಾಖೆಯ ಬಗ್ಗೆ ಇಲ್ಲಿ ಚರ್ಚೆ ಮಾಡುವುದರ ಬದಲು ಒಂದೇ ಸಾರಿ ನ್ಯಾಷನಲ್ ಪೋಲೀಸ್ ಕಮೀಷನ್ ರಿಪೋರ್ಟ್ ಅನ್ನು ಚರ್ಚೆ ಮಾಡೋಣ ಎಂದು ಹೇಳಿದ್ದೇನೆ. ಈ ಹಿಂದೆ ನಾನು ಯಾವುದೋ ಒಂದು ಕಾಲದಲ್ಲಿ ಓದಿ ನೋಟ್ಸ್ ಮಾಡಿ ಇಟ್ಟುಕೊಂಡಿದ್ದೆ ಈಗ ಅದರ ಕಾಪಿ ಇಲ್ಲ, ನಾನು ಪೋಲೀಸ್ ಅಧಿಕಾರಿಗಳ ಹತ್ತಿರ ಹೋಗಿ ಕೇಳಿದೆ, ಏನಾದರೂ ಮಾಡಿ ಒಂದು ಕಾಪಿ ಕೊಡಿ ಎಂದು ಆದರೆ ಇಲ್ಲಿಯವರೆಗೂ ಅದರ ಪ್ರತಿ ಸಿಗಲಿಲ್ಲ, ಪೋಲೀಸ್ ಕೇಸ್. ಲಾಕಪ್ ಡೆತ್ಸ್ ಬಗ್ಗೆ ಧರ್ಮವೀರ ರೆಕಮೆಂಡೇಷನ್‌ನಲ್ಲಿ ಇದೆ, ಏನು ಇದೆಯೆಂದರೆ ಯಾರನ್ನಾದರೂ ಲಾಕಪ್‌ಗೆ ತೆಗೆದುಕೊಂಡು ಹೋಗಬೇಕಾದರೆ ಡಾಕ್ಟರ್‌ರವರಿಂದ ಎಕ್ಸಾಮಿನ್ ಮಾಡಿಸಿ You should take them into custody. ಅಷ್ಟು ಮಾಡಿದ್ದರೆ ಈಗಿನ ಹಲವಾರು ಪ್ರಕರಣಗಳು ಆಗುವುದಕ್ಕೆ ಸಾಧ್ಯವಿರಲಿಲ್ಲ. ಅವನಿಗೆ ಹಾರ್ಟ್ ಅಟ್ಯಾಕ್ ಇತ್ತು, ಖಾಯಿಲೆ ಇತ್ತು ಎಂದು ಹೇಳತಕ್ಕಂತಹ ಪರಿಸ್ಥಿತಿ , ಬರುತ್ತಿರಲಿಲ್ಲ. ಕಾನ್‌ಸ್ಟೇಬಲ್ಸ್ ಪರಿಸ್ಥಿತಿಯ ಬಗ್ಗೆ ಅವರು ಬಹಳ ಚೆನ್ನಾಗಿ ಕೆಲವು ವಿಚಾರಗಳನು ಹೇಳಿದ್ದಾರೆ. ಅಧಿಕಾರಿಗಳು ಯಾವ ರೀತಿ ಕಾನ್‌ಸ್ಟೇಬಲ್ಸ್‌ಗಳನ್ನು ನಡೆಸಿಕೊಳ್ಳುತ್ತಾರೆ, ಯಾವ ಸಂಸ್ಕೃತಿಯಲ್ಲಿ ನಡೆಸಿಕೊಳ್ಳುತ್ತಾರೊ ಅದೇ ಸಂಸ್ಕೃತಿಯಲ್ಲಿ ಈ ಪೇದೆಗಳು ಜನರನ್ನು ನಡೆಸಿ ಕೊಳ್ಳುತ್ತಾರೆ ಎಂಬ ಮಾತನ್ನು ಧರ್ಮ ವೀರರವರು ಹೇಳಿದ್ದಾರೆ. ಬಹಳ ಚೆಂದವಾಗಿ, ಬ್ಯೂಟಿ ಫುಲ್ ಆಗಿ ಹೇಳಿದ್ದಾರೆ. ನಾನು ಕನ್ನಡದಲ್ಲಿ ತಾತ್ಪರ್ಯವನ್ನು ಹೇಳಿದೆ ಅಷ್ಟೇ, ಅಷ್ಟು ಯೋಗ್ಯ ವಾದ ರೆಕಮೆಂಡೇಷನ್ಸ್‌ಗಳನ್ನು ನಾವು ಹೇಳುವುದಕ್ಕೆ ಹೋದರೆ ಕೇಂದ್ರ ಸರಕಾರ, ಬಿಹಾರ, ಉತ್ತರ ಪ್ರದೇಶದಲ್ಲಿ ಇದನ್ನು ಜಾರಿ ಮಾಡಲಿಲ್ಲವೆಂದು ತಾವು ಉತ್ತರ ಕೊಡಬಹುದು. ಅದಕ್ಕೆ ನನ್ನ

ತಾತ್ಪರ್ಯ ಇಲ್ಲ. ಇವತ್ತು ಈ ಇಲಾಖೆ ಸುಧಾರಣೆಯಾಗುವುದಿಲ್ಲ. ಹೋದ ವರ್ಷ ಕೆಲವು ಕಾನಸ್ಟೇಬಲ್‌ಗಳು ನನಗೆ ಬರೆದು ಕಳಿಸಿದ್ದಾರೆ, ಟೈಪ್ ಮಾಡಿಸುವುದಕ್ಕೆ ಅವರ ಹತ್ತಿರ ಹಣ ಇತ್ತೊ ಇಲ್ಲವೋ ಗೊತ್ತಿಲ್ಲ, ಅವರೇ ಕೈಯ್ಯಲ್ಲಿ ಬರೆದರೋ ಇಲ್ಲವೇ ಅವರ ಹೆಣ್ಣುಮಕ್ಕಳ ಕೈಯಲ್ಲಿ ಬರೆಸಿದರೋ ಏನೋ ಗೊತ್ತಿಲ್ಲ, ಒಟ್ಟಿನಲ್ಲಿ ಗುಂಡಗೆ ಬರೆದು ಕಳಿಸಿದ್ದಾರೆ. ನಾನು ಇದನ್ನ ಮಾನ್ಯ ಮುಖ್ಯಮಂತ್ರಿಗಳಿಗೆ ಕಳಿಸುತ್ತೇನೆ, ಅವರು ಉಪಯೋಗಿಸುವ ಟೋಪಿಯಿಂದ ಹಿಡಿದು ಬೂಟಿನವರೆಗೆ ತೊಂದರೆ ಇದೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಟೋಪಿಯ ಬಗ್ಗೆ ಹೇಳುವುದಾದರೆ ಅರ್ಥಂಬರ್ಧ ಕಲರ್ ಇರುವುದನ್ನು ಕೊಡುತ್ತಾರೆ. ಅದು ನೆಟ್ಟಗೆ ಮೂರು ತಿಂಗಳು ಬರುವುದಿಲ್ಲ. ಹಿಂದೆ ಮಹಾರಾಜರ ಕಾಲದಲ್ಲಿ ಒಳ್ಳೆ ಜಬರ್‌ದಸ್ತಾದ ಪೇಟ ಕೊಡುತ್ತಿದ್ದರು ಅದು ತಲೆ ಭಾರವಾಗಿತ್ತು ನಿಜ. ಆದರೆ ಈಗಿನ ಟೋಪಿಗೆ ಇಸ್ತ್ರಿ ಕೂಡಾ ನಿಲ್ಲುವುದಿಲ್ಲ. ಅದನ್ನು ತೊಳೆಯುವುದಕ್ಕೂ ಬರುವುದಿಲ್ಲ. ಅದನ್ನು ತೊಳೆದರೆ ಇರುವ ಬಣ್ಣ ಇರುವುದೇ ಇಲ್ಲ. ತೊಳೆದರೆ ಯಾವುದೋ ಬಣ್ಣಕ್ಕೆ ತಿರುಗುತ್ತದೆ. ಹಾಗೆ ನಾವು ಆ ಟೋಪಿಯನ್ನು ಹಾಕಿಕೊಂಡರೆ ಯಾರು ಮರ್ಯಾದೆಯನ್ನೇ ಕೊಡುವುದಿಲ್ಲ ಎಂದು ಮೊದಲ ಕಂಪ್ಲೆಂಟ್. ಆದ್ದರಿಂದ ಅವರ ಟೋಪಿಯನ್ನು ಬದಲಾವಣೆ ಮಾಡಬೇಕು. ಟೋಪಿಯಿಂದ ಬೂಟ್ಸ್‌ನವರೆಗೆ ಅವರದು ಒಂದು ಸಣ್ಣ ಕಂಪ್ಲೆಂಟ್ ಇದೆ. ಅದಕ್ಕೆ ದಯವಿಟ್ಟು ಆದ್ಯತೆಯನ್ನು ಕೊಡಬೇಕು. ಕೈಯಲ್ಲಿ ಬರೆದಿರುವ ಮನವಿ, ಇದನ್ನು ತಮಗೆ ಕಳಿಸಿಕೊಡುತ್ತೇನೆ. ಇದನ್ನು ಓದಿದರೆ ನನ್ನ ಮನಸ್ಸಿಗೆ ಪಶ್ಚಾತ್ತಾಪವಾಗುತ್ತದೆ. ಅವರ ಬೂಟು ದೊಡ್ಡದು, ಆ ಬೂಟಿಗೆ ಹೊಡೆದಿರುವುದು ಕುದರೆ ಲಾಳ. ಮನುಷ್ಯರ ಬೂಟಿಗೆ ಲಾಳ ಬರುತ್ತಿತ್ತು ಹಿಂದೆ. ಆದರೆ ಈಗ ಆ ಲಾಳ ಅಲ್ಲ. ಕುದುರೆಗೆ ಹೊಡೆಯುವ ಲಾಳವನ್ನು ಇವರ ಬೂಟಿಗೆ ಹೊಡೆದಿದ್ದಾರಂತೆ. ಈ ರೀತಿ ಅವರಿಗೆ ಹೊಡೆದು ಕೊಟ್ಟರೆ, ಇಲ್ಲಿ ಬರೆದಿದ್ದಾರೆ ಎಂದು ಸಂದರ್ಭ ಸಿಕ್ಕಿ ಬಂದರೆ ಒದೆಯಬೇಕಾಗುತ್ತದೆ. ನಾವು ಇದರಲ್ಲಿ ಒದೆಯುತ್ತೇವೆ. ಆಗ ಒದಿಸಿಕೊಂಡವರಿಗೆ ಬಹಳ ಅಪಾಯವಾಗುತ್ತದೆ. ನಾವು ನಮ್ಮ ಕಾಲಲ್ಲಿ ಒದೆಯುತ್ತೇವೆ ಎಂದು ತಿಳಿದುಕೊಂಡು ಒದೆಯುತ್ತೇವೆ. ಆ ಬೂಟ್‌ನಿಂದ ಒದ್ದರೆ ಅನೇಕಸಾರಿ ನಾವು ತಪ್ಪಿಗೆ ಸಿಕ್ಕಿಹಾಕಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಆದ್ದರಿಂದ ಇವರ ಟೋಪಿಯಿಂದ ಬೂಟಿನವರೆಗೆ ಸ್ವಲ್ಪ ದಯವಿಟ್ಟು ಈ ವಿಚಾರದ ಬಗ್ಗೆ ಸಹಾನುಭೂತಿಯಿಂದ ತಾವು ಪರಿಶೀಲನೆ ಮಾಡಬೇಕು. ಇದರಲ್ಲಿ ಇನ್ನೂ ಕೆಲವು ವಿಚಾರಗಳನ್ನು ಹೇಳಿದ್ದಾರೆ. ಅವರಿಗೆ ವಾರದ ರಜೆ ನ್ಯಾಯವಾಗಿ ತಿಂಗಳಿಗೆ ನಾಲ್ಕು ದಿವಸ ಕೊಡಬೇಕು. ಆ ರೀತಿಯಲ್ಲಿ ಅವರಿಗೆ ರಜೆಯನ್ನು ಕೊಡಬೇಕು. ಆದರೆ ಅವರು ಏನು ಹೇಳುತ್ತಾರೆ ಎಂದರೆ ಅಧಿಕಾರಿಗಳ ಪ್ರಾಣತ್ಯಾಗ ಆದರೂ ಈ ರಜೆಯನ್ನು ಉಪಯೋಗಿಸಿ ಕೊಳ್ಳುವುದಕ್ಕೆ ಕೊಡುವುದಿಲ್ಲ. ಅದರ ಬದಲಿಗೆ ಏನು ಮಾಡುತ್ತಾರೆಂದರೆ ಒಂದೊಂದು ಆಫೀಸ್‌ನವರಿಗೆ ಮನಸ್ಸು ಬಂದ ಹಾಗೆ ಒಬ್ಬೊಬ್ಬರು ಎರಡು ದಿವಸದ ಲೆಕ್ಕದ ಮೇಲೆ ಏಳೇಳು ರೂಪಾಯಿಯನ್ನು ಕೊಡುತ್ತಾರೆ. ಇನ್ನು ಕೆಲವರು ನಾಲ್ಕು ದಿವಸದ ಮೇಲೆ ಇಪ್ಪತ್ತೆಂಟು ರೂಪಾಯಿ ಕೊಟ್ಟುಬಿಟ್ಟು ಅವರಿಗೆ ರಜೆ ಇಲ್ಲದ ಹಾಗೆ ತಿಂಗಳಲ್ಲಿ ಮೂವತ್ತು ದಿವಸವೂ ಅವರ ಹತ್ತಿರ ದುಡಿಮೆಯನ್ನು ತೆಗೆದುಕೊಳ್ಳುತ್ತಾರೆ, ಇದು ಯಾವ ನ್ಯಾಯ ? ಬೇರೆ ಇಲಾಖೆಗಳಿಗೆ ಇದ್ದ ಹಾಗೆ ನಮಗೂ ರಜೆಯನ್ನು ಕೊಡಬೇಕೆಂದು ಕೇಳಿದ್ದಾರೆ. ಇಲ್ಲದಿದ್ದರೆ ಅವರಿಗೆ ಬಹಳ ಸಮೃದ್ಧವಾದ ಅಲೋಯನ್ಸ್‌ನ್ನು ಅವರೂ ಕೊಡಬೇಕು. ಬಂದೋಬಸ್ತು ಡ್ಯೂಟಿಗೆಂದು ಹೋದರೆ ಅವರು ಸುಮಾರು ಮೂವತ್ತಾರು ತಾಸು ಕೆಲಸ ಮಾಡುತ್ತಾರೆ. ಬೆಳಿಗ್ಗೆ ನಾಲ್ಕು ಗಂಟೆಗೆ ಹೋದರೆ ಮಾರನೆ ರಾತ್ರಿ ಹತ್ತು ಗಂಟೆಯತನಕ ಬಂದೋಬಸ್ತು ಡ್ಯೂಟಿಗೆ ಹೋಗುತ್ತಾರೆ. ಬಂದೋಬಸ್ತು ಡ್ಯೂಟಿಗೆ ಹೊರಟರೆ ನಾಳೆರಾತ್ರಿ ಹತ್ತು ಗಂಟೆಯವರೆಗೆ ಇಷ್ಟು ಕಾಲಾವಧಿಯಲ್ಲಿ ಊಟಕ್ಕೆಂದು ಆರು ರೂಪಾಯಿಯನ್ನು ಅವರಿಗೆ ಕೊಡುತ್ತಾರೆ. ಅವರು ಎಲ್ಲಿಂದ ಊಟ ಮಾಡಬೇಕು? ಈ ರೀತಿಯ ತೊಂದರೆಗಳನ್ನು ಅವರು ಹೇಳಿದ್ದಾರೆ. ಅವರದು ಇನ್ನು ಕೆಲವು ಸಣ್ಣ ಪುಟ್ಟ ತೊಂದರೆಗಳೆಲ್ಲಾ ಇದ್ದಾವೆ. ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತೇವೆ. ಅವರ ಬಗ್ಗೆ ಆದ್ಯತೆಯ ಮೇಲೆ ತಾವು ಗಮನವನ್ನು ಹರಿಸಬೇಕು. ಪಾಪ ಅವರಿಗೆ ಅದನ್ನು ಟೈಪ್ ಮಾಡಿಸುವುದಕ್ಕೂ ಶಕ್ತಿ ಇಲ್ಲ, ಕೈಯಲ್ಲಿ ಬರೆದುಕೊಟ್ಟಿದ್ದಾರೆ. ಆದದುರಿಂದ ಅದನ್ನು ದಯವಿಟ್ಟು ತಾತ್ಸಾರ ಮಾಡಬಾರದು. ಅವರ ಬಗ್ಗೆ ಗಮನ ಕೊಡಬೇಕೆಂದು ಹೇಳುತ್ತೇನೆ. ಈ ಸಮಸ್ತ ಪೇದೆಗಳು ಏನು ಇದ್ದಾರಲ್ಲಾ, ತಪ್ಪು ಮಾಡುವವರು ಸರಿ ಮಾಡುವವರು ಅವರ ಪರವಾಗಿ ಅವರ ಬಗ್ಗೆ ಕರಜೋಡಿಸಿ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಶ್ರೀ ...ಮಾಸ್ ರವರನ್ನು ಅವರ ಸಂಘಕ್ಕೆ ಅಧ್ಯಕ್ಷರನ್ನಾಗಿ ಮಾಡಬೇಕು.

ಶ್ರೀ ಕೆ. ಎಚ್. ಶ್ರೀನಿವಾಸ್.—ಪೋಲೀಸರು ಎಂದರೆ ದೂರಕ್ಕೆ ಇರುವುದು ನಮ್ಮ ಪದ್ಧತಿ. ವರ ಕಷ್ಟವನ್ನು ಹೇಳಲೇಬೇಕು. ಪೋಲೀಸರು ಆದರೇನು ? ಅವರು ಕಳ್ಳರು ಆದರೇನು ? ಅುಳ್ಳರಾದರೇನು ? ಅಲ್ಲಿ ಹೊಡೆದು ತಿಂದವರು ಅಷ್ಟು ಸಂಭಾವಿತರೇನು ಅಲ್ಲ, ಅವರು ಸಂಭಾವಿ ಸರು ಅಲ್ಲ ಎಂದರೆ ಅವರನ್ನು ಚಿತ್ರಹಿಂಸೆ ಮಾಡಿ ಕೊಲ್ಲಬೇಕು ಎಂದು ಎಲ್ಲಿ ಹೇಳಿದೆ ? ಅವರಿಗೂ ತಹಾ ಸಹಾನುಭೂತಿಯನ್ನು ತೋರಿಸಲೇ ಬೇಕಾಗುತ್ತದೆ. ಇಷ್ಟು ವಿಚಾರಗಳನ್ನು ಈ ಸಂದರ್ಭದಲ್ಲಿ ಸಣದರ ಬಗ್ಗೆ ಪ್ರಸ್ತಾಪಿಸಿ ಇನ್ನು ಆಡಳಿತ ಸುಧಾರಣ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಿ ನಾನು ಮುಗಿಸಿಬಿಡುತ್ತೇನೆ. ಹೆಚ್ಚು ಮಾತನಾಡುವುದಕ್ಕೆ ಈಗ ಸಮಯವಿಲ್ಲ. ಒಂದು ತರಹ ಈಗ ನಾವು ಯಕ್ಷಗಾನದ ಬೆಳಗಿನ ಜಾವದಲ್ಲಿ ಇದ್ದೇವೆ, ಯಕ್ಷಗಾನ ಎಂದರೆ ರಾತ್ರಿಯಿಂದ ಬೆಳಗಿನತನಕ ಆಗುತ್ತದೆ. ಬೆಳಗಿನ ಜಾವ ಬಂದಕೂಡಲೇ ಮೊದಲು ಶುರುವಾದಾಗ ಒಂದೊಂದು ವಿಷಯವನ್ನು ಹೇಳುತ್ತಿರುತ್ತಾರೆ, ಭಾಷಣ ಮಾಡುತ್ತಿರುತ್ತಾರೆ. ಬೆಳಗಿನ ಜಾವ ಬಂದಕೂಡಲೇ ಒಟ್ಟೊಟ್ಟಿಗೆ ಭಾಗವತರು ಎಲ್ಲ ಪದವನ್ನು ಒಟ್ಟೊಟ್ಟಿಗೆ ಹೇಳಿ ಒಂದೊಂದು ಸಂದರ್ಭದಲ್ಲಿ ರಾಮನಾದರೂ ಸತ್ತ, ರಾವಣನಾದರೂ ಸತ್ತ ಒಟ್ಟಿನಲ್ಲಿ ರಾಮಾಯಣವನ್ನು ಮುಗಿಸಬೇಕು. ಆ ಒಂದು ರೀತಿಯಲ್ಲಿ ಸರ್ಕಾರ ಈ ಸ್ಥಿತಿಗೆ ಹೋಗಿ ಮುಟ್ಟಿಬಿಟ್ಟಿದೆ. ಇನ್ನು ಮುಂದೆ ಏನಾಗುತ್ತದೋ ಗೊತ್ತಿಲ್ಲ. ನಾವು ಬೆಳಗಿನ ಜಾವದಲ್ಲಿ ಇದ್ದೇವೆ. ಈಗ ಆಡಳಿತ ಸುಧಾರಣೆಯ ಬಗ್ಗೆ ಏನು ಮಾತನಾಡುವುದು ? ಮುಖ್ಯ ಮಂತ್ರಿಗಳು ಬಂದಂಥ ಕಾಲದಲ್ಲಿ ದೊಡ್ಡ ದೊಡ್ಡ ಪರಾಕ್ರಮಗಳನ್ನು ಪ್ರಚಾರ ಮಾಡಿದರು, ಜನರಿಗೆ ಸ್ಪಂಧಿಸತಕ್ಕಂಥ ಆಡಳಿತ ಕೊಡುತ್ತೇವೆ ಎಂದು ಹೇಳಿದರು. ಆದರೆ ಅಂಥಾದ್ದು ಯಾವುದನ್ನೂ ಅವರು ಮಾಡುವ ಪ್ರಯತ್ನ ಮಾಡಲಿಲ್ಲ. ಭ್ರಷ್ಟಾಚಾರ ನಿರ್ಮೂಲನ ಮಾಡುತ್ತೇವೆ ಎಂದು ಹೇಳಿ ಇದರ ಬಗ್ಗೆ ಏನು ಮಾಡಿದ್ದೀರಿ ? ಭ್ರಷ್ಟಾಚಾರ ನಿರ್ಮೂಲನ ಮಾಡುವುದರ ಜೊತೆಗೆ ಲೋಕಾಯುಕ್ತ ಒಂದನ್ನೇ ಹೇಳುವುದು. ನಾನು ಹೇಳುತ್ತೇನೆ ಲೋಕಾಯುಕ್ತದ ಬಗ್ಗೆ ಏನು ನೀವು ಕನಸನ್ನು ಇಟ್ಟುಕೊಂಡಿದ್ದೀರೋ ಅದು ಮುಖ್ಯ ಅಲ್ಲ. ನಿಮ್ಮ ಅಶೋತ್ತರಗಳು ಏನು ಇತ್ತು, ಅದು ಮುಖ್ಯ ಅಲ್ಲ. ಈಗ ಏನು ಆಗಿದೆ ? It is nothing more than a glorified Vigilance Commission. ಅದನ್ನು ಬಿಟ್ಟರೆ ಇದಕ್ಕಿಂತ ಇನ್ನು ಇದರ ಇಂಪ್ಯಾಕ್ಟ್ ಬಂದಿಲ್ಲ. ನೀವು ಕೂಡಾ ಹೀಗೆ ಕೇಳಬೇಕಾಗಿತ್ತು, ಎಲ್ಲವನ್ನೂ ಸರಿ ಮಾಡಬೇಕಾಗಿತ್ತು ಎಂದು ಹೇಳಿದರೆ ನನ್ನ ಹತ್ತಿರ ಉತ್ತರ ಇಲ್ಲ. ಅದರಲ್ಲಿ ನಮಗೆ ಕಾನ್ಫಿಡೆನ್ಸ್ ಬಾರದೇ ಹೋದರೆ ನಾವು ಏನು ಮಾಡುವುದಕ್ಕಾಗುತ್ತದೆ ? ನೀವು ಸಂಬಳವನ್ನು ಕೊಟ್ಟುಬಿಟ್ಟ ಮಾತ್ರಕ್ಕೆ ಬಂಗಲೆಯನ್ನು ಕೊಟ್ಟುಬಿಟ್ಟ ಮಾತ್ರಕ್ಕೆ ಶಕ್ತಿ ಬಂದುಬಿಡುವುದಿಲ್ಲ. ಇಂತಹ ಇನ್‌ಸ್ಟಿಟ್ಯೂಷನ್‌ಗೆ ಒಂದೇ ದಿವಸಕ್ಕೆ ಆ ರೀತಿಯಾದಂಥ ಒಂದು ಸ್ಟೇಟಸ್ ಕೂಡಾ ಬರುವುದಿಲ್ಲ. ಆ ರೀತಿ ಹೆಸರು ಬರುವಂತಹ ಯಾವುದೇ ಪ್ರಯತ್ನವನ್ನು ನೀವು ಮಾಡಲಿಲ್ಲ. ಇನ್ನು ಮಾನ್ಯ ಮುಖ್ಯ ಮಂತ್ರಿಗಳ ಆಡಳಿತ ವೈಖರಿ ಏನು, ಅದು ಒಂದೇ ತಾತ್ಪರ್ಯದಲ್ಲಿ ಹೇಳಬೇಕೆಂದರೆ ''ಹೆಗೆಡೆಯವರ ಆಡಳಿತ'' ಹೆಗಡೆಯವರ ಅಂದರೆ ಅದರ ಅರ್ಥ ಏನು ಅಂದರೆ ಅಧ್ಯಕ್ಷರೇ, ಹೆಗಡೆಯವರು ಯಾರೂ ಸ್ವಂತ ಕೆಲಸವನ್ನು ಮಾಡದೇ ಕೇವಲ ಅವರ ಹೆಸರಿನ ವರ್ಚಸ್ಸಿನ ಬಲದ ಮೇಲೆ ನಡೆದುಕೊಂಡು ಹೋಗುವುದು, ಅಂತಹವರನ್ನು 'ಹೆಗಡೆಯವರು' ಎಂದು ಕರೆಯುತ್ತಾರೆ. ನೀವು ನಾರ್ತ್ ಕೆನರಾ ಕಡೆ ಬಂದರೆ ಹೆಗಡೆಯವರೆಂದು ಏಕೆ ಹೇಳುತ್ತಾರೆ ಅಂದರೆ, ಆತ ಸ್ವಂತ ಉಳುಮೆ ಮಾಡುವುದಿಲ್ಲ, ಆತ ವ್ಯವಸಾಯ ಮಾಡುವುದಿಲ್ಲ, ಅಪ್ಪನದೋ ಅಜ್ಜನದೋ ಆಸ್ತಿ ಇರುತ್ತದೆ, ಅಕಸ್ಮಾತ್ತಾಗಿ ಆತ ಅದೃಷ್ಟಶಾಲಿಯಾಗಿ ಅಲ್ಲಿ ಹುಟ್ಟಿರುತ್ತಾನೆ, ಅಂತಹವರಿಗೆ ಹೆಗಡೆಯವರು ಎಂದು ಜನ ಕರೆಯುತ್ತಾರೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ.—ಶ್ರೀನಿವಾಸ ಅಂದರೆ ಪಂಗನಾಮ ಎಂಬ ವಿಷಯ ನಿಮಗೆ ಗೊತ್ತೇ ?

ಶ್ರೀ ಕೆ. ಹೆಚ್. ಶ್ರೀನಿವಾಸ್.—ಪಂಗನಾಮದ ಬಗ್ಗೆ ದೇಶದಲ್ಲಿ ಎಷ್ಟು ಶ್ರದ್ಧೆ ಇದೆ ಎಂದು ನೀವು ಮೊದಲು ತಿಳಿದುಕೊಳ್ಳಿ. ಶ್ರೀನಿವಾಸ ಪಂಗನಾಮ ಹಾಕಿಕೊಂಡಿದ್ದಾನೆ, ಆದರೆ ಶ್ರೀನಿವಾಸ ಬೇಡಿದವರಿಗೆ ಬೇಡಿದ್ದನ್ನು ಕೊಟ್ಟಿದ್ದಾನೆ.

ಶ್ರೀ ಪಿ. ಜಿ. ಆರ್.—ಸಿಂಧ್ಯಾ.— ಶ್ರೀನಿವಾಸ ಅಂದರೆ ಪಂಗನಾಮ ಎಂದು ಪ್ರತೀತಿ ಎಲ್ಲಕಡೆ ಇದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಶ್ರೀನಿವಾಸ ತಾನು ನಾಮ ಹಾಕಿಕೊಂಡ ಜಗತ್ತಿನಲ್ಲಿ ಕೇಳಿದ್ದನ್ನು ಕೊಟ್ಟಿದ್ದಾನೆ, ಯಾರಿಗಾದರೂ ಅವನು ಪಂಗನಾಮ ಹಾಕಿದ್ದಾನೆಯೇ? ಅದು ಬೇಕಾದರೆ ಹೇಳಿ

ಒಪ್ಪಿಕೊಳ್ಳುತ್ತೇನೆ. ತಾನು ನಾವು ಹಾಕಿಕೊಂಡು ಬೇರೆಯವರಿಗೆ ಉಪಕಾರ ಮಾಡಿದ್ದೇನೆಂದು ಹೇಳಿ ಅವನ್ನು ಒಪ್ಪಿಕೊಳ್ಳುವುದಕ್ಕೆ ನಾನು ತಯಾರು. ಇವರು ಯಾವುದನ್ನೂ ಸ್ವಂತ ಮಾಡುವುದಿಲ್ಲ. ಇವೊತ್ತು ಯಾವ ರೀತಿ ಆಡಳಿತ ಜಾರಿಗೆ ಕೊಟ್ಟಿದ್ದೀರೆಂದರೆ, ನೀವು ಮಂತ್ರಿಗಳಿಗೆಲ್ಲಾ ಜಹಗೀರು ಕೊಟ್ಟಿದ್ದೀರಿ. ಇದರಿಂದ ಅವರು ಹೇಳಿದ್ದೇ ವೇಧವಾಕ್ಯ ನಮ್ಮ ಜಿಲ್ಲೆಯಲ್ಲಿ ತೆಗೆದುಕೊಂಡರೆ ಜೆ. ಹೆಚ್. ಪಟೇಲ್‌ರವರಿಗೆ ಜಹಗೀರು ಕೊಟ್ಟಿದ್ದೀರೀ ಅವರಾದರೂ ಸ್ವಂತವಾಗಿ ಕೆಲಸ ಮಾಡುತ್ತಿದ್ದಾರೆಯೇ ಎಂದರೆ ಇಲ್ಲ. ನಾನು ಅವರಿಗೆ ಬೇದವನ್ನು ಅಲ್ಲ, ಬೇಕಾದವನಿಗೆ ಜಾಸ್ತಿ ನಡೆಯುತ್ತದೆ, ಬೇಡದವನನ್ನು ಅಲ್ಲಿಯೆ ಇಟ್ಟಿರುತ್ತಾರೆ, ಆ ವಿಚಾರ ಬೇರೆ. ಬೇಕಾದವನು ಹೇಳಿದ ಹಾಗೆ ಕೇಳುತ್ತಾರೆ. ಆತ ಏನು ಹೇಳುತ್ತಾನೆ, ಸ್ಟಾರ್ಟ್, ಸ್ಟೇ, ಬೇಡ, ಸ್ಟೇ ಮಾಡುವುದು ಬೇಡ ಅಂದರೆ ಮಾಡುವುದಿಲ್ಲ, ಮಾಡು ಅಂದರೆ ಮಾಡುವುದು, ಅದು ಅಲ್ಲ, ಆಡಳಿತ ಅಂದರೆ ಸ್ವಯಂ ಪೂರ್ಣತೆ ಇರಬೇಕು, ಈ ತರಹ ಜಹಗೀರು ಹಾಕಿಕೊಟ್ಟರೆ ಒಂದೊಂದು ಕಡೆ ಯಾರು ಬಲ ಇದ್ದಾರೆ ಅವರದ್ದು ಪ್ರಾಬಲ್ಯ. ನಮ್ಮ ಜಿಲ್ಲೆಯಲ್ಲಿ ಜೆ. ಹೆಚ್. ಪಟೇಲ್‌ರವರು ಇದ್ದಾರೆ, ಹಾಗೆ ಬಸವಣ್ಣಪ್ಪನವರೂ ಇದ್ದಾರೆ, ಜೆ. ಹೆಚ್. ಪಟೇಲ್‌ರವರು ಬಲವಾಗಿ ಇದ್ದಾರೆ, ಯಾರೂ ಇಲ್ಲವೆಂದು ಹೇಳುವುದಕ್ಕೆ ಸಾಧ್ಯ ಇಲ್ಲ. ಅವರು ಹಲವಾರು ತರಹ ಬಲ ಇದ್ದಾರೆ, ಅವರ ವ್ಯಕ್ತಿತ್ವವೂ ಅಷ್ಟೇ. ಆದರೆ ಪ್ರಶ್ನೆ ಏನು ಅಂದರೆ, ಆಡಳಿತ ಅಂದರೆ ಅದು ಏನು ? ಈ ರೀತಿ ಜಹಗೀರನ್ನು ಹಾಕಿಕೊಟ್ಟರೆ ಅದರಿಂದ ಆಡಳಿತದ ಮೇಲೆ ಯಾವುದೇ ಬಿಗಿ ಬರುವುದಕ್ಕೆ ಸಾಧ್ಯ ಇಲ್ಲ. ಅವರು ಹೇಳಿದ ಆಫೀಸರ್ ಅನ್ನು ಹಾಕಿಬಿಡುವುದು, ಇವರಾದರೂ ಸ್ವಲ್ಪ ವೆರಿಫೈ ಮಾಡಬೇಕು, ಯಾಕೆ ಈ ಆಫೀಸರ್ ಬೇಕು, ಯಾಕೆ ಬೇಡ. ಇವರಿಗೆ ವೆರಿಫೈ ಮಾಡಲು ಎಲ್ಲಿದೆ ಸಮಯ. ಸಾವಿರ ಬಾರಖೂನ್ ಮಾಡಿದರೂ ಮಾಫಿ ಎಂದು ನಮ್ಮ ಮಾನ್ಯ ನಾಯಕಿಯವರು ಹೇಳಿದರು. ಅದೇ ವ್ಯವಸ್ಥೆ ಅದೇ ಆಡಳಿತ, ಯಾವ ಬಿಗಿಯನ್ನು ಆಡಳಿತದಲ್ಲಿ ತಂದಿದ್ದೀರಿ. ಈ ರೀತಿ ಆಬ್ಸೆಂಟೀ ಆಡಳಿತವನ್ನು ಕೊಟ್ಟಿದ್ದೀರಿ. ಇವೊತ್ತು ಪರಿಸ್ಥಿತಿ ಏನು ಆಗಿದೆ ಅಂದರೆ ದೇಶದಲ್ಲಿ ಯಾವ ಒಂದು ಇಲಾಖೆಯಲ್ಲಿಯೂ ಜೀವವಿಲ್ಲ ಮಂತ್ರಿಗಳ ಆರ್ಡರ್ ಇರಲಿ, ಅಥವಾ ಮಾನ್ಯ ಮುಖ್ಯ ಮಂತ್ರಿಗಳ ಆರ್ಡರ್ ಕೂಡ ಯಾಕೆ ಕಾರ್ಯಗತ ಆಗುತ್ತಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಹೌದು ದೇಶದಲ್ಲಿ ಯಾವ ಒಂದು ಇಲಾಖೆಯಲ್ಲಿಯೂ ಜೀವ ಇಲ್ಲವೆಂದು ಕರೆಕ್ಟ್ ಆಗಿ ಹೇಳಿದಿರಿ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ದೇಶ ಎಂದರೆ ನಮಗೆ ಇದೇ ದೇಶ, ನಮ್ಮದು ನಮಗೆ ದೇಶ ನಮಗೆ ಉತ್ತರ ಪ್ರದೇಶ ಗೊತ್ತಿಲ್ಲ. ನಾವು ಹುಟ್ಟಿ ಬೆಳೆದಿದ್ದು ಈ ದೇಶ ಅಂದರೆ ಇಲ್ಲಿ,

ಶ್ರೀ ಆರ್. ರಾಮಯ್ಯ.—ತೆಲುಗು ದೇಶಂ ಎಂದು ಇಟ್ಟುಕೊಂಡಿದ್ದರಲ್ಲ ಅದಕ್ಕೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ದೇಶ ಅಂದರೆ ಏನು, ದೇಶ ಅಂದ ಕೂಡಲೇ ವಿಂಧ್ಯ ಪರ್ವತದಿಂದ ಅತ್ತ ಹೋದರೆ ದೇಶ ಎಂದೋ. ನೀವು ಆ ರೀತಿ ಲೆಕ್ಕ ತೆಗೆದುಕೊಂಡರೆ ಏನು ಮಾಡುವುದು. ಇವೊತ್ತು ಆಡಳಿತದಲ್ಲಿ ಬಿಗಿ ಇರಬೇಕು. ನಿಮ್ಮ ಮಂತ್ರಿಮಂಡಲದಲ್ಲಿ ಬಿಗಿ ಇರಬೇಕು. ನೀವು ಮಂತ್ರಿಮಂಡಲವನ್ನು ಹೇಗೆ ರಚನೆ ಮಾಡಿದ್ದೀರಿ....I agree that it is the exclusive prerogerative of the Chief Minister to have his ministers and allot them portfolios. But it should have some correlation to the need of the administration. I know any Chief Minister will have political consideration and there will be political pulls and presures. ಅದನ್ನು ಮತ್ತು ರಾಜ್ಯದ ಹಿತ ರಕ್ಷಣೆಯನ್ನು ಸಮನ್ವಯ ಮಾಡತಕ್ಕದ್ದು ಅವರ ನಾಯಕತ್ವದ ಶಕ್ತಿ ಆಗಬೇಕು. ಹಾಗೆ ಮಾಡದೇ ಇವರು ಹೇಳಿದರು. You are just a pawn in the hands of the dominant communities. I dont't agree. He has assumed the role of an honest umpire. ಪಾನ್ ಗೀನ್ ಆಗುವುದಿಲ್ಲ. ಆ ಮೇಲೆ ಅಂಪೈರ್, ಆ ಮೇಲೆ ಕಂಪೇರಿಂಗ್ ಅಂಪೈರ್ ಅಸ್ತಿತ್ವ ಏನು, ಅಂಪೈರ್ ಅಸ್ತಿತ್ವ ಏನು ಅಂದರೆ ಏನಾದರೂ ಜಗಳ ಆದರೆ ಅಂಪೈರ್ ಅಸ್ತಿತ್ವ ಬರುತ್ತದೆ. ಜಗಳ ಆಗದೇ ಹೋದರೆ ಅಂಪೈರ್ ಅಸ್ತಿತ್ವವೇ ಇರುವುದಿಲ್ಲ.

3-30 P. M.

Many a times Umpires are the cause of Jagales because Umpire can only justify his existence by wrecking up quarrels between two sections. He has assumed that role. He has not tried to positively balance the community. He is performing the role of Umpire negativel , ರಾಜ್ಯದಲ್ಲಿ ಯಾರೇ ಮುಖ್ಯಮಂತ್ರಿಗಳಾಗಿರಲಿ, ಡಾಮಿನೆಂಟ್ ಕಮ್ಯುನಿಟಿಯನ್ನು You cannot write them off and they should not be written off also. They have their own legitimate reghts but the Chief Minister should have the guts to balance them and subserve their interests to the interests of the State and interests of other vulnerable sections. ಇದನ್ನು ಮಾಡುವಂತಹ ಶಕ್ತಿ ಇವರಿಗೆ ಇಲ್ಲ. ಇವರು ಏನಿದ್ದರೂ ಕೇವಲ ಅಂಪೈರ್‌ಗಿರಿ ಕೆಲಸ ಮಾಡಿಕೊಂಡು ದೇವೇಗೌಡರಿಗೆ ಒಂದು ಕೊಟ್ಟೆ, ಪಟೇಲ್ ಅವರಿಗೆ ಒಂದು ಕೊಟ್ಟೆ, ಬೊಮ್ಮಾಯಿ ಅವರಿಗೆ ಒಂದು ಕೊಟ್ಟೆ ಎಂದರ ಹೇಳುವುದು ಇಲ್ಲವೇ ಖಾತೆಗಳನ್ನು ಬ್ಯಾಲೆನ್ಸ್ ಮಾಡಿ ಒಬ್ಬರಿಗೆ ಎರಡು ಕೊಟ್ಟೆ, ಇನ್ನೊಬ್ಬರಿಗೆ ಮೂರು ಕೊಟ್ಟೆ ಮತ್ತೊಬ್ಬರಿಗೆ ನಾಲ್ಕು ಕೊಟ್ಟೆ ಅಂದರೆ ಏನು ಅರ್ಥ ? ಇದನ್ನೇ ಆಡಳಿತ ಎಂದು ತಾವು ಹೇಳುತ್ತೀರಾ ? ಮಂತ್ರಿಮಂಡಲದ ವಿಸ್ತರಣೆ ಕೆಲಸವನ್ನು ಜಿಲ್ಲಾ ಪರಿಷತ್‌ಗಳು ಅಸ್ತಿತ್ವಕ್ಕೆ ಬರುವುದಕ್ಕೆ ಮೊದಲು ಮಾಡಬಹುದಾಗಿತ್ತು. ಆದರೆ ಆಗ ೧೫ ಜನ ಸದಸ್ಯರು ಇರುವಂತಹ ಮಂತ್ರಿಮಂಡಲವನ್ನು ರಚನೆ ಮಾಡಿದರು. ಜಿಲ್ಲಾ ಪರಿಷತ್‌ಗಳು ಅಸ್ತಿತ್ವಕ್ಕೆ ಬಂದ ಮೇಲೆ ಮಂತ್ರಿಮಂಡಲದ ಗಾತ್ರವನ್ನು ಇನ್ನೂ ಚಿಕ್ಕದನ್ನಾಗಿ ಮಾಡಬಹುದು, ೧೫ ಅನ್ನು ೯ಕ್ಕೆ ಇಳಿಸಿ ಕಾಮರಾಜನಾಡರ್ ಮಾದರಿ ತರಹ ಮಾಡುತ್ತಾರೆಂದು ನಾವು ತಿಳಿದುಕೊಂಡಿದ್ದೆವು. ಆದರೆ ಏರ್-ಬಸ್ ತರಹ ಮೊದಲು ಇದ್ದಂಥ ಮಂತ್ರಿಮಂಡಲದ ಗಾತ್ರವನ್ನು ಹೆಚ್ಚು ಮಾಡಿದರು. ಇದು ಏತಕ್ಕೆ ಬೇಕಾಗಿತ್ತು ? ಏನಾದರು ಒಂದು ಕೆಲಸ ಮಾಡಿದರೆ ಅದಕ್ಕೆ ಒಂದು ಅರ್ಥ ಇರಬೇಕು ? ಈ ಬಗ್ಗೆ ಈ ದೇಶದ ಜನರು ಏನಾದರು ಕೇಳಿದರೆ ಇವರು ಏನು ಹೇಳುತ್ತಾರೆ ? ಇದು ನನ್ನಿಷ್ಟ, ಮುಖ್ಯಮಂತ್ರಿಯಾಗಿ ನಾನು ಯಾವ ರೀತಿ ಬೇಕಾದರೂ ಮಂತ್ರಿಮಂಡಲ ರಚನೆ ಮಾಡಬಹುದು ಎಂದು ಹೇಳಿದರೆ ಮುಂದೆ ಅವರ ಪರಿಣಾಮ ಏನಾಗುತ್ತದೆ? ಇದನ್ನು ಯೋಚನೆ ಮಾಡಬೇಕು ? ಈಗಿನ ಮಂತ್ರಿಮಂಡಲದಲ್ಲಿ ಕೆಲವರಿಗೆ ಕೆಲಸವೇ ಇಲ್ಲ, ಮತ್ತೆ ಕೆಲವರಿಗೆ ಅಜೀರ್ಣ ಆಗುವಷ್ಟು ಕೆಲಸಗಳನ್ನು ಕೊಟ್ಟಿದ್ದೀರಿ. ಜನರನ್ನು ಸೆಲೆಕ್ಟ್ ಮಾಡುವಾಗ ಯಾರು ಯಾರಿಗೆ ಏನೇನು ಕೆಲಸ ಕೊಡಬೇಕು ಎಂಬುದನ್ನು ಯೋಚನೆ ಮಾಡದೆ ಲಾಟರಿ ತರಹ ಹಂಚಿಕೆ ಮಾಡಿ ಕೆಲಸಗಳನ್ನು ಕೊಟ್ಟಿದ್ದಾರೆ. ನಾನು ಇದೇ ವಿಚಾರದಲ್ಲಿ ಇಲ್ಲಿ ಏನು ಹೇಳಿದ್ದೆ ಎಂದರೆ, ಮಾನ್ಯ ಪಟೇಲ್ ಅವರಿಗೆ ಕೈಗಾರಿಕಾ ಖಾತೆಯನ್ನು ಕೊಟ್ಟಿದ್ದೀರಿ, He is most unindustrious man. He is a brilliant man, ಇದು ಸರಿಯೆ, ಆದರೆ ಈ ಖಾತೆ ಉಡುಪಿ ಪಾರುಪತ್ಯದ ತರಹ ಆಗಿದೆ ಎಂದು ಹೇಳಿದ್ದೆ. ಮತ್ತೆ ಮಾನ್ಯ ದೇವೇಗೌಡರಿಗೆ ಇರಿಗೇಷನ್ ಖಾತೆಯನ್ನು ಕೊಟ್ಟಿರಿ, ಆದರೆ ದುಡ್ಡನ್ನು ಮಾತ್ರ ಅವರಿಗೆ ಕೊಡಲಿಲ್ಲ. ಇದರಿಂದ ಅವರು ಬರೀ ಇರಿಗೇಷನ್ ಕೊಟ್ಟರು, ದುಡ್ಡು ಕೊಡಲಿಲ್ಲವೆಂದು ಶಂಖ ಹೊಡೆದುಕೊಂಡು ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ಕೊಟ್ಟು ಹೊರಗಡೆಗೆ ಹೋದರು. ಮತ್ತೆ ಶ್ರೀ ಹೆಚ್.ಟಿ. ಕೃಷ್ಣಪ್ಪನವರಿಗೆ ಅಬಕಾರಿ ಮತ್ತು ಆರೋಗ್ಯ ಖಾತೆಗಳೆರಡನ್ನೂ ಕೊಟ್ಟಿದ್ದು ಅನಾವಶ್ಯಕ, ಇದರಿಂದ ಅವರ ಆರೋಗ್ಯ ಇನ್ನು ಮೂರು ತಿಂಗಳಲ್ಲಿ ಹಾಳಾಗುತ್ತದೆಂದು ನಾನು ಹೇಳಿದ್ದೆ. ನಂತರ ನಾನು ಹೇಳಿದ ಪ್ರಕಾರವೇ ಅವರ ಆರೋಗ್ಯ ಹಾಳಾಯಿತು ಜೊತೆಗೆ ಅಬಕಾರಿ ಇಲಾಖೆಯು ಹೋಯಿತು. ನೀವು ಖಾತೆಗಳನ್ನು ಹಂಚುವಾಗ ಹುಚುಚ್ಚಾಗಿ ಹಂಚಿದ್ದೀರಿ. ಈಗ, ಪಾಪ, ಮಾನ್ಯ ರಘುಪತಿ ಅವರು ಪರದೇಶಿ ತರಹ ಆಗಿದ್ದಾರೆ. Mr. Raghupathy deovotedly was doing some work in the Education Department. You have given it Jeevaraj Alva who is fit to be a Minister without portfolio in your Cabinet. ಅದು ಏನೋ ಹೇಳುತ್ತಾರಲ್ಲಾ, ಲಿಂಗ ಮೆಚ್ಚಿ ನಡೆದರೆ ಹೌದು ಹೌದು ಎನ್ನುವಂತಿರಬೇಕು ಎಂದು, ಅದರಂತೆ ಈ ದೇಶದ ಜನರು ಮೆಚ್ಚುವಂತಹ ರೀತಿಯಲ್ಲಿ ನೀವು ಮಂತ್ರಿಮಂಡಲವನ್ನು ರಚನೆ ಮಾಡಬೇಕಾಗಿತ್ತು. ನೀವು ಏನೇ ಕೆಲಸ ಮಾಡಿದರೂ ಸಹ, ಮಾನ್ಯ ರಾಮಕೃಷ್ಣ ಹೆಗಡೆಯವರು ಒಳ್ಳೆಯ ಕೆಲಸ ಮಾಡಿದರು ಎಂದು ಜನರು ಹೇಳುವಂತಹ ರೀತಿಯಲ್ಲಿ ನಿಮ್ಮ ಆಡಳಿತ ಇರಬೇಕಾಗಿತ್ತು ? ಈ ಕೆಲಸ ಮಾಡದೆ ಆಡಳಿತದಲ್ಲಿ ಬಿಗಿ ತರುತ್ತೇವೆಂದು ಹೇಳಿದರು, ಅದು ಹೇಗೆ ಸಾಧ್ಯ ? You are such a seasoned and experienced politcian.....

ಶ್ರೀ ರಮೇಶಕುಮಾರ್.—ಅವರಿಗೆ ನಿಮ್ಮಂತಹ ಪೊಲಟಿಕಲ್ ಸೆಕ್ರೆಟರಿ ಒಬ್ಬರು ಸಿಗಲಿಲ್ಲ. That is his draw-back.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅದು ಅವರ ದುರಾದೃಷ್ಟ. ಏನು ಮಾಡುವುದು ?

ಶ್ರೀ ಬಿ.ಡಿ. ಬಸವರಾಜ್.—ಶ್ರೀನಿವಾಸ್ ಅವರನ್ನೇ ವಿರೋಧಪಕ್ಷದ ನಾಯಕರನ್ನಾಗಿ ಮಾಡ ಬೇಕಾಗಿತ್ತು. ಆದರೆ ಅವರನ್ನು ಮಾಡುವುದಿಲ್ಲ.

ಶ್ರೀ ಕೆ.ಹೆಚ್. ಶ್ರೀನಿವಾಸ್.—ರಾಮಕೃಷ್ಣ ಹೆಗಡೆಯವರ ಅವರ ಅವತಾರ ಇಲ್ಲಿ ಆಗುವುದು ಯಾರಿಗೂ ಗೊತ್ತಿರಲಿಲ್ಲ. ಇವರು ಪೊಲಿಟಿಕಲ್ ಸೆಕ್ರೆಟರಿಯನ್ನು ಇಟ್ಟುಕೊಳ್ಳದೆ ದಿಢೀರ್ ಎಂದು ಇಲ್ಲಿಗೆ ಬಂದು ಇಳಿದರು. ಅದಕ್ಕೆ ನಾವು ಏನು ಮಾಡಲು ಸಾಧ್ಯ ?

ಶ್ರೀ ರಮೇಶ್‌ಕುಮಾರ್.—ನೀವು ಇದರ ಬಗ್ಗೆ ಸ್ವಲ್ಪ ಯೋಚನೆ ಮಾಡಿ ನೋಡಿ ?

ಶ್ರೀ ಕೆ.ಹೆಚ್. ಶ್ರೀನಿವಾಸ್.—ಈ ಬಗ್ಗೆ ನಾನು ವಿಚಾರ ಮಾಡುವುದು ಏನೂ ಇಲ್ಲ. ಏಕೆಂದರೆ, ಅವರ ಕಡೆಯವರೇ ಕಡೆಯ ಪರದೆಯನ್ನು ಎಳೆಯುತ್ತಿದ್ದಾರೆ. ಅದಕ್ಕೆ ನಾವು ಜವಾಬ್ದಾರರೇ ? ಈಗಿನ ದುರವಸ್ಥೆಗೆ ಇವರು ಯಾವ ತರಹದ ಷೇಪ್ ಕೊಡುತ್ತಾರೋ ನನಗೆ ಗೊತ್ತಿಲ್ಲ. ಈಗಿನ ಮಂತ್ರಿಮಂಡಲಕ್ಕೆ ಏನೋ ಅರ್ಧ ಹೊಡೆದಿದೆ. ಅದರ ಹೆಸರನ್ನು ಈಗ ಹೇಳಬಾರದು ? ಈಗ ಇದಕ್ಕೆ ಯಾವ ರೂಪ ಕೊಡುತ್ತಾರೋ ಗೊತ್ತಿಲ್ಲ. ಏನಾದರೂ ಒಂದು ರೂಪ ಕೊಡಲಿ. ಎಲ್ಲ ಕೆಲಸಗಳು ಚೆನ್ನಾಗಿ ಆಗಬೇಕೆಂದು ನಾವು ಹೇಳುತ್ತೇವೆಯೇ ಹೊರತು, ಇನ್ನೊಬ್ಬರು ಹಾಳಾಗಿ ನಾವು ಮಾತ್ರ ಉದ್ಧಾರ ಆಗಬೇಕೆಂಬ ಇಚ್ಛೆ ನಮಗಿಲ್ಲ. ಇರುವಂತಹ ಒಂದು ಗೆರೆಯನ್ನು ಅಳಿಸಿ ಅದಕ್ಕಿಂತ ದೊಡ್ಡ ಗೆರೆ ಹಾಕಬೇಕೆಂಬ ಇಚ್ಛೆ ನಮಗಿಲ್ಲ. ದೊಡ್ಡ ಗೆರೆಯನ್ನು ಹಾಕುವಂತಹ ಯೋಗ್ಯತೆ ನಮಗಿದ್ದರೆ ಮಾತ್ರ ಆ ಶಕ್ತಿ ನಮಗೆ ಬರಲಿ ಎಂದು ಹೇಳುತ್ತೇವೆಯೇ ಹೊರತು, ಇವರ ಆಡಳಿತದಲ್ಲಿ ಕೈಹಾಕಿರೆ ಬೇಕೆಂಬ ಚಪಲ ನಮಗೆ ಇಲ್ಲ. ಆದರೂ ಕಾಂಗ್ರೆಸ್‌ನವರು ನಮ್ಮನ್ನು ಹಾಳು ಮಾಡುತ್ತಿದ್ದಾರೆಂದು ಇವರು ರಾಜಕೀಯಕೋಸ್ಕರವಾಗಿ ಹೇಳುತ್ತಾರೆ. ಆ ರೀತಿ ಹೇಳಲೇಬೇಕು. ಏಕೆಂದರೆ, ನೀವಾಗಿಯೇ ನೀವು ಹಾಳಾದಿರಿ ಎಂದು ಜನರು ಹೇಳುವುದಕ್ಕೆ ಬದಲು ಕಾಂಗ್ರೆಸ್‌ನವರು ನಮ್ಮನ್ನು ಹಾಳು ಮಾಡು ತ್ತಾರೆಂದು ಹೇಳುತ್ತಿದ್ದಾರೆ. ಈ ರೀತಿ ಹೇಳುವಂತಹ ಒಂದು ಮಂತ್ರಶಕ್ತಿ ಇವರಿಗೆ ಪ್ರಾಪ್ತ ಆಗಿ ಬಿಟ್ಟಿದೆ. ಯಾವ ಒಂದು ಸುಮುಹೂರ್ತದಲ್ಲಿ ಈ ಮಂತ್ರಶಕ್ತಿಯನ್ನು ಇವರು ಕಲ್ಪನೆ ಮಾಡಿದರೋ ಗೊತ್ತಿಲ್ಲ. ಈಗ ಅದೇ ಇವರಿಗೆ ಒಂದು ಮಂತ್ರಶಕ್ತಿ ಆಗಿದೆ. ನಾವು ಏನಾದರು ಇವರ ಬಗ್ಗೆ ಹೇಳಿದರೆ ಸಾಕು, ಈ ಮಂತ್ರಶಕ್ತಿ ಚಾಲನೆ ಆಗುತ್ತದೆ. ಕಾಂಗ್ರೆಸ್‌ನವರೇ ನಮ್ಮನ್ನು ಹಾಳು ಮಾಡುತ್ತಿದ್ದಾರೆ ಎಂದು ಇವರು ಇನ್ನು ಎಷ್ಟು ದಿವಸ ಹೇಳುತ್ತಾರೆ ? ಆ ಮಂತ್ರಶಕ್ತಿ ಇನ್ನು ಎಷ್ಟು ದಿವಸ ಇವರಿಗೆ ಇರತ್ತದೋ ಗೊತ್ತಿಲ್ಲ. ನಿಮಿತ್ತ ಆಯಿತು ಎಂದುಕೊಂಡು ಬೆಳಗಿನತನಕ ಅದನ್ನು ಕದಿಯಬಾರದು ಎಂದು ಒಂದು ಗಾದೆ ಮಾತಿದೆ. ನಿಮಿತ್ತ ಆಯಿತು ಎಂದಾಗ ಅಷ್ಟೋ ಇಷ್ಟೋ ಕದ್ದುಕೊಂಡು ತಕ್ಷಣ ಹೊರಟುಹೋಗ ಬೇಕೆಂದು ಇದರ ಅರ್ಥ. ಆದ್ದರಿಂದ ನಿಮಗೆ ಈಗಲೂ ಕೂಡ ಇಲ್ಲಿಯೇ ಇರಬೇಕೆಂಬ ಸಂಕಲ್ಪ ಇದ್ದರೆ, ನಿಮಗೆ ಏನೇನು ಸಂಕಲ್ಪಗಳು ಇವೆಯೋ ನಮಗೆ ಗೊತ್ತಿಲ್ಲ, ಈಗ ಶ್ರೀ ವಿ. ಪಿ. ಸಿಂಗ್ ಅವರು ಗೆದ್ದರೆಂದರೆ ನೀವು ಅಲ್ಲಿಗೆ ಹಾರುತ್ತೀರೋ ಅಥವಾ ಮತ್ತೆಲ್ಲಿಗೆ ಹೋಗುತ್ತೀರೋ ನಮಗೆ ಗೊತ್ತಿಲ್ಲ, ನೀವು ಅಲ್ಲಿಗೆ ಹೋಗಿ ಭ್ರಷ್ಟಾಚಾರವನ್ನು ನಿರ್ಮೂಲ ಮಾಡಬೇಕಲ್ಲ ? ಉತ್ತರಪ್ರದೇಶ ಇಲ್ಲವೆ ದೆಹಲಿ ಕಡೆಗೆ ನೀವು ಹೋಗುವುದಿದ್ದರೆ ಇಲ್ಲಿರುವವರಿಗೆ ನೀವು ಬುದ್ಧಿವಾದ ಹೇಳಿ ಹೋಗಿ. ಕೆಲವು ಸಲ ಮುದುಕರಾದವರು ತಮ್ಮ ಮಕ್ಕಳನ್ನು ಕರೆದು, ನಾನು ಏನೂ ಮಾಡುವುದ ಕ್ಕಾಗಲಿಲ್ಲ, ನೀವಾದರೂ ಒಳ್ಳೆಯ ಕೆಲಸ ಮಾಡಿ ಮಕ್ಕಳೇ ಎಂದು ಹೇಳುವಂತಹ ರೀತಿಯಲ್ಲಿ ನೀವು ಇಲ್ಲಿರುವವರಿಗೆ ಇನ್ನು ಮುಂದೆ ಚೆನ್ನಾಗಿ ಆಡಳಿತ ನಡೆಸಿ ಎಂದು ಹೇಳಿ ಹೋಗಿ. ತಾವು ಇಲ್ಲೇ ಇರುವುದಾದರೆ, ತಮ್ಮ ತಪ್ಪು ದಾರಿಯನ್ನು ತಿದ್ದಿಕೊಂಡು ಸರಿಯಾದಂಥ ರೀತಿಯಲ್ಲಿ ನಮ್ಮ ಜನರಿಗೆ ಆಡಳಿತ ವ್ಯವಸ್ಥೆಯನ್ನು ಕೊಡಬೇಕು. ಅದನ್ನು ಬಿಟ್ಟು ಬರೀ ಬಾಯಲ್ಲಿ ಭ್ರಷ್ಟಾಚಾರ ಹೋಗ ಬೇಕೆಂದು ಹೇಳಿದರೆ ಹೋಗುವುದಿಲ್ಲ. ಈಗ ನಾವು ನಿಮ್ಮನ್ನು ಬೈಯುವುದು, ನೀವು ನಮ್ಮನ್ನು ಬೈಯುವುದು, ಕೊನೆಗೆ ನಾವು ಅಷ್ಟೂ ಜನರು ಭ್ರಷ್ಟರು ಎಂದು ಹೊರಗಿನ ಜನರು ಬೈಯುವುದು, ಇದಿಷ್ಟೇ ಈಗ ನಡೆದಿರುವುದು. ಭ್ರಷ್ಟಾಚಾರದ ಬಗ್ಗೆ ಇಲ್ಲಿ ಕೆಲವು ವರ್ಷಗಳಿಂದ ನಡೆದಿರುವ ಚರ್ಚೆಯ ತಾತ್ಪರ್ಯ ಎಂದರೆ ನಾವು ನಿಮ್ಮನ್ನು ಬೈಯುವುದು, ನೀವು ನಮ್ಮನ್ನು ಬೈಯುವುದು ಕೊನೆಗೆ ನಮ್ಮೆಲ್ಲರನ್ನೂ ಸೇರಿಸಿ ಉಳಿದವರು ಬೈಯುವುದು, ಇದೇರೀತಿ ನಡೆದಿದೆ. ಇದ

ನಡೆದಿದೆಯೇ ಹೊರತು ಯಾವ ರಾಜಕಾರಣಿಯೂ ಸಂಭಾವಿತ ಅಲ್ಲ ಎನ್ನತಕ್ಕಂಥಾದ್ದು ಇದೆ. ಅದರಲ್ಲಿ ಸ್ವಲ್ಪ ಸತ್ಯವೂ ಇದೆ. ಮತ್ತೆ ಜನಗಳಿಗೆ ಅದು ಪರಿಪೂರ್ಣ ಸತ್ಯ ಆಗಿಬಿಟ್ಟಿದೆ, ಅದು ಬಿಟ್ಟರೆ ಬೇರೆ ಇಲ್ಲ. ಸದಾಚಾರ ಬೆಳೆಸುವುದಕ್ಕೆ ಏನು ಮಾಡಿದ್ದೇವೆ, ಯಾವುದೂ ಮಾಡಿಲ್ಲ ಸದಾಚಾರ ಮಾಡುವುದಕ್ಕೆ ಹೋದವನು ಮೊದಲು ಕೊಲೆಯಾಗುತ್ತಾನೆ. ಒಬ್ಬ ಹಾನೆಸ್ಟ್ ಆಫೀಸರ್ ಒಂದು ಡಿಪಾರ್ಟ್‌ಮೆಂಟಿನಲ್ಲಿ ಕೆಲಸಮಾಡಿ ಅವನು ಜೀರ್ಣಿಸಿಕೊಳ್ಳಬೇಕಾದರೆ ಎಷ್ಟು ಕಷ್ಟ ಇದೆ. ಅವನ ಸುತ್ತಮುತ್ತ ಎಲ್ಲಾ ದಿಸ್‌ಹಾನೆಸ್ಟ್ ಫೆಲೋಸ್ ಇರುತ್ತಾರೆ. ಅವರು ಅವನು ಒಬ್ಬ ಬ್ಲಾಕಶಿಪ್ ಎಂದು ಅವನ ಮೇಲೆ ಕೆಂಡಕಾರುತ್ತಾರೆ, ಅವನಿಗೆ ಯಾರದೂ ರಕ್ಷಣೆ ಸಿಗುವುದಿಲ್ಲ. ಇವತ್ತು ಅದಕ್ಕೆ ಏನಾದರೂ ಪರಿಹಾರ ಕಂಡುಹಿಡಿದಿದ್ದೇವಾ ? ಸಂಭಾವಿತರನ್ನು ಹೇಗೆ ಮೇಲಕ್ಕೆ ಎತ್ತಬೇಕು, ಅವರಿಗೆ ಹೇಗೆ ರಕ್ಷಣೆ ಕೊಡಬೇಕು, ದುಷ್ಟರನ್ನು ಹೇಗೆ ನಿಗ್ರಹಿಸಬೇಕು, ಶಿಷ್ಟರಿಗೆ ಹೇಗೆ ರಕ್ಷಣೆ ಕೊಡಬೇಕು, ಎನ್ನತಕ್ಕಂಥ ಈ ಕಾರ್ಡಿನಲ್ ಪ್ರಿನ್ಸಿಪಲ್ ನಿಮಗೆ ಅಡ್ಮಿನಿಸ್ಟ್ರೇಷನ್‌ನಲ್ಲಿ ಇಲ್ಲದೇ ಹೋದರೆ ಯಾವ ಕಾನ್ಸೆಪ್ಟ್ ಇದೆ, ಯಾವ ಪ್ರಿನ್ಸಿಪಲ್ ಇದೆ, ಯಾವುದೇ ಪಾಲಿಸಿ ಇಲ್ಲದೆ ಅಡ್ಮಿನಿಸ್ಟ್ರೇಷನ್ ಸರಿ ಆಗಿಬಿಡುತ್ತದೆ ಅಂದರೆ ತನ್ನಷ್ಟಕ್ಕೆ ಸರಿ ಆಗುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಆ ಬಗ್ಗೆ ಗಮನಹರಿಸಬೇಕು ಎಂದು ಒತ್ತಾಯಿಸಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಚರ್ಚೆ ಮುಕ್ತಾಯವಾಯಿತು. ಈಗ ಮಾನ್ಯ ಮುಖ್ಯ ಮಂತ್ರಿಗಳಿಂದ ಉತ್ತರ, ಇದರಲ್ಲಿ ೧೦ ತಾಸು ೪೫ ಮಿನಿಟ್ ಚರ್ಚೆಯಾಗಿದೆ. ಒಟ್ಟು ೧೪ ಜನ ಮಾನ್ಯ ಸದಸ್ಯರು ಮಾತನಾಡಿದ್ದಾರೆ. ಗಿಲೆಟಿನ್‌ಗೆ ಹಾಕುವಂಥ ಪ್ರಸಂಗ ಬರಲಿಲ್ಲ, ನನಗಂತೂ ಸಂತೋಷವಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ಈ ಸಲದ ಆಯವ್ಯಯದ ಮೇಲೆ ಆದಂಥ ಚರ್ಚೆ ಅನೇಕ ದೃಷ್ಟಿಗಳಿಂದ ವಿಶಿಷ್ಟವಾಗಿದೆ. ಈ ಸಲ ನಮ್ಮ ಮುಂಗಡ ಪತ್ರವನ್ನು ನಾವು ಒಂದೇ ಸಲ ಎಂದಿನಂತೆ ಶಾಸನ ಮಂಡಲದ ಮುಂದೆ ಇಡುವುದು ಸಾಧ್ಯವಾಗಲಿಲ್ಲ. ಅದಕ್ಕೆ ಕಾರಣವನ್ನು ನಾನು ಮುಂಗಡ ಪತ್ರವನ್ನು ಸದನದ ಮುಂದೆ ಮಂಡಿಸುವಾಗ ಹೇಳಿದ್ದೇನೆ, ಈಗ ಪುನಃ ಹೇಳತಕ್ಕಂತ ಅಗತ್ಯ ಇಲ್ಲ. ಈ ಸಲ ಮೂರು ತಿಂಗಳಿನ ಖರ್ಚುವೆಚ್ಚದ ಬಗ್ಗೆ ನಾವು ಈ ಮನೆಯ ಒಪ್ಪಿಗೆಯನ್ನು ಅನುಧಾನವಾಗಿ ಪಡೆದಿದ್ದೇವೆ. ಆ ಅವಧಿ ಈ ತಿಂಗಳ ಕೊನೆಗೆ ಮುಕ್ತಾಯವಾಗುತ್ತದೆ, ಈ ಮೂರು ತಿಂಗಳ ಅವಧಿಯನ್ನು ನಾವು ತೆಗೆದುಕೊಂಡಂಥ ಉದ್ದೇಶ ಏನೆಂದರೆ, ಈ ಅವಧಿಯಲ್ಲಿ ಕೇವಲ ನಮ್ಮ ರಾಜ್ಯದ್ದು ಅಷ್ಟೆ ಅಲ್ಲ, ಇಡೀ ದೇಶದ ಆರ್ಥಿಕ ಪರಿಸ್ಥಿತಿಯ ಚಿತ್ರ ಮೊದಲಿಗಿಂತಲೂ ಸ್ವಲ್ಪ ಹೆಚ್ಚು ಸ್ಪಷ್ಟವಾಗಿ ಕಂಡುಬರಬಹುದು ಎನ್ನತಕ್ಕಂಥ ಆಶೆಯಾಗಿತ್ತು. ಈ ಅವಧಿಯಲ್ಲಿ ನಾವು ಯಾವ ಆಶೆಯನ್ನು ಇಟ್ಟುಕೊಂಡಿದ್ದೆವೋ ಈ ವಿಚಾರದಲ್ಲಿ ಆ ಆಶೆ ಕೈಗೂಡದಿದ್ದರೂ ಒಂದು ಹೊಸ ಆಶೆಯ ಅಂಕುರ ನಮ್ಮ ಮನಸ್ಸಿನಲ್ಲಿ ಆಗುತ್ತಾ ಇದೆ. ಅದು, ೫ ವರ್ಷಗಳ ದೀರ್ಘ ಸತತ ಅಭಾವ ಪರಿಸ್ಥಿತಿಯ ನಂತರ ಈ ವರ್ಷ ಒಳ್ಳೆಯ ಮುಂಗಾರಿನ ಮಳೆಯ ಲಕ್ಷಣಗಳು ಕಾಣುತ್ತಾ ಇವೆ. ಇಲ್ಲಿಯವರೆಗೆ ಮಳೆಯ ಅಭಾವ ನಮ್ಮ ರಾಜ್ಯದಲ್ಲಿ ಅಷ್ಟೊಂದು ಕಾಣಿಸದೆ ಇರುದರಿಂದ ಈ ವರ್ಷದ ರೈತರು ಜೀವನ ಕಳೆದ ೫ ವರ್ಷಕ್ಕಿಂತಲೂ ಸುಖಕರವಾಗಬಹುದು ಎಂದು ಹೇಳತಕ್ಕಂಥಾದೇ ಆ ಒಂದು ಆಶೆ. ಗ್ರಾಮಾಂತರ ಪ್ರದೇಶದ ಅಭಿವೃದ್ಧಿಯ ಕೆಲಸ ಮತ್ತು ಉತ್ಪಾದನೆಯ ಕೆಲಸ ಯಾವುದೇ ಆತಂಕವಿಲ್ಲದೆ, ವಿಘ್ನವಿಲ್ಲದೆ ನಡೆದರೆ ನಮ್ಮ ಸರ್ಕಾರದ ಬೊಕ್ಕಸಕ್ಕೂ ಅಷ್ಟೇ ಆದರಿಂದ ಪ್ರಯೋಜನವಾಗುತ್ತದೆ. ಆ ದೃಷ್ಟಿಯಿಂದಲೂ ಈ ಮಾತನ್ನು ಇಲ್ಲಿ ಹೇಳುತ್ತಾ ಇದ್ದೇನೆ. ಈ ವರ್ಷದ ಬಜೆಟ್ ಅಧಿವೇಶನ ಇನ್ನೊಂದು ದೃಷ್ಟಿಯಿಂದಲೂ ವಿಶಿಷ್ಟವಾದಂಥಾದ್ದು. ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇನ್ನಿತರೆ ಸದಸ್ಯರುಗಳು ವರ್ಷದಿಂದ ವರ್ಷಕ್ಕೆ ಶಾಸನ ಮಂಡಳದ ಅಧಿವೇಶನದ ಅವಧಿ ಕಡಿಮೆಯಾಗುತ್ತಿದೆ, ಅದನ್ನು ಹೆಚ್ಚು ಮಾಡಬೇಕೆಂದು ಹೇಳಿದ್ದರಿಂದ, ಈ ವರ್ಷ ಕನಿಷ್ಟಪಕ್ಷ ೧೦೦ ದಿವಸವಾದರೂ ಅಧಿವೇಶನ ನಡೆಯಬೇಕೆಂದು ಸೂಚನೆ ಮಾಡಿದ್ದರಿಂದ, ಈ ಅಧಿವೇಶನವನ್ನು ಬಹಳ ದೀರ್ಘಕಾಲ ಇಟ್ಟುಕೊಂಡಿದ್ದೆವು. ಬೇಡಿಕೆಗಳ ಮೇಲಿನ ಚರ್ಚೆಗೆ ಹಿಂದೆ ಎಂದೂ ಕೊಡದಿದ್ದಷ್ಟು ಸಮಯವನ್ನು ಕೊಟ್ಟಿದ್ದೆವು. ಅಧಿವೇಶನವನ್ನು ಮುಂದೂಡಬೇಕಾದ ಪ್ರಸಂಗ ಏತಕ್ಕೆ ಬಂದಿದೆ ಎಂಬುದು ಮಾನ್ಯ ಸದಸ್ಯರುಗಳಿಗೆ ಈಗ ಗೊತ್ತುಂಟು. ಬರುವ ತಿಂಗಳು ೩ನೇ ತಾರೀಖು ಸ್ಥಳೀಕ ಸಂಸ್ಥೆಗಳ ಮತದಾರರ ಕ್ಷೇತ್ರಗಳಿಂದ ಮೇಲ್ಮನೆಗೆ ಚುನಾವಣೆ ನಡೆಯಬೇಕಾಗಿದೆ. ಈ ಚುನಾವಣೆ ೧೨ ವರ್ಷಗಳ ದೀರ್ಘಾವಧಿಯ ನಂತರ ಆಗುತ್ತಿವೆ. ಈ ಮನೆಯ ಮಾನ್ಯಸದಸ್ಯರುಗಳು ತಮ್ಮ ತಮ್ಮ ಕ್ಷೇತ್ರಗಳಿಗೆ, ಜಿಲ್ಲೆಗಳಿಗೆ ಚುನಾವಣೆ ಸಂಬಂಧದಲ್ಲಿ ಹೋಗಬೇಕೆಂದು ಸೂಚನೆ ಮಾಡಿದ್ದರಿಂದ ೨೦ನೇ ತಾರೀಖಿಗೆ ಸಭೆಯನ್ನು ಮುಂದೂಡಬೇಕಾಗಿದೆ. ಅದು ಇಲ್ಲದೇ ಇದ್ದಿದ್ದರೆ, ಮೊದಲು

ಯೋಚನೆ ಮಾಡಿದಹಾಗೆ ಬಹುಶಃ ಜುಲೈ ೧೫ನೇ ತಾರೀಖಿನವರೆಗೆ ಈ ಅಧಿವೇಶನವನ್ನು ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತಿತ್ತು. ಒಂದು ವಿಷಾದದ ಸಂಗತಿ ಏನೆಂದರೆ ಕಳೆದ ೪ ದಿನ ಒಂದೊಂದೇ ದಿವಸ ೮–೧೦ ಬೇರೆ ಬೇರೆ ಖಾತೆಗಳ ಬೇಡಿಕೆಗಳನ್ನು ಸೇರಿಸಿ ಅವಸರಅವಸರದಲ್ಲಿ ಪಾಸು ಮಾಡತಕ್ಕ ಪ್ರಸಂಗ ಬಂದಿದೆ. ಬೇಡಿಕೆಗಳಿಗೆ ಹೆಚ್ಚು ಸಮಯವನ್ನು ಚರ್ಚೆಗಾಗಿ ಕೊಟ್ಟಿದ್ದೆವು. ಯಾವ ಉದ್ದೇಶದಿಂದ ಹೆಚ್ಚು ಸಮಯವನ್ನು ಕೊಟ್ಟಿದ್ದೆವೋ ಆ ಉದ್ದೇಶ ಈಡೇರಲಿಲ್ಲ ಎನ್ನುವುದು ವಿಷಾದದ ಸಂಗತಿ. ನಾನು ಮಾನ್ಯಸದಸ್ಯರುಗಳಿಗೆ ಬುದ್ಧಿವಾದ ಮಾಡತಕ್ಕ ಶಕ್ತಿ ಇಲ್ಲ. ಈ ಸಂದರ್ಭದಲ್ಲಿ ಒಂದು ಸೂಚನೆಯನ್ನು ಮತ್ತೊಮ್ಮೆ ಮಾಡಿದರೆ ಪ್ರಮಾದವಾಗಲಿಕ್ಕಿಲ್ಲ. ಶಾಸನ ಮಂಡಳ ನಡೆಯುವಾಗ, ಮಾನ್ಯ ಸದಸ್ಯರ ತಲೆಯಲ್ಲಿ ಅನೇಕ ವಿಚಾರಗಳು ಬರುತ್ತೆ. ಈ ವಿಚಾರ ಗಳಲ್ಲಿ ಯಾವುದನ್ನು ಯಾವ ಹೊತ್ತಿಗೆ ಎಷ್ಟರಮಟ್ಟಿಗೆ ನಾವು ಪ್ರಸ್ತಾಪಿಸಬಹುದು, ಎಷ್ಟು ಸಮಯ ವನ್ನು ಎಷ್ಟು ಅವಕಾಶವನ್ನು ಉಪಯೋಗಿಸಿ ಕೊಳ್ಳಬೇಕೆಂಬುದನ್ನು ನಾವು ಸಾರಾಸಾರಾ ವಿಚಾರ ಮಾಡಿ ನಿರ್ಣಯ ಮಾಡಬೇಕಾಗುತ್ತದೆ. ಅದನ್ನು ಮಾಡದಿದ್ದರೆ, ಅನೇಕ ಸಣ್ಣಪುಟ್ಟ ವಿಚಾರಗಳ ಬಗ್ಗೆ, ಅಲಕ್ಷಿಸಬಹುದಾದ ವಿಚಾರಗಳ ಬಗ್ಗೆ ಗಂಟೆಗಟ್ಟಲೆ ಈ ಮನೆಯಲ್ಲಿ ಚರ್ಚೆಯಾಗಿ, ನೂರಾರು ಕೋಟಿ, ಸಾವಿರಾರು ಕೋಟಿ ಖರ್ಚು ಮಾಡುವ ಬೇರೆ ಬೇರೆ ಖಾತೆಗಳ ಖರ್ಚುವೆಚ್ಚದ ವಿಚಾರದಲ್ಲಿ ಸಾಕಷ್ಟು ಸಮಯವನ್ನು ಕೊಡದೇ ಇರತಕ್ಕ ಪರಿಸ್ಥಿತಿ ಉಂಟಾಗುತ್ತದೆ. ಇನ್ನು ಮುಂದಾದರೂ ಈ ಸದನದ ಸಮಯವನ್ನು ಉಪಯೋಗ ಮಾಡುವಾಗ ಈ ರೀತಿಯ ಯೋಗ್ಯವಾದಂಥ ನಿರ್ಣಯ ತೆಗೆದುಕೊಳ್ಳಬೇಕೆಂದು ಸೂಚನೆ ಮಾಡುತ್ತೇನೆ. ಈ ವರ್ಷದ ಬಜೆಟ್ ಖೋತಾ ಬಜೆಟ್ ಬಹಳ ದೊಡ್ಡ ಖೋತಾ ಬಜೆಟ್ ಎಂದು ಹೇಳಿದರು. ಇದು ಒಂದು ರಾಜ್ಯಕ್ಕೆ ವಿಶಿಷ್ಟವಾದ ಖೋತಾ ಅಲ್ಲ. ಅದನ್ನು ಮಾನ್ಯ ಸದಸ್ಯರುಗಳು ಗಣನೆಗೆ ತೆಗೆದುಕೊಳ್ಳಬೇಕು. ಒಂದೆರಡು ಸಣ್ಣ ರಾಜ್ಯ ಗಳನ್ನು ಬಿಟ್ಟರೆ, ಪ್ರತಿಯೊಂದು ರಾಜ್ಯದ ಬಜೆಟನ್ನು ಈ ವರ್ಷ ತುಲನೆ ಮಾಡಿ ನೋಡಿದರೆ ಈ ವರ್ಷದ್ದು ನಮ್ಮದ್ದು ಖೋತಾ ಬಜೆಟ್ ಆಗಿದೆ. ಇದರ ಅರ್ಥ ಏನಿರಬೇಕು ? ಇದನ್ನು ಮಾನ್ಯ ಸದಸ್ಯರುಗಳು ಗ್ರಹಿಸಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಇದಕ್ಕೆ ಕಾರಣ, ಇಡೀ ದೇಶದಲ್ಲಿ ಎದುರಿಸತಕ್ಕ ಆರ್ಥಿಕ ಮುಗ್ಗಟ್ಟು. ಕಳೆದ ೩–೪ ವರ್ಷಗಳಿಂದ ಈ ಮನೆಯ ಸದಸ್ಯರುಗಳಾದ ಮಾನ್ಯ ಮೊಯಿಲಿಯವರು, ಇತರೇ ಸದಸ್ಯರುಗಳು ನಮ್ಮ ರಾಜ್ಯದ ಬಗ್ಗೆ ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿ ಬಗ್ಗೆ, ನಾವು ಎದುರಿಸಬೇಕಾದ ಆರ್ಥಿಕ ಮುಗ್ಗಟ್ಟಿನ ಬಗ್ಗೆ ಉಗ್ರವಾದ ಟೀಕೆಯನ್ನು ಮಾಡುತ್ತಾ ಬಂದಿದ್ದಾರೆ. ಒಂದೆರಡು ಸಂದರ್ಭಗಳಲ್ಲಿ ಈ ಸರ್ಕಾರ ದಿವಾಳಿಯ ತುದಿಯಲ್ಲಿ ಇದೆ, ಸರ್ಕಾರಿ ನೌಕರರಿಗೆ ಸಂಬಳ ಕೊಡತಕ್ಕಂಥ ಯೋಗ್ಯತೆ ಕೂಡ ಈ ಸರ್ಕಾರಕ್ಕೆ ಇಲ್ಲ, ಅದಕ್ಕೆ ಬೇಕಾಗುವಷ್ಟು ಹಣಕಾಸು ಇಲ್ಲ ಎಂದು ಅವರು ಮಾತನಾಡಿದ್ದಾರೆ. ನಾನು ನಮ್ಮ ಸರ್ಕಾರದ ಆರ್ಥಿಕ ಆರೋಗ್ಯದ ಬಗ್ಗೆ ಮುಖ್ಯವಾಗಿ ಈ ಸದನದಲ್ಲಿ ನಾನು ಎಂದೂ ಒಂದು ಚೂರು ಕೂಡ ಮುಚ್ಚುಮರೆ ಮಾಡಿಲ್ಲ. ನಾನು ಸಾರ್ವಜನಿಕ ರಿಂದಲೂ ಅದನ್ನು ಬಚ್ಚಿಟ್ಟಿಲ್ಲ. ಅದನ್ನು ಬಚ್ಚಿಡಲಿಕ್ಕೆ ಸರ್ಕಾರಕ್ಕೆ ಅದರಿಂದ ಯಾವುದೇ ತರಹದ ಲಾಭ ಇಲ್ಲ. ಯಾವ ರೀತಿ ಶರೀರದ ರೋಗವನ್ನು ಬಚ್ಚಿಟ್ಟರೆ ಅದರಿಂದ ಲಾಭ ಇಲ್ಲವೋ ಅದೇರೀತಿ ಅದು ಕೇಂದ್ರಸರ್ಕಾರ ಇರಲಿ, ರಾಜ್ಯಸರ್ಕಾರ ಇರಲಿ, ಇಂತಹ ಜವಾಬ್ದಾರಿಯನ್ನು ಹೊತ್ತಿರುವಂಥ ಯಾವುದೇ ಬೇರೆ ಸಂಸ್ಥೆ ಇರಲಿ, ಜಿಲ್ಲಾ ಪರಿಷತ್ ಇರಲಿ, ಮಂಡಲ್ ಪಂಚಾಯತ್ ಇರಲಿ, ಈ ಸಂಸ್ಥೆಗಳು ಮುಖ್ಯವಾಗಿ ತಮ್ಮ ಚಲನವಲನ, ತಮ್ಮ ಚಟುವಟಿಕೆಗಳಿಗೆ ತಮ್ಮ ಕಾರ್ಯ ಕ್ರಮವನ್ನು ನಿರ್ವಹಿಸುವುದಕ್ಕೆ ಯಾವ ಆರ್ಥಿಕ ಬಲಬೇಕು, ಶಕ್ತಿ ಬೇಕು, ಅದರ ಬಗ್ಗೆ ಸ್ಪಷ್ಟವಾಗಿ ಜನತೆಯ ಮುಂದೆ ಚಿತ್ರವನ್ನು ಇಡತಕ್ಕದ್ದು ಒಳ್ಳೆಯದು ಎಂದು ನಾನು ಮೊದಲಿನಿಂದಲೂ ಹೇಳುತ್ತಾ ಬಂದಿದ್ದೇನೆ. ಇದು ಇವೊತ್ತು ಹೇಳತಕ್ಕ ಹೊಸ ಮಾತು ಅಲ್ಲ. ನಾವು ಕಳೆದ ಮೂರು ನಾಲ್ಕು ವರ್ಷಗಳಿಂದಲೂ ಈ ಕೊರತೆ ಮುಂಗಡ ಪತ್ರದ ಯುಗದಲ್ಲಿ ಇದ್ದೇವೆ. We are in an age of deficit financing. ಇದು ಎಲ್ಲಾ ಸರ್ಕಾರಕ್ಕೂ ಬಂದಂಥ ತೊಂದರೆಯೇ ಹೊರತು ಕೇವಲ ನಮ್ಮ ಸರ್ಕಾರಕ್ಕೆ ಬಂದಿರುವಂತಾದ್ದು ಅಲ್ಲ ನಾನು ಅನೇಕ ಸಂದರ್ಭಗಳಲ್ಲಿ ಕೇಂದ್ರಸರ್ಕಾರದ ಕಡೆ ಬೆರಳು ಮಾಡಿ ತೋರಿಸಿದ್ದೇನೆ ಅಲ್ಲಿ ಎಷ್ಟು ಡೆಫಿಸಿಟ್ ಇದೆ, ಪಬ್ಲಿಕ್ ಬಾರೋಯಿಂಗ್ ಎಷ್ಟು ಇದೆ, ಡಿಫಿಸಿಟ್ ಫೈನಾನ್ಸಿಂಗ್ ಎಷ್ಟರಮಟ್ಟಿಗೆ ಮಾಡುತ್ತಿದ್ದಾರೆ ಎಂದು ತೋರಿಸತಕ್ಕದ್ದು ಹಿಂದೆ ಹೇಳಿದ ಉದ್ದೇಶ ಅವರನ್ನು ಟೀಕೆ ಮಾಡಿ ನಾವು ಮಾಡತಕ್ಕದ್ದನ್ನು ಸಮರ್ಥಿಸಿಕೊಳ್ಳುವುದಕ್ಕೆ ಮಾತ್ರ ಅಲ್ಲ. ಇದರ ಉದ್ದೇಶ ಏನು ಅಂದರೆ ಇಡೀ ದೇಶವೇ ಅಂತಹ ಒಂದು ಆರ್ಥಿಕ ಮುಗ್ಗಟ್ಟನ್ನು ಎದುರಿಸತಕ್ಕ ಪ್ರಸಂಗ ಬಂದಿದೆ. ಆದ್ದರಿಂದ, ಅದರಲ್ಲಿ ಒಂದು ಭಾಗವಾಗಿ ಮುಗ್ಗಟ್ಟನ್ನು ನಾವು ಎದುರಿಸ ತಕ್ಕದ್ದು ಸಹಜವಾದುದು ನೈಸರ್ಗಿಕವಾದುದು ಎಂದು ಮಾನ್ಯ ಸದಸ್ಯರಿಗೆ ತಿಳಿಸಲಿಕ್ಕೆ ಇಷ್ಟ ಪಡುತ್ತೇನೆ. ಇನ್ನು ಈ ವರ್ಷದ ಬಡ್ಜೆಟ್ ಭಾಷಣದಲ್ಲಿ ಅನೇಕ ಅಂಕಿಸಖ್ಯೆಗಳನ್ನು ಕೊಟ್ಟಿದ್ದೇನೆ,

ಅವುಗಳಲ್ಲಿ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಂತೆ ಹಿಂದಿನ ಅನೇಕ ವರ್ಷಗಳಿಗೆ ಸಂಬಂಧಿಸಿದಂತೆ ತುಲನಾತ್ಮಕ ಅಂಕಿ ಸಂಖ್ಯೆಗಳು ಇವೆ, ಕೆಲವು ಮಹತ್ವದ ಬಾಬುಗಳಲ್ಲಿ ನಮ್ಮ ರಾಜ್ಯದ, ಇನ್ನಿತರ ರಾಜ್ಯಗಳ ನಮ್ಮ ರಾಜ್ಯ ಮತ್ತು ಕೇಂದ್ರ ಸರ್ಕಾರ, ಇಡೀ ದೇಶ ಅವುಗಳಿಗೆ ಸಂಬಂಧಪಟ್ಟಂತೆ ತುಲನಾತ್ಮಕ ಅಂಕಿಸಂಖ್ಯೆಗಳು ಇವೆ. ಆ ಒಂದು ಅಂಕಿಸಂಖ್ಯೆಗಳನ್ನು ಮಾನ್ಯ ಸದಸ್ಯರು ಓದಿದ್ದಾರೆಂದು ನಾನು ಭಾವಿಸಿದ್ದೇನೆ. ಎರಡು ವಿಚಾರವನ್ನು ಮಾತ್ರ ನಾನು ಅದರಿಂದ ಇಲ್ಲಿ ಉದ್ಧರಿಸಲಿಕ್ಕೆ ಬಯಸುತ್ತೇನೆ ಮೊದಲನೆಯದು ಅಂದರೆ ನಾವು ಏನು ಇವೊತ್ತು ಆರ್ಥಿಕ ಮುಗ್ಗಟ್ಟುಗಳನ್ನು ಎದುರಿಸುತ್ತಿದ್ದೇವೆ ಆ ಮುಗ್ಗಟ್ಟುಗಳಲ್ಲಿ ನಮ್ಮ ಸರ್ಕಾರ ಎಷ್ಟರಮಟ್ಟಿನ ಭಾರವನ್ನು, ಕಷ್ಟವನ್ನು ಎಷ್ಟರಮಟ್ಟಿನ ಸಮಸ್ಯೆಯನ್ನು ಎದುರಿಸಬೇಕಾಗಿದೆ. ಎನ್ನುವುದನ್ನು ತೋರಿಸಲು ಈಗ ರಾಜ್ಯದ ಯಾವ ಒಂದು ಯೋಜನೆಯನ್ನು ಸಿದ್ಧಮಾಡುತ್ತಿದ್ದೇವೆಯೋ ಆ ಸಿದ್ಧಮಾಡಿದಂಥ ಯೋಜನೆಯನ್ನು ಕಾರ್ಯಗತ ಮಾಡಲಿಕ್ಕೆ ಬೇಕಾಗುವ ಹಣದ ಅನುಕೂಲತೆಯನ್ನು ಅನೇಕ ವಿಧದಲ್ಲಿ ಮಾಡಬೇಕಾಗುತ್ತದೆ. ಆದರೆ ಅದರಲ್ಲಿ ಮುಖ್ಯವಾಗಿ 2 ವಿಧಗಳಿವೆ. ಮೊದಲನೆಯದು ಏನೆಂದರೆ ನಮ್ಮ ಸ್ವಂತ ರಿಸೋರ್ಸಸ್. ಅದು ಟ್ಯಾಕ್ಸ್ ಮುಖಾಂತರ ಬರಬಹುದು, ಸಾಲದ ಮುಖಾಂತರ ಬರಬಹುದು ಅಥವಾ ನಾವು ಉದ್ದಿಮೆಗಳಮೇಲೆ ಹಾಕಿದ ಹಣದ ಬಾಬಿನಿಂದ ಬರಬಹುದು, ಅಥವಾ ಇನ್ನು ಬೇರೆ ಯಾವುದೇ ಬಾಬಿನಿಂದ ಬರಬಹುದಾದ್ದು ಇರಬಹುದು.

ಇನ್ನು ಎರಡನೆಯದಾಗಿ, ಕೇಂದ್ರಸರ್ಕಾರ ಮತ್ತು ಎಕ್ಸ್‌ಟರ್ನಲ್ ಅಸಿಸ್ಟೆನ್ಸ್. ನಾವು ಈ ಜವಾಬ್ದಾರಿಯನ್ನು ಅಥವಾ ಈ ಜವಾಬ್ದಾರಿಯ ಹೊರೆಯನ್ನು ಎಷ್ಟರಮಟ್ಟಿಗೆ ಹೊರಬೇಕಾಗಿದೆ ಎಂಬುದನ್ನು ತೋರಿಸಲಿಕ್ಕೆ ನನ್ನ ಬಜೆಟ್ ಭಾಷಣದ ಅನೆಕ್ಸರ್ ೭ ರಲ್ಲಿ ಕೊಟ್ಟಿದ್ದೇನೆ. ಅದನ್ನು ಮಾನ್ಯ ಸದಸ್ಯರು ದಯವಿಟ್ಟು ಗಮನಿಸಬೇಕು. States' own Revenues as proportion of the Aggregate plan Expenditure. ಈಗ ನಮ್ಮ ಕರ್ನಾಟಕದ್ದು ಮೊದಲನೇ ಪ್ಲಾನ್‌ನಲ್ಲಿ ೩೦.೯ ಪರ್ಸೆಂಟ್ ಇದ್ದರೆ, ೭ನೇ ಪ್ಲಾನ್‌ನಲ್ಲಿ ೭೬.೨ ಪರ್ಸೆಂಟ್. ಅಂದರೆ ಮೊದಲನೇ ಪ್ಲಾನ್‌ನಲ್ಲಿ ನಮಗೆ ಎಷ್ಟು ಹಣ ಕೇಂದ್ರಸರ್ಕಾರದಿಂದ ಬರುತ್ತಿತ್ತು ಈಗ ಅಷ್ಟೇ ಮೊತ್ತವನ್ನು ನಾವು ಸ್ವಂತವಾಗಿ, ಸ್ವಂತ ಜವಾಬ್ದಾರಿಯನ್ನು ಹೊತ್ತು ಸಂಗ್ರಹಿಸಬೇಕಾಗಿದೆ, ರೂಢಿಸಿಕೊಳ್ಳಬೇಕಾಗಿದೆ. ರಿಸೋರ್ಸ್ ಮೊಬಲೈಸೇಷನ್‌ನ್ನು ಕೂಡಿಸಿಕೊಳ್ಳಬೇಕಾಗಿದೆ. ಉದಾಹರಣೆಗೆ ಹೇಳುವುದಾದರೆ, ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ೧೦೦೦ ಕೋಟಿ ರೂಪಾಯಿಯಷ್ಟು ನಮ್ಮ ಯೋಜನೆಯ ಮೊತ್ತ ಇದ್ದರೆ, ಇದರಲ್ಲಿ ನಾವು ಸ್ವಂತವಾಗಿ ಖರ್ಚುಮಾಡಬೇಕಾಗಿದ್ದುದು ಕೇವಲ ೩೦೦ ಕೋಟಿ ರೂಪಾಯಿಗಳು ಆದರೆ ಈಗ ಅದೇ ೧೦೦೦೦ ಕೋಟಿ ರೂಪಾಯಿಯನ್ನು ಒಂದು ಯೋಜನೆಗೆ ನಾವು ಸ್ವಂತವಾಗಿ ಸಂಗ್ರಹಿಸಿಕೊಳ್ಳಬೇಕಾದ್ದು, ನಮ್ಮ ಶಕ್ತಿಯಿಂದ ನಾವು ಖರ್ಚುಮಾಡಬೇಕಾದ್ದು ೭೬೦.೨೦ ಕೋಟಿ ರೂಪಾಯಿಗಳು. ಅಂದರೆ ಇದರಲ್ಲಿ ಎಷ್ಟು ವ್ಯತ್ಯಾಸ ಇದೆ ಎಂಬುದನ್ನು ಇದು ತೋರಿಸುತ್ತದೆ.

ಇದೇರೀತಿ ಇನ್ನೊಂದು ತಃಖ್ತೆಯನ್ನು ಮಾನ್ಯ ಸದಸ್ಯರು ದಯವಿಟ್ಟು ನೋಡಬೇಕು. ರಾಜ್ಯ ಸರ್ಕಾರ ತನ್ನ ಸ್ವಂತ ಆದಾಯ ಅಂದರೆ ತೆರಿಗೆ ಮೊದಲಾದುವುಗಳನ್ನು ಹೊರತಾಗಿ ಸ್ವಂತ ಬಾರೋಯಿಂಗ್‌ನಲ್ಲಿ, ಮಾರ್ಕೆಟ್ ಬಾರೋಯಿಂಗ್‌ನಲ್ಲಿ, ಬೇರೆ ಬೇರೆ ಸಂಸ್ಥೆಗಳಿಂದ ಏನು ಸಾಲವನ್ನು ಪಡೆಯಬಹುದೋ ಆ ಸಾಲವನ್ನು ಪಡೆದು ನಮ್ಮ ಯೋಜನೆಗಳನ್ನು ಕಾರ್ಯಗತ ಮಾಡಬೇಕಾಗುತ್ತದೆ. ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ನಮ್ಮ ಒಟ್ಟು ಸಾಲ ಏನಿದೆ, ಟೋಟಲ್ ಮಾರ್ಕೆಟಿಂಗ್ ಬಾರೋಯಿಂಗ್‌ನಲ್ಲಿ ಅಂದರೆ ೩೨,೨೫೯ ಕೋಟಿ ರೂಪಾಯಿ ಇದ್ದರೆ ಕೇವಲ ೬,೭೦೦ ಕೋಟಿ ರೂಪಾಯಿ ಮಾತ್ರ ಎಲ್ಲ ರಾಜ್ಯಗಳಿಗೆ ಸಿಕ್ಕಿದೆ. ಇದೂ ಕೂಡ ಮೊದಲು ನಮಗೆ ಎಷ್ಟು ಸಿಕ್ಕುತಿತ್ತು ಅದರ ಅರ್ಧಕಿಂತ ಕಡಮೆಯಾಗಿದೆ. ಹೀಗೆ ರಾಜ್ಯ ಸರ್ಕಾರಗಳು ತಮ್ಮ ಸ್ವಂತ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳುವುದರಲ್ಲಿಯೂ ಕೂಡ ಇವತ್ತು ನಮಗೆ ಅನೇಕ ರೀತಿಯ ತೊಂದರೆಯಾಗುತ್ತಿದೆ. ಇದನ್ನು ತೋರಿಸಲಿಕ್ಕೆ ಈ ಎರಡನೇ ತಃಖ್ತೆಯನ್ನು ಮಾನ್ಯ ಸದಸ್ಯರೆಲ್ಲರ ಗಮನಕ್ಕೆ ತಂದಿದ್ದೇನೆ. ಮಾನ್ಯ ಸದಸ್ಯರಾದ ಮೊಯ್ಲಿಯವರು ಮತ್ತು ಇನ್ನೂ ಒಂದೆರಡು ಜನ ಮಾನ್ಯ ಸದಸ್ಯರುಗಳು ಈ ಯೋಜನಾ ಮೊತ್ತದಲ್ಲಿ ಸುಮಾರು ೩೦೦ ಕೋಟಿ ರೂಪಾಯಿಗಳನ್ನು ಗಳನ್ನು ಕಡಿಮೆ ಮಾಡಿದ್ದಾರೆಂದು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಬಸವಲಿಂಗಪ್ಪನವರೂ ಕೂಡ ಈ ಮಾತನ್ನೇ ಹೇಳಿದ್ದಾರೆ. ಇದು ನಿಜ. ಸುಮಾರು ಮುನ್ನೂರು ಕೋಟಿ ರೂಪಾಯಿಗಳನ್ನು ಕಡಿಮೆ ಮಾಡಿದ್ದೇವೆಂದು ಮಾನ್ಯ ಬಸವಲಿಂಗಪ್ಪನವರಿಗೆ ಹೇಳಿದ್ದೇನೆ. ಅದು ನಿಜ, ಅದನ್ನು ಎಂದು ನಾನು ಅಲ್ಲಗಳೆದಿಲ್ಲ. ಇಷ್ಟೇ ಅಲ್ಲ, ಮೊನ್ನೆದಿನ ಬಜೆಟ್ ಮಂಡಿಸುವ ಸುಮಾರು ೪-೫ ತಿಂಗಳ ಮುಂಚೆ ಪ್ರಸ್ತಾಪ ಮಾಡಿದ್ದೇನೆ.

ಯಾವಾಗ ಪ್ಲಾನಿಂಗ್ ಕಮಿಷನ್ ಜೊತೆಗೆ ಮಿಡ್‌ಟರ್ಮ್ ಆಯಿತು, ಅವಾಗ ಪ್ರತಿ ವರ್ಷದ ಮೊತ್ತದಲ್ಲಿ ಆ ವರ್ಷದ ಯೋಜನೆಗಳಿಗೆ ಸಂಬಂಧಪಟ್ಟ ರಿಸೋರ್ಸಸ್ ಮತ್ತು ಇಂಪ್ಲಿಮೆಂಟೇಷನ್ ವಿಚಾರದಲ್ಲಿ ನಾವು ಒಂದು ವಿಮರ್ಶೆಯನ್ನು ಮಾಡುತ್ತೇವೆ. ಅದು ಆದ ತಕ್ಷಣವೇ ನಾನು ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದೇನೆ. ಪ್ರತಿವರ್ಷ ಒಂದು ದೊಡ್ಡ ಮೊತ್ತದ ಯೋಜನಾ ವ್ಯಯವನ್ನು ಮಾಡಬೇಕೆಂಬ ವಿಚಾರವಿರುತ್ತದೆ. ಆದರೆ ಅಷ್ಟು ದೊಡ್ಡ ವೆಚ್ಚವನ್ನು ಮಾಡಲು ಸಾಧ್ಯವಾಗಲಿಲ್ಲ ಅದಕ್ಕೆ ಕಾರಣ ಕೂಡ ಕೊಟ್ಟಿದ್ದೇನೆ. ಯಾವ ಕಾರಣದಿಂದ ನಮ್ಮ ಆದಾಯ ಕಡಿಮೆಯಾಯಿತು, ಯಾವ ಕಾರಣದಿಂದ ನಾವು ಅನೇಕ ರೀತಿಯ ಹೆಚ್ಚಿನ ಖರ್ಚು ಮಾಡತಕ್ಕಂಥ ಪ್ರಸಂಗ ಬಂದಿತ್ತು ಇವೆರಡರ ಪರಿಣಾಮ ನಾವು ಯೋಜನೆಗೆ ಮೊದಲೇ ಹಾಕಿಕೊಂಡ ಕಾರ್ಯಕ್ರಮದ ವೆಚ್ಚವನ್ನು ಕಡಿತ ಮಾಡತಕ್ಕಂಥ ಪ್ರಸಂಗ ಬಂದಿದೆ ಎಂದು ಹೇಳಿದ್ದೆ. ಕಳೆದ ಅಧಿವೇಶನದಲ್ಲಿ ಸಾಮಾನ್ಯ ಚರ್ಚೆಗೆ ಉತ್ತರವನ್ನು ಕೊಡುವಾಗ ಮಾನ್ಯ ಸದಸ್ಯರಿಗೆ ತಿಳಿಸಿದ್ದೆ. ಈ ವಿಚಾರದಲ್ಲಿಯೂ ಕೂಡ ಕರ್ನಾಟಕದ್ದೇ ಒಂದು ವಿಶಿಷ್ಟ ಪರಿಸ್ಥಿತಿಇಲ್ಲ, ಬೇರೆ ರಾಜ್ಯಗಳಲ್ಲೂ ಕೂಡ ಇದೇ ರೀತಿಯಲ್ಲೂ ಯೋಜನಾ ವೆಚ್ಚದಲ್ಲಿ ಬಹುಮಟ್ಟದ ಖೋತಾ ವೆಚ್ಚ ಮಾಡತಕ್ಕಂಥ ಪರಿಸ್ಥಿತಿ ಬಂದಿದೆ ಎಂದು ಹೇಳಿದ್ದೆ. ೨-೩ ರಾಜ್ಯಗಳ ಉದಾಹರಣೆಯನ್ನು ಕೊಟ್ಟಿದ್ದೆ. ಮಹಾರಾಷ್ಟ್ರ ಸರ್ಕಾರ ಎಂದೂ ಆರ್ಥಿಕ ದೃಷ್ಟಿಯಿಂದ ಅತಿ ಶಕ್ತಿಯುತವಾದ ಸರ್ಕಾರ. ಹೆಚ್ಚಿನ ಸಾಮರ್ಥ್ಯ ಇದ್ದಂತಹ ಸರ್ಕಾರ. ನಮ್ಮ ಕಮರ್ಷಿಯಲ್ ಟ್ಯಾಕ್ಸ್ ಉತ್ಪಾದನೆಯ ಒಂದರಿಂದ ಬರತಕ್ಕಂಥ ಆದಾಯ ಒಂದು ಸಾವಿರ ಕೋಟಿ ರೂಪಾಯಿ ಗಳೆಂದು ಇಟ್ಟುಕೊಂಡರು ಎಂದೂ ಆ ಒಂದು ನಿಗದಿತ ಮಟ್ಟವನ್ನು ಮುಟ್ಟಲಿಲ್ಲ. ಆದರೆ ಮಹಾರಾಷ್ಟ್ರದಲ್ಲಿ ಎರಡು ಸಾವಿರ ಕೋಟಿಗಿಂತ ಹೆಚ್ಚು ಆದಾಯ ಹೆಚ್ಚಾಗಿದೆ. ಅದು ಒಂದರಿಂದಲೇ ಎಂದು ತಿಳಿದು ಕೊಳ್ಳಬಹುದು. ಆರ್ಥಿಕ ಶಕ್ತಿ ಅಷ್ಟು ಉತ್ತಮವಾಗಿದ್ದರೂ ಅಂಥ ಸರ್ಕಾರವೇ ಕಳೆದದ ವರ್ಷ ಯೋಜನಾ ವೆಚ್ಚವನ್ನು ಸುಮಾರು ೬೦೦ ಕೋಟಿ ರೂಪಾಯಿಗಳಿಗೆ ಖೋತಾ ಮಾಡ ತಕ್ಕಂಥ ಪ್ರಸಂಗ ಬಂದಿತು. ಅಂದರೆ ನಮಗಿಂತ ಎರಡರಷ್ಟು. ಉತ್ತರ ಪ್ರದೇಶದ್ದು ೨,೦೦೦ ಕೋಟಿ ರೂಪಾಯಿಗಳು ವಾರ್ಷಿಕ ಯೋಜನೆಯಾಗಿದೆ. ೧೯೮೭-೮೮ನೇ ವರ್ಷದಲ್ಲಿ ಅಲ್ಲಿನ ಯೋಜನೆ ಯನ್ನು ಒಂದು ಸಾವಿರ ಕೋಟಿಗಳಷ್ಟು ಖೋತ ಮಾಡಿದರು. ಆದ್ದರಿಂದ ಮಾನ್ಯ ಸದಸ್ಯರು ದಯಮಾಡಿಟ್ಟು ಇದನ್ನು ನಂಬಬೇಕು. ಈವತ್ತಿನ ದಿವಸ ಆರ್ಥಿಕ ಮುಗ್ಗಟ್ಟಾದಾಗ ಕೇವಲ ನಮ್ಮ ಸರ್ಕಾರ ಕಾರಣ, ನಮ್ಮ ರಾಜ್ಯದಲ್ಲಿ ಇದ್ದಂಥ ವಿಚಾರವೇ ಕಾರಣವೆಂದು ಹೇಳಿದ್ದಾರೆ ಅದು ಸತ್ಯಕ್ಕೆ ದೂರವಾದಂಥ ಮಾತು ಎಂದು ಹೇಳುತ್ತೇನೆ. ಆಮೇಲೆ ಇದೇ ಸಂದರ್ಭದಲ್ಲಿ ಮತ್ತೊಂದು ಮಾತನ್ನು ಹೇಳಲೇಬೇಕಾಗುತ್ತದೆ. ಯೋಜನೇತರ ವೆಚ್ಚ ಹೆಚ್ಚಾಗುತ್ತದೆಂದು ಅದನ್ನು ನಾನು ಹೇಳತಕ್ಕಂಥ ಮಾತನ್ನು ಮಾನ್ಯ ಸದಸ್ಯರು ಅನೇಕ ಬಾರಿ ಹೇಳಿದ್ದಾರೆ. ನಾನು ಅದನ್ನು ಒಪ್ಪಿದ್ದೇನೆ. ಎಂದೂ ಅಲ್ಲಗಳೆದಿಲ್ಲ ಯೋಜನೇತರ ವೆಚ್ಚವನ್ನು ನಾವು ಆದಷ್ಟು ಕಡಿಮೆ ಮಾಡಬೇಕು ಎನ್ನುವ ಪ್ರಯತ್ನ ಮಾಡಿದರೂ ಕೂಡ ಇದರಲ್ಲಿ ೧೦೦ಕ್ಕೆ ೧೦೦ ರಷ್ಟು ನಮಗೆ ಯಶಸ್ಸು ಸಿಗಲಿಲ್ಲ. ಕಾರಣ ಏನು ? ಕಾರಣ ಮೂರು ಇವೆ. ಮೊದಲನೆಯದು ಪ್ರತಿ ವರ್ಷ ನಾವು ಏನು ಸಾಮಾಗ್ರಿಗಳನ್ನು ಸರ್ಕಾರಿ ಆಫೀಸುಗಳಿಗೆ ಖರೀದಿ ಮಾಡುತ್ತೇವೆ, ಈ ವೆಚ್ಚದ ಒಂದು ಕೋಟಿರೂಪಾಯಿಗಳನ್ನು ಯೋಜನೇತರ ಬಾಬುಗಳಿಗೆ ಒದಗಿಸುತ್ತೇವೆ. ಈ ಹಣದಲ್ಲಿ ಶೇಕಡಾ ೨೦-೩೦ ರಷ್ಟು ಪ್ರತಿವರ್ಷ ಹೆಚ್ಚಾಗುತ್ತಾ ಹೋಗುತ್ತದೆ. ಎರಡನೆಯ ಕಾರಣ ಇನ್‌ಫ್ಲೇಷನ್ ಅಂದರೆ ಬೆಲೆ ಏರಿಕೆ ಕಾರಣದಿಂದ ಸರ್ಕಾರಿ ನೌಕರರ ಸಂಬಳ ಹೆಚ್ಚಾಗುತ್ತಾ ಹೋಗುತ್ತದೆ. ಮಾನ್ಯ ಅಧ್ಯಕ್ಷರೇ, ಇದು ಹೊಸದೇನು ಅಲ್ಲ. ನಮ್ಮ ಸರ್ಕಾರಕ್ಕೆ ಶಿಕ್ಷಣಕ್ಕಾಗಿ ಬರುವಂಥ ವಾರ್ಷಿಕ ವೆಚ್ಚ ಎರಡುನೂರು ಕೋಟಿಗಿಂತ ಕಡಿಮೆಯಾಯಿತು. ಅಂದರೆ ಕಳೆದ ವರ್ಷ ಶಿಕ್ಷಣ ಖಾತೆಗೆ ೫೦೦ ಕೋಟಿ ರೂಪಾಯಿ

೪-೦೦ ಪಿ. ಎಂ.

ಗಳನ್ನು. ಈ ವರ್ಷ ೬೦೦ ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವನ್ನು ಕೊಟ್ಟಿದ್ದೇವೆ. ಅಂದರೆ ಕೇವಲ ೫ ವರ್ಷಗಳಹಿಂದೆ ಏನೊಂದು ವೆಚ್ಚವನ್ನು ಈ ಖಾತೆಯಲ್ಲಿ ಮಾಡುತ್ತಿದ್ದರು ಅದಕ್ಕೆ ೩ರಷ್ಟು ಹೆಚ್ಚು ಹಣವನ್ನು ಇವತ್ತು ಖರ್ಚು ಮಾಡುತ್ತಿದ್ದೇವೆ. ಇದೇ ರೀತಿ ಬೇರೆ ಖಾತೆಗಳ ಉದಾಹರಣೆ ಗಳನ್ನು ಕೊಡಬಹುದು. ಮೂರನೆಯದು ಸೋಷಿಯಲ್ ವೆಲ್‌ಫೇರ್ ಪ್ರೋಗ್ರಾಂ. ಈ ಕಾರ್ಯ ಕ್ರಮದಲ್ಲಿ ಕರ್ನಾಟಕ ಇವತ್ತು ಗರ್ವ ಪಡುವಂಥ ಸ್ಥಿತಿಯಲ್ಲಿದೆ. ಇದರಲ್ಲಿರತಕ್ಕದ್ದು ಎಲ್ಲವೂ ಯೋಜನೇತರ ವೆಚ್ಚ ಅಲ್ಲ. ಕೆಲವು ಯೋಜನೇತರ ವೆಚ್ಚಗಳಿವೆ. ಹಾಗೆಂದು ಅದನ್ನು ಸಂಪೂರ್ಣ ವಾಗಿ ಕೈಬಿಡಲು ಸಾಧ್ಯವಿಲ್ಲ. ನಾವು ಯೋಜನೇತರ ವೆಚ್ಚವನ್ನು ಕಡಿಮೆ ಮಾಡಬೇಕೆಂಬ ಉದ್ದೇಶ ದಿಂದ ಜೀರೋ ಬಜೆಟ್ ಮಾಡಬೇಕೆಂದು ಅನೇಕ ಸಾರಿ ಚರ್ಚೆ ಮಾಡಿದರೂ ಸಹ ಅದರಲ್ಲಿ ಸಾಕಷ್ಟು ಯಶಸ್ಸು ನಮಗೆ ಸಿಗಲಿಲ್ಲ. ಏಕೆಂದರೆ ಪ್ರತಿಯೊಂದು ಖಾತೆಯವರು ತಮ್ಮ ತಮ್ಮ ಖಾತೆಗೆ

ಸಂಭವಪಟ್ಟಂತೆ ಯಾವುದೇ ಓಬಿರಾಯನ ಸ್ಕೀಂ ಇದ್ದರೂ ಅದನ್ನು ಇಟ್ಟುಕೊಂಡು ಹೋಗಬೇಕು, ಅದನ್ನು ಡಿಸ್‌ಕಂಟಿನ್ಯೂ ಮಾಡಕೂಡದು, ಡಿಸ್‌ಕಂಟಿನ್ಯೂ ಮಾಡಿದರೆ ಅಲ್ಲಿಯ ಸಿಬ್ಬಂದಿ ಮತ್ತು ಇನ್ನಿತರರಿಗೆ ಕೆಲಸ ಇಲ್ಲದೆ ಹೋಗಬಹುದು, ಅಥವಾ ಬೇರೆ ಬೇರೆ ರೀತಿಯ ಇಂಟರೆಸ್ಟ್ ಇರಬಹುದು. ಈ ಮೂರು ಕಾರಣಗಳಿಂದ ಯೋಜನೇತರ ವೆಚ್ಚವನ್ನು ಯಾವ ಒಂದು ಹತೋಟಿಯಲ್ಲಿಡಬೇಕು ಆ ಹತೋಟಿಯಲ್ಲಿಡಲು ನಮಗೆ ಸಾಧ್ಯವಾಗಲಿಲ್ಲ. ಇದು ಕರ್ನಾಟಕದ ಸಮಸ್ಯೆ ಅಲ್ಲ, ಇಡೀ ದೇಶದ ಸಮಸ್ಯೆಯಾಗಿದೆ. ನಾನು ಆ ವಿವರಗಳಿಗೆ ಆಮೇಲೆ ಬರುತ್ತೇನೆ. ಇಂಥ ಪರಿಸ್ಥಿತಿ ಯಲ್ಲೂ ನಮ್ಮ ಯೋಜನೆಗಳಲ್ಲಿ ಪ್ರೈಯಾರಿಟಿ ಅಥವಾ ಆಧ್ಯತೆಯಲ್ಲಿ ನಾವು ಯಾವುದೇ ರೀತಿಯ ವ್ಯತ್ಯಾಸವನ್ನು ಮಾಡಿಲ್ಲ. ನಮ್ಮ ಪ್ರಥಮ ಆಧ್ಯತೆ ನೀರಾವರಿ ಮತ್ತು ವಿದ್ಯುಚ್ಛಕ್ತಿ. ಎರಡನೆ ಯದು ಸೋಷಿಯಲ್ ವೆಲ್‌ಫೇರ್. ಮೂರನೆಯದು ಇನ್ನಿತರಗ್ರಾಮಾಂತರ ಪ್ರದೇಶದ ಅಭಿವೃದ್ಧಿ ಆದರಲ್ಲಿ ಎಲ್ಲದೂ ಬಂತು. ಇದನ್ನು ಮಾಡಲು ಹಾಕಿಕೊಂಡ ಕಾರ್ಯಕ್ರಮ ಅಂದರೆ ನಾವು ಅಂಗೀಕರಿಸಿದ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ ಪ್ರೈಯಾರಿಟಿ ಅಥವಾ ಆದ್ಯತೆ ಏನಿದೆ ಅದಕ್ಕನುಗುಣವಾಗಿ ಇವತ್ತಿನವರೆಗೂ ನಡೆದುಕೊಂಡು ಬಂದಿದ್ದೇವೆ. ಅದರಲ್ಲಿ ಯಾವುದೇ ರೀತಿಯ ವ್ಯತ್ಯಾಸವನ್ನು ಮಾಡಿಲ್ಲವೆಂದು ಹೇಳತಕ್ಕ ಮಾತನ್ನು ಸೂಕ್ಷ್ಮವಾಗಿ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಬಜೆಟ್ ಮೇಲೆ ಸಾಮಾನ್ಯವಾಗಿ ಚರ್ಚೆಯಾಗುವಾಗಲೂ ಮತ್ತು ವಿವಿಧ ಬೇಡಿಕೆಗಳ ಮೇಲೆ ಚರ್ಚೆಯಾಗುವಾಗಲೂ ಅನೇಕ ವಿಚಾರಗಳ ಬಗ್ಗೆ ಇಲ್ಲಿ ಪ್ರಸ್ತಾಪವಾಗುತ್ತದೆ. ಅದರಲ್ಲೂ ಮುಖ್ಯಮಂತ್ರಿಗಳ ಖಾತೆಗಳ ಮೇಲೆ ಚರ್ಚೆಯಾಗುವಾಗ ಇಡೀ ಬ್ರಹ್ಮಾಂಡವೇ ಇಲ್ಲಿ ಬರುತ್ತದೆ. ನೇರವಾಗಿ ಸಂಬಂಧ ಇರಲಿ, ಇಲ್ಲದಿರಲಿ ಒಂದೊಂದು ಸಾರಿ ಚರ್ಚೆ ಬಹಳ ಸ್ವಾರಸ್ಯವಾಗಿರುತ್ತದೆ, ಹಿತಕರವಾಗಿರುತ್ತದೆ, ಅಪರೂಪವಾಗಿ ಆರೋಗ್ಯಕರವೂ ಆಗಿರುತ್ತದೆ. ಆದರೆ ಆಗಾಗ ಆದರಲ್ಲಿ ಅನವಶ್ಯಕವಾದಂತಹ ಅನೇಕ ವಿಚಾರಗಳು ಬಂದು ಯಾವ ವಿಚಾರದ ಮೇಲೆ ದೃಷ್ಟಿಯನ್ನು ಕೇಂದ್ರೀಕರಿಸಬೇಕೆಂದು ಹೇಳತಕ್ಕದ್ದನ್ನು ಮನಸ್ಸಿನಲ್ಲಿಟ್ಟುಕೊಂಡಿರುತ್ತಾರೋ ಅದು ಸಾಧ್ಯವಾಗುವುದಿಲ್ಲ ಉದಾಹರಣೆಗೆ ನನ್ನ ಪ್ರವಾಸದ ವಿಚಾರ. ಎಲ್ಲಾ ಟೀಕೆಗಳ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ಸುಮಾರು ಜನ ಪ್ರಸ್ತಾಪ ಮಾಡಿದ್ದಾರೆ. ಎಲ್ಲಿ ಪ್ರವಾಸ ಮಾಡಬೇಕು, ಎತಕ್ಕೆ ಪ್ರವಾಸ ಮಾಡಬೇಕು, ಎಷ್ಟರಮಟ್ಟಿಗೆ ಪ್ರವಾಸ ಮಾಡಬೇಕು ಎಂದು ವಿಚಾರ ಮಾಡಲು ಕನಿಷ್ಟ ಪಕ್ಷ ಅಷ್ಟರಮಟ್ಟಿಗಾದರೂ ನನಗೆ ಬುದ್ಧಿ ಇದೆ; ಆದ್ದರಿಂದ ನನಗೆ ಕ್ರೆಡಿಟ್ ಕೊಡಬೇಕೆಂದು ನಾನು ನಿಮಗೆ ವಿನಂತಿ ಮಾಡಿಕೊಳ್ಳುತ್ತೇನೆ. ೧೯೮೭ರ ಏಪ್ರಿಲ್‌ನಿಂದ ೧೯೮೮ರ ಮಾರ್ಚಿವರೆಗೆ ಮುಖ್ಯ ಮಂತ್ರಿಗಳು ಸಾರ್ವಜನಿಕರ ಸಂದರ್ಶನ ಮಾಡಿದ್ದು ೨೮೦ ದಿನಗಳು. ಆದ್ದರಿಂದ ತಾವು ಹೇಳಿದ್ದು ಎಷ್ಟರಮಟ್ಟಿಗೆ ಸತ್ಯ ಎಷ್ಟರಮಟ್ಟಿಗೆ ಕಾಲ್ಪನಿಕ, ಮತ್ತು ಎಷ್ಟರಮಟ್ಟಿಗೆ ವಿನೋಧ, ಎಷ್ಟರಮಟ್ಟಿಗೆ ಟೀಕೆಗೆ ಹೇಳಿದ್ದು ಎಂದು ತಿಳಿದುಕೊಳ್ಳಬಹುದು. ನಾನು ಬೆಂಗಳೂರಿನಲ್ಲಿ ಇದ್ದಾಗ ಪ್ರತಿದಿವಸ ಬೆಳಿಗ್ಗೆ ೬ ಗಂಟೆಗೆ ಸಾರ್ವಜನಿಕರನ್ನು ಭೇಟಿಯಾಗುತ್ತೇನೆ. ಭಾನುವಾರ ಮಾತ್ರ ಇಲ್ಲ. ಉಳಿದ ಎಲ್ಲಾ ದಿವಸ ಭೇಟಿಯಾಗುತ್ತೇನೆ. ನನಗೆ ಬಂದಿರುವ ಅರ್ಜಿಗಳ ಬಗ್ಗೆ ಅಂಕೆ ಸಂಖ್ಯೆ ಇದೆ. ನಾನು ಕಳೆದ ಒಂದೂವರೆ ಅಥವಾ ಎರಡು ವರ್ಷಗಳಿಂದ ಹೊರಗಡೆ ಪ್ರವಾಸಕ್ಕೆ ಸಾಮಾನ್ಯವಾಗಿ ಹಿಂದೆ ಯಾವ ಮುಖ್ಯ ಮಂತ್ರಿಯೂ ಹೋಗದೆ ಇದ್ದಷ್ಟು ಸಹ ಹೋಗಿದ್ದೇನೆ. ಕಾರಣವೇನೆಂದರೆ ಅನೇಕ ಸಂಘ ಸಂಸ್ಥೆಗಳವರು ಮೆಮ್ಮೋರಿಯಲ್ ಲೆಕ್ಚರ್ ಮಾಡಲಿಕ್ಕೆ ನನ್ನನ್ನು. ಕರೆಯುತ್ತಾರೆ. ಕೆಲಸ ಸೆಮಿನಾರ್‌ಗಳಿಗೆ ನನ್ನನ್ನು ಕರೆಸುತ್ತಾರೆ, ಅದೆಲ್ಲ ನಮ್ಮ ಸರ್ಕಾರಕ್ಕೆ ನೇರವಾಗಿ ಸಂಬಂಧಪಟ್ಟ ಕಾರ್ಯಕ್ರಮವೆಂದು ನಾನು ಹೇಳಲಾರೆ, ಸರ್ಕಾರಕ್ಕೆ ಸಂಬಂಧಪಟ್ಟ ಕಾರ್ಯಕ್ರಮವು ಇರಬಹುದು. ಸರ್ಕಾರಕ್ಕೆ ಸಂಬಂಧ ಪಡದ ಕಾರ್ಯಕ್ರಮದವೂ ಇರಬಹುದು ಅವರು ಮುಖ್ಯಮಂತ್ರಿಯೆಂದು ಭಾವಿಸಿ ನನ್ನನ್ನು ಕರೆಯುತ್ತಾರೆ. ನಾನು ಮುಖ್ಯ ಮಂತ್ರಿ ಇಲ್ಲದೆ ಇದ್ದರೆ ಎಷ್ಟರಮಟ್ಟಿಗೆ ಕರೆಯುತ್ತಾರೋ ಗೊತ್ತಿಲ್ಲ. ನನಗೆ ವೈಯಕ್ತಿಕವಾದ ಯೋಗ್ಯತೆ ಇದ್ದರೆ ಆಗಲೂ ಕರೆಯಬಹುದು. ಅವರು ಕರೆದಾಗ ನಾನು ಬರುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಹೇಳುವುದು ಸರಿಯಲ್ಲ. ಆದರೂ ಅನೇಕ ಸಲ ಈ ಸದನದಲ್ಲಿ ಅವಶ್ಯಕವಾಗಿ ಕೆಲಸವಿದ್ದರೆ ನಾನು ಬರುವುದಕ್ಕೆ ಆಗುವುದಿಲ್ಲವೆಂದು ಅವರಿಗೆ ತಿಳಿಸುತ್ತೇನೆ. ನಾನು ಎಷ್ಟು ದಿವಸ ಹೊರಗಡೆ ಇದ್ದೆ, ಎಷ್ಟು ದಿವಸ ಒಳಗೆ ಇದ್ದೆ; ಯಾವ ಯಾವ ಮಂತ್ರಿಗಳಿಗೆ ಯಾವ ಯಾವ ಖಾತೆ, ಎಷ್ಟೆಷ್ಟು ಸಲ ಅದನ್ನು ಬದಲಾಯಿಸಲಾಗಿದೆ. ಮಂತ್ರಿಗಳಿಗೆ ಮಾಡಲಾಗುವಷ್ಟು ಕೆಲಸ ಇದೆಯೋ, ಹೆಚ್ಚು ಇದೆಯೋ, ಅಥವಾ ಕೆಲವು ಖಾತೆಗಳು ಖಾಲಿಯಾಗಿದೆಯೋ, ಇದನ್ನೆಲ್ಲಾ ಬೇಕಾದರೆ ನೀವು ಚರ್ಚೆ ಮಾಡಬಹುದು. ಆದರೆ ಕೊನೆಗೆ ಇತ್ಯಾರ್ಥ ಏನೆಂದರೆ ಈ ಸರ್ಕಾರ ಸರಿಯಾಗಿ ಕೆಲಸ ಮಾಡುತ್ತಿದೆಯೋ ಇಲ್ಲವೋ ಎನ್ನುವುದು ಒಂದೇ, ಸದನದಲ್ಲಿ ಏನೇ ಚರ್ಚೆಯಾದರೂ ಪತ್ರಿಕೆಯ ಬರುತ್ತದೆ. ಇದರಿಂದ ನಮ್ಮ ಮನಸ್ಸಿಗೆ ವೈಯಕ್ತಿಕವಾಗಿ ಸಮಾಧಾನ ಆಗಬಹುದು. ಆದರೆ ಇಲ್ಲಿ

ಏನು ಇಂತಹ ಸಣ್ಣ ಪುಟ್ಟ ಚರ್ಚೆ ಯಾಗುತ್ತದೆ, ಆ ಚರ್ಚೆಯ ಪ್ರಭಾವ ಸಾಮಾನ್ಯ ಜನತೆಯ ಮನಸ್ಸಿನ ಮೇಲೆ ಎಂದೂ ಬೀಳುವುದಿಲ್ಲ. ಅವರ ಮನಸ್ಸಿಗೆ ನಿನ್ನೆ ಯಾವರೀತಿ ಕೆಲಸವಾಗುತ್ತದೆ. ಇವತ್ತು ಯಾವರೀತಿ ಕೆಲಸ ಆಗುತ್ತದೆ, ಎಂಬ ಪ್ರಭಾವ ಬೀಳುತ್ತದೆ. ನಿನ್ನೆಗಿಂತ ಇವತ್ತು ಸ್ವಲ್ಪ ಮಟ್ಟಿಗೆ ಉತ್ತಮವಾದಂತ ಕೆಲಸ ಆಗುತ್ತದೆ ಎಂದು ಗೊತ್ತಾದರೆ ಈಗಿರತಕ್ಕ ಸರ್ಕಾರವನ್ನು ಮುಂದು ವರಿಸುತ್ತಾರೆ, ಅದು ಇಲ್ಲದೇ ಇದ್ದರೆ ಈ ಸರ್ಕಾರ ಬೇಡವೆಂದು ಹೇಳಿ ಬೇರೆ ಸರ್ಕಾರವನ್ನು ಅಧಿಕಾರಕ್ಕೆ ತರುತ್ತಾರೆ. ಇವತ್ತು ನಮ್ಮ ಕೈಯಲ್ಲಿ ಅಧಿಕಾರವಿದೆ, ಶಾಶ್ವತವಾಗಿ ಇರುತ್ತೇವೆ, ನಾವು ಏನೇ ಬೇಕಾದರೂ ಮಾಡಿ ಸಂವಿಧಾನದ ತಿದ್ದುಪಡಿಯನ್ನಾದರೂ ಮಾಡಿ ಅಧಿಕಾರದಲ್ಲಿ ಮುಂದುವರೆ ಯುತ್ತೇವೆ ಎನ್ನುವ ಪಕ್ಷಕ್ಕೆ ಸೇರಿದವರಲ್ಲ, ಜನತೆಯ ಪ್ರಭುತ್ವವೇ ನಿಜವಾದ ಪ್ರಭುತ್ವ, ಅವರು ಎಲ್ಲಿಯವರೆಗೆ ಇರು ಅನ್ನುತ್ತಾರೋ ಅಲ್ಲಿಯವರೆಗೆ ಇರುತ್ತೇವೆ. ಈ ನಿಯಮವನ್ನು ನಾವು ಚಾಚೂತಪ್ಪದೆ ನಡೆಸಿಕೊಂಡು ಬಂದಿದ್ದೇವೆ. ರಾಜ್ಯದಲ್ಲಿ ಸ್ವತಂತ್ರ ನಂತರದ ಇತಿಹಾಸದಲ್ಲಿ ಪ್ರತಿ ವರ್ಷ ಒಂದೊಂದು ಚುನಾವಣೆ ಆನಂತ ಉದಾರಹಣೆ ಇಲ್ಲ. ೧೨–೧೩ ವರ್ಷದ ನಂತರ ನಗರಸಭೆ ಮತ್ತು ಕಾರ್ಪೊರೇಷನ್ ಚುನಾವಣೆಯನ್ನು ನಡೆಸಿದ್ದೇವೆ. ೧೯೮೫–೧೯೮೬, ೧೯೮೭, ರಲ್ಲಿ ಸಾರ್ವ ಜನಿಕ ಚುನಾವಣೆಯನ್ನು ನಡೆಸಿದ್ದೇವೆ. ಈ ವರ್ಷ ಚುನಾವಣೆ ಆಗುತ್ತದೋ ಇಲ್ಲವೋ ಎನ್ನುವುದು ಅಪ್ರಸ್ತುತ. ನಮ್ಮ ಪಕ್ಷದವರು ಯಾವುದೇ ಸಂದರ್ಭದಲ್ಲಿ ಜನತೆ ಮುಂದೆ ಹೋಗಬೇಕಾದರೆ ಹಿಂದು ಮುಂದು ಎಂದೂ ನೋಡುವುದಿಲ್ಲ. ಜನತೆಯೇ ನಮ್ಮ ಆಶ್ರಯದಾತರು, ದೆಹಲಿಯಲ್ಲಿ ನಮ್ಮ ಆಶ್ರಯದಾತರಿಲ್ಲ ಆದರೆ ನಮ್ಮ ಪಕ್ಷದವರು ಯಾವುದೇ ಸಂದರ್ಭದಲ್ಲೂ ಜನತೆ ಹತ್ತಿರ ಹೋಗಬೇಕಾದರೆ ಹಿಂದೆ ಮುಂದೆ ಎಂದೂ ನೋಡುವವರಲ್ಲ. ಇಷ್ಟು ಹೇಳಿಬಿಡುತ್ತೇನೆ. ಏಕೆಂದರೆ ಜನತೆಯೇ ನಮಗೆ ಆಶ್ರಯದಾತರು. ನಮಗೆ ದಿಲ್ಲಿಯಲ್ಲಿ ಕೂತವರು ಆಶ್ರಯದಾತರಲ್ಲ. ಇದನ್ನು ಒಪ್ಪಿಕೊಂಡುಬಿಡೋಣ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ನಾನು ಇಲ್ಲಿ ಏನು ಹೇಳುವುದಕ್ಕೆ ಬಯಸಿದೆ ಎಂದರೆ ನಮ್ಮ ಸರ್ಕಾರದ ಪರ್ಫಾರ್ಮೆನ್ಸ್ ಏನು ಆಗಿದೆ, ಅದನ್ನು ದಯವಿಟ್ಟು ನೋಡಬೇಕು. ಮಂತ್ರಿಮಂಡಲದಲ್ಲಿ ೫೮ ಜನ ಇದ್ದಾರೋ ೩೦ ಜನ ಇದ್ದಾರೋ ಎಂಬುದು ಮುಖ್ಯ ಅಲ್ಲ, ಆಂಧ್ರ ದಲ್ಲಿ ಅಂಜಯ್ಯ ಅವರಿದ್ದಾಗ ೫೦ ಜನ ಇದ್ದರು, ೫೮ ಜನ ಇದ್ದರು, ೬೦ ಜನ ಮಂತ್ರಿಗಳಿದ್ದರು, ನಮ್ಮಲ್ಲಿ ಒಂದು ಸಲ ೩೫ ಜನ ಮಂತ್ರಿಗಳಿದ್ದಾಗ ಅದರ ಬಗ್ಗೆ ಏನು......

ಶ್ರೀ ಕೆ. ಹೆಚ್. ಪಾಟೀಲ್.—ಕಾಮರಾಜ್ ಇದ್ದಾಗ ತೆಗೆದುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ಆಗ ಸಂಖ್ಯೆ ೧೩ ಇತ್ತು.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಂತ್ರಿಮಂಡಲವನ್ನು ದೊಡ್ಡದು ಏತಕ್ಕೆ ಮಾಡುತ್ತೀರಿ, ಸಣ್ಣದು ಏತಕ್ಕೆ ಮಾಡುತ್ತೀರಿ ಎಂಬುದು ನಮಗೆ ಗೊತ್ತಾಗುತ್ತದೆ. ನಿಮ್ಮನ್ನು ಮಾಡುವುದು ಬೇಡ ಎಂದು ಹೇಳುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಾನೇನು ಮಾಡಲಿ ಸ್ನೇಹಿರಾದ ಶ್ರೀನಿವಾಸ್ ಅವರು ನಮ್ಮ ಕಡೆ ಇದ್ದಿದ್ದರೆ ಅವರನ್ನು ಕೇಳುತ್ತಿದ್ದೆ, ಆದರೆ ಅವರು ಆ ಕಡೆ ಇರುವುದರಿಂದ ಅವರ ಸಲಹೆ ಕೇಳಿದರೆ ಗಂಡಾಂತರವಾಗುತ್ತದೆ ಎಂಬ ಅನುಮಾನ ಇದೆ. ಆದ್ದರಿಂದ ಆ ಒಂದು ರಿಸ್ಕ್ ನಾನು ತೆಗೆದು ಕೊಳ್ಳಲಾರೆ. ಮಾನ್ಯ ಅಧ್ಯಕ್ಷರೆ, ಒಂದು ವಿಚಾರ ಹೇಳಬೇಕಾಗಿದೆ. ಇದು ಕಟ್ಟುಕಥೆ ಅಲ್ಲ.

Sri K. H. SRINIVAS.—"I can take care of my enemies. please save me from my friends" ಅದು ತಿಳಿದುಕೊಳ್ಳಿ.

Sri RAMAKRISHNA HEGDE.—That is why I am saying, please save him from my friends,

Sri K. H, SRINIVAS.—You can take care of the enemy that....

ಶ್ರೀ ರಾಮಕೃಷ್ಣ ಹೆಗಡೆ.—ನಾನು ಹೇಳತಕ್ಕದ್ದು ಯಾವುದೇ ಅತಿಶಯೋಕ್ತಿಯಿಂದ ಕೂಡಿದ ವತಲ್ಲ. ಕೇಂದ್ರ ಸರ್ಕಾರದ ವಿವಿಧ ಮಂತ್ರಿಗಳು, ಪ್ಲಾನಿಂಗ್ ಕಮಿಷನವರು ಕೇಂದ್ರ ಸರ್ಕಾರದ

ಟೆಕ್ನಾಲಜಿ ಮಿಷನ್ ಪ್ರೈಮ್ ಮಿನಿಸ್ಟರಿಗೆ ಅಡ್ವೈಜರ್ ಎನಿದ್ದಾರೆ ಅವರು ಹೇಳಿದಂಥ ಮಾತನ್ನು ಇಲ್ಲಿ ಹೇಳುತ್ತಿದ್ದೇನೆ, ಮಾನ್ಯ ವಿರೋಧಪಕ್ಷದ ನಾಯಕರಿಗೆ ಮತ್ತು ಇನ್ನಿತರ ಸ್ನೇಹಿತರಿಗೆ ತಿಳಿಯಲಿ ಎಂದು. ಈ ಮುಂದೆ ಹೇಳತಕ್ಕ ಕ್ಷೇತ್ರಗಳಲ್ಲಿ ನಮ್ಮ ರಾಜ್ಯ ಮೊದಲನೇ ನಂಬರ್‌ಗೆ ಬಂದಿದೆ. It stands first. ರೂರಲ್ ವಾಟರ್ ಸಪ್ಲೈ, ರೂರಲ್ ಎಲೆಕ್ಟ್ರಿಫಿಕೇಷನ್, ಪಂಪ್‌ಸೆಟ್ ಎನರ್ಜೈಸೇಷನ್ ಈ ವಿಚಾರದಲ್ಲಿ ಹೇಳುತ್ತಿದ್ದೇನೆ. ಮಾನ್ಯ ಖಾರ್ಗೆಯವರಿಗೆ ಗೊತ್ತಿದೆ. ಹಿಂದೆ ವರ್ಷಕ್ಕೆ ೧೮ ಸಾವಿರ ಪಂಪ್‌ಸೆಟ್ ಎನರ್ಜೈಸೇಷನ್ ರೆಕಾರ್ಡ್ ಆಗಿದ್ದರೆ ಈಗ ೫೦ ಸಾವಿರ ಪಂಪ್‌ಸೆಟ್‌ಗೆ ಎನರ್ಜೈಸೇಷನ್ ಆಗುತ್ತಿದೆ. ವಿದ್ಯುಚ್ಛಕ್ತಿ ಅಭಾವ ಇದ್ದರೂ ಕೂಡ ಈ ಕೆಲಸ ಮಾಡುತ್ತಿದ್ದೇವೆ. ಆಯಿಲ್ ಸೀಡ್ಸ್ ಪ್ರೊಡಕ್ಷನ್ our State stands first in the whole country. 57,000 tonnes. ಹಿಂದೆ ಎಂದೆಂದೂ ಇಷ್ಟಾಗಿರಲಿಲ್ಲ. ಯಾವ ರಾಜ್ಯದಲ್ಲೂ ಇಷ್ಟು ಬೆಳೆಯುತ್ತಾ ಇರಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ರೈತರು ಬೆಳೆದಿದ್ದನ್ನು ನೀವೇನು ಹೇಳುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಸುಮ್ಮ ಸುಮ್ಮನೆ ಹೇಗೆ ಹೇಳುವುದಕ್ಕಾಗುತ್ತದೆ ? ನಿಮ್ಮ ಕಾಲದಲ್ಲಿ ಇದೇ ರೈತರು ಏತಕ್ಕೆ ಬೆಳೆಯಲಿಲ್ಲ ? ಆಮೇಲೆ ಡ್ರೈ ಲ್ಯಾಂಡ್ ಕಲ್ಟಿವೇಷನ್ ಮತ್ತು ವಾಟರ್ ಶೆಡ್ಡ ಡೆವಲಪ್‌ಮೆಂಟ್ ಇದು ಇಡೀ ದೇಶಕ್ಕೆ ಒಂದು ಹೊಸ ಆಧುನಿಕ ಕೊಡುಗೆ. ಆಮೇಲೆ ಅಫೋರ್‌ಸ್ಟೇಷನ್ ಮತ್ತು ಸೋಷಿಯಲ್ ವೆಲ್‌ಫೇರ್ ಸ್ಕೀಂ ಮಾಡಿದ್ದೇವೆ. ಡ್ರಾಟ್ ರಿಲೀಫ್ ಪ್ರೋಗ್ರಾಂ ಯಾವರೀತಿ ಮಾಡಿದ್ದೇವೆಂದರೆ ರಾಜಾಸ್ಥಾನ ಮತ್ತು ಗುಜರಾತ್ ಸರ್ಕಾರಗಳಿಗೆ ಕೇಂದ್ರಸರ್ಕಾರದ ಮಂತ್ರಿಗಳು ಒಂದು ಪತ್ರ ಬರೆದಿದ್ದಾರೆ. ಅದರಲ್ಲಿ "please follow the Karnataka model in drought relief" ಎಂದು ಹೇಳಿದ್ದಾರೆ. ಇದಕ್ಕೆ ಅಭಿಮಾನ ಪಟ್ಟುಕೊಂಡರೆ ಏನು ತಪ್ಪು ? ಎಷ್ಟು ಮಂತ್ರಿಗಳ ಕೈಯಲ್ಲಿ ಕಡಿಮೆ ಇಲಾಖೆಗಳಿವೆ, ಎಷ್ಟು ಮಂತ್ರಿಗಳ ಕೈಯಲ್ಲಿ ಜಾಸ್ತಿ ಇಲಾಖೆಗಳಿವೆ ಎಂಬುದು ಮುಖ್ಯವಲ್ಲ. ಒಟ್ಟಿನಲ್ಲಿ ಪರ್ಫಾರ್ಮೆನ್ಸ್ ಮುಖ್ಯ. ಫ್ಯಾಮಿಲಿ ಪ್ಲಾನಿಂಗ್‌ನಲ್ಲಿ ನಾವು ಇಡೀ ದೇಶಕ್ಕೆ ೨ನೇ ಸ್ಥಾನದಲ್ಲಿದ್ದೇವೆ.

ಶ್ರೀ ಬಿ. ಸ್ವಾಮಿರಾವ್.—ಅದರಲ್ಲಿ ಮೋಸ ನಡೆದಿದೆ ಎಂದು ನಾನು ಪ್ರಶ್ನೆ ಕೂಡ ಕಳುಹಿಸಿದ್ದೆ.

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಐದು ವರ್ಷಗಳ ಕಾಲ ಬರಗಾಲ ಇದ್ದರೂ ಆಯಿಲ್ ಸೀಡ್ಸ್ ಅಗ್ರಿಕಲ್ಚರ್‌ನಲ್ಲಿ ಟಾಪ್ ಎಂದರೆ ಅದರ ಕ್ರೆಡಿಟ್ ತಮಗೇ ಹೋಗಬೇಕು.

ಅಧ್ಯಕ್ಷರು.--You also share the credit.

ಶ್ರೀ ರಾಮಕೃಷ್ಣ ಹೆಗಡೆ.—ಈಗ ಮತ್ತೊಂದನ್ನು ಮರೆತು ಬಿಟ್ಟಿದ್ದೆ. In de-centralised planning that is one of the areas where we stand first and it is commended to other States. ೨೦ ಪಾಯಿಂಟ್ ಆಫ್ ಪ್ರೋಗ್ರಾಂ ಮಾನ್ಯ ಮೊಯ್ಲಿಯವರಿಗೆ ಬಹಳ ಪ್ರಿಯವಾದುದು. ಇದರ ಮೇಲೆ ಮಾತನಾಡಲು ಅವರಿಗೆ ಹೆಚ್ಚು ಸಮಯ ಸಿಕ್ಕಲಿಲ್ಲ. ಅದಕ್ಕಾಗಿ ಆ ವಿಚಾರವನ್ನು ಅವರು ಹೇಳಲಿಲ್ಲ. ಈ ೨೦ ಪಾಯಿಂಟ್ ಪ್ರೋಗ್ರಾಂನಲ್ಲಿ ಒಂದನ್ನು ಬಿಟ್ಟರೆ ಬಾಕಿ ೧೯ ಪಾಯಿಂಟ್‌ನಲ್ಲೂ ನಾವು "ಎ" ಸ್ಥಾನ ಪಡೆದಿದ್ದೇವೆ. ಒಂದರಲ್ಲಿ ಮಾತ್ರ "ಬಿ" ಸ್ಥಾನ ಪಡೆದಿದ್ದೇವೆ. ಇದು ಆಲ್ ಇಂಡಿಯಾ ಪರ್‌ಫಾರ್ಮೆನ್ ಕಂಪೇರ್ ಮಾಡುವಾಗ ಪ್ಲಾನಿಂಗ್ ಕಮೀಷನ್ ಅವರು ವರದಿಯನ್ನು ಕೊಡುತ್ತಾರೆ. ಅದು ಇದು. ಇದರಲ್ಲಿ ಕೆಲವನ್ನು ನಾನು ಓದಿಬಿಡುತ್ತೇನೆ. Tiny and cottage sector industry. ಇದರಲ್ಲಿ ಮೂರು ಭಾಗ. Those who are scheduled caste beneficiaries : Coir units set up and scheduled caste beneficieries percentage is 137%, 124% and 162%. ೧೦೦ ಟಾರ್‌ಗೆಟ್‌ನ್ನು ನಾವು ಇಟ್ಟುಕೊಂಡಿದ್ದೇವೆ. ಇದರಲ್ಲಿ achievement ಮೊದಲನೆಯದು ೧೩೭ ಪರ್ಸೆಂಟ್, ಎರಡನೆಯದು ೧೨೪ ಪರ್ಸೆಂಟ್ ಶಿನೆಯದು ೧೬೨ ಪರ್ಸೆಂಟ್. ರೇಷ್ಮೆ ರಾ ಸಿಲ್ಕ್ ಪ್ರೊಡ್ಯೂಸ್ ನಲ್ಲಿ ಟಾರ್‌ಗೆಟ್ ನಾವು ಏನು ಇಟ್ಟುಕೊಂಡಿದ್ದೇವೆ, 104%; Reeling units set up 400%: Tribal Sub Plan beneficiaries : 140%; Leather industries : Tool kit supplied and training-105%; Land Reforms: Land distributed to scheduled castes and scheduled tribes-107%; land records built up-109%; Health: Primary health

centres established-500%; I.P.P. -3 Sub-centres constructed, 156%; Laprosy cured 109%; Maleria detection-145%; Family Welfare: Beneficiaries covered-children 3 to 6 years age group-108%; nursing mothers-104%; primary education: Enrolment-standard 1 to 4 100% total, girls 100%; standard 5 to 7 total 103%, girls 100%; adult education: functional literacy-total enrolment 100%, women 101%; SCs/STs beneficiaries - 105%. Griha Kalyana: Beneficiaries 112%; Development of women in rural area 118%, rural housing: House sites for landless distributed-102%, slum improvement: coverage with 7 basic amenities: 117%.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಟಾರ್ಗೆಟನ್ನು ಕಡಿಮೆ ಇಟ್ಟು ಕೊಂಡು ೧೦೦ ಪರ್ಸೆಂಟ್ ಸಾಧನೆ ಅಂದರೆ ಹೇಗೆ?

ಶ್ರೀ ರಾಮಕೃಷ್ಣ ಹೆಗಡೆ:—ಟಾರ್ಗೆಟ್ಟನ್ನು ಕಡಿಮೆ ಇಟ್ಟುಕೊಳ್ಳುವುದು ಇದು ಯು.ಪಿ. ಯಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದನ್ನು ನಾನು ಚಾಲೆಂಜ್ ಮಾಡಿ ಹೇಳುತ್ತೇನೆ. ಹಿಂದಿನ ಸರ್ಕಾರ ೨೦ ಅಂಶದ ಕಾರ್ಯಕ್ರಮದ ಮೇಲೆ ಮಾಡಿದಂತ ಸಾಧನೆಯನ್ನು ಮೀರಿ ಯಾವ ವಿಚಾರದಲ್ಲಿ ಹೆಚ್ಚು ಸಾಧನೆಯನ್ನು ಮಾಡಿದ್ದೀರೆಂಬುದನ್ನು ಹೇಳಿ. ನೀವು ಹೇಳುತ್ತಿರುವುದೆಲ್ಲಾ ಕಡಿಮೆ ಟಾರ್ಗೆಟ್ಟನ್ನು ಇಟ್ಟುಕೊಂಡು ಮಾಡಿರುವ ಸಾಧನೆ ಬಗ್ಗೆ ಹೇಳುತ್ತಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ಒಲ್ಲದ ಗಂಡನಿಗೆ ಏನು ಮಾಡುವುದು. Target is not fixed unilaterally. ರಾಜ್ಯ ಸರ್ಕಾರ ಟಾರ್ಗೆಟ್ಟನ್ನು ಫಿಕ್ಸ್ ಮಾಡುವುದಿಲ್ಲ. ಹಿಂದಿನ ವರ್ಷ ಎಷ್ಟು ಸಾಧನೆಯಾಗಿದೆ ? ಮತ್ತೆ ಮುಂದೆ ಮಾಡಬೇಕಾಗಿರುವುದು ಎಷ್ಟು ಇದೆ ಅದನ್ನು ನೋಡಿಕೊಂಡು ಪ್ಲಾನಿಂಗ್ ಕಮಿಷನ್ ತನ್ನ ಅಡ್ವೈಸರ್ಸನ್ನು ಇಟ್ಟುಕೊಂಡು ಟಾರ್ಗೆಟ್ಟನ್ನು ನಿಗದಿ ಮಾಡುತ್ತಾರೆ.

ಆಮೇಲೆ ground water utilisation: Borewells-123%, scheduled castes beneficiaries thereunder 128%: Inland Fisheries: tanks taken up for piscicultrae 104%; major tanks fingerlings introduced 119%; minor tanks 114%; Rural electrification: villages electrified 104%; hamlets 119%; pumpsets energised 119%; IRDP: family assisted: new beneficiaries 128%. ISP second assistance 99%; scheduled caste first assistance 106%; scheduled tribe first assistance 133%; quantity of food grains utilised: NREP 100%, RLEGP 92%:

ಶ್ರೀ ಎಂ. ವೀರಪ್ಪ ಮೊಯ್ಲಿ.—ಇಲ್ಲಿ ಕೆಲವು ಸತ್ಯ ಇರಬಹುದು. By and large you have been betrayed with statistics: Take it from me. I can give a challenge to you have been betrayed.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಾನು ಓದಿದ್ದೆ. "Lies, damn lies and statistics" ಎಂದು ಹೇಳಿ. ಏಕೆ ಹೀಗೆ ಹೇಳುತ್ತೀರಿ ಎಂದು ನನಗೆ ಇವತ್ತಿನವರೆಗೂ ಅರ್ಥ ಆಗುತ್ತಿರಲಿಲ್ಲ. ಇವತ್ತು ಅರ್ಥ ಆಗುತ್ತಾ ಇದೆ. Statistics is the superlotive of lies.

ಶ್ರೀ ಎಂ. ರಘುಪತಿ.—ರಾತ್ರಿ ಟೀವಿನಲ್ಲಿ ಹೇಳಿದರಲ್ಲಾ ಸ್ಟ್ಯಾಟಿಸ್ಟಿಕ್ಸ್, ಪರ್ಸೆಂಟೇಜ್ ಆಫ್ ಓಟ್ಸ್ ಎಂದು. ಆ ರೀತಿ ಇದು.

SRI RAMAKRISHNA HEGDE.—I am tempted to say but I don't know whether I should say. If my friend does not mind, I would like to say. "lies, damn lies and Srinivas's speeches".

ಶ್ರೀ ಕೆ. ಹೆಚ್. ಶ್ರೀನಿವಾಸ್.—ಇನ್ನೊಂದು ಸೇರಿಸಬೇಕು. ನಿಮ್ಮ ಸ್ಪೀಚ್ ಅದಕ್ಕಿಂತಲೂ ಮೇಲೆ ಹೋಗಬೇಕಲ್ಲವೇ ? ಅದಕ್ಕೆ ಗ್ರಾಮರ್ ಅನ್ನೇ ಅಮೆಂಡ್‌ಮೆಂಟ್ ಮಾಡಬೇಕಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಅಮೇಲೆ ಇದೆಲ್ಲಾ......

ಶ್ರೀ ಎಂ. ವೀರಪ್ಪ ಮೊಯ್ಲಿ.—ತಮ್ಮ ಸರ್ಕಾರ ಈ ಸ್ಥಿತಿಗೆ ಬರುವುದಕ್ಕೆ ಇದೇ ಕಾರಣ I was maknig a lot of research. Now it is proved that you have been belied only by such statistics.

ಶ್ರೀ ರಾಮಕೃಷ್ಣ ಹೆಗಡೆ.—ಕೊನೆಯ ಆರ್ಬಿಟರ್‍ಸ್ ಜನರು ತಾನೇ ? ಇನ್ನೊಂದು 5–6 ಕ್ಷೇತ್ರಗಳು ಇವೆ. ನಾನು ಅವನ್ನು ಹೇಳುತ್ತೇನೆ. 20 point programme, Rabi pulses programme 141%, pulses covered total 109%, total area covered–158%, High Yielding varieties : Ragi–100%, plant protection material supplied 150%, horticulture : area covered 181%, seedlings distribution 130%, coconut seedlings distribution 145 horticulture marketing through co-operatives 199%. New fair price shops opened : rural...

ಶ್ರೀ ಕೆ. ಹೆಚ್. ಶ್ರೀನಿವಾಸ್.—199 ಪರ್ಸೆಂಟ್ ಎಂದರೆ, ಬಾಟಾ ಶೂ ಪ್ರೈಸ್ ರೀತಿ ಆಯಿತು ಅಲ್ಲವೇ ? 200 ಪರ್ಸೆಂಟ್ ಎಂದು ಹೇಳಿ.

SRI RAMAKRISHNA HEGDE.—That only shows that it is very accurate. ಇದು ಹುಂದುಗುತ್ತಿಗೆ ಪ್ರೈಸ್ ಅಲ್ಲ. Rural 131% new fair price shops, total 116%, targets under district watershed development : 104%. ನಾನು ಇಷ್ಟೆಲ್ಲಾ ಇದರ ಬಗ್ಗೆ ಧೀರ್ಘವಾಗಿ ಅಂಕಿಸಂಖ್ಯೆ ಕೊಡುವ ಉದ್ದೇಶ...

ಶ್ರೀ ಎಸ್. ಬಂಗಾರಪ್ಪ.—100 ಪರ್ಸೆಂಟ್, 180 ಪರ್ಸೆಂಟ್, 200 ಪರ್ಸೆಂಟ್ ಎಂದರೆ ಬರಗಾಲ ಎಲ್ಲಿಗೆ ಹೋಯಿತು ? ಎಂದರೆ ಕರ್ನಾಟಕದಲ್ಲಿ ಹಿಂದೆ ಬರಗಾಲ ಇರಲಿಲ್ಲ, ಈಗಲೂ ಬರಗಾಲ ಇಲ್ಲವೆಂದಾಯಿತಲ್ಲವೇ ?

SRI RAMAKRISHNA HEGDE.—In spite of it, water-shed development. ಪ್ರೋಗ್ರಾಮ್‌ನಲ್ಲಿ ಎಷ್ಟು ಲಾಭ ಆಗಿದೆ ಎನ್ನುವ ಬಗ್ಗೆ ವಿರೋಧಪಕ್ಷದ ನಾಯಕರು ಹಾಗೂ ನಿಮ್ಮನ್ನೆಲ್ಲಾ ಇನ್ವೈಟ್ ಮಾಡುತ್ತೇನೆ. ಅದು ಬಹಳ ದೂರ ಇಲ್ಲ. ಹತ್ತಿರದಲ್ಲೇ ಇದೆ. ತಾವೆಲ್ಲಾ ಅದನ್ನು ನೋಡಬೇಕು. ಆಮೇಲೆ ಒಂದೆರಡು ಕಡೆ 99 ಪರ್ಸೆಂಟ್ ಆಗಿದೆ. ಮಾನ್ಯ ಅಧ್ಯಕ್ಷರೇ, ಪೋಲೀಸ್ ಖಾತೆಗೆ ಸಂಬಂಧಪಟ್ಟ ಹಾಗೆ ಕೆಲವು ಒಳ್ಳೆಯ ಸೂಚನೆಗಳು ಬಂದವು, ಮತ್ತು ಕೆಲವು ಶಿಕ್ಷಣವಾದ ಟೀಕೆಗಳೂ ಬಂದವು. ನಾನು ಎರಡನ್ನೂ ಸ್ವಾಗತ ಮಾಡುತ್ತೇನೆ. ಮಾನ್ಯ ಹಿಂದಿನ ರಾಜ್ಯಪಾಲರಾದ ಧರ್ಮವೀರಾ ಅವರ ಅಧ್ಯಕ್ಷತೆಯಲ್ಲಿ ಒಂದು ಕಮಿಷನ್‌ನ್ನು ಕೇಂದ್ರ ಸರ್ಕಾರ, ನಮ್ಮ ಜನತಾ ಸರ್ಕಾರ ನೇಮಿಸಿತ್ತು. ಕೇಂದ್ರ ಸರ್ಕಾರ ಯಾವುದಾದರು ಒಳ್ಳೆಯ ಕೆಲಸ ಮಾಡಿದ್ದರೆ ಅದು ಹಿಂದಿನ ಜನತಾ ಸರ್ಕಾರವೆಂದು ನಾನು ಜ್ಞಾಪಿಸಿಕೊಳ್ಳಬೇಕಾಗುತ್ತದೆ.

ಶ್ರೀ ಕೆ. ಹೆಚ್. ಶ್ರೀನಿವಾಸ.—ಒಳ್ಳೆಯದು ಮಾಡಿದ್ದರೆ ಒಳ್ಳೆಯದು ಮಾಡಿದ್ದಾರೆ ಎಂದು ಹೇಳುವ ಸೌಜನ್ಯ ನಿಮಗೆ ಇದೆಯೆ ? ನಿಮಗೆ ಇಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಈಗ ರಿಪೋರ್ಟ್ ಮೇಲೆ ಯಾವುದಾದರೂ ಒಂದು ರಾಜ್ಯ ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದರೆ ಅದು ನಮ್ಮ ಸರ್ಕಾರವೆಂದು ಹೇಳಲಿಕ್ಕೆ ಹೆಮ್ಮೆ ಪಡುತ್ತೇನೆ. ಇನ್ನೂ ಕೆಲವು ಶಿಫಾರಸುಗಳನ್ನು ಪ್ರೋಸೆಸ್ ಮಾಡುತ್ತಿದ್ದೇವೆ. ಅದು ಬೇರೆ ಬೇರೆ ಡಿಪಾರ್ಟ್‌ಮೆಂಟ್‌ಗಳಿಗೆ ಹೋಗಬೇಕು, ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ಗೆ ಹೋಗಬೇಕು, ಫೈನಾನ್

ಡಿಪಾರ್ಟ್‌ಮೆಂಟ್‌ಗೆ ಹೋಗಬೇಕು. ಈ ಸಂದರ್ಭದಲ್ಲಿ ಇಷ್ಟು ಮಾತ್ರ ಈ ವಿಚಾರದಲ್ಲಿ ಹೇಳಬಲ್ಲೆ. ಯಾವ್ಯಾವ ಉತ್ತಮ ಶಿಫಾರಸುಗಳು ಇವೆಯೋ ಅವುಗಳನ್ನು ನಾವು ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಅನುಲಕ್ಷಿಸಿ ಎಷ್ಟರಮಟ್ಟಿಗೆ ನಮಗೆ ಆರ್ಥಿಕ ಸ್ಥಿತಿ ಸಾಧ್ಯವಾಗುತ್ತದೆ ಆ ಖರ್ಚು ಏನಿದೆ ಅದನ್ನು ಭರಿಸಲಿಕ್ಕೆ ಸಾಧ್ಯವಾಗುತ್ತದೆಂಬುದನ್ನು ಅನುಸರಿಸಿ ಅದನ್ನು ಒಪ್ಪಿಕೊಳ್ಳುತ್ತೇವೆಂದು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇದರಲ್ಲಿ ಒಂದು ವಿಚಾರವನ್ನು ಬಜೆಟ್ ಭಾಷಣದಲ್ಲಿ ಹೇಳಿದ್ದೇನೆ. ಅದನ್ನು ಪುನಃ ಇಲ್ಲಿ ಜ್ಞಾಪಕಮಾಡಿಕೊಳ್ಳುತ್ತೇನೆ. ಮಾನ್ಯ ಸದಸ್ಯರು ಹೇಳತಕ್ಕದ್ದು ನಿಜ. ಮಾನ್ಯ ಶ್ರೀ ಕೆ.ಹೆಚ್. ಶ್ರೀನಿವಾಸ್‌ರವರು new found love about the Police Department. ಅವರು ಇಷ್ಟೊಂದು ಸ್ಟಡಿ ಮಾಡಿದ್ದಾರೆಂದು ನನಗೆ ಗೊತ್ತಿರಲಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ.—ನನ್ನ ವಿಚಾರ ನಿಮಗೆ ಗೊತ್ತಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಿಮ್ಮ ವಿಚಾರ ಕೆಲವು ವರ್ಷಗಳಿಂದ ನನಗೆ ಗೊತ್ತಿಲ್ಲ. ಮಾನ್ಯ ಖರ್ಗೆಯವರು ಅವರು ಹೇಳಿದರು. ಪೋಲಿಸ್ ಕಾನ್‌ಸ್ಟೇಬಲ್ ಅಂದರೆ he is a harassed person ಎಂದು, ಆದರೆ ಪೋಲಿಸ್ ಕಾನ್‌ಸ್ಟೇಬಲ್ ಮೇಲೆ ವಿಶೇಷವಾದಂತಹ ಜವಾಬ್ದಾರಿ ಇರುವುದರಿಂದ ಸಮಾಜ ಅವರಿಂದ ಹೆಚ್ಚು ನಿರೀಕ್ಷೆ ಮಾಡುತ್ತದೆ. ಉದಾಹರಣೆಗೆ ಹೇಳುವುದಾದರೆ ಕ್ಲಾರ್ಕ್, ಅಂಡರ್ ಸೆಕ್ರೆಟರಿ ಅಥವಾ ಸೆಕ್ಷನ್ ಆಫೀಸರ್ ಅಥವಾ ತಾಲ್ಲೂಕು ಆಫೀಸಿನಲ್ಲಿರತಕ್ಕ ಕ್ಲಾರ್ಕ್ ಇವರುಗಳ ಹತ್ತಿರ ಜನ ಹೋದಾಗ, ಅವರ ಕೆಲಸ ಮಾಡದಿದ್ದರೆ ಬೇಜಾರು ಆಗುತ್ತದೆ. ಸ್ವಲ್ಪಮಟ್ಟಿಗೆ ಆರ್ಥಿಕ ಲುಕ್ಸಾನು ಆಗಬಹುದು ಬೇರೆ ರೀತಿಯ ಅಡಚಣೆಯಾಗಬಹುದು, ಜೀವ ಗಂಡಾಂತರದಲ್ಲಿ ಪ್ರಾಪರ್ಟಿ ಆಸ್ತಿಪಾಸ್ತಿ ರಕ್ಷಣೆಯಲ್ಲಿ ಪೋಲಿಸ್ ಕಾನ್‌ಸ್ಟೇಬಲ್, ಪೋಲೀಸ್ ಖಾತೆಗೆ ಸೇರಿದ ಅಧಿಕಾರಿಗಳು ತಕ್ಷಣ ಕ್ರಮ ತೆಗೆದುಕೊಳ್ಳದಿದ್ದರೆ ಆಗ ನಮ್ಮ ಸಮಾಜಕ್ಕೆ ನಾಗರೀಕರಿಗೆ ಅನೇಕ ರೀತಿಯ ಗಂಡಾಂತರ ಬರತಕ್ಕ ಸಂಭವ ಇವೆ. ಆಸ್ತಿಪಾಸ್ತಿಗೆ ಹಾನಿ, ಜೀವಕ್ಕೆ ಅಪಾಯ ಬರುವ ಸಂದರ್ಭವಿದೆ ಅದಕ್ಕೆ ಅವರ ಜವಾಬ್ದಾರಿ ಹೆಚ್ಚೆಂದು ಹೇಳಿದ್ದೇನೆ. ಬಜೆಟ್‌ನಲ್ಲಿ ಪೋಲಿಸ್ ಕಾನ್‌ಸ್ಟೇಬಲ್‌ಗಳಿಗೆ ನಾವು ಗ್ರೀನ್ ಕಾರ್ಡ್‌ಗಳನ್ನು ಕೊಡುತ್ತೇವೆಂದು ಹೇಳಿದ್ದೇನೆ. ನಾಗರೀಕ ಸರಬರಾಜು ಇಲಾಖೆಯ ಮುಖಾಂತರ ಅಕ್ಕಿ, ಜೋಳ, ಗೋಧಿ, ಎಣ್ಣೆ ಮೊದಲಾದುವುಗಳನ್ನು ಕೊಡುತ್ತೇವೆಂದು ಹೇಳಿದ್ದೇನೆ. ದುಬಾರಿ ಬೆಲೆಯಲ್ಲಿ ಪ್ರತಿವಾರ ಬೆಲೆ ಹೆಚ್ಚಾಗುತ್ತಿರುವ ಸಂದರ್ಭದಲ್ಲಿ ಅವರಿಗೆ ಸವಲತ್ತುಗಳನ್ನು ಕೊಡಬೇಕೆಂದು ತೀರ್ಮಾನಕ್ಕೆ ಬಂದಿದ್ದೇವೆ. ಸಾಮಾನ್ಯವಾಗಿ ಪೋಲಿಸ್ ಇಲಾಖೆಯ ಬಗ್ಗೆ ಹೇಳಬೇಕಾದರೆ ದೋಷವಿಲ್ಲವೆಂದು ಹೇಳಲಾರೆ. ದೋಷವಿದೆ, ಯಾವ ಖಾತೆಯಲ್ಲಿ ನೋಡಿದರೂ ದೋಷವಿದೆ. ಅಷ್ಟು ಉತ್ತಮವೆಂದು ತಿಳಿದುಕೊಂಡರೆ ಇನ್ನೂ ಉತ್ತಮಪಡಿಸುವ ಅವಕಾಶವಿದೆ. ಯಾವುದೂ ಪ್ರವರ್ಫೆಕ್ಟ್ ಆಗುವುದಿಲ್ಲ. ಈ ದೃಷ್ಟಿಯಲ್ಲಿ ನಮ್ಮ ಪೋಲಿಸ್ ಇಲಾಖೆಯವರು ಒಳ್ಳೆಯ ರೀತಿಯ ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಇಲ್ಲಿ ಅಧಿಕಾರಿಗಳ ವರ್ತನೆಯಲ್ಲಿ ತಪ್ಪು ಇರಬಹುದು ಅಧಿಕಾರ ದುರುಪಯೋಗ ಮಾಡಿಕೊಂಡಿರಬಹುದು, ಮಾತನಾಡುವುದರಲ್ಲಿ ನಯ ಇಲ್ಲದೇ ಇರಬಹುದು. ಆ ಸಂದರ್ಭದಲ್ಲಿ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳಬಹುದು. ಇಂತಹ ಘಟನೆಗಳು ಉದಾಹರಣೆಗೆ ಪೋಲಿಸ್ ಕಸ್ಟಡಿಯಲ್ಲಿ ತೀರಿಹೋದದ್ದು ಆ ಸರ್ಕಾರ ಈ ಸರ್ಕಾರವೆಂದು ನಾನು ಹೇಳುವುದಿಲ್ಲ. ಇದೊಂದು ಇಂಡಿಕೇಟ್ ಕಳೆದ ಹಿಂದಿನ ಐದು ವರ್ಷಗಳಲ್ಲಿ ಸರಾಸರಿ ಮೂರು ಸಾವುಗಳು ಆಗಿವೆ. ಪೋಲೀಸು ಕಸ್ಟಡಿಯಲ್ಲಿ ಅಥವಾ ಠಾಣೆಯಲ್ಲಿ ಮೂರು ಸಾವುಗಳು ಆಗಿವೆ. ಬೇರೆ ರಾಜ್ಯಗಳಿಗೆ ತುಲನೆ ಮಾಡಿದರೆ ಒಂದು ರಾಜ್ಯದಲ್ಲಿ 50, 60, 70 ಸಾವುಗಳು ಆಗಿವೆ. ಆ ದೃಷ್ಟಿಯಲ್ಲಿ ನೋಡಿದಾಗ ನಮ್ಮ ಪೋಲಿಸ್ ಅಧಿಕಾರಿಗಳು ಮೇಲ್ವರ್ಗದವರಾಗಲೀ ಕೆಳವರ್ಗದವರಾಗಲೀ ಅವರು ಅಷ್ಟು ಕೆಟ್ಟವರು ಅಲ್ಲ, ಅಷ್ಟು ದುಷ್ಟರಲ್ಲ ಅವರು ಸಭ್ಯರು. ಸಮಾಜದ ಅಗತ್ಯವನ್ನು ನೀಡ್ಸನ್ನು ನೋಡಿಕೊಂಡು ಕೆಲಸ ಮಾಡುತ್ತಾರೆಂದು ಹೇಳತಕ್ಕದ್ದು ಇದರಲ್ಲಿ ಗೊತ್ತಾಗುತ್ತದೆ.

೪-೩೦ ಪಿ. ಎಂ.

ಈಗ ಮೊದಲು ಹೇಳಿದಂಥ ಮಾತನ್ನು ಇಲ್ಲಿ ರಿಪೀಟ್ ಮಾಡತಕ್ಕಂಥ ಅಗತ್ಯ ಇಲ್ಲ. ಆದರೆ ಒಂದೊಂದು ಸಲ ನಮ್ಮ ನಮ್ಮ ಮೆಮಾರಿಯನ್ನು ರಿಫ್ರೆಶ್ ಮಾಡಬೇಕಾಗುತ್ತದೆ. ಕಳೆದ ಐದು ವರ್ಷಗಳಲ್ಲಿ ಗೋಲಿಬಾರ್ ಆಗಿಲ್ಲವೆ ? ಆಗಿದೆ. ಆಗಿಲ್ಲವೆಂದು ನಾನು ಹೇಳುವುದಿಲ್ಲ. ಗೋಲಿಬಾರ್‌ಗಳು ಯಾವುದೇ ಸಂದರ್ಭದಲ್ಲಿಯೂ ವಿದ್ಯಾರ್ಥಿಗಳ ಮೇಲಾಗಲೀ, ಅಥವಾ ಪೀಸ್‌ಫುಲ್ ಡೆಮಾನ್‌ಸ್ಟ್ರೇಶನ್ ಎಲ್ಲಿ ಆಗಿದೆಯೋ ಅಂಥಾಕಡೆಯಲ್ಲಾಗಲೀ, ರೈತರ ಮೇಲೆ ಆಗಲೀ, ದಲಿತರ ಮೇಲೆ ಆಗಲೀ, ಕಾರ್ಮಿಕರಮೇಲೆ ಯಾಗಲೀ ಆಗಿಲ್ಲ. ಈ ಕೀರ್ತಿ ನಮ್ಮ ಪೋಲಿಸರಿಗೆ ಹೋಗಬೇಕು. ಇದನ್ನು

ನಾನೂ ತೆಗೆದುಕೊಳ್ಳುತ್ತಿಲ್ಲ ಅಥವಾ ಹೋಮ್ ಮಿನಿಸ್ಟರ್‌ಗೆ ಕೊಡುತ್ತಿಲ್ಲ ಅನೇಕ ಸಂದರ್ಭದಲ್ಲಿ ಪರಿಸ್ಥಿತಿ ಯಾವರೀತಿ ಪ್ರಕ್ಷುಬ್ಧಗೊಳ್ಳುತ್ತದೆ ಎಂದು ಗೊತ್ತಾಗುವುದಿಲ್ಲ. ಯಾವಾಗ ಹತೋಟಿ ಮೀರಿಹೋಗುತ್ತದೆ ಎಂದು ಗೊತ್ತಾಗುವುದಿಲ್ಲ. ಅಲ್ಲಿ ನಿಂತುಕೊಂಡಿದ್ದಾಗಲೇ ತೀರ್ಮಾನ ಮಾಡ ಬೇಕಾದ ಪ್ರಸಂಗ ಬರುತ್ತದೆ. ನಾನು ಈ ಖಾತೆಯನ್ನು ವಹಿಸಿಕೊಂಡ ದಿವಸವೋ ಅಥವಾ ಆ ವಾರದಲ್ಲಿ ನಾನು ಪೋಲೀಸ್ ಖಾತೆಗೆ ಮಾನವಿಮಾಡಿ ಕೊಂಡಿದ್ದೆ. ನೀವು ಎಂದೂ ಮನುಷ್ಯನನ್ನು ನಿಮ್ಮ ಗುರಿಯ ಸಾಧನವನ್ನಾಗಿ ಮಾಡಕೂಡದು ಅಂತ. Human beings should not be your target or your marshalship.' ಅದನ್ನು ಅವರು ನಡೆಸಿಕೊಟ್ಟಿದ್ದಾರೆ. ಗೋಲಿಬಾರ್ ಆಗಿ ಅನೇಕ ಜನ ಸತ್ತಿದ್ದಾರೆ. ಗೋಲಿಬಾರು ಆಗಿರತಕ್ಕಂಥಾದ್ದು ಕೇವಲ ಒಂದೆರಡು ಸಂದರ್ಭಗಳಲ್ಲಿ ಬಿಟ್ಟರೆ ಹೆಚ್ಚಿನವು ಆಗಿದ್ದು ಈ ಕೋಮುವಾರು ಗಲಭೆಗಳಲ್ಲಿ. ಅದು ಬಿಟ್ಟರೆ ಗೋಲಿಬಾರ್ ಆದಂಥ ಘಟನೆಗಳು ಬಹಳ ಕಡಿಮೆ. ಇದು ಕೂಡ ಪೋಲೀಸ್ ಖಾತೆಗೆ ಒಂದು ಕ್ರೆಡಿಟ್ ಅಂತ ನಾನು ಹೇಳುತ್ತೇನೆ. ಪೋಲೀಸ್ ಸಮವಸ್ತ್ರ ಬಗ್ಗೆ ಶ್ರೀ ಕೆ. ಎಚ್. ಶ್ರೀನಿವಾಸ್ ಅವರು ಸೂಚನೆಯನ್ನು ಕೊಟ್ಟಿದ್ದಾರೆ. ಈಗ ಟೋಪಿ ವಿಚಾರದಲ್ಲಿ ಬಹಳಷ್ಟು ವರ್ಷ ಚರ್ಚೆಮಾಡಿ ಕೊನೆಗೆ ಅವರು ಈಗ ಹಾಕಿಕೊಂಡಿರುವ ಟೋಪಿಯನ್ನು ಕೊಟ್ಟಿದ್ದೇವೆ. ಅದೂ ಪೋಲೀಸ್ ಜವಾನರ ಅಭಿಪ್ರಾಯವನ್ನು ಪಡೆದುಕೊಂಡೇ ಕೊಟ್ಟಿದ್ದೇವೆ. ಈಗ ಮೂರುವರ್ಷಗಳಿಂದ ಅನೇಕ ರೀತಿಯ ಟೋಪಿಗಳನ್ನು ತರಿಸಿ ನನಗೆ ತೋರಿಸಿದ್ದರು, ಆವಾಗ ನಾನು ಏನು ಹೇಳಿದೆ ಎಂದರೆ......

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅವರ ಆಕ್ಷೇಪಣೆ ಇರುವುದು ಶೇಪ್ ಬಗ್ಗೆ ಅಲ್ಲ. ಕ್ವಾಲಿಟಿ ಆಫ್ ದಿ ಮೆಟೀರಿಯಲ್ ಬಗ್ಗೆ. ಸಬ್‌ಸ್ಟ್ಯಾಂಡರ್ಡ್ ಮೆಟೀರಿಯಲ್ ಉಪಯೋಗಿಸುತ್ತಾರೆ, ತೊಳೆದು ಬಿಟ್ಟರೆ ಅರ್ಧ ಬಣ್ಣ ಹೋಗಿಬಿಡುತ್ತದೆ. ಇಸ್ತ್ರಿ ನಿಲ್ಲುವುದಿಲ್ಲ. ಇದನ್ನು ಹಾಕಿಕೊಂಡರೆ ಮಾನ್ಯತೆ ಕೊಡುವುದಿಲ್ಲ ಎಂದು ಅವರು ಹೇಳುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಇದರ ಬಗ್ಗೆ ನಾನು ಗಮನ ಕೊಡುತ್ತೇನೆ, ಒಳ್ಳೆಯ ಮೆಟೀರಿಯಲ್ ನಿಂದ ಮಾಡತಕ್ಕಂಥ ಟೋಪಿ ಧರಿಸಿದರೆ ಅವರು ಸ್ಮಾರ್ಟ್ ಆಗಿ ಕಾಣಿಸುತ್ತಾರೆ. ಚಳಿಗಾಲದಲ್ಲಿ ಬೆಚ್ಚಗೆ ಇರುತ್ತದೆ ಮತ್ತು ಬೇಸಗೆಯಲ್ಲಿ ತಣ್ಣಗೆ ಇರುತ್ತದೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಏರ್‌ಕಂಡಿಷನ್ ಬಹಳ ಬೇಗನೆ ಆಗುತ್ತದೆ ಟೋಪಿಯಿಂದ.

ಶ್ರೀ ಜೆ. ಹೆಚ್. ಪಟೇಲ್.—ಟೋಪಿ ಹಾಕುವುದರಲ್ಲಿ ಮಾನ್ಯ ಶ್ರೀನಿವಾಸ್ ಅವರ ಹತ್ತಿರ ಇನ್ನೂ ಹೆಚ್ಚಿನ ಡಿಸೈನ್ ಇದ್ದರೆ, ಅದನ್ನು ಅವರು ಕೊಟ್ಟರೆ ನಾವು ಪರಿಶೀಲನೆ ಮಾಡುತ್ತೇವೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಅದಕ್ಕೆ ಸ್ವಲ್ಪ ನಿಮ್ಮ ತಲೆ ಅಳತೆಯನ್ನು ನೋಡ ಬೇಕಾಗುತ್ತದೆ. ಅಲ್ಲದೆ ಯಾವುದೋ ದಿವಸ ತಲೆ ಅಳತೆ ತೆಗೆದುಕೊಂಡು ಇನ್ನಾವುದೋ ದಿವಸ ಕೊಡುತ್ತಾರೆ. ಅದನ್ನು ಹಾಕಿಕೊಂಡರೆ ಅವರ ತಲೆ ಮುಳುಗಿಹೋಗುತ್ತದೆ. ಕೆಲವರಿಗೆ ಅದನ್ನು ಹಾಕಿಕೊಳ್ಳುವುದಕ್ಕೇ ಬರುವುದಿಲ್ಲ. ಈ ತರಹ ಪ್ರಾಬ್ಲೆಮ್ ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ಮತ್ತೆ ಹರಿಜನರ ಮೇಲೆ ಗಿರಿಜನರ ಮೇಲೆ ಆಟ್ರೊಸಿಟಿ ಆಯಿತು ಎನ್ನುವ ಪ್ರಸ್ತಾಪ ಬಂತು. ಇದು ಎಲ್ಲರಿಗೂ ಚಿಂತೆಯನ್ನು ಉಂಟುಮಾಡತಕ್ಕಂಥ ವಿಚಾರ. ಈ ಬಗ್ಗೆ ಕಳೆದ ಏಳೆಂಟು ವರ್ಷಗಳ ಅಂಕಿಯನ್ನು ಇಲ್ಲಿ ಕೊಡುವುದಕ್ಕೆ ಬಯಸುತ್ತೇನೆ. ೮೧ ರಲ್ಲಿ Attrocities against SCs&STs 397, ೮೨ರಲ್ಲಿ ೩೬೩, ೮೩ರಲ್ಲಿ ೧೯೪, ೮೪ರಲ್ಲಿ ೧೬೯, ೮೫ರಲ್ಲಿ ೨೯೪, ೮೬ರಲ್ಲಿ ೧೮೭ ಮತ್ತು ೮೭ರಲ್ಲಿ ಸೆಪ್ಟೆಂಬರ್ ವರೆಗೆ ಮಾತ್ರ ಇದೆ, ಮುಂದಿನ ಅಂಕಿ ಇಲ್ಲ. ಅಕ್ಟೋಬರ್‌ವರೆಗೆ ೧೪೯ ಇದೆ.

ಇದನ್ನು ನೋಡಿದರೆ, ಇದರ ಸಂಖ್ಯೆ ಅದೃಷ್ಟವಶಾತ್, ಸುದೈವದಿಂದ ಕಡಿಮೆಯಾಗುತ್ತಿದೆ. ಒಂದು ವರ್ಷದಲ್ಲಿ ಅಂದರೆ ೧೯೮೫ರಲ್ಲಿ ೮೪ಕ್ಕಿಂತ ಸ್ವಲ್ಪ ಹೆಚ್ಚಾಗಿದೆ. ಅದರ ನಂತರ ಪುನಃ ಕಡಿಮೆ ಯಾಗುತ್ತಿದೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ, ಇದು ಬಹಳ ಕಡಿಮೆ ಎಂದೇ ಹೇಳಬೇಕು. ಆದ್ದರಿಂದ ಈ ದೃಷ್ಟಿಯಲ್ಲೂ ಕೂಡ ನಮ್ಮ ರಾಜ್ಯ ಉಳಿದ ರಾಜ್ಯಗಳಿಗಿಂತ, ಸುದೈವ ಎಂದು ಹೇಳುತ್ತೀರೊ, ಉತ್ತಮ ಎಂದು ಹೇಳುತ್ತೀರೊ ಅಥವಾ ನೀವು ಏನು ಹೇಳುತ್ತೀರೊ ಎಂಬುದನ್ನು ನಿಮಗೇ ಬಿಡುತ್ತೇನೆ. ಉದಾಹರಣೆಗೆ ಉತ್ತರಪ್ರದೇಶದಲ್ಲಿ ೧೯೮೬ರಲ್ಲಿ ೪೯೬೭ ಘಟನೆಗಳಾಗಿವೆ, ಆಮೇಲೆ ತಮಿಳುನಾಡಿನಲ್ಲಿ ೭೫೮ ಘಟನೆಗಳಾಗಿವೆ, ಮಹಾರಾಷ್ಟ್ರದಲ್ಲಿ ೭೦೪ ಘಟನೆಗಳಾಗಿವೆ, ಬಿಹಾರದಲ್ಲಿ

೧೬೩೩ ಘಟನೆಗಳಾಗಿವೆ, ೧೯೮೭ರಲ್ಲಿ ೨೦೭೩ ಘಟನೆಗಳಾಗಿವೆ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ನಮ್ಮಲ್ಲಿ ಕಳೆದ ವರ್ಷ ೧೪೪, ಅದಕ್ಕೆ ಹಿಂದಿನ ವರ್ಷ ೧೮೭ ಘಟನೆಗಳಾಗಿವೆ.........

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನೀವು ಕಂಪ್ಯಾರಿಟೀವ್ ಸ್ಟೇಟ್‌ಮೆಂಟ್ ಕೊಡುವುದು ಸರಿ. ನೀವು ಯಾವಾಗಲೂ ಪದೇ ಪದೇ ಹೇಳುತ್ತಿರುತ್ತೀರಿ. ಆದರೆ ನಮ್ಮ ರಾಜ್ಯದ ವಾತಾವರಣವೇ ಬೇರೆ. ಬಿಹಾರ, ಯು. ಪಿ. ರಾಜ್ಯಗಳ ವಾತಾವರಣವೇ ಬೇರೆ. ಇದು ತಮ್ಮ ಕಾಲದಲ್ಲೇ ಅಲ್ಲ, ದೇವರಾಜ ಅರಸರ ಕಾಲ ತೆಗೆದುಕೊಳ್ಳಿ, ನಿಜಲಿಂಗಪ್ಪನವರ ಕಾಲವನ್ನೇ ತೆಗೆದುಕೊಳ್ಳಿ, ಗುಂಡೂರಾಯರ ಕಾಲವನ್ನೇ ತೆಗೆದುಕೊಳ್ಳಿ, ಎಸ್. ಸಿ. ಯವರಿಗೆ ಇಲ್ಲಿ ಸ್ವಲ್ಪಮಟ್ಟಿಗೆ ಪ್ರೊಟೆಕ್ಷನ್ ಇದೆ. ಆದರೆ ಉತ್ತರಭಾರತದಲ್ಲಿ ಇಲ್ಲ ಆದರೆ ಇಲ್ಲಿನ ವಾತಾವರಣ ಬೇರೆ ಈ ವಾತಾವರಣಕ್ಕೆ ಹೋಲಿಸಿದರೆ, ಈ ಅಟ್ರಾಸಿಟೀಸ್ ಇಷ್ಟು ಆಗಬಾರದಿತ್ತು. ೨ನೆಯದು, ನಾನು ಏಕೆ ಇದನ್ನು ಹೇಳುತ್ತಿದ್ದೇನೆಂದರೆ, ಅಧಿಕಾರಕ್ಕೆ ನೀವೇ ಬರಲೀ, ಅಥವಾ ಯಾರೇ ಬರಲಿ. ಈಗ ಮಂಡಲ್ ಪಂಚಾಯಿತ್ತಿ, ಜಿಲ್ಲಾಪರಿಷತ್ ಚುನಾವಣೆಯಾದ ಮೇಲೆ, ಅಲ್ಲಿಗೆ ಕೆಲವು ಜನರು ಅಂದರೆ vested interests ಬಂದಮೇಲೆ ಅನೇಕ ಎಸ್. ಐ ಗಳು ಕೇಸಸ್‌ನ್ನೆ ರಿಜಿಸ್ಟರ್ ಮಾಡುವುದಿಲ್ಲ, ಜಿಲ್ಲಾ ಪರಿಷತ್ ಸದಸ್ಯನದೇ ಪೋಲೀಸ್ ಸ್ಟೇಷನ್ ಹತ್ತಿರ, ೮೦೦ ಅಡಿ ಅಂತದರಲ್ಲಿ ಮರ್ಡರ್ ಆದರೂ ಕೂಡ, ಇವತ್ತು ಕೊಲೆಮಾಡಿದವನ ಬಿಡುಗಡೆಯಾಗಿದೆ, ಅವನು ಡೈಯಿಂಗ್ ಡಿಕ್ಲರೇಷನ್ ಕೊಟ್ಟಿದ್ದಾನೆ, ಆದೂ ಜನತಾಪಾರ್ಟಿಯುವರೇ, ಅವನನ್ನು ಎಂತೆಂಥವರು ಹೊಡೆದಿದ್ದಾರೆ. ಅವರೆಲ್ಲರಿಗೂ ಬಿಡುಗಡೆಯಾಗಿದೆ. ಆದ್ದರಿಂದ, ಯಾರು ಲೋಕಲ್ ಆಗಿ ಪವರ್‌ಫುಲ್ ಆಗುತ್ತಾರೆ, ಆಗ ಅಟ್ರಾಸಿಟೀಸ್ ಜಾಸ್ತಿಯಾಗುತ್ತವೆ, ಅವರಿಗೆ ಬೇಕಾದವರು ಎಸ್. ಐ. ಸಿ. ಐ. ಗಳು ಬಂದಾಗ, ರಿಜಿಸ್ಟರ್‌ಲ್ಲಿ ನಮೂದು ಮಾಡುವುದಿಲ್ಲ. ಆದ್ದರಿಂದ ಅದರ ಮೇಲೆ ಸಂತೋಷಪಡುವುದು ಬೇಡ. ಬೇಕಾದರೆ ನಿಮ್ಮ ಪಾರ್ಟಿಯವರಿಗೇ ಕೇಳಿಕೊಳ್ಳಿ. ಷೆಡ್ಯೂಲ್ಡ್ ಕ್ಯಾಸ್ಟ್ ಇರಲಿ, ಬ್ಯಾಕ್‌ವರ್ಡ್ ಕ್ಯಾಸ್ಟ್ ಇರಲಿ ಅವರ ಅಭಿಪ್ರಾಯವನ್ನೂ ಕೇಳಿ. ಇವತ್ತು ಇದು ಇದೆ. ಇದನ್ನೇ ತಡೆಗಟ್ಟಬೇಕಾದರೆ, ಕೆಲವು ಜನರಿಗೆ ಪುಂಡುಗಂದಾಯ ಹಾಕತಕ್ಕ ಮನಸ್ಸು ಮಾಡಿ, ಅವರ ಮೇಲೆ ಪುಂಡುಗಂದಾಯ ಹಾಕಿ, ಅದನ್ನು ಕಲೆಕ್ಟ್ ಮಾಡಿ, ಪಾಠ ಕಲಿಸದೇ ಹೋದರೆ ಇದು ಸ್ಟಾಪ್ ಆಗುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಖರ್ಗೆಯವರು ಹೇಳಿರುವುದರಲ್ಲಿ ಸತ್ಯ ಇಲ್ಲವೆಂದು ನಾನು ಹೇಳಲಾರೆ ಮಂಡಲ್ ಪಂಚಾಯತ್ ಮತ್ತು ಜಿಲ್ಲಾಪರಿಷತ್ ಅಸ್ತಿತ್ವಕ್ಕೆ ಬಂದಮೇಲೆ, ಈ ಮಧ್ಯಂತರ ಕಾಲ ಏನಿರುತ್ತದೆ, ಈ ಕಾಲದಲ್ಲಿ ಅಲ್ಲಿ ಇಲ್ಲಿ ಕೆಲವು ಘಟನೆಗಳು ಆಗಬಹುದು, ಇವನ್ನು ನಾವು ನಿರೀಕ್ಷೆ ಮಾಡಲೇಬೇಕು. ಈ ಆರ್ಥಿಕ ಶಕ್ತಿ ಯಾವುದೇ ಒಂದು ಸಮಾಜದ ಕೈಯಲ್ಲಿ ಬಂದಾಗ, ಸಮಾಜದ ಪ್ರಾಬಲ್ಯ ಹೆಚ್ಚಾಗುತ್ತದೆ. ಅದು ಯಾವುದೇ ಸಮಾಜವಾಗಲೀ, ಹಿಂದುಳಿದ ಸಮಾಜವಾಗಲಿ ಮುಂದುವರೆದ ಸಮಾಜವಾಗಲೀ ಯಾವುದೇ ಸಮಾಜವು, ಅದಕ್ಕಿಂತ ಆರ್ಥಿಕ ಬಲಹೀನರಾಗಿರತಕ್ಕಂಥವರನ್ನು ಸುಲಿಗೆ ಮಾಡುತ್ತದೆ. ಇದಕ್ಕೆ ಉದಾಹರಣೆ ಕೊಡುವುದಾದರೆ, ಬಿಹಾರದಲ್ಲಿ ಯಾದವ ಜನಾಂಗ ೩೦-೪೦ ವರ್ಷಗಳ ಹಿಂದೆ ಬಹಳ ಹಿಂದುಳಿದಿದ್ದರು, ಈಗ ಅವರಿಗೆ ಆರ್ಥಿಕ ಶಕ್ತಿ ಬಂದಿದೆ. ಈಗ ಅವರಿಗಿಂತಲೂ ಕೆಳಗಡೆ ಇರತಕ್ಕಂಥ ಕೂರ್ಮಿಗಳ ಶೋಷಣೆಯಾಗುತ್ತಿದೆ. ಈ ಕೂರ್ಮಿಗಳದ್ದು ದೂರು ಏನೆಂದರೆ, ನಮಗೆ ಹಳೆಯಕಾಲದಲ್ಲಿ ರಜಪೂತರು ಮತ್ತು ಭೂಮಿದಾರರು, ಸುಲಿಗೆ ಮಾಡುತ್ತಿದ್ದರು, ಎಂದು ಹೇಳುತ್ತಿದ್ದಾರೆ. ಆದ್ದರಿಂದ ನಮ್ಮ ಸುಲಿಗೆ ಆಗುವುದು ನಾವೇನು ಹಿಂದುಳಿದವರು ಎಂದು ತಿಳಿದುಕೊಂಡಿದ್ದೇವೆ, ಅವರಿಂದಲೂ ಆಗುತ್ತದೆ. ಕೆಲವು ಸಂದರ್ಭಗಳಲ್ಲಿ ಸೋಷಿಯಲ್ and economic transformation ಆಗತಕ್ಕ ಸಂದರ್ಭದಲ್ಲಿ ಮತ್ತು ಪೊಲಿಟಿಕಲ್ transformation ಆಗತಕ್ಕ ಸಂದರ್ಭದಲ್ಲಿ, ಈ ಹೊಸದಾಗಿ ಆರಿಸಿ ಬಂದಿರತಕ್ಕಂಥ ರಾಜಕೀಯ ಅಧಿಕಾರ ಹೇಗಿರುತ್ತದೆ, ಅವರು ದರ್ಪವನ್ನು ತೋರಿಸಬಹುದು ಎಂಬುದನ್ನು ಗಣನೆಗೆ ತೆಗೆದುಕೊಂಡೆ ಮುಂದುವರಿಯಬೇಕು. ಅದನ್ನು ನಾನು ಒಪ್ಪುತ್ತೇನೆ. ಆದರೆ ಇದು ಶಾಶ್ವತವಾಗಿ ಉಳಿಯಲಾರದು. ಈ ನಮ್ಮ ಅಧಿಕಾರ ವಿಕೇಂದ್ರೀಕರಣದ ಒಂದು ಕಾರ್ಯಕ್ರಮದಲ್ಲಿ ಎಲ್ಲಕ್ಕಿಂತಲೂ ಮಹತ್ವ ಆದುದು ಏನು? ಬೇರೆ ಯಾವ ರಾಜ್ಯ ಸರ್ಕಾರದವರೂ ಮಾಡದೇ ಇರತಕ್ಕ ಮಹತ್‌ಕಾರ್ಯವನ್ನು ನಾವು ಮಾಡಿದ್ದೇವೆ. ಎಲ್ಲಿ ಸದಸ್ಯರುಗಳಿಗೆ ಸಾಕಷ್ಟು ಪ್ರಾತಿನಿಧ್ಯ ಇಲ್ಲವೋ ಅಲ್ಲಿ ಪ್ರಾತಿನಿಧ್ಯವನ್ನು ಕೊಡತಕ್ಕದ್ದು ಮತ್ತು ಅಷ್ಟಕ್ಕೇ ಅದು ಮುಗಿಯುವುದಿಲ್ಲ. ಗ್ರಾಮ ಸಭೆಗೆ ಕೊಟ್ಟಿರತಕ್ಕ ಸ್ಟ್ಯಾಚೂಟರಿ ಪವರ್ ಇವೊತ್ತು ಅಷ್ಟಾಗಿ ಆಕ್ಟೀವ್ ಆಗಿ ಇರದೇ ಇರಬಹುದು. ಆದರೆ ಕಾಲಕ್ರಮೇಣ ಗ್ರಾಮಸಭೆ will become the most important body i the whole decentralisation of

administration. ಗ್ರಾಮಸಭೆಯಲ್ಲಿ ಪ್ರತಿಯೊಬ್ಬನಿಗೂ ಸಮನಾದ ಹಕ್ಕು ಇದೆ ಮತ್ತು ಮಂಡಲ ಪಂಚಾಯತ್ ಅಧ್ಯಕ್ಷರು, ಉಪಾಧ್ಯಕ್ಷರು ಕನಿಷ್ಟಪಕ್ಷ ಆರು ತಿಂಗಳಿಗೆ ಒಂದು ಸಲವಾದರೂ ಗ್ರಾಮಸಭೆಯನ್ನು ಕರೆಯಲೇಬೇಕು ಮತ್ತು ತಾವು ಮಾಡಿವಂತಹ ಚಟುವಟಿಕೆಗಳನ್ನು ಮತ್ತು ತಾವು ಮಾಡಿದಂತಹ ಕೆಲಸದ ವರದಿಯನ್ನು ಒಪ್ಪಿಸಬೇಕಾಗುತ್ತದೆ. ಅದಕ್ಕೆ ಹೆಚ್ಚು ಹೆಚ್ಚು ಅಭ್ಯಾಸ ಬಲದಿಂದ ಶಕ್ತಿ ಬಂದ ಹಾಗೆ ಆಗುತ್ತದೆ. ಇದರಲ್ಲಿ ನನಗೆ ಏನು ಅನಿಸುತ್ತದೆ ಅಂದರೆ ಇವತ್ತು ಏನು ಅಟ್ರೋಸಿಟೀಸ್ ಆಗುತ್ತಿದೆ, ಅತ್ಯಾಚಾರ ಆಗುತ್ತಿದೆ ಅದು ಮೇಲಿನ ವರ್ಗದವರಿಂದಾಗಲೀ ಅಥವಾ ಶಕ್ತಿ ಉಳ್ಳಂತಹವರಿಂದಾಗಲೀ ಅಂತಹವರಿಂದ ಆಗತಕ್ಕ ಅನ್ಯಾಯ ಅತ್ಯಾಚಾರಗಳು ಈ ರೀತಿ ಮಾಡುವುದರಿಂದ ನಿಲ್ಲುತ್ತದೆ ಎನ್ನುವ ನಂಬಿಕೆ ನನ್ನದು. ಇದೇ ಸಂದರ್ಭದಲ್ಲಿ ನಮ್ಮ ವಿಕೇಂದ್ರೀಕರಣದ ಹೊಸ ಒಂದು ಪ್ರಯೋಗದ ಬಗ್ಗೆ ಟೀಕೆಗಳು ಬಂದವು. ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕಿ ಶ್ರೀಮತಿ ಕೆ. ಎಸ್. ನಾಗರತ್ನಮ್ಮನವರಿಗೆ ಏಕೋ ಏನೋ ಇದರ ಮೇಲೆ ಒಳ್ಳೆಯ ದೃಷ್ಟಿ ಇಲ್ಲ. ಅವರು ಹೇಳುತ್ತಾರೆ, ನೀವು ಅಧಿಕಾರ ಮಂಡಲಗಳಿಗೆ ಕೊಟ್ಟು ಬಿಟ್ಟಿದ್ದೀರಿ, ಆದರೆ ಮಂಡಲಗಳಲ್ಲಿ ದುಡ್ಡು ಇಲ್ಲ, ಅವರು ಏನು ಏನೋ ಮಾಡಿಕೊಂಡು ಹೋಗುತ್ತಾರೆ. ಮತ್ತು ಇನ್ನೊಂದು ಅವರು ಹೇಳಿದರು—ನಿಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಂಡು ನೀವು ಪೋಸ್ಟ್ ಆಫೀಸ್‌ನಂತೆ ಕೆಲಸ ಮಾಡುತ್ತಿದ್ದೀರಿ, ಎಂದು ಹೇಳಿದರು. ಆದರೆ ನಾನು ಒಂದು ಮಾತನ್ನು ಅತ್ಯಂತ ವಿನಯದಿಂದ ಹೇಳಬಯಸುತ್ತೇನೆ. ಆಡಳಿತ ವಿಕೇಂದ್ರೀಕರಣ ಅದು ನಮ್ಮ ಪಕ್ಷದ ಮತ್ತು ವೈಯಕ್ತಿಕವಾಗಿ ಹೇಳುವುದಾದರೆ ನಮ್ಮ ಆರ್ಥಿಕ ಭದ್ರತೆಯ ಬುನಾದಿ ಎಂದು ಹೇಳುತ್ತೇನೆ. ಎಲ್ಲಿಯವರೆಗೆ ವಿಕೇಂದ್ರೀಕರಣ ಆಗುವುದಿಲ್ಲ ಅಲ್ಲಿಯವರೆಗೆ ನಮ್ಮ ಪ್ರಜಾಪ್ರಭುತ್ವ ಎಂದೆಂದಿಗೂ ಬಲವಾಗಿ ಬೆಳೆಯತಕ್ಕದ್ದು ಸಾಧ್ಯವಿಲ್ಲ. ಅದು ನಮ್ಮ ಬಲವಾದ ನಂಬಿಕೆ ಕೂಡ. ನಾವು ಪ್ರಥಮ ಬಾರಿಗೆ ಪ್ರಯೋಗಾರ್ಥವಾಗಿ ಇದನ್ನು ಜಾರಿಗೆ ತಂದಿದ್ದೇವೆ. ಐದು ವರ್ಷದವರೆಗೆ ಅಧಿಕಾರವನ್ನು ಚಲಾಯಿಸಲು ಅವರಿಗೆ ಅವಕಾಶ ಕೊಡಬೇಕು. ಇವೊತ್ತು ನಾವು ಅವರಿಗೆ ಅಧಿಕಾರವನು ಕೊಟ್ಟಿದ್ದೇವೆ, ಈಗಿಂದೀಗಲೇ ಅದನ್ನು ವಾಪಸ್ ತೆಗೆದುಕೊಂಡರೆ, ನಮ್ಮ ಪಕ್ಷದಲ್ಲಿನ ನಮ್ಮ ಶಾಸಕರ ಮನಸ್ಸಿನಲ್ಲಿ ಕೂಡ ಏನು ಒಂದು ಭಾವನೆ ಇದೆ. ಎಂದರೆ ಹಿಂದಿನ ವರ್ಷದವರೆಗೆ ನಮ್ಮ ಹತ್ತಿರ ಜನ ಬರುತ್ತಿದ್ದರು. ಅಧಿಕಾರ ಇತ್ತು. ನಮ್ಮನ್ನು ಕೇಳಿ ಮಾಡುತ್ತಿದ್ದರು. ಈ ಕ್ಷೇತ್ರವನ್ನು ನಾವು ಪ್ರತಿನಿಧಿಸುತ್ತಿದ್ದೇವೆ. ಜನರು ನಾಳೆ ನಮ್ಮನ್ನು ಕೇಳುತ್ತಾರೆ. ನಮ್ಮಿಂದ ಪೂರಾ ಅಧಿಕಾರವನ್ನು ತೆಗೆದುಕೊಂಡು ಬಿಟ್ಟರೆ ನಾಳೆ ಜನರಿಗೆ ನಾವು ಏನು ಹೇಳಬೇಕು ಎನ್ನತಕ್ಕ ಕನ್‌ಸರ್ನ್ ನಮ್ಮ ಪಕ್ಷದಲ್ಲಿ ಇದೆ. ಬಹುಶಃ ನಿಮ್ಮ ಪಕ್ಷದಲ್ಲೂ ಇರಬಹುದು. ಆದರೆ ಇದು ಒಂದು ಶಾಶ್ವತವಾಗಿ ಇರತಕ್ಕ ಭಾವನೆ ಅಲ್ಲ. ಈ ಬಿಲ್ ಪಾಸ್ ಆಗಿ ಹೋಗುತ್ತದೆ. ಹೇಗೆ ಪಾರ್ಲಿಮೆಂಟ್ ಸದಸ್ಯರು ಆರಿಸಿ ಹೋಗುತ್ತಾರೆ ಒಂದೊಂದು ಜಿಲ್ಲೆಯಿಂದ ಒಬ್ಬರು ಅಥವಾ ಇಬ್ಬರು, ಪಾರ್ಲಿಮೆಂಟ್ ಸದಸ್ಯರಿಗೂ ರಾಜ್ಯ ಸದಸ್ಯರೂ ಮಾಡತಕ್ಕ ಕೆಲಸಕ್ಕೂ ಯಾವ ಸಂಬಂಧವೂ ಇಲ್ಲ. ಅದರಲ್ಲಿ ಬೇರೆ ಪಕ್ಷದ ಒಂದು ಸರ್ಕಾರ ರಾಜ್ಯದಲ್ಲಿ ಇದ್ದರೆ ಅವರ ಮಾತು ಏನೂ ನಡೆಯುವುದಿಲ್ಲ ಎಂದು ಹೇಳತಕ್ಕ ಭಾವನೆ ಅವರ ಮನಸ್ಸಿನಲ್ಲಿ ಇರುತ್ತದೆ. ಆದರೆ ಇದರ ಅರ್ಥ ಏನು? ಜನರು ಅವರನ್ನು ಎರಡನೇ ಸಲ ಆರಿಸುವುದಿಲ್ಲ ಎಂದು ಹೇಳತಕ್ಕದ್ದನ್ನು ಕೇಳಿದ್ದೇನೆ. ಜನರಿಗೆ ಅರ್ಥ ಆಗುತ್ತದೆ. ಯಾವ ಕೆಲಸ ಕಳೆದ ಎರಡು ವರ್ಷದವರೆಗೆ ಮಾನ್ಯ ಶಾಸಕರು ಮಾಡುತ್ತಿದ್ದರು. ಆ ಶಾಸಕರ ಜವಾಬ್ದಾರಿ, ಕೆಲಸದ ಜವಾಬ್ದಾರಿ ಅವರು ಆರಿಸಿ ಕಳಿಸಿದ ಮಂಡಲ್ ಮತ್ತು ಜಿಲ್ಲಾ ಮಟ್ಟದಲ್ಲಿ ಪ್ರತಿನಿಧಿಗಳು ಮಾಡಬೇಕು ಎಂದು ಹೇಳತಕ್ಕದ್ದನ್ನು ಜನಗಳು ತಿಳಿದುಕೊಳ್ಳುತ್ತಾರೆ. ಆದ್ದರಿಂದ ಏನಾದರೂ ಕೆಲಸ ಆಗದೇ ಇದ್ದರೆ ಇನ್ನು ಒಂದು, ಒಂದೂವರೆ ವರ್ಷದಲ್ಲಿ ಅಭ್ಯಾಸ ಆದ ಮೇಲೆ ಅವರು ಎಂದೂ ಶಾಸಕರನ್ನು ಅದಕ್ಕೆ ಜವಾಬ್ದಾರರನ್ನಾಗಿ ಮಾಡುವುದಿಲ್ಲ. ಅಲ್ಲಿರತಕ್ಕಂಥ ಜಿಲ್ಲಾ ಪರಿಷತ್ ಸದಸ್ಯರನ್ನೇ ಜವಾಬ್ದಾರರನ್ನಾಗಿ ಮಾಡುತ್ತಾರೆ. ಇದಕ್ಕೆ ಸ್ವಲ್ಪ ಕಾಲ ಬೇಕು. ೩ ವರ್ಷದವರೆವಿಗೆ ನೀವು ಅದನ್ನು ಗಮನಕೊಟ್ಟು ನೋಡಬೇಕಾಗುತ್ತದೆ. ಒಮ್ಮೆಲೆ ಸುಧಾರಣೆ ಆಗಬೇಕೆಂದರೆ ಅದು ಸಾಧ್ಯವಿಲ್ಲ. ನಾವು ಹಾಕಿದ ಹೆಜ್ಜೆಯನ್ನು ಹಿಂದೆ ಸರಿಸತಕ್ಕಂಥಾದ್ದು ಸರಿಯಲ್ಲ ಎನ್ನತಕ್ಕಂಥ ಪ್ರಾರ್ಥನೆಯನ್ನು ಮಾನ್ಯ ಸದಸ್ಯರಲ್ಲಿ ಮಾಡುತ್ತೇನೆ. ಮಾನ್ಯ ಶ್ರೀಮತಿ ನಾಗರತ್ನಮ್ಮನವರು ಹೇಳಿದ ವಿಚಾರ ಅಷ್ಟು ಸತ್ಯ ಅಲ್ಲ. ಇಂದು ನಾನು ಅಂಕಿಅಂಶಗಳನ್ನು ಬೇಕಾದರೂ ಕೊಡಬಲ್ಲೆ, ಇವೆ. ಆದರೆ ಅಂಕಿಅಂಶಗಳನ್ನು ಹೇಳತಕ್ಕಂಥ ಅಗತ್ಯವಿಲ್ಲ. ಪ್ರತಿಯೊಂದು ಮಂಡಲ ಪಂಚಾಯಿತಿಗೂ ೩ ಲಕ್ಷ ರೂಪಾಯಿ ಕನಿಷ್ಟ ಪಕ್ಷ ಇರುತ್ತದೆ. ಅವರು ಸುಮಾರು ೨೦ ಸಾವಿರ ರೂಪಾಯಿಗಳವರೆವಿಗೂ ಒಂದು ಕೆಲಸಕ್ಕೆ ಖರ್ಚು ಮಾಡಬಹುದು. ಯಾವ ಮಂಡಲ ಪಂಚಾಯಿತಿ ಯವರೂ ಸಹ ಹಣ ಇಲ್ಲ ಎಂದು ಇದುವರೆವಿಗೂ ದೂರು ಕೊಟ್ಟಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ನಾವೇ ದೂರು ಕೊಡುವುದಕ್ಕಾಗುವುದಿಲ್ಲ. ಇನ್ನು ಪಂಚಾಯಿತಿ ಯಾವರು ಕೊಡುತ್ತಾರಾ?

ಶ್ರೀ ರಾಮಕೃಷ್ಣ ಹೆಗಡೆ.—ಸಂಬಳ ಇಲ್ಲ, ಸಾರಿಗೆ ಇಲ್ಲ, ಎನ್ನತಕ್ಕಂಥಾದ್ದು ನಿಜವಲ್ಲ. ಆಮೇಲೆ ಸಂಬಳಕ್ಕೆ ಹೆಚ್ಚು ಖರ್ಚಾಗುತ್ತಿದೆ ಎಂದು ಹೇಳಿದರು, ನಮ್ಮ ರಾಜ್ಯ ಸರ್ಕಾರದ ಮಟ್ಟದಲ್ಲಿ ನೋಡುವುದಾದರೆ ರಾಜ್ಯ ಮಟ್ಟಕ್ಕಿಂತ ಅಲ್ಲಿ ಹೆಚ್ಚು ಖರ್ಚಾಗುತ್ತಿದೆ ನಿಜ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ತಮಗೆ ಅಂಕಿಅಂಶಗಳನ್ನು ಕೊಟ್ಟಿದ್ದಾರಲ್ಲ ಅದೇರೀತಿ ಇದುಕೂಡ. ಅಲ್ಲಿ ಸುಮಾರು ಒಂದೂವರೆ ಲಕ್ಷ ರೂಪಾಯಿಗಳ ಪ್ಲಾನ್ ಇದ್ದರೂ ಸಹ ೫ ಸಾವಿರ ರೂಪಾಯಿಗಳಿಗಿಂತ ಹೆಚ್ಚು ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲ......

ಶ್ರೀ ರಾಮಕೃಷ್ಣ ಹೆಗಡೆ.—ಈಗ ೫ ಸಾವಿರ ರೂಪಾಯಿಗಳಿಗಿಂತ ಮೇಲ್ಪಟ್ಟ ಕೆಲಸ ಯಾವುದಾದರೂ ಇದ್ದರೆ ಅದು ಆಗುವುದಿಲ್ಲ. ೫ ಸಾವಿರ ರೂಪಾಯಿಗಳಿಗೆ ಒಳಪಟ್ಟು ಇದ್ದರೆ ಅದಕ್ಕೆ ಹಣ ಖರ್ಚು ಮಾಡುವುದಕ್ಕೆ ಅವರಿಗೆ ಅಧಿಕಾರ ಇದೆ. ದುಡ್ಡು ಇದೆ. ನಾನು ಹೇಳು ವುದನ್ನು ಕೇಳಿ......

ಶ್ರೀ ಕೆ. ಹೆಚ್. ಪಾಟೀಲ್.—ತಾವು ಒಂದು ನಿಮಿಷ ಈಲ್ಡ್ ಆಗುವುದಾದರೆ, ತಮಗೆ ವರ್ಣರಂಜಿತವಾದ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಆದರೆ ಅದು ತಪ್ಪು ಇದೆ. ನನಗೆ ತಿಳಿದ ಮಟ್ಟಿಗೆ ಅನೇಕ ಮಂಡಲ ಪಂಚಾಯಿತಿಗಳವರನ್ನು ಕೇಳಿದಾಗ ನಮಗೆ ಕೊಡಬೇಕಾದ ಭತ್ಯ ಕೊಟ್ಟಿಲ್ಲ. ತಾವು ಬೇಕಾದರೆ ಪುಕ್ಕಟೆಯಾಗಿ ಕೆಲಸ ಮಾಡಿ ಎಂದು ಹೇಳಿದ್ದರೆ ಮಾಡುತ್ತಿದ್ದರು. ತಾವು ಪ್ರಧಾನರೆಂದು ಮಾಡಿದಿರಿ, ಅವರು ನಮ್ಮ ಪ್ರಧಾನಿಗಳಿದ್ದಂತೆ, ಅವರು ಪ್ರಧಾನರು, ಅವರಿಗೆ ಕೊಡುವ ೬ ರೂಪಾಯಿಗಳ ಭತ್ಯವನ್ನು ತೆಗೆದುಕೊಳ್ಳಲು ಟ್ರೆಜರಿಗೆ ಹೋದರೆ ಹಣ ಇಲ್ಲವೆಂದು ಹೇಳಿ ವಾಪಸ್ ಕಳುಹಿಸಿಕೊಡುತ್ತಿದ್ದಾರೆ. ಇದು ಪತ್ರಿಕೆಗಳಲ್ಲಿ ಬಂದಿದೆ. ನಾನು ತಮಗೂ ಸಹ ಹೇಳಿದ್ದೇನೆ? ತಾವೇ ವಿಚಾರ ಮಾಡಿ ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಈಗ ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್ತಿಗೆ ನಾವು ತುಸು ಹೆಚ್ಚು ಕಡಿಮೆ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಅಂದರೆ ೯೨೦ ಕೋಟಿ ೫೦ ಲಕ್ಷ ರೂಪಾಯಿಗಳು. ಇದರಲ್ಲಿ ಸಂಬಳ......

ಶ್ರೀ ಧರ್ಮಸಿಂಗ್.—ಇದರಲ್ಲಿ ಸಿಬ್ಬಂದಿ ವೆಚ್ಚವೆಷ್ಟು ಡೆವಲಪ್‌ಮೆಂಟ್‌ಗೆ ಎಷ್ಟು? ಬಿಡಿಸಿ ಹೇಳಿ?

ಶ್ರೀ ರಾಮಕೃಷ್ಣ ಹೆಗಡೆ.—೧೯೮೭-೮೮ನೇ ಸಾಲಿನಲ್ಲಿ ೪೧೫ ಕೋಟಿ ರೂಪಾಯಿಗಳು ಸಂಬಳ ಮತ್ತು ಅಲೋಯೆನ್ಸಸ್‌ಗೆ. ಇನ್ನು ೪೭೨.೫೯ ಕೋಟಿ ರೂಪಾಯಿಗಳು ಡೆವಲಪ್‌ಮೆಂಟ್ ಸ್ಕೀಮ್ಸ್‌ಗೆ. ತಾವು ಹೇಳಿದ ಹಾಗೆ ಎಲ್ಲಾ ಸಂಬಳಕ್ಕೆ ವೆಚ್ಚ ಮಾಡಿಲ್ಲ. ರಾಜ್ಯ ಸರ್ಕಾರ ಎಷ್ಟು ಖರ್ಚು ಮಾಡುತ್ತದೆಯೋ ಅದಕ್ಕಿಂತ ಸ್ವಲ್ಪ ಜಾಸ್ತಿ ಖರ್ಚಾಗುತ್ತದೆ. ಕಾರಣವೇನು ಎನ್ನುವುದನ್ನು ಸಹ ನಾನು ಹೇಳುತ್ತೇನೆ. ರಾಜ್ಯ ಸರ್ಕಾರದಲ್ಲಿ ಒಂದು ಖಾತೆ ಇರುತ್ತದೆಂದುಕೊಳ್ಳಿ. ಉದಾಹರಣೆಗೆ ಕಮರ್ಷಿಯಲ್ ಟ್ಯಾಕ್ಸ್. ಈ ಖಾತೆಯಲ್ಲಿ ಕೆಲಸ ಮಾಡತಕ್ಕಂಥವರು ಬಹಳ ಕಡಿಮೆ. ಇದರಿಂದ ನಮ್ಮ ಸರ್ಕಾರಕ್ಕೆ ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳ ಉತ್ಪಾದನೆ ಬರುತ್ತದೆ. ಸರ್ಕಾರದ ಆದಾಯ ಮತ್ತು ನಮ್ಮ ಒಟ್ಟು ಬಡ್ಜೆಟ್ ಇದರಲ್ಲಿ ಲೆಕ್ಕಾಚಾರ ಮಾಡಿ ನೋಡಿದರೆ ಸಿಬ್ಬಂದಿ ಸಂಬಳ ಸಾರಿಗೆ ಖರ್ಚು ಮಾಡತಕ್ಕಂಥಾದ್ದು ೩೨ ಪರ್ಸೆಂಟ್ ಆಗುತ್ತದೆ. ಅದೇ ಇಲ್ಲಿ ೪೫-೪೭ ಪರ್ಸೆಂಟ್‌ನಷ್ಟು ಖರ್ಚಾಗುತ್ತದೆ. ಇಲ್ಲೂ ಕೂಡ ನಾವು ಆದಾಯವನ್ನು ಹೆಚ್ಚು ಮಾಡಿದರೆ ವೆಚ್ಚ ಕಡಿಮೆಯಾಗಿ ಸ್ಕೀಮ್‌ಗಳಿಗೆ ಹೆಚ್ಚು ಹಣ ಖರ್ಚಾಗುತ್ತದೆ. ಇನ್ನು ಮಾನ್ಯ ಅಧ್ಯಕ್ಷರೇ, ಕಮ್ಯುನಲ್ ಡಿಸ್ಟರ್‌ಬೆನ್ಸ್‌ಸ್ ಬಗ್ಗೆ ಮಾನ್ಯ ಸದಸ್ಯರು ಅನೇಕ ಸೂಚನೆಗಳನ್ನು ಮಾಡಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಪೋಲೀಸ್ ಹೌಸಿಂಗ್ ಕಾರ್ಪೊರೇಷನ್ ಬಗ್ಗೆ ತಾವು ಏನನ್ನೂ ಹೇಳಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಕೆಲವು ಸೂಚನೆಗಳನ್ನು ಕೊಟ್ಟಿದ್ದಾರೆ. ಕೆಲವರು ಟೀಕೆಗಳನ್ನು ಸಹ ಮಾಡಿದ್ದಾರೆ. ಅದು ಕೂಡ ನಮಗೆ ವಿವಂಚನೆಯನ್ನುಂಟು ಮಾಡತಕ್ಕಂಥ ವಿಚಾರ. ನಮ್ಮ ದೇಶದಲ್ಲಿ ಒಂದು ಜಾತಿ, ಒಂದು ಧರ್ಮ, ಒಂದು ಭಾಷೆ ಮಾತನಾಡತಕ್ಕಂಥ ಜನರು ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ತಾವು ಬೇರೆ ವಿಷಯಕ್ಕೆ ಹೋಗುವ ಮುನ್ನ ಒಂದು ವಿಚಾರ ಹೇಳಬೇಕಾಗಿದೆ. ಏನೆಂದರೆ ನಾನು ಮಾತನಾಡುತ್ತಾ ಒಬ್ಬ ವಿದ್ಯಾರ್ಥಿ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಅವರ ತಂದೆ ಸೆಕ್ರೆಟರಿಯೇಟ್‌ನಲ್ಲಿ ಅಂಡರ್ ಸೆಕ್ರೆಟರಿಯಾಗಿ ರಿಟೈರ್ಡ್ ಆದವರು. ಅವರು ಒಳ್ಳೆಯ ಜಂಟಲ್‌ಮ್ಯಾನ್. ಅವರು ಮಂತ್ರಿಗಳ ಮನೆಗೆ, ಅನೇಕ ಮುಖಂಡರ ಮನೆಗೆ ಹೋಗಿದ್ದಾರೆ. ಅವರ ಮಗ ರವಿಕುಮಾರ್ ಎಂದು ಹೇಳಿದ್ದೇನೆ. ಇದರ ಬಗ್ಗೆ ಸಿ.ಒ.ಡಿ. ರಿಪೋರ್ಟ್ ಬಂದಿದೆ. ಅವನು ಪರೀಕ್ಷೆಯಲ್ಲಿ ಕಾಪಿ ಮಾಡಿದ ಎಂದರು, ಅದಕ್ಕಾಗಿ ಅವನು ಆತ್ಮಹತ್ಯೆ ಮಾಡಿಕೊಂಡು ಬಿಟ್ಟ. ಆತ ರ್‍ಯಾಂಕ್ ಸ್ಟೂಡೆಂಟ್. ಬೇರೆಯವರು ಮಾಡಿದ್ದನ್ನು ಇವನಿಗೆ ಅಂಟಿಸಿ ಬಿಟ್ಟರು. ಅಲ್ಲಿ ಅಧಿಕಾರ ಮಾಡುವರು ಮಾಡಿದ ತಪ್ಪಿನಿಂದ ಅದು ಇವನಿಗೆ ಬಂದುಬಿಟ್ಟಿತು. ಮರ್ಯಾದೆ ಹೋಯಿತು ಸುಯಿಸೈಡ್ ಮಾಡಿಕೊಂಡ. ಆಕ್ಚುಯಲ್ ಆಗಿ ಅವನು ಕಾಪಿ ಮಾಡುವುದಕ್ಕೆ ಕಾರಣ ಇಲ್ಲ. ಬೇರೆಯವರು ಮಾಡಿದ್ದನ್ನು ಇವನಿಗೆ ಹಾಕಿಬಿಟ್ಟರು. ಇದು ಪ್ರೊಫೆಸರ್ಸ್, ಲೆಕ್ಚರರ್ಸ್ ಎಲ್ಲರಿಗೂ ಗೊತ್ತಿರತಕ್ಕ ವಿಚಾರ. ಅದರ ಬಗ್ಗೆ ಸಿಒಡಿ ರಿಪೋರ್ಟ್ ಬಂದಿದೆ ಎಂದು ಕೇಳಿದ್ದೇನೆ. ಅದರಲ್ಲಿ ಯಾರು ಯಾರು ತಪ್ಪಿತಸ್ಥರು ಎಂದು ಬಂದಿದೆ ಎಂದು ಕೇಳಿದ್ದೇನೆ. ಅದರ ಬಗ್ಗೆ ಏನು ಕಾರ್ಯಕ್ರಮ ಕೈಗೊಂಡಿದ್ದೀರಿ, ಎಂಬುದು ನನಗೆ ಗೊತ್ತಾಗಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಬಂಗಾರಪ್ಪನವರು ಆ ವಿಚಾರ ಪ್ರಸ್ತಾಪ ಮಾಡಿದ್ದರು. ಇದರ ಬಗ್ಗೆ ವಿ. ಸಿ. ಯವರು ವಿಚಾರ ಮಾಡಿ ಸಿ.ಒ.ಡಿ. ತನಿಖೆ ಮಾಡುವುದಕ್ಕೆ ಹೇಳಿದ್ದರು. ಸಿ.ಒ.ಡಿ. ರಿಪೋರ್ಟ್ ಬಂದಿದೆ, ಅದನ್ನು ತರಿಸಿ ನೋಡುತ್ತೇನೆ. ಅದಿನ್ನೂ ನನ್ನ ಕೈಗೆ ಸಿಗಲಿಲ್ಲ. ತರಿಸಿ ನೋಡಿ ಮಾನ್ಯ ಬಂಗಾರಪ್ಪನವರಿಗೆ ವಿಚಾರ ತಿಳಿಸುತ್ತೇನೆ.

ಈಗ ಕೋಮುವಾರು ಗಲಭೆಗಳ ಬಗ್ಗೆ ಒಂದು ವಿಷಯವನ್ನು ಹೇಳುವುದಾದರೆ, ಕರ್ನಾಟಕ ರಾಜ್ಯದ ಜನತೆ ಮತ್ತು ಕರ್ನಾಟಕದ ಪೋಲೀಸ್ ಸಿಬ್ಬಂದಿಯನ್ನು ಸ್ವಲ್ಪ ಮಟ್ಟಿಗೆ ಹೊಗಳಲೇ ಬೇಕು. ಬೇರೆ ರಾಜ್ಯಗಳಲ್ಲಿ ಆಗುತ್ತಿರತಕ್ಕಂಥ ಇಂತಹ ಕೋಮುವಾರು ಘರ್ಷಣೆಗಳ ಜೊತೆಗೆ ಹೋಲಿಸಿ ನೋಡಿದರೆ ನಮ್ಮದು ಬಹಳ ಕಡಿಮೆ. ಅಷ್ಟೇ ಅಲ್ಲ, ಇಲ್ಲಿ ಕೋಮು ಗಲಾಟೆ ಆದರೆ ಹೆಚ್ಚು ಎಂದರೆ ೨೪ ಘಂಟೆಗಳಲ್ಲಿ, ಅತೀ ಹೆಚ್ಚು ಎಂದರೆ ೪೮ ಘಂಟೆಗಳಲ್ಲಿ ಹತೋಟಿಯಲ್ಲಿ ತರುತ್ತೇವೆ, ತಂದಿದ್ದೇವೆ. ಈಗ ಕಳೆದ ಒಂದೆರಡು ತಿಂಗಳಲ್ಲಿ ಮುಖ್ಯವಾಗಿ ಕೋಲಾರ ಜಿಲ್ಲೆಯಲ್ಲಿ ಹಾಗೂ ಇನ್ನೂ ಕೆಲವು ತಾಲ್ಲೂಕು ಮುಖ್ಯ ಸ್ಥಳಗಳಲ್ಲಿ, ಕೆಲವು ಹೋಬಳಿ ಮುಖ್ಯ ಸ್ಥಳಗಳಲ್ಲಿ ಕೋಮುವಾರು ಗಲಭೆಯಾಯಿತು. ಇವತ್ತೂ ಕೂಡಾ ಕೆಲವುಕಡೆ ಟೆನ್‌ಷನ್ ಅಂದರೆ ಬಿಗಿಯಾದ ವಾತಾವರಣ ಹಾಗೇ ಇದೆ. ಅದಕ್ಕೆ ಸೂಕ್ತವಾದ ಕಾರ್ಯಕ್ರಮ ನಾವು ತೆಗೆದುಕೊಂಡಿದ್ದೇವೆ. ಶಿಡ್ಲಘಟ್ಟದಲ್ಲಿ ಸದ್ಯಕ್ಕೆ ಶಾಂತಪರಿಸ್ಥಿತಿ ಇದ್ದರೂ ನಾವು ರಿಲ್ಯಾಕ್ಸ್ ಮಾಡುವಹಾಗೆ ಇಲ್ಲ. ಅಲ್ಲಿ ಇವತ್ತೂ ಕೂಡಾ ಕರ್ಫ್ಯೂ ಇದೆ. ಕರ್ಫ್ಯೂ ತೆಗೆದಮೇಲೆ ಮಾನ್ಯ ಸದಸ್ಯರು ಸೂಚನೆ ಮಾಡಿದಂತೆ ಅಲ್ಲಿಗೆ ಒಂದು ಸದಸ್ಯರ ನಿಯೋಗವನ್ನು ಕಳುಹಿಸಿಕೊಡುತ್ತೇವೆ. ಅದರ ಉದ್ದೇಶ ಏನೆಂದರೆ, ಎರಡೂ ಗುಂಪುಗಳ ಮುಖಂಡರನ್ನು ಭೇಟಿಯಾಗಿ ಕೋಮುವಾರು ಸೌಹಾರ್ದವನ್ನು ಮತ್ತು ಶಾಂತಿಯನ್ನು ಯಾವ ರೀತಿ ಕಾಪಾಡಿಕೊಳ್ಳಬೇಕು. ಅದರಿಂದ ಎರಡೂ ಕೋಮುಗಳಿಗೆ ಹೇಗೆ ಲಾಭವಾಗುತ್ತದೆ ಎಂಬುದನ್ನು ಮನವರಿಕೆ ಮಾಡಿಕೊಡತಕ್ಕದ್ದು. ಇದಕ್ಕೆ ಒಂದು ನಿಯೋಗ ಕಳುಹಿಸಿಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ೨೨-೨೩ನೇ ತಾರೀಖಿನ ನಂತರ ಅಲ್ಲಿನ ಪರಿಸ್ಥಿತಿಯನ್ನು ನೋಡಿಕೊಂಡು ಒಂದು ಸಣ್ಣ ನಿಯೋಗವನ್ನು ಕಳುಹಿಸಿಕೊಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಕಳೆದ ಎಂಟು ಒಂಭತ್ತು ವರ್ಷಗಳಲ್ಲಿ ಕಮ್ಯುನಲ್ ಡಿಸ್ಟರ್ಬೆನ್ಸಸ್ ನಮ್ಮ ರಾಜ್ಯದಲ್ಲಿ ಎಷ್ಟು ಕಡೆಗೆ ಆಯಿತು, ಎಷ್ಟು ಘಟನೆಗಳು ಆದವು, ಅದರಲ್ಲಿ ಎಷ್ಟು ಜನ ಸತ್ತರು, ಎಷ್ಟು ಜನ ಗಾಯಗೊಂಡರು ಎಂಬುದರ ಬಗ್ಗೆ ಈ ಮಾನ್ಯ ಸಭೆಗೆ ಒಂದು ಮಾಹಿತಿಯನ್ನು ಕೊಟ್ಟರೆ ಅದು ಅಪ್ರಸ್ತುತ ಆಗಲಿಕ್ಕಿಲ್ಲ. ಆ ಮಾಹಿತಿ ಈ ಕೆಳಗಿನಂತಿದೆ.

ವರ್ಷ	ಕಮ್ಯುನಲ್ ಡಿಸ್ಟರ್ಬೆನ್ಸಸ್ (ಘಟನೆಗಳು)	ಸತ್ತವರು	ಗಾಯಗೊಂಡವರು
೧೯೮೦	೧೩	೫	೧೪೧
೧೯೮೧	೯	ಯಾರೂ ಇಲ್ಲ	೮೯
೧೯೮೨	೨೬	೮	೨೪೭
೧೯೮೩	೧೨	೨	೮೦

೧೯೮೪	೧೩	೧೨	೫೩೬
೧೯೮೫	೧೧	೨	೯೩
೧೯೮೬	೧೬	೧೯	೪೬೬
೧೯೮೭	೧೪	೧	೨೨೪
೧೯೮೮ (೩-೪-೮೮ರ ವರೆಗೆ)	೫	೧	೫೫

ಸನ್ಮಾನ್ಯ ಅಧ್ಯಕ್ಷರೆ, ಈ ಕೋಮುವಾರು ಘರ್ಷಣೆಗಳಿಗೆ ಮುಖ್ಯವಾಗಿ ಎರಡು ಕಾರಣಗಳು ಇವೆ. ಮೊದಲನೆಯದು, ಸಮಾಜದಲ್ಲಿ ಅದು ಯಾವ ಸಮಾಜವಾಗಿರಲಿ, ಅದರಲ್ಲಿ ಕೆಲವು ಅತ್ಯಂತ ಕಟು ಅಭಿಮಾನಿಗಳು ಇರುತ್ತಾರೆ. ಅದಕ್ಕೆ ರ್‍ಯಾಬಿಡ್ ಅಂದರೂ ತಪ್ಪಾಗಲಾರದು, ಇಂತಹ ರ್‍ಯಾಬಿಡ್ ಕಮ್ಯೂನಾಲಿಸಮ್ಸ್ ಹಿಂದೂಗಳಲ್ಲಿಯೂ ಇರುತ್ತಾರೆ, ಮುಸಲ್ಮಾನರಲ್ಲಿಯೂ ಇರುತ್ತಾರೆ. ಅಂತೆಯೇ ಬೇರೆ ಬೇರೆ ವರ್ಗಗಳಲ್ಲಿಯೂ ಇರುತ್ತಾರೆ. ಅಂತಹವರನ್ನು ಕಂಡುಹಿಡಿದು, ಅಂತಹವರ ಹೃದಯ ಪರಿವರ್ತನೆ ಮಾಡುವುದಕ್ಕೆ ಸಾಧ್ಯವಾದರೆ ಅದನ್ನು ಮಾಡಬೇಕು. ಇಲ್ಲವಾದಲ್ಲಿ ಅವರ ಮೇಲೆ ಉಗ್ರ ಕ್ರಮಗಳನ್ನು ಕೈಗೊಳ್ಳಬೇಕು. ಎರಡನೇಯದು, ಈ ಘರ್ಷಣೆಗೆ ಮೂಲ ಕಾರಣ ಯಾವುದೇ ಒಂದು ಅತ್ಯಂತ ಸಣ್ಣ ಹಾಗೂ ಯಾವುದನ್ನು ನಾವು ನಿರ್ಲಕ್ಷ ಮಾಡಬಹುದು ಅಂತಹ ವಿಷಯಗಳಿಗೆ ವಿಪರೀತವಾದಂಥ ಬಣ್ಣವನ್ನು ಕೊಟ್ಟು, ಅತಿರಂಜಿತವೆನಿಸುವಷ್ಟು ಬರೆಯತಕ್ಕಂಥ ಪತ್ರಿಕೆಗಳು ಮತ್ತು ಬಾಯಿ ಮಾತಿನಿಂದ ಅಪಪ್ರಚಾರ ಮಾಡತಕ್ಕಂಥವರು ಕಾರಣರಾಗಿರುತ್ತಾರೆ. ಉದಾಹರಣೆಗೆ ಹೇಳುವುದಾದರೆ ಶಿಡ್ಲಘಟ್ಟ ಮತ್ತಿತರ ಕಡೆಗಳಲ್ಲಿ ನಡೆದ ಘಟನೆಗಳು, ಆ ಘಟನೆಗಳು ನಿಜವಾಗಿಯೂ ಆಗಿವೆಯೋ ಇಲ್ಲವೋ ಅದು ನನಗೆ ಗೊತ್ತಿಲ್ಲ. ಅಕಸ್ಮಾತ್ತಾಗಿ ಒಬ್ಬ ಮುಸಲ್ಮಾನ ಹುಡುಗ ಹಿಂದೂ ಹುಡುಗಿಯನ್ನು ಚೇಷ್ಟೆ ಮಾಡಿದನೆಂದು ಇಟ್ಟುಕೊಳ್ಳಿ, ಅಥವಾ ಒಬ್ಬ ಹಿಂದೂ ಹುಡುಗ ಮುಸಲ್ಮಾನ ಹುಡುಗಿಗೆ ಚೇಷ್ಟೆ ಮಾಡಿದನೆಂದು ಇಟ್ಟುಕೊಳ್ಳಿ. ಆಗ ತತ್‌ಕ್ಷಣವೇ ಇಂತಹ ಘರ್ಷಣೆಗೆ ಆರಂಭವಾಗಲು ಕಾರಣವಾಗುತ್ತದೆ. ಅದಕ್ಕೂ ಮೊದಲು ಏನೂ ಆಗಿರುವುದಿಲ್ಲ. ಅದೇ ರೀತಿಯಲ್ಲಿ ಒಬ್ಬ ಹಿಂದೂ ಹುಡುಗ ಹಿಂದೂ ಹುಡುಗಿಯನ್ನು ಚೇಷ್ಟೆ ಮಾಡಿದಲ್ಲಿ, ಆ ಬಗ್ಗೆ ಯಾರೂ ಏನೂ ಪ್ರಚೋದನೆಗೆ ಒಳಗಾಗುವುದಿಲ್ಲ. ಬಹುತೇಕ ಯಾರಾದರೂ ಸ್ವಲ್ಪ ಹೆದರಿಸಬಹುದು, ಅಥವಾ ಸ್ವಲ್ಪ ಬೆದರಿಸಿ ಇನ್ನು ಮುಂದೆ ಹಾಗೆ ಮಾಡಬಾರದು ಎಂದು ಎಚ್ಚರಿಕೆ ಕೊಡಬಹುದು, ಅಥವಾ ಕೆಲವೊಮ್ಮೆ ಮಿತಿಮೀರಿದಾಗ ಒಂದೆರಡು ಏಟುಕೊಟ್ಟು ಸುಮ್ಮನಾಗುತ್ತಾರೆ. ಆದರೆ ಈ ಎರಡು ವ್ಯಕ್ತಿಗಳು ಬೇರೆ ಬೇರೆ ವರ್ಗಗಳಿಗೆ ಸೇರಿದಾಗ ಮಾತ್ರ ಘರ್ಷಣೆಗೆ ಕಾರಣವಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಇಲ್ಲದ ಏನೇನೋ ಸುದ್ದಿಯನ್ನು ಹಬ್ಬಿಸುತ್ತಾರೆ. ಶಿಡ್ಲಘಟ್ಟದಲ್ಲಿ ಹಿಂದೂ ಮಹಿಳೆಯನ್ನು ಬೆತ್ತಲೆ ಮಾಡಿದರು. ಎಂದೋ ಇನ್ನಾವುದೋ ಇಲ್ಲದ ಸಲ್ಲದ ಸುದ್ದಿಗಳನ್ನು ಪ್ರಚಾರ ಮಾಡುತ್ತಾರೆ. ಅಂತಹ ಸಂದರ್ಭದಲ್ಲಿ ಒಬ್ಬ ಹಿಂದೂ ಮಹಿಳೆಯ ಮೇಲೆ ಅತ್ಯಾಚಾರ ಮಾಡಿದರು ಎಂಬ ಸುದ್ದಿಯನ್ನು ಮನೆಮನೆಗೆ ಹಬ್ಬಿಸಿದರು. ಈ ರೀತಿಯಾಗಿ ಇಂತಹ ಸುದ್ದಿಗಳನ್ನು ಹಬ್ಬಿಸುವುದರಿಂದ ಜನರ ಮನಸ್ಸನ್ನು ಕೆರಳಿಸಿತು. ಹೀಗೆ ಯಾರೇ ಆದರೂ ಕೂಡ ಇಂತಹ ಸುದ್ದಿಗಳನ್ನು ಹಬ್ಬಿಸಕೂಡದು. ಕೆಲವು ಪತ್ರಿಕೆಗಳು ಕೂಡ ಇಂತಹ ಕೆಲಸವನ್ನು ಮಾಡಿದವು. ಆದುದರಿಂದ ಶಿಡ್ಲಘಟ್ಟ ಮತ್ತಿತರ ಕಡೆಗಳಲ್ಲಿ ಮತ್ತು ಅವುಗಳ ಸುತ್ತುಮುತ್ತು ಪ್ರದೇಶಗಳಲ್ಲಿ ಈಗಾಗಲೇ ನಾವು ಹೈಲೆವೆಲ್‌ನಲ್ಲಿ ಚರ್ಚೆ ಮಾಡಿದ್ದೇವೆ. ಆ ಬಗ್ಗೆ ಯಾವ ಯಾವ ರೀತಿಯ ಕಾರ್ಯಕ್ರಮಗಳನ್ನು

5-00 ಪಿ.ಎಂ.

ತೆಗೆದುಕೊಳ್ಳಬೇಕೋ ಅವುಗಳನ್ನು ನಾವು ತೆಗೆದುಕೊಳ್ಳುತ್ತೇವೆ ಎಂದು ಹೇಳಬಯಸುತ್ತೇನೆ. ಅದೇ ರೀತಿಯಲ್ಲಿ ಎರಡೂ ಕೋಮುಗಳ ಜನರಲ್ಲಿ, ಕೋಲಾರ ಜಿಲ್ಲೆಯ ಮತ್ತು ಇನ್ನಿತರ ಕಡೆಗಳಲ್ಲಿಯ ವಿವಿಧ ಸಮಾಜದ ಮುಖಂಡರಲ್ಲಿ ನಾನು ಅತ್ಯಂತ ಕಳಕಳಿಯ ಪ್ರಾರ್ಥನೆಯನ್ನು ಮಾಡುವುದೇನೆಂದರೆ, ನೀವು ಯಾವುದೇ ಸಂದರ್ಭಗಳಲ್ಲಿಯೂ ಕೂಡ ಅಶಾಂತಿ ಉಂಟಾಗತಕ್ಕಂಥ ಒಂದು ಪರಿಸ್ಥಿತಿಯನ್ನು ಉಂಟು ಮಾಡಬೇಡಿ ಮತ್ತು ಹಿಂಸೆಯ ಒಂದು ಪರಿಸ್ಥಿತಿಯು ಉಂಟಾಗುವುದಕ್ಕೆ ಎಡೆ ಮಾಡಿಕೊಡಬೇಡಿ ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ಶ್ರೀ ಬಂಗಾರಪ್ಪನವರು ಈಗತಾನೆ ಉದಯರವಿ ಎನ್ನತಕ್ಕಂಥ ಒಬ್ಬ ವಿದ್ಯಾರ್ಥಿಯ ವಿಚಾರದಲ್ಲಿ ಹೇಳಿದ್ದಾರೆ. ಅದಕ್ಕೆ ಸಂಬಂಧಪಟ್ಟಂತೆ ಬಂದಿರತಕ್ಕಂಥ ಮಾಹಿತಿಗಳು ಹೀಗೆ ಇವೆ:

"The Government in their order No...... dated 5-5-1986 ordered investigation by COD into the death of Sri Udaya Ravi. I year B.E. student of B.I.T. Bangalore who committed suicide on 12-3-1986 by hanging himself in his house in Vijayanagar Bangalore when the inamtes of the house were away. In this connection a case was registered in Vijayanagar Police Station in No.... under section 174 of Cr.P.C. which showed that no foul play was suspected in the death of the deceased. The case was closed by the City police by treating it is a suicide. The enquiry by the C.O.D. revealed that Sri K.N. Raja Rao, Assistant Professor, Department of Electronics, R.V. College of Engineering, Bangalore coding officer, had deliberately changed the code numbers on the answer sheets of the drawing paper of K. Venkata Reddy, of R.V. College of Engineering and the deceased with the result that 41 marks which was secured by the deceased were awarded to Sri K. Venkata Reddy who has secured only 6 marks which were awarded to the deceased. It has been recommended that the Vice Chancellor of Bangalore University may be directed to take appropriate action against Sri K.N. Rajarao as per the Bangalore University Manual that the University may be requested to award 41 marks to the deceased in the drawing examination and declare him successful and award only 6 marks to Sri K. Venkata Reddy and further cancel the marks issued to Reddy and declare him as having passed in the drawing examination. The Education Department has been asked to take further action."

ಶ್ರೀ ಎಸ್. ಬಂಗಾರಪ್ಪ.—ಹೀಗೆ ವಿವರಗಳು ಇರುವಾಗ ಕ್ರಿಮಿನಲ್ ಕೇಸ್ ಎಜುಕೇಷನ್ ಡಿಪಾರ್ಟ್‌ಮೆಂಟ್‌ಗೆ ಏಕೆ?

ಶ್ರೀ ರಾಮಕೃಷ್ಣ ಹೆಗಡೆ.—ಎಜುಕೇಷನ್ ಡಿಪಾರ್ಟ್‌ಮೆಂಟ್‌ನವರು ತನಿಖೆಯ ನಂತರ ಯಾರಿಗೆ ಅಯೋಗ್ಯ ರೀತಿಯಲ್ಲಿ ಮಾರ್ಕ್ಸನ್ನು ಕೊಟ್ಟಿದ್ದಾರೆಯೋ ಅದನ್ನು ತೆಗೆದುಹಾಕ ಬೇಕಾಗುತ್ತದೆ ...

ಶ್ರೀ ಕೆ.ಹೆಚ್. ಪಾಟೀಲ್.—ನನಗೆ ಕಾನೂನು ವಿಚಾರ ಗೊತ್ತಿಲ್ಲ. ಆದರೆ ಇದು ಫೋರ್ಜರಿ ಕೇಸ್ ಹಾಗೂ ಕಾಗ್ನಿಸೆಬಲ್ ಅಫೆನ್ಸ್ ಆಗಿರುತ್ತದೆ. It is a cognisable offence It is a forgery case. Why police should not arrest him and keep him in jail?

SRI RAMAKRISHNA HEGDE.—That is different. Under the I.P.C, also we will take action. I will order. ಆ ಬಗ್ಗೆ ಕ್ರಮ ತೆಗೆದು ಕೊಳ್ಳುತ್ತೇವೆ, ಆರ್ಡರ್ ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಅವರ ರಿಪೋರ್ಟ್‌ನಲ್ಲಿ ಯೂನಿವರ್ಸಿಟಿ ಆಕ್ಟ್ ಪ್ರಕಾರ ಆಕ್ಷನ್ ತೆಗೆದುಕೊಳ್ಳಬೇಕೆಂದು ಹೇಳುತ್ತಾರೆಯೇ ವಿನಹ ತಪ್ಪು ಮಾಡಿದವರ ಬಗ್ಗೆ ಏನನ್ನೂ ಹೇಳುವುದಿಲ್ಲ. ಒಬ್ಬ ಪಾಪದ ಹುಡುಗ 41 ಮಾರ್ಕ್ಸ್ ತೆಗೆದುಕೊಂಡಿದ್ದರೂ ಕೂಡ ಸಂಬಂಧಪಟ್ಟವರ ತಪ್ಪಿನಿಂದಾಗಿ

6 ಮಾರ್ಕ್ಸನ್ನು ಪಡೆದು ಫೈಲ್ ಆದ ಕಾರಣ ಸತ್ತು ಹೋದ. They should make a mention of the provisions under which they are going to take action against the culprits.

SRI RAMAKRISHNA HEGDE.—I will pass orders accordingly. ಮಾನ್ಯ ಅಧ್ಯಕ್ಷರೇ, ಈ ವರ್ಷ ನನ್ನ ಬಜೆಟ್‌ನಲ್ಲಿ ಅಡಿಷನಲ್ ರಿಸೋರ್ಸ್ ಮೊಬಲೈಸೇಷನ್ ವಿಚಾರದಲ್ಲಿ ವಿಶೇಷವಾದಂಥ ಪ್ರಸ್ತಾಪವನ್ನು ಮಾಡಲಿಲ್ಲ. ಅದಕ್ಕೆ ಮುಖ್ಯವಾದಂಥ ಕಾರಣಗಳು ಏನೆಂದರೆ ಯಾವ ಕಡೆಗೆ ನಾವು ಹೆಚ್ಚಿಗೆ ಮಾಡಬೇಕೆನ್ನುವುದು ನಮಗೆ ದೊಡ್ಡ ಸಮಸ್ಯೆಯಾಗಿದೆ. ಕಳೆದ ಐದು ವರ್ಷಗಳಲ್ಲಿ ವಿಶೇಷವಾಗಿ ನಾವು ಅಡಿಶನಲ್ ರಿಸೋರ್ಸ್ ಮೊಬಲೈಸೇಶನ್ ವಿಚಾರದಲ್ಲಿ ಎಂದೂ ಕೂಡ ಹಿಂದೆ ಬಿದ್ದಿಲ್ಲ. ಅದರಲ್ಲಿಯೂ ಕೂಡ ದೇಶದಲ್ಲಿಯೇ ಮುಂದೆ ಇದ್ದೇವೆ. ಐದು ವರ್ಷಗಳಲ್ಲಿ ನಾವು 1500 ಕೋಟಿ ರೂ.ಗಳಷ್ಟು ರಿಸೋರ್ಸ್ ಮೊಬಲೈಸೇಶನ್ ಮಾಡಿದ್ದೇವೆ. ಹಿಂದಿನ ಸರ್ಕಾರ ಇದ್ದಾಗಲೂ ಕೂಡ ರಿಸೋರ್ಸ್ ಮೊಬಲೈಸೇಶನ್ ವಿಚಾರದಲ್ಲಿ ನಮ್ಮ ಸರ್ಕಾರ ಹಿಂದೆ ಬಿದ್ದಿರಲಿಲ್ಲ. ಅದರ ಪರಿಣಾಮವಾಗಿ, ಇವೊತ್ತು ಏನಾಗಿದೆ ಅಂದರೆ, ಇಡೀ ದೇಶದಲ್ಲಿ ಅತ್ಯಂತ ಹೆಚ್ಚು ಕರಭಾರವನ್ನು ಹೊತ್ತಿರತಕ್ಕಂಥ ರಾಜ್ಯ ನಮ್ಮದಾಗಿದೆ. ಸೇಲ್ಸ್ ಟ್ಯಾಕ್ಸ್ ವಿಚಾರದಲ್ಲಿ ಮಾತನಾಡುತ್ತಾ ಮಾನ್ಯ ಸದಸ್ಯರುಗಳು ಗ್ರೋಥ್‌ರೇಟ್ ಸರಿಯಾಗಿ ಇಲ್ಲ, ಅದರಲ್ಲಿ ಬೇಕಾದಷ್ಟು ವಸೂಲು ಮಾಡುವಂಥಾದ್ದು ಮಾಡದೇ ಬಹಳಷ್ಟು ಉಳಿದಿದೆ ಎಂದು ಸೂಚನೆಗಳನ್ನು ಕೊಟ್ಟರು. ಅದಕ್ಕಾಗಿ ಒಂದು ವಿವರಣೆಯನ್ನು ನಾನು ಕೊಡಬೇಕು. ಈಗ ಗ್ರೋಥ್‌ರೇಟ್ ಸೇಲ್ಸ್ ಟ್ಯಾಕ್ಸ್ ಕಲೆಕ್ಷನ್‌ನಲ್ಲಿ in Karnataka both during 1987-88 and for the period 1983-84 to 1987-88 our state is the second highest in the country. The growth rate is second in the whole country. The rate of growth of sales tax collection in 1987-88 was 28.4% while the average rate of the whole country for all the states was only 14%. ಇಡೀ ದೇಶದಲ್ಲಿನ ಬಾಕಿ ಎಲ್ಲಾ ರಾಜ್ಯದ್ದು 14 ಪರ್ಸೆಂಟ್ ಇದ್ದರೆ ನಮ್ಮದು 28 ಪರ್ಸೆಂಟ್ ಗ್ರೋತ್ ಇದೆ. Similarly the growth of Sales Tax collection in Karnataka from 1983-84 to 1987-88 was only 27% while it was only 23% in other states. The average in the country was only 19%. A.P. was the highest in the country.

SRI B. BASAVALINGAPPA.—Kindly furnish the exact figures. Percentage business will mislead the house and the people.

ಶ್ರೀ ರಾಮಕೃಷ್ಣ ಹೆಗಡೆ.—ಸರ್ಟನ್‌ಲೀ. ನಿಮಗೆ ರೌಂಡ್ ಫಿಗರ್ ಕೊಡುವುದಾದರೆ 1983ರಲ್ಲಿ ಸೇಲ್ಸ್ ಟ್ಯಾಕ್ಸ್ ಆದಾಯ ಎಷ್ಟು ಇತ್ತು ಇಂದು ಅದರ ಮೂರರಷ್ಟು ಹೆಚ್ಚಾಗಿದೆ. 3ರಷ್ಟು ಅಂದರೆ 300ರಷ್ಟು.

ಶ್ರೀ ಕೆ.ಹೆಚ್. ಪಾಟೀಲ್.—ತಮಗೆ ಇದರಲ್ಲಿ ನಂಬರ್ ಒನ್ ಆಗಬೇಕೆಂಬ ಇಚ್ಛೆ ಇದೆ ಆದರೆ ಅಂಕಿ ಸಂಖ್ಯೆ ಕೊಟ್ಟು ನಮ್ಮನ್ನು ತಪ್ಪು ದಾರಿಗೆ ಎಳೆಯುತ್ತಿದ್ದೀರಿ. ನಮ್ಮ ಗದಗ್‌ನಲ್ಲಿ ಕೋ-ಆಪರೇಟೀವ್ ಸೊಸೈಟಿ ಇದೆ, ನಾವು ಒಂದು ಕೋಟಿ ರೂಪಾಯಿ ಸೇಲ್ಸ್ ಟ್ಯಾಕ್ಸ್ ಕೊಡುತ್ತೇವೆ ಅಲ್ಲಿ 10 ಪರ್ಸೆಂಟ್ ಸಹ ಇನ್‌ಕಂ ಇಲ್ಲ. ಬಾಕಿ ಎಲ್ಲಾ ಸೊಸೈಟಿಗಳವರೂ ಸೇರಿ ಒಂದು ಕೋಟಿ ಸಹ ಕೊಡುವುದಿಲ್ಲ. ಅಂದರೆ ಅಲ್ಲಿ ಎಲ್ಲಾ ಸೋರಿ ಹೋಗುತ್ತದೆ. ನಾವು ಪ್ರಶ್ನೆ ಕೇಳಿದರೆ ಅಂಕಿ ಸಂಖ್ಯೆಗಳನ್ನು ಕೊಟ್ಟು ಹೇಳುತ್ತಿದ್ದೀರಿ. ಇವತ್ತು ಮಾರ್ಕೆಟ್ ಕಮಿಟಿಯೊಳಗೆ ಎಷ್ಟು ಮಾಲು ಮಾರಾಟವಾಗುತ್ತಿದೆ. ಗದಗ್‌ನಲ್ಲಿ 11 ಕೋಟಿ ಮಾರಾಟವಾಗುತ್ತದೆ. ಬೇರೆ ಒಂದೊಂದ. ಸೊಸೈಟಿಗಳಲ್ಲಿ 7-8 ಕೋಟಿಯಾಗುತ್ತದೆ. ಅವರು ಕೊಟ್ಟ ಫಿಗರ್ಸ್ ಅನ್ನೇ ಕೊಡುತ್ತಾರೆ. ತಾವು ನಿಗಾ ವಹಿಸಿ ಇದನ್ನು ವಸೂಲು ಮಾಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಅರಿಯರ್ಸ್ ಈಗ 126 ಕೋಟಿ 63 ಲಕ್ಷ ಇರತಕ್ಕಂಥಾದ್ದು. ಈ ವಿಚಾರದಲ್ಲಿ ಹಿಂದೆ ಪ್ರಶ್ನೆ ಬಂದಾಗ ನಾನು ಉತ್ತರ ಕೊಟ್ಟಿದ್ದೇನೆ. ಇದರಲ್ಲಿ ರಿಕವರೆಬಲ್ ಅರಿಯರ್ಸ್ ಎಷ್ಟು, ಕೋರ್ಟ್‌ನಲ್ಲಿ ಇಂತಕ್ಕಂಥಾದು ಎಷ್ಟು ಬೇರೆ ಬೇರೆ ಸ್ಟೇಜ್‌ನಲ್ಲಿರತಕ್ಕಂಥಾದ್ದು ಎಷ್ಟು ಎಂದು ಹೇಳಿದ್ದೇನೆ. ಮತ್ತು ರಿಕವರಿಯಲ್ಲಿರತಕ್ಕಂಥಾದ್ದು ಎಷ್ಟು ಎಂದು ಪೂರಾ ಅಂಕಿ ಅಂಶ

ಕೊಟ್ಟಿದ್ದೇನೆ. ಪುನಃ ಅದನ್ನು ಹೇಳತಕ್ಕಂತಹ ಅಗತ್ಯವಿಲ್ಲ, ಒಂದು ಮಾತನ್ನು ಈ ಸಂದರ್ಭದಲ್ಲಿ ಉಪಯೋಗಿಸಿಕೊಂಡು ಹೇಳಬೇಕು. ಇದರಲ್ಲಿ ತುಸು ಹೆಚ್ಚು ಕಡಿಮೆ 100 ಕೋಟಿ ರೂಪಾಯಿಯಷ್ಟು ಅಂದಾಜು ಆಗುತ್ತದೆ. ನೂರು ಕೋಟಿ ರೂಪಾಯಿಯಷ್ಟು ಕಾಫಿ ಬೋರ್ಡಿನಿಂದ ನಮಗೆ ಬರಬೇಕು. ಅವರಿಂದ ಬರಬೇಕಾದಂತಹ ಸೇಲ್ಸ್ ಟ್ಯಾಕ್ಸ್ ಮತ್ತು ಬಡ್ಡಿ ಎರಡನ್ನೂ ಸೇರಿಸಿ ಹೇಳುತ್ತಿದ್ದೇನೆ ತುಸು ಹೆಚ್ಚೂ ಕಡಿಮೆ ನೂರು ಕೋಟಿ ಬರಬೇಕು. ಇದು ನಿನ್ನೆ ಅಷ್ಟೇ ಬಂತು. ಈ ವಿಚಾರದಲ್ಲಿ ಕೇಂದ್ರದ ಕಾಮರ್ಸ್ ಮಂತ್ರಿಗಳಿಗೆ ಮತ್ತು ಪ್ರಧಾನ ಮಂತ್ರಿಗಳಿಗೆ ಬರೆದಿದ್ದೇನೆ. ನಾವು ಹಣದ ಮುಗ್ಗಟ್ಟಿನಲ್ಲಿದ್ದೇವೆ. ಇದು ನಮಗೆ ಸೇರಬೇಕಾದಂತಹ ಹಣ 4 ವರ್ಷ ಲಿಟಿಗೇಷನ್ ಮಾಡಿ ಮಾಡಿ ಕೊನೆಗೆ ಸುಪ್ರೀಂ ಕೋರ್ಟ್‌ನಲ್ಲಿ ಈ ಕೇಸ್ ಮುಗಿದ ಮೇಲೆ ಒಂದೂವರೆ ವರ್ಷದ ನಂತರ ಜಡ್ಜ್‌ಮೆಂಟ್ ಅನ್ನು ಕೊಟ್ಟಿದೆ. ಆದ್ದರಿಂದ ನಾವು ಓವರ್ ಡ್ರಾಫ್ಟ್ ತೆಗೆದುಕೊಳ್ಳುವಂತಹ ಪ್ರಸಂಗದಲ್ಲಿ ದಯಮಾಡಿಟ್ಟು ಇದನ್ನು ತಡೆಹಿಡಿಯಕೂಡದು ಕೋರ್ಟಿನವರು ಯಾವ ರೀತಿ ಹೇಳಿದ್ದಾರೊ ಆ ರೀತಿ ರಿಲೀಸ್ ಮಾಡಬೇಕೆಂದು ಹೇಳಿದ್ದೇವೆ. ಸುಪ್ರೀಂ ಕೋರ್ಟಿನವರು ಅವಕಾಶ ಕೊಟ್ಟಿದ್ದಾರೆ ಆರು ತಿಂಗಳಲ್ಲಿ ಇಷ್ಟು, ಇನ್ನಾರು ತಿಂಗಳಲ್ಲಿ ಇಂತಿಷ್ಟು ಕೊಡಬೇಕೆಂದು. ಕಾಫಿ ಬೋರ್ಡಿನವರು ಈ ಬಗ್ಗೆ ರಿವ್ಯೂ ಪಿಟಿಷನ್ ಹಾಕಿದ್ದಾರೆಂದು ಕೇಳಿದೆ. ಅದು ಅಗತ್ಯವಿರಲಿಲ್ಲ, ಏಕೆಂದರೆ ಕಾಫಿ ಬೋರ್ಡಿನವರು ಈ ಹಣವನ್ನು ನಮ್ಮ ಕರ್ನಾಟಕ ಸರಕಾರಕ್ಕೆ ಕೊಡಲಿಕ್ಕೆಂಬ ಉದ್ದೇಶದಿಂದಲೇ 85 ಕೋಟಿ ರೂಪಾಯಿ ಹಣವನ್ನು ಬ್ಯಾಂಕಿನಲ್ಲಿಟ್ಟಿದ್ದಾರೆ. ಆದ್ದರಿಂದ ಕಾಫಿ ಬೋರ್ಡಿನವರು ಕಾಫಿ ಗ್ರೋಯರ್ಸ್ ಹತ್ತಿರ ಕಲೆಕ್ಟ್ ಮಾಡತಕ್ಕಂಥಾದ್ದು ಏನೂ ಇಲ್ಲ. ಜೊತೆಗೆ ಕೇಂದ್ರ ಸರಕಾರದಿಂದ ದುಡ್ಡು ತೆಗೆದುಕೊಳ್ಳಬೇಕಾದುದೂ ಇಲ್ಲ. ನಮಗೆ ಎಷ್ಟು ಸೇರಬೇಕಾಗಿದೆ ಈ ಒಂದು ವಿಚಾರದಲ್ಲಿ ಪುನಃ ಎಲ್ಲಿಯೂ ಕೂಡಾ ಅವರು ಪಿಟಿಷನ್ ಹಾಕಕೂಡದು. ರಿವ್ಯೂ ಪಿಟಿಷನ್ ಹಾಗೆ ಹೀಗೆ ಎಂದು ಹೇಳಿ ಮಾಡಬಾರದು. ಆದಷ್ಟು ಬೇಗ ಯಾವುದೇ ರೀತಿಯಲ್ಲಿ ಸುಪ್ರೀಂ ಕೋರ್ಟ್‌ನವರು ಆಜ್ಞೆಯನ್ನು ಮಾಡಿದ್ದಾರೆಯೋ ಅದೇ ರೀತಿಯಲ್ಲಿ ಹಣ ಕೊಡಬೇಕು ಎಂದು ಹೇಳಿ ಕೇಂದ್ರ ಸರ್ಕಾರದ ಕಾಮರ್ಸ್ ಮಿನಿಸ್ಟರ್‌ಗೂ ಮತ್ತು ಪ್ರಧಾನ ಮಂತ್ರಿಗೂ ಕೂಡಾ ಪತ್ರ ಬರೆದಿದ್ದೇನೆ. ಆ ರೀತಿಯಲ್ಲಿ ಅವರು ಮಾಡುತ್ತಾರೆ ಎಂದು ನಾನು ಆಶಯ ಮಾಡುತ್ತೇನೆ. ಕೆ.ಹೆಚ್. ಪಾಟೀಲರು ಒಂದು ಮಾತನ್ನು ಹೇಳಿದರು. ಏನೆಂದರೆ ತಪ್ಪು ಸೊಸೈಟಿಯಿಂದ ಒಂದು ಕೋಟಿ ರೂಪಾಯಿ ಕೊಡುತ್ತೇವೆ ಎಂದು. ಬಾಕಿ ಸೊಸೈಟಿಯಿಂದ ಎಷ್ಟು ಬರುತ್ತದೆ, ಶೇಕಡ ಹತ್ತರಷ್ಟೇ ವ್ಯವಹಾರವನ್ನು ಮಾಡುತ್ತೇವೆ ಎಂದು ಹೇಳಿದರು. ಡಿಟೆಕ್ಷನ್ ಆಫ್ ಸಪ್ರೆಸ್ಡ್ ಟರ್ನ್ ಓವರ್ 1980 ರಿಂದ 1987-88ರ ವರೆಗೆ ನಾವು ಬಹಳಷ್ಟು ಹೆಚ್ಚು ಮಾಡಿದ್ದೇವೆ. ಉದಾಹರಣೆಗೆ 83-84ರಲ್ಲಿ Detection of suppressed turnover amounted to Rs. 78.99 Crores *i.e.*, ಅಂದರೆ 79 ಕೋಟಿ. 87-88ರಲ್ಲಿ this has increased to Rs. 529.76 Crores. ಈಗ ನಾಲ್ಕೈದು ವರ್ಷದ ಹಿಂದೆ ಈ ಸಪ್ರೆಸ್ಡ್ ಇನ್‌ಕಂ ಟರ್ನ್ ಓವರ್‌ನ್ನು ಪತ್ತೆ ಹಚ್ಚಿದ್ದು 78-79 ಕೋಟಿ ರೂಪಾಯಿ ಆದರೆ ಕಳೆದ ವರ್ಷ ನಾವು ಪತ್ತೆ ಹಚ್ಚಿದ್ದು 530 ಕೋಟಿ ರೂಪಾಯಿ ಅಷ್ಟಾಗಿದೆ. ಈ ಕೆಲಸದಲ್ಲಿ ನಾವು ಹಿಂದೆ ಬಿದ್ದಿಲ್ಲ ಎಂದು ತಮಗೆ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ರಿಲೀಸ್ ಆದ ಅಡಿಷನಲ್ ಟ್ಯಾಕ್ಸ್ ಈ ಸಪ್ರೆಸ್ಡ್ ಟರ್ನ್‌ಓವರ್‌ನಿಂದ ಏನು ಟ್ಯಾಕ್ಸ್ ಲಯಬಿಲಿಟ್ ಹೋಗಿತ್ತು, ಅದರಿಂದ ಎಷ್ಟು ಬಂದಿದೆ ಎಂದರೆ 83-84ರಲ್ಲಿ ನಾಲ್ಕುವರೆ ಕೋಟಿ ರೂಪಾಯಿ ಇದ್ದಿದ್ದು ಕಳೆದ ವರ್ಷ ಹತ್ತು ಪಟ್ಟು ಹೆಚ್ಚಾಗಿದೆ. ಸುಮಾರು 41 ಕೋಟಿ ರೂಪಾಯಿ ಸಪ್ರೆಸ್ಡ್ ಟರ್ನ್ ಓವರ್ ಅಡಿಷನಲ್ ಇನ್‌ಕಂ ಇದೆ.

ಶ್ರೀ ಬಿ. ಬಸವಲಿಂಗಪ್ಪ.—ದುಡ್ಡು ಹೆಚ್ಚು ಸಂಪಾದನೆ ಮಾಡಿದ್ದೀರಿ. ಆದ್ದರಿಂದ ಎಲ್ಲಾ ಚೆಕ್‌ಗಳನ್ನು ಪಾಸ್ ಮಾಡುವುದಕ್ಕೆ ಪ್ರಯತ್ನ ಮಾಡಿ.

ಶ್ರೀ ಎಸ್. ಬಂಗಾರಪ್ಪ.—ಅವರ ಗಮನಕ್ಕೆ ಬಂದಿರುವುದನ್ನೆಲ್ಲಾ ಹಾನರ್ ಮಾಡುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಯಾವ ಚೆಕ್‌ಗಳು ಡಿಸ್-ಹಾನರ್ ಆಗಿಲ್ಲ. ಆಮೇಲೆ ಮಾನ್ಯ ಸದಸ್ಯರಲ್ಲಿ ಕೆಲವರು ಸರ್ಕಾರಿ ಅಧಿಕಾರಿಗಳ ವರ್ಗಾವಣೆ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಈ ಸಭೆಯಲ್ಲಿ ಕಳೆದ ಮೂರು ನಾಲ್ಕು ವರ್ಷಗಳಿಂದಲೂ ಈ ಪ್ರಸ್ತಾಪ ಬರುತ್ತಲೇ ಇದೆ. ಮತ್ತು ಅದಕ್ಕೆ ಹಿಂದೆಯೂ ಕೂಡಾ ಬಂದಿತ್ತು. ನಮ್ಮಲ್ಲಿ ಒಟ್ಟು ನಾಲ್ಕುಕಾಲು ಲಕ್ಷ ಅಥವಾ ನಾಲ್ಕೂವರೆ ಲಕ್ಷ ಸರ್ಕಾರಿ ನೌಕರರು ಇದ್ದಾರೆ. ಇದರಲ್ಲಿ ಅನೇಕ ಜನರಿಗೆ ವೈಯಕ್ತಿಕವಾಗಿ ತೊಂದರೆ ಇರಬಹುದು, ಕೌಟುಂಬಿಕ ತೊಂದರೆ ಇರಬಹುದು, ಅವರ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಇರಬಹುದು. ಅನೇಕ ನೌಕರರು ನಮಗೆ ಇಲ್ಲಿ ಇರತಕ್ಕಂಥ ಜಾಗದಿಂದ ಬೇರೆ ಕಡೆ ಹೋಗಬೇಕು ಎಂದು

ಹೇಳಿ ಶಾಸಕರಿಗೆ ದುಂಬಾಲು ಬೀಳುತ್ತಾರೆ, ಅವರ ಮೊರೆ ಹೋಗುತ್ತಾರೆ, ಶಿಫಾರಸ್ಸನ್ನು ಮಾಡಿಸಲಿಕ್ಕೆ ಪ್ರಯತ್ನವನ್ನು ಮಾಡುತ್ತಾರೆ. ಕಳೆದ ಮೂರು ನಾಲ್ಕು ವರ್ಷಗಳಲ್ಲಿ ಒಟ್ಟು ಎಷ್ಟು ಅರ್ಜಿ ಬಂದಿದೆ ಎಂದು ಹೇಳತಕ್ಕಂಥದ್ದನ್ನು ಹೇಳುತ್ತೇನೆ. ಅದು ಮಂತ್ರಿಗಳ ಮುಖಾಂತರವಾಗಿ ಆಗಿರಬಹುದು, ಮಾನ್ಯ ಸದಸ್ಯರ ಮುಖಾಂತರ ಆಗಿರಬಹುದು ಅಥವಾ ವೈಯಕ್ತಿಕವಾಗಿ ಬಂದಿರಬಹುದು. 84ರಲ್ಲಿ 1325 85ರಲ್ಲಿ 6,500, 86ರಲ್ಲಿ 4666, 87ರಲ್ಲಿ 3210, 88ರಲ್ಲಿ 6782.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮ ಅನ್ಯುಯಲ್ ರಿಪೋರ್ಟ್‌ನಲ್ಲಿ 48 ಸಾವಿರ ಎಂದು ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ಆ ನಲವತ್ತೆಂಟು ಸಾವಿರ ಪಬ್ಲಿಕ್ ಗ್ರಿವೆನ್ಸ್‌ಸ್‌ದು.

ಶ್ರೀ ಬಿ. ಬಸವಲಿಂಗಪ್ಪ.—ಇದರಲ್ಲಿ ಕಾಂಗ್ರೆಸ್‌ದು ಎಷ್ಟು? ಜನತಾದವರದ್ದು ಎಷ್ಟು ಎಂದು ಹೇಳುತ್ತೀರಾ?

ಶ್ರೀ ರಾಮಕೃಷ್ಣ ಹೆಗಡೆ.—ಅದನ್ನೂ ಸಹ ಲೆಕ್ಕ ಇಟ್ಟಿದ್ದೇನೆ. ಸಾಮಾನ್ಯವಾಗಿ ಮೇ ತಿಂಗಳ ಕೊನೆಯ ಒಳಗೆ ವರ್ಗಾವಣೆ ಏನಿದ್ದರೂ ಅದು ಮುಗಿಯಬೇಕು. ವರ್ಷದ ಮಧ್ಯದಲ್ಲಿ ವರ್ಗ ಮಾಡಿದರೆ ಯಾರಿಗೋ ಒಬ್ಬರಿಗೆ ಅನುಕೂಲ ಆಗುವುದಾದರೆ ಅನೇಕ ಜನರಿಗೆ ಅನಾನುಕೂಲ ಆಗುತ್ತದೆ. ಇನ್ನು ಮಾನ್ಯ ಸದಸ್ಯರ ಮೇಲೆ ಬರತಕ್ಕಂಥ ಒತ್ತಡವನ್ನು ನಾನು ಬಲ್ಲೆ. ಅದು ಬಂದೇ ಬರುತ್ತದೆ, ನನಗೆ ಗೊತ್ತುಂಟು. ನಾನು ಒಂದು ಮಾತನ್ನು ಅವರಲ್ಲಿ ಕಳಕಳಿಯಿಂದ ಕೇಳಿ ಕೊಳ್ಳುತ್ತೇನೆ. ಯಾವುದೋ ಒಬ್ಬ ಅಧಿಕಾರಿ ನಿಜವಾಗಿ ಅವನಿಗೆ ಅಲ್ಲಿ ತೊಂದರೆ ಇದ್ದು ಬೇರೆ ಕಡೆ ಹೋಗಬೇಕು ಎಂದು ಹೇಳಿದರೆ ಶಿಫಾರಸ್ಸು ಮಾಡಲಿ, ಅದಕ್ಕೆ ಸೂಚನೆಯನ್ನು ಕೊಟ್ಟರೆ ಅದು ದೊಡ್ಡ ಅಪರಾಧ ಎಂದು ನಾನು ಹೇಳುವುದಿಲ್ಲ. ಬರುವ ತಿಂಗಳು ಒಂದನೇ ತಾರೀಖಿನಿಂದ ಮುಂದಿನ ವರ್ಷದವರೆಗೆ ಹೊಸ–ಹೊಸ ವರ್ಗಾವಣೆ ಬಗ್ಗೆ ಸೂಚನೆ ಬರಕೂಡದು. ಎಂದು ನಾನು ಪ್ರಾರ್ಥಿಸಿಕೊಂಡಿದ್ದೇನೆ. ಸರ್ಕಾರಿ ನೌಕರರಿಗೆ ಒಂದು ಸುತ್ತೋಲೆಯನ್ನು ಹೊರಡಿಸಿದ್ದೇನೆ ೨–೩ ದಿವಸದ ಹಿಂದೆ, ಆ ಸುತ್ತೋಲೆ ಪ್ರಕಾರ ಜುಲೈ ಒಂದನೇ ತಾರೀಖಿನ ನಂತರ ವರ್ಗಾವರ್ಗಿ ವಿಚಾರದಲ್ಲಿ ಯಾರೂ ಸೂಚನೆಯನ್ನು ಕಳಿಸಕೂಡದು, ಎಂದು ಹೇಳಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಈಗ ಮಾನ್ಯ ಶ್ರೀನಿವಾಸ್‌ರವರು ಹೇಳಿದ್ದು ಮತ್ತು ಇನ್ನೂ ಕೆಲವು ಸದಸ್ಯರು ಹೇಳಿದ ಪ್ರಕಾರ ಒಂದು ತಿಂಗಳು, ಎರಡು ತಿಂಗಳು ಅಥವಾ ಮೂರು ತಿಂಗಳು ಆಗಿರಬಹುದು, ಅಂತಹ ನೌಕರರನ್ನು ವರ್ಗಾವಣೆ ಮಾಡಬಾರದು ಸತ್ಯವಂತ ಸರ್ಕಾರಿ ನೌಕರನನ್ನು ಬೇಕಾಗಿಯೇ ಬೇರೆ ಕಡೆ ವರ್ಗಾವಣೆ ಮಾಡಿಸುತ್ತಾರೆ, ಅಂತಹ ಸಂದರ್ಭ ಬಂದಾಗ ಏನು ಮಾಡುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಅಂಥಾದ್ದು ಆಗಿಲ್ಲ ಎಂದು ಹೇಳುವುದಿಲ್ಲ; ಆಗಿರಬಹುದು. ಅಂಥ ಸಂದರ್ಭ ಏನು ಅಂದರೆ, ಅಕಸ್ಮಾತಾಗಿ ಒಬ್ಬ ನೌಕರನಿಗೆ ಪ್ರೊಮೋಷನ್ ಕೊಡುತ್ತೇವೆ ಪ್ರೊಮೋಷನ್ ಬಂದಾಗ ಅವನನ್ನು ಬೇರೆ ಕಡೆ ಹಾಕಬೇಕಾಗುತ್ತದೆ ಅಥವಾ ಒಬ್ಬ ಅಧಿಕಾರಿಯನ್ನು ಟ್ರೈನಿಂಗ್‌ಗೆ ಕಳಿಸಬೇಕಾಗುತ್ತದೆ. ಆತನು ಟ್ರೈನಿಂಗ್‌ಗೆ ಹೋದಾಗ ಬೇರೆ ಅಧಿಕಾರಿಯನ್ನು ಆ ಜಾಗಕ್ಕೆ ಹಾಕ ಬೇಕಾಗುತ್ತದೆ.

ಶ್ರೀ ಬಿ. ಬಸವಲಿಂಗಪ್ಪ.—ವಿಂಡಿಕ್ಟೀವ್ ಟ್ರಾನ್ಸ್‌ಫರ್ ಮಾಡುತ್ತಿದ್ದಾರೆ.

ಶ್ರೀ ಬಿ. ಲಕ್ಕಪ್ಪ.—ಮೇ ತಿಂಗಳಲ್ಲೆ ಒಬ್ಬ ವ್ಯಕ್ತಿಯನ್ನು ಮೂರು ಬಾರಿ ಟ್ರಾನ್ಸ್‌ಫರ್ ಮಾಡಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.—ವಿಂಡಿಕ್ಟೀವ್ ಟ್ರಾನ್ಸ್‌ಫರ್ ಅನ್ನು ಎಂದೆಂದಿಗೂ ಮಾಡುವುದಿಲ್ಲ, ಅದಕ್ಕೆ ನಾನು ವಿರೋಧಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—೮–೧೦ ವರ್ಷಗಳಿಂದ ಒಂದೇ ಕಡೆ ಕೆಲಸ ಮಾಡುತ್ತಿದ್ದೇ ಎಂದು ತಪ್ಪು ಹೇಳಿಕೆ ಕೊಡುತ್ತಾರೆ, ಅಂಥವರನ್ನು ನೀವು ನಂಬುತ್ತೀರಾ.

ಶ್ರೀ ರಾಮಕೃಷ್ಣ ಹೆಗಡೆ.— ನಾನು ಎಲ್ಲ ಸದಸ್ಯರನ್ನೂ ನಂಬುತ್ತೇನೆ. ಈಗ ಮಾನ್ಯ ಖರ್ಗೆಯವರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು, ಅದು ಏನೆಂದರೆ ಹಾರಿಜಾಂಟಲ್ ಆಗಿ, ವರ್ಟಿಕಲ್ ಆಗಿ ಆ ಜಿಲ್ಲೆಗೆ ಹಾಕತಕ್ಕದ್ದು ಒಳ್ಳೆಯದಲ್ಲ ಎಂದು. ಅದನ್ನು ನಾನು ಒಪ್ಪುತ್ತೇನೆ, ನಮ್ಮ ಸರ್ಕಾರ ಒಪ್ಪುತ್ತದೆ ಮತ್ತು ನಮ್ಮ ಪಕ್ಷ ಸಹ ಒಪ್ಪುತ್ತದೆ. ಯಾವುದೇ ಒಂದು ಕಡೆಯಲ್ಲಿ ಜಿಲ್ಲಾ ಲೆವೆಲ್‌ನಲ್ಲಿ, ಸಬ್ ಡಿವಿಜನ್ ಲೆವೆಲ್‌ನಲ್ಲಿ, ತಾಲ್ಲೂಕು ಲೆವಲ್‌ನಲ್ಲಿ ಒಂದೇ ಜಾತಿಯ, ಒಂದೇ ಕೋಮಿಗೆ ಸೇರಿದಂತಹ ೨ ೩ ಅಧಿಕಾರಿಗಳನ್ನು ಹಾಕಕೂಡದು. ಅಧಿಕಾರಿಗಳು ತಪ್ಪು ಮಾಡುತ್ತಾರೆಂದು ಅಲ್ಲ, ಪಕ್ಷಪಾತ ಮಾಡುತ್ತಾರೆಂದು ಅಲ್ಲ, ಜಾತಿವಾದ ಮಾಡುತ್ತಾರೆಂದು ಅಲ್ಲ. ಆದರೆ ಬೇರೆ ಜಾತಿಯ ಜನರಲ್ಲಿ ವಿಶ್ವಾಸ ಹುಟ್ಟುವುದಿಲ್ಲ. ಇಂತಹ ಸಂದರ್ಭದಲ್ಲಿ ವಿಶ್ವಾಸ ಹುಟ್ಟದೆ ಹೋದರೆ ಅವ ಎಷ್ಟೇ ಯೋಗ್ಯವಾಗಿ ಕೆಲಸ ಮಾಡಿದರು ಸಹ ಕಳಂಕ ಬರತಕ್ಕ ಸಂದರ್ಭ ಇರುತ್ತದೆ. ಆದ್ದರಿಂದ ನಾವು ಒಂದೇ ಲೆವೆಲ್‌ನಲ್ಲಿ ಒಂದೇ ಜಾತೀಯ ಅಧಿಕಾರಿಗಳನ್ನು ಒಂದಕ್ಕಿಂತ ಹೆಚ್ಚು ಇರಕೂಡದೆಂದು ಮಾಡಿದ್ದೇವೆ. ಹಾಗೆ ನಮ್ಮ ನೀತಿಯೂ ಇದೆ. ಮತ್ತೊಂದು ವಿಷಯ ಇಲ್ಲಿ ಬಹಳ ಪೋರ್ಸ್‌ಪುಲ್ ಅಂದರೆ ತೀಕ್ಷ್ಣವಾದ, ಬಲಯುತವಾದ ಬಂದ ವಿಚಾರ ಅಂದರೆ ಸರ್ಕಾರಿ ನೌಕರರ ನೇಮಕಾತಿ ಮತ್ತು ಸರ್ಕಾರದಲ್ಲಿ ಈಗ ಇರತಕ್ಕ ಖಾಲಿ ಹದ್ದೆಗಳಿಗೆ ನಾವು ಮಾಡತಕ್ಕ ಭರ್ತಿ ಮತ್ತು ಇದರ ಜೊತೆಗೆ ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ನಾವು ಹೇಳಿರತಕ್ಕ ಆಶ್ವಾಸನೆ ಬಗ್ಗೆ ಆ ಒಂದು ಆಶ್ವಾಸನೆ ಕಾರ್ಯಗತ ಮಾಡತಕ್ಕ ವಿಚಾರದಲ್ಲಿ ಹೇಳಬೇಕೆಂದರೆ ನಾವು ಕಳೆದ ೫ ವರ್ಷಗಳಲ್ಲಿ ಒಟ್ಟು ೬೯,೫೨೦ ಹುದ್ದೆಗಳನ್ನು ಭರ್ತಿ ಮಾಡಿದ್ದೇವೆ. ೧೯೮೩ ರಿಂದ ಇಲ್ಲಿಯವರೆಗೆ ಖಾಲಿ ಆದಂಥ ಹುದ್ದೆಗಳು ೧ ಲಕ್ಷದ ೧೬ ಸಾವಿರ. ಇದರಲ್ಲಿ ಕೆಲವರು ನಿವೃತ್ತರಾಗಿದ್ದಾರೆ ಮತ್ತೆ ಕೆಲವರನ್ನು ಕೆಲಸದಿಂದ ತೆಗೆದುಹಾಕಲಾಗಿದೆ. ಈ ಖಾಲಿ ಹುದ್ದೆಗಳ ಪೈಕಿ ಈಗಾಗಲೇ ನಾವು ೬೯ ಸಾವಿರ ಹುದ್ದೆಗಳನ್ನು ಭರ್ತಿ ಮಾಡಿದ್ದೇವೆ. ಇನ್ನೂ ೪೬ ಸಾವಿರ ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ಭರ್ತಿ ಮಾಡಲು ನಾವು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಈ ವಿಚಾರವನ್ನು ನಾನು ಇಲ್ಲಿ ಕೆಲವು ದಿವಸಗಳ ಹಿಂದೆ ಒಂದು ಪ್ರಶ್ನೆಗೆ ಉತ್ತರ ಕೊಡುವಾಗ ಹೇಳಿದ್ದೇನೆ. ಈ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ಈಗ ಒಟ್ಟು ೪೬ ಇಲಾಖಾ ಕಮಿಟಿಗಳು ಇವೆ. ವಿದ್ಯಾ ಇಲಾಖೆಗೆ ಸಂಬಂಧಪಟ್ಟಂತೆ ಪ್ರತಿ ಜಿಲ್ಲೆಯಲ್ಲಿಯೂ ಉಪಾಧ್ಯಾಯರುಗಳನ್ನು ನೇಮಕ ಮಾಡಲು ಒಂದೊಂದು ಕಮಿಟಿ ಇದೆ. ಲೋಕೋಪಯೋಗಿ ಇಲಾಖೆಯಲ್ಲಿ ಜೂನಿಯರ್ ಆಫೀಷಿಯಲ್ಸ್‌ನ್ನು ನೇಮಕ ಮಾಡಲು ರಾಜ್ಯ ಮಟ್ಟದಲ್ಲಿ ಒಂದು ಕಮಿಟಿ ಇದೆ. ಈ ಎಲ್ಲ ಕಮಿಟಿಯವರು ಈಗ ಖಾಲಿ ಇರುವಂಥ ಹುದ್ದೆಗಳಿಗೆ ನೇಮಕಾತಿ ಮಾಡುವಂತಹ ಕೆಲಸವನ್ನು ಈಗ ಮಾಡುತ್ತಿದ್ದಾರೆ. ಈ ಕೆಲಸವನ್ನು ನಿಲ್ಲಿಸುವುದಿಲ್ಲವೆಂಬ ಮಾತನ್ನು ನಾನು ಈ ಹಿಂದೆ ಸಹ ಹೇಳಿದ್ದೇನೆ. ನಾನು ಮೊನ್ನೆತಾನೆ ಅಲಹಬಾದ್‌ಗೆ ಹೋಗಿದ್ದೆ. ಅಲ್ಲಿ ನನ್ನ ಕಾಂಗ್ರೆಸ್ ಸ್ನೇಹಿತರೊಬ್ಬರು ನನಗೆ ಭೇಟಿ ಆಗಿದ್ದರು. ನಾವು ಕೆಲವು ಜನರು ಒಂದು ಕಡೆ ಕೂತು ಮಾತುಕತೆಯಾಡುವಾಗ ಅವರು ನನಗೆ ಒಂದು ಮಾತನ್ನು ಹೇಳಿದರು. ಅವರು ಅಲ್ಲಿ ಎಂ. ಎಲ್. ಎ. ಆಗಿದ್ದಾರೆ. ಅಲ್ಲಿನ ಸರ್ಕಾರದವರು ಹೊಸ ರೆಕ್ರೂಟ್‌ಮೆಂಟಿಗೆ ಸಂಪೂರ್ಣವಾಗಿ ಬ್ಯಾನ್ ಹಾಕಿದ್ದಾರೆಂದು ಅವರು ನನಗೆ ಹೇಳಿದರು. ಕಳೆದ ಒಂದು ವರ್ಷದಿಂದ ಖಾಲಿ ಇರುವಂತಹ ಹುದ್ದೆಗಳ ಪೈಕಿ ಒಂದು ಹುದ್ದೆಯನ್ನು ಸಹ ಭರ್ತಿ ಮಾಡಿಲ್ಲವೆಂದು ಹೇಳಿದರು. ಅಲ್ಲಿ ಎಕಾನಮಿ ಆರ್ಡರ್ ಇರುವುದರಿಂದ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸಾಧ್ಯವಾಗಿಲ್ಲವೆಂಬ ಮಾತನ್ನು ಅವರು ನನಗೆ ಹೇಳಿದರು. ಆದರೆ ನಮ್ಮ ಸರ್ಕಾರ ಆ ರೀತಿ ಮಾಡುತ್ತಿಲ್ಲವೆಂದು ತಮಗೆ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಆರ್. ಎನ್. ನಾಯಕ್.—ನಿಮ್ಮ ರಾಜ್ಯದಲ್ಲಿ ಸಹ ಇದೇರೀತಿಯ ಆರ್ಡರ್‌ನ್ನು ನೀವು ಈ ಮೊದಲು ಹೊರಡಿಸಿರಲಿಲ್ಲವೇ ?

ಶ್ರೀ ರಾಮಕೃಷ್ಣಹೆಗಡೆ.—ಕೇಂದ್ರ ಸರ್ಕಾರದ ಸೂಚನೆ ಮೇಲೆ ಆ ಒಂದು ಕ್ರಮ ತೆಗೆದುಕೊಂಡಿದ್ದು ನಿಜ. ಈ ಬಗ್ಗೆ ವಿದ್ಯಾರ್ಥಿಗಳು ಪ್ರತಿಭಟನೆ ಮಾಡಿದರು. ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡದೆ ಸಂಪೂರ್ಣವಾಗಿ ನಿಲ್ಲಿಸಿಬಿಡಬೇಕು ಎಂಬುದು ನಮ್ಮ ಉದ್ದೇಶ ಆಗಿರಲಿಲ್ಲ. ನಮ್ಮ ಉದ್ದೇಶ ಏನಿತ್ತು ಎಂದರೆ, ಅನವಶ್ಯಕವಾದಂಥ ಹುದ್ದೆಗಳನ್ನು ಭರ್ತಿ ಮಾಡಬಾರದು ಎಂಬುದೇ ನಮ್ಮ ಉದ್ದೇಶವಾಗಿತ್ತು. ಅದು ಏನೇ ಇರಲಿ, ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ನಾವು ಪ್ರತಿಯೊಂದು ಕುಟುಂಬದಲ್ಲಿ ಕೊನೆಯಪಕ್ಷ ಒಂದು ಉದ್ಯೋಗವನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದೇವೆ. ಯಾವ ಕುಟುಂಬದಲ್ಲಿ ಒಬ್ಬರಿಗೂ ಕೂಡ ಯಾವುದೇ ರೀತಿಯ ಕೆಲಸ ಇಲ್ಲವೋ ಅಂತಹ ಕುಟುಂಬಕ್ಕೆ ಕೊನೆಯ ಪಕ್ಷ ಒಂದು ಉದ್ಯೋಗ ಕೊಡುತ್ತೇವೆಂದು ಹೇಳಿದ್ದೇವೆ. ಆದರೆ ಇದರ ಬಗ್ಗೆ ಕೆಲವರಲ್ಲಿ ತಪ್ಪು ತಿಳಿವಳಿಕೆ ಆಗಿದೆ. ಎಲ್ಲರಿಗೂ

ನಾವು ಸರ್ಕಾರಿ ನೌಕರಿಯನ್ನೇ ಕೊಡುತ್ತೇವೆಂದು ಅನೇಕ ಜನರು ತಿಳಿದುಕೊಂಡಿದ್ದಾರೆ. ಆದರೆ ಪ್ರತಿ ಕುಟುಂಬದವರಿಗೂ ಸಹ ಸರ್ಕಾರದ ನೌಕರಿಯನ್ನೇ ಕೊಡಿಸುವುದಕ್ಕೆ ಸಾಧ್ಯವಿಲ್ಲ. ಇಲ್ಲಿ ಉದ್ಯೋಗ ಎಂದರೆ ಸರ್ಕಾರಿ ನೌಕರಿ ಎಂದು ಅರ್ಥವಲ್ಲ, ಸರ್ಕಾರದ ನೌಕರಿಯನ್ನು ಎಷ್ಟು ಜನರಿಗೆ ಕೊಡಲು ಸಾಧ್ಯ ? ನಮ್ಮ ರಾಜ್ಯದಲ್ಲಿ ಸರ್ಕಾರದ ನೌಕರರು ಇರುವುದು ನಾಲ್ಕು ಲಕ್ಷ ಚಿಲ್ಲರೆ. ನಮ್ಮ ರಾಜ್ಯದ ನಾಲ್ಕೂವರೆ ಕೋಟಿ ಜನಸಂಖ್ಯೆಗೆ ಇದನ್ನು ಹೋಲಿಕೆ ಮಾಡಿದರೆ ಶೇಕಡಾ ಒಂದಕ್ಕಿಂತ ಹೆಚ್ಚು ಸರ್ಕಾರದ ನೌಕರರು ಇರುವುದಕ್ಕೆ ಸಾಧ್ಯವಿಲ್ಲ. ಆದರಿಂದ ಪ್ರತಿ ಕುಟುಂಬಕ್ಕೂ ಸರ್ಕಾರದ ನೌಕರಿಯನ್ನು ಕೊಡಿಸುವುದಕ್ಕೆ ಸಾಧ್ಯವಿಲ್ಲ. ನಾವು ಕೊಡಿಸುವುದು ಉದ್ಯೋಗವನ್ನು. ಅದು ವ್ಯಾಪಾರ ಆಗಿರಬಹುದು, ಇಲ್ಲವೇ...

ಶ್ರೀ ಬಿ. ಬಸವಲಿಂಗಪ್ಪ.—ನೀವು ಜನತೆಗೆ ಆ ರೀತಿ ಮಾತು ಕೊಟ್ಟ ಮೇಲೆ ಎಷ್ಟು ಜನರಿಗೆ ಉದ್ಯೋಗ ಕೊಡಿಸಬೇಕಾಗುತ್ತದೆಂಬುದರ ಬಗ್ಗೆ ಸಲ್ಪ ಏನಾದರು ಮಾಡಿಸಿದ್ದೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಈಗ ಸರ್ವೆ ಮಾಡಿಸುತ್ತಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ನೀವು ಅಧಿಕಾರಿಕ್ಕೆ ಬಂದು ೫ ವರ್ಷಗಳ ನಂತರ ಈ ಕೆಲಸ ಮಾಡಿಸುತ್ತಿದ್ದೀರಿ.

ಶ್ರೀ ರಾಮಕೃಷ್ಣ ಹೆಗಡೆ.—ನಮ್ಮ ಸರ್ಕಾರ...

ಶ್ರೀ ಕೆ. ಎಚ್. ಪಾಟೀಲ್.—ತಾವು ಹೇಳುತ್ತಿರುವುದನ್ನು ನೋಡಿದರೆ ನನಗೆ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಅದೇನೆಂದರೆ, ಒಂದು ಸಲ ಒಬ್ಬನಿಗೆ ತಾನು ಸಾಕಿದ್ದ ಕೋಳಿ ಕಳವಾಯಿತು. ಆಗ ಆತ ದೇವರ ಹತ್ತಿರ ಹೋಗಿ ತನ್ನ ಕೋಳಿ ಸಿಕ್ಕಿದರೆ ೫೦ ಕುರಿಗಳನ್ನು ಬಲಿ ಕೊಡುವುದಾಗಿ ಅರಿಕೆ ಮಾಡಿಕೊಂಡ. ಆಗ ಅಲ್ಲಿದ್ದ ಪೂಜಾರಿ ಒಂದು ಕೋಳಿ ಬೆಲೆಗಿಂತ ೫೦ ಕುರಿಗಳ ಬೆಲೆ ಜಾಸ್ತಿ ಅಲ್ಲವೇ ಎಂದು ಕೇಳಿದಾಗ ಆ ಮನುಷ್ಯ ತನ್ನ ಕೋಳಿ ಸಿಕ್ಕಿದರೆ ಅಷ್ಟು ಕುರಿಗಳನ್ನು ಬಲಿ ಕೊಡುವುದಾಗಿ ಮತ್ತೆ ಹೇಳಿದ. ಆಗ ಎಲ್ಲಿಂದಲ್ಲೋ ಆತನ ಕೋಳಿ ಹಾರಿ ಬಂದು ಆತನ ಹೆಗಲ ಮೇಲೆ ಕುಳಿತು ಕೊಂಡಿತು. ಆಗ ಪೂಜಾರಿ ೫೦ ಕುರಿಗಳ ಬಲಿ ಕೊಡುಯೆಂದು ಕೇಳಿದಾಗ ಆ ಮನುಷ್ಯ ದೇವರು ಬಂದು ಕೇಳಲಿ, ಆ ಮೇಲೆ ಕೊಡುತ್ತೇನೆ ಎಂದು ಹೇಳಿ ಕೋಳಿಯನ್ನು ತೆಗೆದುಕೊಂಡು ಮನೆಗೆ ಹೋದ.

ಶ್ರೀ ರಾಮಕೃಷ್ಣ ಹೆಗಡೆ.—ತಾವು ಹೇಳಿದ ಕಥೆ ಇದಕ್ಕೆ ಅನ್ವಯವಾಗುವುದಿಲ್ಲ. ಈಗ ನೀವು ಹೇಳಿದ್ದು ಮನೋರಂಜನೆಗೆ ಒಂದು ಸಾಧನವಾಯಿತು ಅಷ್ಟೆ.

ಶ್ರೀ ಬಿ. ಬಸವಲಿಂಗಪ್ಪ.—ನೀವು ೫ ವರ್ಷಗಳ ಹಿಂದೆ ಕೊಟ್ಟಂತಹ ವಾಗ್ದಾನದ ಬಗ್ಗೆ ಈಗ ವ್ಯಾಖ್ಯಾನ ಮಾಡುತ್ತಿದ್ದೀರಿ. ಉದ್ಯೋಗ ಎಂದರೆ ಕೇವಲ ಸರ್ಕಾರದ ನೌಕರಿಯಲ್ಲ, ಕೋಳಿ ಕುರಿ ಸಾಕುವ ಕೆಲಸ ಕೊಡುತ್ತೇವೆಂದು ಹೇಳುತ್ತಿದ್ದೀರಿ. ಈ ಬಗ್ಗೆ ಏನು ಹೇಳುತ್ತೀರೋ ಹೇಳಿ.

ಶ್ರೀ ರಾಮಕೃಷ್ಣಹೆಗಡೆ.—ನಾವು ಈ ರೀತಿ ಜನತೆಗೆ ವಾಗ್ದಾನ ಕೊಟ್ಟಿದ್ದು ೫ ವರ್ಷಗಳ ಹಿಂದೆ ಅಲ್ಲ. ೧೯೮೫ರ ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಈ ಮಾತನ್ನು ಹೇಳಿದ್ದೇವೆ. ಇದು ಆದಮೇಲೆ ಎಷ್ಟರಮಟ್ಟಿಗೆ ನಾವು ಉದ್ಯೋಗವನ್ನು ಒದಗಿಸಿದ್ದೇವೆ ಅಂದರೆ. ಬೇರೆ ಬೇರೆ ಮ್ಯಾನ್‌ಡೇಸನ್ನು ತಯಾರು ಮಾಡತಕ್ಕದ್ದು ಉದ್ಯೋಗ. ಎಂಪ್ಲಾಯಮೆಂಟ್ ಗ್ಯಾರಂಟಿ ಸ್ಕೀಂ ಇದೆಯೆಲ್ಲ ಅದು ಸರ್ಕಾರಿ ನೌಕರಿಯನ್ನು ಕೊಡತಕ್ಕಂಥ ಎಂಪ್ಲಾಯಮೆಂಟ್ ಅಲ್ಲ. ಎಲ್ಲಾ ಕ್ಷೇತ್ರದಲ್ಲೂ ಇರಬಹುದು, ಔದ್ಯೋಗಿಕ ಕ್ಷೇತ್ರದಲ್ಲೂ ಇರಬಹುದು.

SRI B. BASAVA LINGAPPA.—Not any employment, but Government employment.

ಶ್ರೀ ರಾಮಕೃಷ್ಣ ಹೆಗಡೆ.—ಈ ಬಗ್ಗೆ ನಾನು ಪಬ್ಲಿಕ್ ಮೀಟಿಂಗ್‌ನಲ್ಲಿ ಹೇಳಿದ್ದೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಒಂದು ಪ್ರಶ್ನೆ ಕೇಳುತ್ತೇನೆ.

ಶ್ರೀ ಆರ್. ಎನ್. ನಾಯಕ್.—ಆಗ ತಾವು ಹೇಳಿದಾಗ ಮನೆಗೊಂದು ಸರ್ಕಾರಿ ನೌಕರಿ ಎನ್ನ ತಕ್ಕಂಥ ಅಭಿಪ್ರಾಯವಿತ್ತು, ಎಲೆಕ್ಷನ್ ಭಾಷಣದಲ್ಲಿ ಈಗ ಹೇಳುವ ರೀತಿ ಹೇಳಿದ್ದರೆ ನೀವು ಇಲ್ಲಿ ಬರುವುದು ಕಷ್ಟವಾಗಿತ್ತು, ಅದನ್ನು ಹೇಳಲಿಲ್ಲ ನೀವು.

ಶ್ರೀ ರಾಮಕೃಷ್ಣ ಹೆಗಡೆ.—ಈಗ ಉದಾಹರಣೆ ಕೊಟ್ಟು ಹೇಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಒಂದು ಪ್ರಶ್ನೆ ಕೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಈಲ್ಡ್ ಆಗಿಲ್ಲ. ಒಂದೇ ಉದಾಹರಣೆ ಹೇಳುತ್ತೇನೆ. ಈಗ ಮೈನಾರಿಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇದೆ. ಇದರ ಉದ್ದೇಶ ಏನೆಂದರೆ, ಯಾರಿಗೆ ಉದ್ಯೋಗ ಇಲ್ಲವೋ ಅವರಿಗೆ ಉದ್ಯೋಗ ಒದಗಿಸಿಕೊಡತಕ್ಕಂಥಾದ್ದು. ೮೫ ಸಾವಿರ ಜನರಿಗೆ ಇವತ್ತು ಅದರಿಂದ ಅನುಕೂಲವಾಗಿದೆ. ಅಂದರೆ ೮೫ ಸಾವಿರ ಕುಟುಂಬಗಳಿಗೆ ನಾವು ಸಹಾಯ ಮಾಡಿದ್ದೇವೆ. ಅದೇರೀತಿ ಬೇರೆಬೇರೆ ಕಾರ್ಪೊರೇಷನ್ಸ್ ಇವೆ. ವಿಮೆನ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇದೆ. ಅವುಗಳಿಂದ ಸಹ ಅನುಕೂಲ ಆಗುತ್ತದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅವರು ಇನ್‌ಫರ್ಮೇಷನ್ ಒದಗಿಸಿಲ್ಲ,

ಶ್ರೀ ರಾಮಕೃಷ್ಣ ಹೆಗಡೆ.—ನಾನು ನಿಮಗೆ ಒದಗಿಸುತ್ತಾ ಇದ್ದೇನೆ ಕಾರ್ಪೊರೇಷನ್ ಅವರು ಸಹ ಒದಗಿಸುತ್ತಾ ಇದ್ದಾರೆ. ಅದು ಅದಮೇಲೆ ಪ್ರತಿ ತಿಂಗಳು ಒಂದು ಸಾವಿರ ಸಣ್ಣ ಉದ್ಯೋಗ ಗಳನ್ನು ಸ್ಥಾಪನೆ ಮಾಡತಕ್ಕಂಥ ಕಾರ್ಯಕ್ರಮ ಇದೆ. ನಾವು ಅದರಲ್ಲಿ ೧೦೦ಕ್ಕೆ ೯೦ರಷ್ಟು ಯಶಸ್ವಿ ಯಾಗಿದ್ದೇವೆ. ಆದುದರಿಂದ ಉದ್ಯೋಗ ಅಂದರೆ ಕೇವಲ ಸರ್ಕಾರಿ ನೌಕರಿಯಲ್ಲ, ಯಾವುದೇ ಕ್ಷೇತ್ರದಲ್ಲಿ ನಾವು ಉದ್ಯೋಗ ಕೊಡಿಸಿದರೂ ಅದನ್ನು ಉದ್ಯೋಗ ಎಂದು ತಿಳಿದುಕೊಳ್ಳಬೇಕು ಎಂದು ನಾನು ಹೇಳಬಯಸುತ್ತೇನೆ. ಆ ಮೇಲೆ ಒಂದು ವಿಚಾರವನ್ನು ಮಾನ್ಯ ವಿರೋಧಿ ಪಕ್ಷದ ನಾಯಕರು ಎತ್ತಿದರು. ಈ ವಿಚಾರದಲ್ಲಿ ಮೇಲ್ಮನೆಯ ವಿರೋಧ ಪಕ್ಷದ ನಾಯಕರು ಕೂಡ ನನಗೆ ಒಂದು ಪತ್ರ ಬರೆದಿದ್ದರು. ವಿರೋಧಿ ಪಕ್ಷದ ನಾಯಕರಿಗೆ ನೀವು ಮಂತ್ರಿಗಳ ಸ್ಥಾನ ಮಾನವನ್ನು ಕೊಟ್ಟಿದ್ದೀರಿ. ಆದರೆ ನಾವು ಅಲ್ಲಿ ರಿವ್ಯೂ ಮೀಟಿಂಗ್ ಮಾಡಬೇಕು ಎಂದು ಹೇಳಿದರೆ...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ನಾನು ಬರೆದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಅವರು ನನಗೆ ಪತ್ರ ಬರೆದಿದ್ದಾರೆ, ನೀವು ಬರೆದಿಲ್ಲ. ನೀವು ನಿಮಗೆ ಬೇಕಾದ ಇನ್‌ಫರ್ಮೇಷನ್ ಅನ್ನು ಸಂಬಂಧಪಟ್ಟ ಅಧಿಕಾರಿಗಳು ಕೊಡಬೇಕು ಎಂದು ಹೇಳಿದಿರಿ. ಈ ವಿಚಾರದಲ್ಲಿ ಸರ್ಕಾರದ ಕೆಲವೊಂದು ಸ್ಪಷ್ಟವಾದಂಥ ನಿಯಮಗಳಿವೆ. ಅದು ಮಂತ್ರಿಯ ಮಟ್ಟದ ಸ್ಥಾನಮಾನ ನಿಜ. ಆ ಹುದ್ದೆಗೆ ಸಂಬಳಸಾರಿಗೆ ಎಲ್ಲ ಇರುವುದು ಸ್ಟಾಫ್ ನಿಜ. ಆದರೆ ಮಂತ್ರಿಗಳ ಎಲ್ಲಾ ಅಧಿಕಾರವನ್ನು ಅವರಿಗೆ ಕೊಡಲಿಕ್ಕೆ ಆಗುವುದಿಲ್ಲ. ಹಾಗೆ ಮಾಡಿದರೆ ಪ್ಯಾರಲೆಲ್ ಗವರ್ನಮೆಂಟ್ ಆಗಬಹುದು. ಅದಕ್ಕಾಗಿ ನಾನು ಯಾವರೀತಿಯ ಇನ್‌ಫರ್ಮೇಷನ್ ಕೊಡಬೇಕು ಎನ್ನುವುದನ್ನು ಈ ಮನೆಯ ಮುಂದೆ ಇಡಲಿಕ್ಕೆ ಬಯಸುತ್ತೇನೆ. ಮತ್ತು ಸರ್ಕಾರದವರು ನಾವು ಏನು ಹೇಳಿದ್ದೇವೆ ಎನ್ನುವುದನ್ನು ಸ್ಪಷ್ಟವಾಗಿ ತಿಳಿಸಲಿಕ್ಕೆ ಬಯಸುತ್ತೇನೆ.

"Instructions have been issued from time to time regarding supply of information by officers on request made by the members of the Legislature and Parliament subject to the following conditions. If

The information is purelyfactual;

The information is readily available and special efforts to collect it from number of sources are not required

The informtion is not secret or confidential

The inforamtion does not relate to individual cases or Govt. servants or otherwise;

Informaion ton questions involving a statement of opinion or general policy will not be furnished. ''

ಇದರ ಹೊರತಾಗಿ ಯಾವುದೇ ತರಹದ ಇನ್‌ಫರ್ಮೇಷನ್ ಮಾನ್ಯ ಸದಸ್ಯರಿಗೆ......

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹಾಗಿದ್ದರೆ ಕೊಡಬೇಕಾಗಿರುವುದು ಏನು ?

ಶ್ರೀ ರಾಮಕೃಷ್ಣ ಹೆಗಡೆ.—ಬಾಕಿ ಎಲ್ಲ ಹೇಗೆ ಕೊಡಲಿಕ್ಕೆ ಬರುತ್ತದೆ, ಕೇಳಿ ನಾನು ಹೇಳುತ್ತೇನೆ. ಈಗ ಆಡ್ವೊಕೇಟ್ ಜನರಲ್‌ರವರ ಒಂದು ಕೇಸ್‌ನಲ್ಲಿ ಒಂದು ಇನ್‌ಫರ್ಮೇಷನ್ ಕೊಟ್ಟಿರುತ್ತಾರೆ. ಈಗ ಏನು ಕೊಟ್ಟಿದ್ದಾರೆ ಎಂದು ಮಾನ್ಯ ಸದಸ್ಯರು ಕೇಳಿದ್ದರೆ, ಒಂದು ಕೇಸ್ ನಡೆಯುತಕ್ಕಂಥ ಸಂದರ್ಭದಲ್ಲಿ ಆ ಇನ್‌ಫರ್ಮೇಷನ್ ಕೊಡಲಿಕ್ಕೆ ಆಗುವುದಿಲ್ಲ. ಕೇಂದ್ರ ಸರ್ಕಾರದ ಮತ್ತು ನಮ್ಮ ಸರ್ಕಾರದ ಮೊದಲಿನಿಂದಲೂ ಬಂದಂಥ ಪಾಲಿಸಿ ಏನಿದೆ ಆ ಪಾಲಿಸಿಗೆ ಅನುಗುಣವಾಗಿ ಕೊಡಬೇಕೇ ಹೊರತು ಬೇರೆ ಏನಾದರೂ ಇನ್‌ಫರ್ಮೇಷನ್ ಬೇಕಾದರೆ ಮಾನ್ಯ ಸದಸ್ಯರು ಈ ಮನೆಯಲ್ಲಿ ಪ್ರಶ್ನೆಯನ್ನು ಹಾಕಬಹುದು, ಕಾಲಿಂಗ್ ಅಟೆನ್‌ಷನ್ ನೋಟೀಸನ್ನು ಕೊಡಬಹುದು, ಅದರ ಮುಖಾಂತರ ಇನ್‌ಫರ್ಮೇಷನ್ ಪಡೆಯಬಹುದು.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಡಿಸ್ಟ್ರಿಕ್ಟ್ ಆಫೀಸರ್ ಹತ್ತಿರ ಹೋಗಿ ಅಡ್ವೊಕೇಟ್ ಜನರಲ್‌ರವರ ಕೊಶ್ಚನ್ ಏನಾದರೂ ಕೇಳುವುದಕ್ಕೆ ಸಾಧ್ಯವೇ ? ಮೊನ್ನೆಯ ವಿರೋಧ ಪಕ್ಷದ ನಾಯಕರಾದ ಶ್ರೀ ನರಸಿಂಹಮೂರ್ತಿಯವರು ನನಗೆ ಪತ್ರ ಬರೆದಿದ್ದಾರೆ.

೫-೩೦ ಪಿ. ಎಂ.

ಶ್ರೀ ಕೆ. ಹೆಚ್. ಪಾಟೀಲ್.—ಶಾಸಕರುಗಳು ಪತ್ರ ಬರೆದರೆ ಕೆಲವು ಅಧಿಕಾರಿಗಳು ಉತ್ತರವನ್ನೇ ಬರೆಯುವುದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ವಿಧಾನ ಸಭೆಯ ಸದಸ್ಯರುಗಳು, ವಿಧಾನ ಪರಿಷತ್ತಿನ ಸದಸ್ಯರುಗಳು ಪಾರ್ಲಿಮೆಂಟಿನ ಸದಸ್ಯರುಗಳು ಪತ್ರ ಬರೆದರೆ, ಅವರಿಗೆ ಕೂಡಲೇ ಅಕ್‌ನಾಲೆಡ್ಜ್ ಮಾಡಬೇಕೆಂದು ಅಧಿಕಾರಿಗಳಿಗೆ ಕಟ್ಟುನಿಟ್ಟಾಗಿ ಹೇಳಿದ್ದೇನೆ. ಯಾರು ಆ ಕೆಲಸವನ್ನು ಮಾಡುವುದಿಲ್ಲ. ಅಂಥವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆ. ಸಮಸ್ಯೆಯನ್ನು ಬಿಡಿಸಿ ತಕ್ಷಣ ಉತ್ತರ ಕೊಡುವುದಕ್ಕಾಗುವುದಿಲ್ಲ. ಆದ್ದರಿಂದ ಕನಿಷ್ಟ ಅಕ್‌ನಾಲೆಡ್ಜ್ ಮಾಡುವುದರ ಮೂಲಕ ಗೌರವ ಕೊಡಬೇಕೆಂದು ಹೇಳಿದ್ದೇನೆ.

ಶ್ರೀ ಆರ್. ಎನ್. ನಾಯಕ್.—ನಾನು ಕಾರವಾರದ ಎಸ್. ಪಿ. ಯವರಿಗೆ ಬರೆದಿರುವ ಪತ್ರಗಳು ಬಹಳ ಇದ್ದರೂ, ಇದುವರೆವಿಗೂ ಉತ್ತರ ಬಂದಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಮ್ಮ ಸೆಕ್ರೆಟರಿಯೇಟ್‌ನಲ್ಲಿ ಮಾತ್ರ ಇದು ಆಗುತ್ತಿದೆ. ಬೇರೆ ಎಲ್ಲೂ ಇಲ್ಲ. ಭ್ರಷ್ಟಾಚಾರ ವಿಚಾರದಲ್ಲಿ ಸಾಕಷ್ಟು ಪ್ರಸ್ತಾಪ ಬಂದಿದೆ. ಇದರ ಬಗ್ಗೆ ಆಶ್ಚರ್ಯ ಇಲ್ಲ. ಅನೇಕ ವರ್ಷಗಳಿಂದ ಇದು ಬರುತ್ತಿದೆ. ಇದರ ಬಗ್ಗೆ ವ್ಯಂಗ್ಯದ ಮಾತುಗಳು ಕೇಳಿ ಬರುತ್ತಿವೆ. ಬಂದಿರತಕ್ಕ ಟೀಕೆ ಟಿಪ್ಪಣಿಗಳ ಬಗ್ಗೆ ಈಗ ನಾನು ಹೇಳುವುದಕ್ಕೆ ಬಯಸುವುದಿಲ್ಲ. ಅದಕ್ಕೆ ಸಮಯ ಕೂಡ ಇಲ್ಲ. ಅನುಸಾಂಗಿಕವಾಗಿ ಲೋಕಾಯುಕ್ತದ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಲೋಕಾಯುಕ್ತಕ್ಕೆ ಎಷ್ಟು ದೂರಗಳು ಬಂದಿವೆ. ಎಷ್ಟು ಆಕ್ಷನ್ ತೆಗೆದುಕೊಂಡಿದ್ದೀರಿ, ಇದರ ಪರಿಣಾಮ ಏನಾಯಿತು ಎನ್ನುವುದರ ಬಗ್ಗೆ ಕೆಲವು ತಿಂಗಳ ಹಿಂದೆ ಮಾಹಿತಿಯನ್ನು ಒದಗಿಸಿದ್ದೇನೆ. ಮತ್ತೊಂದು ಸಲ ಮಾಹಿತಿ ಒದಗಿಸುತ್ತೇನೆ. ಲೋಕಾಯುಕ್ತಕ್ಕೆ ಇಲ್ಲಿಯವರೆಗೆ ೭೬೦೬ ದೂರುಗಳು ಬಂದಿದ್ದು, ೭೦೩೮ ದೂರುಗಳನ್ನು ಬಗೆಹರಿಸಲಾಗಿದೆ. ೫೬೮ ದೂರುಗಳು ಮಾತ್ರ ಉಳಿದಿವೆ. ೪೨ ಕೇಸುಗಳಲ್ಲಿ ರೈಡ್ ಮಾಡಲಾಗಿದೆ. ಇದರಲ್ಲಿ ಪ್ರಾಪರ್ಟಿ ಇನ್‌ವಾಲ್ವ್ ೨೩ ಲಕ್ಷ. ಗೌರ್ನಮೆಂಟ್ ಸರ್ವೀಸ್‌ನಿಂದ ಸಸ್ಪೆಂಡ್ ಆದವರ ಸಂಖ್ಯೆ ೩೨. ರೀ ಇನ್‌ಸ್ಟೇಟ್ ಮಾಡಿದ ಸಂಖ್ಯೆ ೧೦. ಟ್ರಾಪ್ ಕೇಸುಗಳು ೧೯೨, ಇದರಲ್ಲಿ ೨೧೨ ಅಧಿಕಾರಿಗಳು ಇನ್‌ವಾಲ್ವ್ ಆಗಿದ್ದಾರೆ. ಡಿಸ್ಪೋಸಡ್ ಆದಂತ ಕೇಸುಗಳು ೧೫೯, ವಿಚಾರಣೆಯಲ್ಲಿರತಕ್ಕಂಥ ಕೇಸುಗಳು ೩೪.

ಮಾನ್ಯ ಅಧ್ಯಕ್ಷರೇ, ಈ ಲೋಕಾಯುಕ್ತ ಸಂಸ್ಥೆ ಸ್ಥಾಪನೆ ಮಾಡಿದು ನಿಜ. ಆದರೆ, ಎಲ್ಲರ ನಿರೀಕ್ಷೆ ಏನಿತ್ತು, ಆ ನಿರೀಕ್ಷೆಯಂತೆ ಕೆಲಸ ಆಗಿಲ್ಲ. ಈ ಸಂಸ್ಥೆಯನ್ನು ಸ್ಥಾಪನೆ ಮಾಡಿದಂಥ ಉದ್ದೇಶ ಸದುದ್ದೇಶದಿಂದ, ಪ್ರಾಮಾಣಿಕವಾದ ಉದ್ದೇಶದಿಂದ. ನಮ್ಮ ರಾಜ್ಯದಲ್ಲಿ ಆಡಳಿತದಲ್ಲಿರುವ ಭ್ರಷ್ಟಾಚಾರವನ್ನು ಆದಷ್ಟು ತಗ್ಗಿಸುವ ಉದ್ದೇಶದಿಂದ ಯಾವುದೇ ಒಂದು ಸಂಸ್ಥೆ ಡಿಢೀರನೆ ಅದ್ಭುತವಾದ ಸಾಧನೆಯನ್ನು ಮಾಡುತ್ತದೆಂದು ಈ ಸಂಸ್ಥೆಯನ್ನು ಸ್ಥಾಪನೆ ಮಾಡಲಾಯಿತು, ತಮಗೆ ಗೊತ್ತಿದ್ದ ಮಟ್ಟಿಗೆ ಅತಿ ಬಯಸುವುದಕ್ಕೆ ಸಾಧ್ಯವಿಲ್ಲ. ಉತ್ತಮವಾದಂಥ ಜನರಿಂದ ಸಲಹೆಗಳನ್ನು ಕೇಳಿ, ಉತ್ತಮವಾದಂಥ ವ್ಯಕ್ತಿಯನ್ನು ಆರಿಸಿದ್ದೇವೆ. ಇದರಿಂದ ಭ್ರಷ್ಟಾಚಾರ ಮಾಯವಾಗದೇ ಇದ್ದರೆ, ನಿರೀಕ್ಷಿಸಿದ ಮಟ್ಟದಲ್ಲಿ ಭ್ರಷ್ಟಾಚಾರ ಕಡಿಮೆಯಾಗದಿದ್ದರೆ. ಬೇರೆ ಕ್ರಮ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡಬೇಕಾಗುತ್ತದೆ. ಯಾರು ಲಂಚ ಕೊಡುತ್ತಾರೋ. ಅಂಥವರು ಕೊಡದೇ ಇರಲಿಕ್ಕೆ ಸಾಮಾಜಿಕ ಆಂದೋಳನ ಮಾಡತಕ್ಕಂಥ. ಕ್ರಮ ತೆಗೆದುಕೊಳ್ಳುತಕ್ಕ ಪರಿಸ್ಥಿತಿ ಬರಬಹುದೆಂದು ನನಗೆ ನ್ನಿಸುತ್ತದೆ. ಮಾನ್ಯ ಶ್ರೀನಿವಾಸ್‌ರವರು ಮಾತನಾಡುತ್ತ, ನಿಮ್ಮ ಮೇಲೆ ನಾವು ಭ್ರಷ್ಟಾಚಾರದ ಆರೋಪ ಮಾಡುತ್ತೇವೆ, ನೀವು ನಮ್ಮ ಮೇಲೆ ಮಾಡುತ್ತೀರಿ. ಇಷತ್ತು ಜನರು ನಮ್ಮಿಬ್ಬರ ಮೇಲೂ ಮಾಡುತ್ತಾರೆಂದು ಹೇಳಿರುವುದು ಬಹಳ ಸತ್ಯವಾಗಿದೆ. ಭ್ರಷ್ಟಾಚಾರದ ಬಗ್ಗೆ ಆರೋಪ ಮತ್ತು ಪ್ರತ್ಯಾರೋಪವನ್ನು ನಾವು ಏನು ಮಾಡುತ್ತಿದ್ದೇವೆ. ಈ ಬಗ್ಗೆ ಹೇಳಬೇಕೆಂದರೆ, ಜನರು ಒಬ್ಬ ವ್ಯಕ್ತಿ ಎಷ್ಟರಮಟ್ಟಿಗೆ ಪ್ರಾಮಾಣಿಕನಾಗಿದ್ದಾನೆ, ಭ್ರಷ್ಟನಾಗಿದ್ದಾನೆ ಎಂದು ಆಗಾಗ ಅವರ ಅಭಿಪ್ರಾಯ ವ್ಯಕ್ತ ಮಾಡುವುದಕ್ಕೆ ಸಾಧ್ಯವಿಲ್ಲ. ಆದರೆ, ಸಮಯ ಬಂದಾಗ ತಮ್ಮ ಅಭಿಪ್ರಾಯವನ್ನು ವ್ಯಕ್ತ ಮಾಡಿಯೇ ಮಾಡುತ್ತಾರೆ. ಪ್ರಾಯಶ್ಚಿತವನ್ನು ಜನರು ಕೊಡುತ್ತಾರೆ. ಆ ನಂಬಿಕೆಯನ್ನು ಇಟ್ಟುಕೊಂಡು ನಾವು ಮುಂದುವರಿಯಬೇಕು. ಅದರ ಬಗ್ಗೆ ಭಯ ಪ್ರದರ್ಶನ ಮಾಡತಕ್ಕಂಥಾದ್ದು ಸೂಕ್ತವಲ್ಲ. ಮಾನ್ಯ ಅಧ್ಯಕ್ಷರೇ, ಮಾನ್ಯ ಬಂಗಾರಪ್ಪನವರು ಹೌಸಿಂಗ್ ಕೋ-ಅಪರೇಟೀವ್ಸ್ ಬಗ್ಗೆ ಸಾಕಷ್ಟು ಪ್ರಸ್ತಾಪವನ್ನು ಮಾಡಿದರು. ನಾನು ಆಗಲೇ ಹೇಳಿದೆ. ನಮ್ಮ ಸರ್ಕಾರ ಬರುವುದಕ್ಕಿಂತ ಮೊದಲು ಯಾವ ಯಾವ ಹೌಸಿಂಗ್ ಕೋ ಆಪರೇಟೀವ್ ಸೊಸೈಟಿಗಳಿಗೆ ಜಮೀನನ್ನು ಖರೀದಿ ಮಾಡತಕ್ಕಂಥ ಅನುಮತಿ ಕೊಟ್ಟಿದ್ದರೋ ಪ್ರಿಲಿಮಿನರಿ ನೋಟಿಫಿಕೇಷನ್ ಹೊರಡಿಸಿದ್ದರೋ ನಾವು ಅದಕ್ಕಿಂತಲೂ ಹೆಚ್ಚಿಗೆ ಯಾವುದೇ ರೀತಿ ವಿಶೇಷ ಸವಲತ್ತು ಕೊಟ್ಟಿಲ್ಲ ಎಂದು ಈಗಾಗಲೇ ಹೇಳಿದ್ದೇನೆ. ೧೯೮೩ರ ನಂತರ ಬೆಂಗಳೂರು ಸಿಟಿಯಲ್ಲಿ ರಿಜಿಸ್ಟರು ಆಗಿರತಕ್ಕಂಥ ಕೋ-ಆಪರೇಟೀವ್ ಸೊಸೈಟಿಗಳು ೧೫ ಈ ಸರ್ಕಾರ ಬಂದಮೇಲೆ ರಿಜಿಸ್ಟರ್ ಆಗಿರತಕ್ಕದ್ದು ಇಷ್ಟೇ. ಈಗ ಹೊಸದಾಗಿ ರಿಜಿಸ್ಟರ್ ಮಾಡುವುದಿಲ್ಲ.

ಶ್ರೀ ಕೆ. ಹೆಚ್. ಪಾಟೀಲ್.—ರಿಜಿಸ್ಟರು ಆಗದೇ ಇರುವಂಥ ಕೋ ಆಪರೇಟೀವ್ ಸೊಸೈಟಿಗಳು ಇದ್ದರೆ, ನೀವು ರಿಜಿಸ್ಟ್ರಾರ್ ಅವರಿಗೆ ಡೈರೆಕ್ಷನ್ ಕೊಟ್ಟು ಅವರ ಮೇಲೆ ಕ್ರಿಮಿನಲ್ ಕೇಸ್ ಹಾಕಿ ಎಂದು ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ತಾವು ಹೇಳುವುದನ್ನು ಒಪ್ಪುತ್ತೇನೆ. ಆದರೆ ನಾನು ಆ ಅರ್ಥದಲ್ಲಿ ಹೇಳಲಿಲ್ಲ, ೧೯೮೩ರ ನಂತರ ಕಟ್ ಆಫ್ ಡೇಟ್ ಎಂದು ಕೊಟ್ಟು ನಮ್ಮ ಸಂಪುಟದಲ್ಲಿ ತೀರ್ಮಾನ ಮಾಡಿದೆವು ಈಗ ಇರತಕ್ಕ ೧೫೦ ಸೊಸೈಟಿಗಳಲ್ಲಿ, ಯಾವುವು ಜೆನಿಯನ್ ಇದೆ, ಯಾವುದರಲ್ಲಿ ಜೆನಿಯನ್ ಆದಂಥ ಮೆಂಬರ್‌ಷಿಪ್ ಇದೆ, ಅಂತಹವರಿಗೆ ಮಾತ್ರ ನಾವು ಕೊಡಬೇಕು. ಇನ್ನು ಮುಂದೆ ಹೊಸ ಸೊಸೈಟಿಗೆ ನಾವು ಅನುಮತಿ ಕೊಡಕೂಡದು ಎನ್ನತಕ್ಕ ತೀರ್ಮಾನ ಮಾಡಿದ್ದೇವೆ. ಕಟ್ ಆಫ್ ಡೇಟ್ ಕೊಟ್ಟಿದ್ದೇವೆ. ಈಗ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಮೊದಲು ಕೆಲವು ರಿಜಿಸ್ಟ್ರು ಆಗಿರಬಹುದು. ಅದರ ನಂತರ ಯಾವುದೇ ಸೊಸೈಟಿ ರಿಜಿಸ್ಟ್ರು ಆಗುತ್ತಿಲ್ಲ. ರಿಜಿಸ್ಟ್ರಾರ್ ಅವರು ಯಾವುದೇ ಸೊಸೈಟಿಯನ್ನು ರಿಜಿಸ್ಟರ್ ಮಾಡುತ್ತಿಲ್ಲ ಈಗ ಉದಾಹರಣೆಗೆ ನಮ್ಮ ಹೊಸ ನೀತಿ ಏನೆಂದರೆ ಇನ್ನು ಮುಂದೆ ಸೊಸೈಟಿಗಳಿಗೆ ಜಮೀನನ್ನು ಖರೀದಿ ಮಾಡಲಿಕ್ಕೆ ಅವಕಾಶ ಕೊಡಕೂಡದು, ಅದು ಯಾವುದೇ ಜಮೀನು ಇರಲಿ, ಅದನ್ನು ಬಿ. ಡಿ. ಎ. ಅವರು ಮಾಡಬೇಕು ಎಂದು ಮಾಡಿದ್ದೇವೆ. ನಾನು ವಿಮಾನ ನಿಲ್ದಾಣಕ್ಕೆ ಹೋಗುವಾಗ ಬರುವಾಗ ಅಲ್ಲಿ ಜನರು ನಮ್ಮನ್ನು ಹಿಡಿದುಕೊಂಡು ನಾವು ಒಂದು ಸೊಸೈಟಿ ಮಾಡಿಕೊಳ್ಳುತ್ತೇವೆ. ಜಮೀನು ಕೊಡಿಸಿ ಎಂದು ಕೇಳುತ್ತಾರೆ. ಅವರು ಏನೇ ಸೊಸೈಟಿ ರಿಜಿಸ್ಟರ್ ಮಾಡಿಸಿಕೊಂಡರೂ ಸಹ ನಾವು ಏನು ಮಾಡಬಹುದು ಅಂದರೆ ಬಿ. ಡಿ. ಎ. ಅವರಿಗೆ ಹೇಳಿ ೨೦ ಎಕರೆ ಜಮೀನು ಕೊಡಿಸಬಹುದು. ಬಿ. ಡಿ. ಎ. ಅವರು ಅಕ್ವೈರ್ ಮಾಡಿ ಕೊಂಡಿರುವಂತಾದು ಈ ಸೊಸೈಟಿಗೆ ಕೊಡಬಹುದು. ಅವರು ಪುನಃ ಪುನಃ ಬಂದು ನಮ್ಮ ಹತ್ತಿರ ರಿಜಿಸ್ಟ್ರಾರ್ ಅವರು ನಮ್ಮ ಸೊಸೈಟಿಯನ್ನೇ ರಿಜಿಸ್ಟರು ಮಾಡುವುದಿಲ್ಲ ಎಂದು

ಹೇಳುತ್ತಿದ್ದಾರೆ ಎಂದು ಹೇಳಿದರು. ಈಗ ರಿಜಿಸ್ಟ್ರಾರ್ ಅವರು ಏತಕ್ಕೆ ರಿಜಿಸ್ಟರ್ ಮಾಡುವುದಿಲ್ಲ ಅಂದರೆ ಈ ಸೊಸೈಟಿಗಳಿಗೆ ಜಮೀನನ್ನು ಅಕ್ವೈರ್ ಮಾಡಿಕೊಳ್ಳತಕ್ಕ ಅಧಿಕಾರ ಕೊಡಕೂಡದು ಅಥವಾ ರೆವಿನ್ಯೂ ಡಿಪಾರ್ಟ್‌ಮೆಂಟ್ ಮಾಡಕೂಡದು ಎಂದು ಹೇಳಿ ನಮ್ಮ ಸರ್ಕಾರದವರು ಈಗಾಗಲೇ ತೀರ್ಮಾನ ತೆಗೆದುಕೊಂಡಿರುವುದರಿಂದ ರಿಜಿಸ್ಟರ್ ಮಾಡುತ್ತಿಲ್ಲ. ರಿಜಿಸ್ಟ್ರಾರ್ ಅವರು ಏನು ತಿಳಿದು ಕೊಂಡಿದ್ದಾರೆ ಎಂದರೆ ಇವರು ಸುಮ್ಮನೆ ರಿಜಿಸ್ಟರ್ ಮಾಡುತ್ತಾರೆ. ಜಮೀನು ಇಲ್ಲದೇ ಇದ್ದರೆ ಪ್ರಯೋಜನ ಆಗುವುದಿಲ್ಲ ಎಂದು ಹೇಳಿ ಅಲ್ಲಿಂದ ನೋ ಅಬ್ಜಕ್ಷನ್ ಸರ್ಟಿಫಿಕೇಟ್ ತೆಗೆದುಕೊಂಡು ಬನ್ನಿ ಎಂದು ಹೇಳಿಕಳುಹಿಸುತ್ತಿದ್ದಾರೆ. ಈಗ ನಾವು ಏನು ಮಾಡಬೇಕು ಅಂದರೆ ವಿಶೇಷವಾದ ವ್ಯವಸ್ಥೆ ಮಾಡಬೇಕು. ಇವೊತ್ತು ಕಾರ್ಮಿಕರ ಸಂಘ ಆಗಲಿ, ಅಥವಾ ಬೇರೆ ಯಾರೇ ಆಗಲೀ, ಇವೊತ್ತು ಇಂಡಿಯನ್ ಏರ್‌ಲೈನ್ಸ್ ಎಂಪ್ಲಾಯೀಸ್ ಇದ್ದರೆ ಅಂತಹವರು ಕೆಲವೇ ಮಂದಿ ನಾವು ಒಂದು ಸೊಸೈಟಿ ಮಾಡಿಕೊಳ್ಳುತ್ತೇವೆ, ನಮಗೆ ೨೦ ಎಕರೆ ಜಮೀನು ಕೊಡಿಸಿ. ನಾವು ಮನೆ ಕಟ್ಟಿಸಿಕೊಳ್ಳು ತ್ತೇವೆಂದು ಮುಂದೆ ಬಂದರೆ ಆ ರೀತಿ ಮಾಡತಕ್ಕ ವ್ಯವಸ್ಥೆಯನ್ನು ನಾವು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.—ಒಬ್ಬೊಬ್ಬರು ೧೦-೧೦ ಸೊಸೈಟಿಗಳಲ್ಲಿ ಮೆಂಬರ್ ಆಗಿ ೧೦ ಸೈಟು ಗಳನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.—ನಾವು ಎರಡು ಕಮಿಟಿ ಮಾಡಿದ್ದೇವೆ. ಒಂದು ಥ್ರೀಮ್ಯಾನ್ ಕಮಿಟಿ ಎಂದು ಡಿಸ್ಟ್ರಿಕ್ಟ್ ಲೆವೆಲ್‌ನಲ್ಲಿ ಮಾಡಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಬಿ. ಡಿ. ಎ. ನವರು ಜಮೀನನ್ನು ಅಕ್ವೈರ್ ಮಾಡಿ ಸೊಸೈಟಿ ಗಳಿಗೆ ಕೊಡುವ ಬದಲು ಎಲಿಜಿಬಿಲಿಟಿ ಲಿಸ್ಟ್ ಮಾಡಿ ನಾರಮ್ಸ್ ಪ್ರಕಾರ ಅಂತಹ ಗ್ರೂಪ್ ಆಫ್ ಎಂಪ್ಲಾಯೀಸ್‌ಗೆ ಬಿ. ಡಿ. ಎ. ಡೈರೆಕ್ಟಾಗಿ ಸೈಟ್ ಅಲಾಟ್ ಮಾಡಿದರೆ ಏನು ತೊಂದರೆ.

ಶ್ರೀ ರಾಮಕೃಷ್ಣ ಹೆಗಡೆ.—ಅವರು ಸೊಸೈಟಿಯಿಂದ ಮಾಡಿದರೆ, ಸೊಸೈಟಿ ಮುಖಾಂತರ ಅವರು ಹುಡ್ಕೋದಿಂದ ಸಾಲ ತೆಗೆದುಕೊಳ್ಳುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸೈಟು ತೆಗೆದುಕೊಳ್ಳುವುದಕ್ಕೆ ಯಾವ ಹುಡ್ಕೋದಿಂದಲೂ ಸಾಲ ಕೊಡುವುದಿಲ್ಲ. ಮನೆ ಕಟ್ಟಲಿಕ್ಕೆ ಸಾಲ ಕೊಡುವುದು

ಶ್ರೀ ರಾಮಕೃಷ್ಣ ಹೆಗಡೆ.—ಸೈಟನ್ನು ತೆಗೆದುಕೊಂಡಮೇಲೆ ಮನೆ ಕಟ್ಟಿಕೊಳ್ಳುವುದಕ್ಕೆ ಹುಡ್ಕೋನವರು, ಬ್ಯಾಂಕ್‌ನವರು ಸಾಲವನ್ನು ಕೊಡುತ್ತಾರೆ. ಈ ರೀತಿ ಸಾಲವನ್ನು ತೆಗೆದುಕೊಂಡು ಮನೆಯನ್ನು ಕಟ್ಟಿಸಿಕೊಳ್ಳುತ್ತಾರೆ. ಒಂದು ಸೊಸೈಟಿಗೆ ಬಿ. ಡಿ. ಎ. ನವರು ಇಪ್ಪತ್ತು ಎಕರೆಯನ್ನು ಕೊಟ್ಟರೂ ಕೂಡ ಆ ಸೊಸೈಟಿಯವರು ಬಿ. ಡಿ. ಎ. ನವರ ಲೇಔಟ್‌ಗೆ ಮತ್ತು ಪ್ಲಾನ್‌ಗೆ ಒಳಪಡಬೇಕು, ಗ್ರೂಪ್ ಹೌಸಿಂಗ್‌ನ ನಿಯಮಗಳಿಗೆ ಅನ್ವಯಿಸಿ ಈ ಕಂಡೀಷನ್‌ಗಳನ್ನು ಹಾಕಿ ಅವರು ಲೈಸೆನ್ಸ್ ಕೊಡುತ್ತಾರೆ. ಇಲ್ಲದಿದ್ದರೆ ಕೊಡುವುದೇ ಇಲ್ಲ.

ಶ್ರೀ ಎಸ್. ಬಂಗಾರಪ್ಪ.— ಲ್ಯಾಂಡನ್ನು ಅಕ್ವೈರ್ ಮಾಡತಕ್ಕ ವಿಚಾರದಲ್ಲಿ ನಾನು ಹೇಳ ತಕ್ಕದ್ದು, ಸೊಸೈಟಿಯವರು ಅಧಿಕಾರಿಗಳನ್ನು ಕಾಣುವುದು ಅಪ್ಲೈ ಮಾಡುವುದು, ೪(೧) ನೋಟಿ ಫಿಕೇಷನ್, ೫(೧) ನೋಟಿಫಿಕೇಷನ್‌ನ್ನು ಲ್ಯಾಂಡ್ ಅಕ್ವಿಸಿಷನ್ ಆಕ್ಟ್‌ನ ಕೆಳಗೆ ಏನು ಮಾಡಿಕೊಳ್ಳ ಬೇಕೋ ಅದನ್ನೆಲ್ಲಾ ಮಾಡಿಕೊಳ್ಳುತ್ತಾರೆ. ಆದರೆ ನಾನು ಹೇಳತಕ್ಕದ್ದೇನೆಂದರೆ. ಈ ಕೆಲಸವನ್ನೆಲ್ಲಾ ಬಿ. ಡಿ. ಎ. ಗೆ ವಹಿಸಿ. ಬಿ. ಡಿ. ಎ. ನವರು ಲ್ಯಾಂಡ್ ಅಕ್ವೈರ್ ಮಾಡಿಕೊಂಡು ಸೊಸೈಟಿಗೆ ಕೊಡತಕ್ಕದ್ದಲ್ಲ. ನಾನು ಹೇಳುವುದು ಸೊಸೈಟಿಯವರೇ ಅಕ್ವೈರ್ ಮಾಡಿಕೊಳ್ಳುತ್ತಾರೆ. ಬಿ.ಡಿ.ಎ. ನವರು ಅಕ್ವೈರ್ ಮಾಡಿಕೊಂಡು ಸೊಸೈಟಿಯವರಿಗೆ ಕೊಡುವುದಾದರೆ ಏನು ಪ್ರಯೋಜನ ? ಇದರಿಂದ ಏನು ಬದಲಾವಣೆ ಆಗುತ್ತದೆ ? ಸೊಸೈಟಿಯ ಮುಖಾಂತರ ಜಮೀನನ್ನು ಅಕ್ವೈರ್ ಮಾಡಿಕೊಂಡು ಸೈಟುಗಳನ್ನು ತೆಗೆದುಕೊಂಡರೆ ಸಾಲ ವಗೈರಿಗಳನ್ನು ತೆಗೆದುಕೊಳ್ಳುವುದಕ್ಕೆ ಕೆಲವು ಅನುಕೂಲಗಳಾಗಿವೆ ಎನ್ನತಕ್ಕ ಅಭಿಪ್ರಾಯವನ್ನು ನಾನು ಒಪ್ಪಿಕೊಳ್ಳುತ್ತೇನೆ. ಬಿ. ಡಿ. ಎ. ಮುಖಾಂತರ ಲ್ಯಾಂಡ್ ಅಕ್ವೈರ್ ಮಾಡಿ ಜನರಿಗೆ ಸೈಟು ಕೊಟ್ಟು ಅವರಿಗೆ ಸಾಲದ ವ್ಯವಸ್ಥೆಯನ್ನು ಬೇರೆ ಬೇರೆ ರೀತಿಯಲ್ಲಿ ಸರ್ಕಾರದವರೇ ಮಾಡತಕ್ಕದ್ದು ಕೋ ಆಪರೇಟಿವ್ ಮೂವ್‌ಮೆಂಟ್ ಮುಂತಾದುವನ್ನು ನಾನು ಅಲ್ಲಗಳದು ಮಾತನಾಡುತ್ತಿಲ್ಲ. ತಾವು ಕೇಂದ್ರ ಸರ್ಕಾರದ ಜೊತೆ

ಸಂಬಂಧಪಟ್ಟವರ ಜೊತೆ ಮಾತನಾಡಿ ನಿಯಮಗಳನ್ನು ಬದಲಾವಣೆ ಮಾಡಬೇಕಾಗುತ್ತದೆ. ಇದರಲ್ಲಿ ಒಂದು ದೊಡ್ಡ ರ್‍ಯಾಕೇಟ್ಟೇ ನಡೆಯುತ್ತಿದೆ. ಇದರಿಂದ ಕೋ ಆಪರೇಟಿವ್ ಮೂವ್‌ಮೆಂಟ್ ಅಥವಾ ಕೋ ಆಪರೇಟಿವ್ ಸೊಸೈಟಿಗಳ ಹೆಸರಿನಲ್ಲಿ ನಿಜವಾಗಿಯೂ ಒಬ್ಬರಿಗೂ ಮಾನ ಮರ್ಯಾದೆ ಬರುವುದಿಲ್ಲ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಬಿ. ಡಿ. ಎ. ನಲ್ಲಿ ಸೈಟನ್ನು ತೆಗೆದುಕೊಂಡಿದ್ದರೂ ಅಫಿಡವಿಟ್‌ನಲ್ಲಿ ನನಗೆ ಸೈಟ್ ಇಲ್ಲ ಎಂದು ಬರೆದು ಕೊಟ್ಟಿರುತ್ತಾರೆ. ಅದೇರೀತಿ ಸೊಸೈಟಿಯಲ್ಲಿ ಸೈಟನ್ನು ತೆಗೆದುಕೊಂಡಿದ್ದರೂ ನನಗೆ ಸೈಟು ಇಲ್ಲವೆಂದು ಅಪ್ಲಿಕೇಷನ್‌ನ್ನು ಕೊಟ್ಟಿರುತ್ತಾರೆ. ಇದು ಏನಾಗಿದೆ ಎಂದರೆ ಒಂದಕ್ಕೊಂದಕ್ಕೆ ಚೆಕಿಂಗ್, ಅಥವಾ ಕ್ರಾಸ್ ಚೆಕಿಂಗ್ ವ್ಯವಸ್ಥೆ ಮಾಡತಕ್ಕದ್ದು ನಿಮ್ಮಲ್ಲಿ ಇಲ್ಲ. ಇವತ್ತು ಒಬ್ಬೊಬ್ಬರೂ ಕೂಡ ೫–೧೦ ಸೈಟುಗಳನ್ನು ಮಾಡಿಕೊಂಡಿದ್ದಾರೆ.

ಶ್ರೀ ರಾಮಕೃಷ್ಣ ಹೆಗಡೆ.— ಹಿಂದೆ ಏನು ಆಗಿಹೋಗಿದೆ ಅದನ್ನು ದುರಸ್ತಿ ಮಾಡುವುದಕ್ಕೆ ಏನು ಪ್ರಯತ್ನ ಮಾಡಬೇಕೋ ಅದನ್ನೆಲ್ಲಾ ನಾವು ಮಾಡುತ್ತಿದ್ದೇವೆ. ಆದರೆ ಇನ್ನು ಮುಂದೆ ಈ ರೀತಿ ಆಗದ್ದಂತೆ ನಾವು ನೋಡಿಕೊಳ್ಳುತ್ತೇವೆ. ಆದ್ದರಿಂದ ನಾನು ಹೇಳುತ್ತಿದ್ದೇನೆ, ಕಳೆದ ೩ ವರ್ಷಗಳಿಂದ ಹೊಸದಾಗಿ ಯಾವ ಒಂದು ಸೊಸೈಟಿಯನ್ನೂ ಕೂಡ ರಿಜಿಸ್ಟರ್ ಮಾಡುವುದಕ್ಕೆ ಅವಕಾಶವನ್ನು ಕೊಟ್ಟಿಲ್ಲ. ಇನ್ನುಮುಂದೆ ಖಾಸಗಿಯಾಗಿ ಸೊಸೈಟಿಯವರು ಜಮೀನು ಅಕ್ವೈರ್ ಮಾಡಿಕೊಳ್ಳುವುದಕ್ಕೆ ಅವಕಾಶವಿಲ್ಲ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮಲ್ಲೇಶ್ವರಂನಲ್ಲಿ ಒಂದು ಸೊಸೈಟಿಯವರು ಅನೇಕ ಜನರಿಂದ ಸೈಟಿಗಾಗಿ ದುಡ್ಡನ್ನು ತೆಗೆದುಕೊಂಡು ನಾವು ಜಮೀನನ್ನು ಖರೀದಿ ಮಾಡುತ್ತಿದ್ದೇವೆಂದು|ಹೇಳಿಕೊಂಡು ಸುಮಾರು ೧ ಕೋಟಿ ರೂಪಾಯಿಗಳಷ್ಟು ಹಣವನ್ನು ವಸೂಲು ಮಾಡಿಕೊಂಡು ಸ್ವಲ್ಪದಿನಗಳನಂತರ ಪರದೇಶಕ್ಕೆ ಹೊರಟುಹೋದರು, ಇಂಥ ಕೇಸುಗಳೂ ಕೂಡ ಇವೆ.

ಶ್ರೀ ಬಿ. ಬಸವಲಿಂಗಪ್ಪ.—ನಮ್ಮ ತಾಲ್ಲೂಕಿನಲ್ಲಿ ನೂರಾರು ಎಕರೆ ಜಮೀನನ್ನು ಒಬ್ಬ ಶಾಸ್ತ್ರಿ ಎನ್ನತಕ್ಕವನು ಖರೀದಿಮಾಡಿ, ಅಲ್ಲಿ ಇಲ್ಲಿ ಸೊಸೈಟಿಗಳನ್ನು ಮಾಡಿ ದುಡ್ಡು ಮಾಡಿಕೊಂಡಿದ್ದಾನೆ. ಇದಕ್ಕೆ ತಾವು ಏನು ಹೇಳುತ್ತೀರಿ ?

ಶ್ರೀ ಆರ್. ವೆಂಕಟರಾಮಯ್ಯ.— ೪೦-೫೦ ಎಕರೆಗಳನ್ನು ಒಬ್ಬೊಬ್ಬರು ಕೊಂಡು ಕೊಂಡು ಸೈಟುಗಳನ್ನು ಮಾಡಿ ಮಾರಾಟ ಮಾಡುತ್ತಿದ್ದಾರೆ, ಇದಕ್ಕೆ ತಾವು ಏನು ಮಾಡುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಇದರ ಜೊತೆಗೆ ಜೆನ್ಯುಯಿನ್ ಮೆಂಬರ್ಸ್ ಇರತಕ್ಕಂಥ ಸೊಸೈಟಿಗಳೂ ಬಹಳಷ್ಟು ಇವೆ. ಇವತ್ತು ಮಾನ್ಯ ಸದಸ್ಯರಾದ ಕೃಷ್ಣನ್‌ರವರು ಇಲ್ಲಿ ಇಲ್ಲ. ಇನ್‌ಕಂ ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಎಂಪ್ಲಾಯೀಸ್ ಸೊಸೈಟಿ, ಐ. ಟಿ. ಐ ಎಂಪ್ಲಾಯಿಸ್ ಸೊಸೈಟಿ ಇನ್ನೂ ಮುಂತಾದ ೪-೫ ಸೊಸೈಟಿಗಳ ವಿಚಾರಕ್ಕೆ ಸಂಬಂಧ ಪಟ್ಟಂತೆ ಮಾನ್ಯ ಕೃಷ್ಣನ್‌ರವರು ನನ್ನ ಹತ್ತಿರ ಸುಮಾರು ಕನಿಷ್ಟ ಎಂದರೂ ೧೫–೨೦ ಸಾರಿ ಬಂದಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.— ಸ್ಟೇಟ್ ಗೌವರ್ನಮೆಂಟ್ ಎಂಪ್ಲಾಯೀಸ್ ಸೊಸೈಟಿಗಳು ೪ ಇವೆ, ಪಬ್ಲಿಕ್ ಸೆಕ್ಟಾರ್ಸ್, ಬ್ಯಾಂಕ್ಸ್ ಎಂಪ್ಲಾಯೀಸ್, ಬಿ. ಇ. ಎಲ್. ಸೊಸೈಟಿಯವರು.. ...

ಶ್ರೀ ಬಿ. ಬಸವಲಿಂಗಪ್ಪ.—ಅವರಿಗೆಲ್ಲಾ ಏತಕ್ಕೆ ಅವಕಾಶವನ್ನು ಕೊಡುತ್ತೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇವು ೧೯೮೩ನೇ ಇಸವಿಗೆ ಮೊದಲೇ ರಿಜಿಸ್ಟರ್ ಆಗಿವೆ.

ಶ್ರೀ ಆರ್. ವೆಂಕಟರಾಮಯ್ಯ. —ಈ ಸೊಸೈಟಿಗಳವರು ಏನೋ ಒಂದು ಪ್ಲಾನ್ ಮಾಡಿ ಕಾರ್ಪೊರೇಷನ್‌ನಿಂದ ಪರ್ಮಿಷನ್‌ನ್ನು ತೆಗೆದುಕೊಳ್ಳುತ್ತಾರೆ. ೧೦೦–೨೦೦ ಎಕರೆ ಜಮೀನನ್ನು ತೆಗೆದುಕೊಂಡು ಸೈಟುಗಳಾಗಿ ಮಾಡಿ ಮಾರಾಟ ಮಾಡುತ್ತಾರೆ. ಇದಕ್ಕೆ ತಾವು ಏನು ಹೇಳುತ್ತೀರಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಇಂಥ ಆಪಾದನೆಗಳು ಬಂದಮೇಲೆ ಸೊಸೈಟಿ ಸದಸ್ಯತ್ವವನ್ನು ಪರಿಶೀಲಿಸುವುದಕ್ಕಾಗಿ ನಾವು ಮೂರು ಜನರ ಕಮಿಟಿ ಎಂದು ಮಾಡಿದ್ದೇವೆ. ಅಲ್ಲಿ ಮೆಂಬರ್‌ಷಿಪ್‌ನ್ನು ಹೇಳಬೇಕಾಗುತ್ತದೆ. ಅದನ್ನೆಲ್ಲಾ ತನಿಕೆ ಮಾಡಿ ಅದಕ್ಕೆ ತಕ್ಕಂತೆ ಅಫಿಡವಿಟ್ ತೆಗೆದುಕೊಂಡು ಜಮೀನನ್ನು ಅಕ್ವೈರ್ ಮಾಡಿಕೊಳ್ಳತಕ್ಕ ಕೆಲಸವನ್ನು ಮಾಡುತ್ತಿದ್ದೇವೆ.

ಶ್ರೀ ಕೆ.ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಈ ಸೊಸೈಟಿಗಳ ಆಡಳಿತದಲ್ಲಿ ಬಹಳ ರಗಡೆ ಮಾಡುತ್ತಾರೆಂದು ನನಗನ್ನಿಸುತ್ತದೆ. ಆದ್ದರಿಂದ ಈ ಸೊಸೈಟಿಗಳನ್ನು ಶುಗರ್ ಫ್ಯಾಕ್ಟರಿಗಳನ್ನು ಸಸ್ಪೆಂಡ್ ಮಾಡಿ ಅಡ್ಮಿನಿಸ್ಟ್ರೇಟರ್ ಅಪಾಯಿಂಟ್‌ಮೆಂಟ್ ಮಾಡಿದಂತೆ ಇಲ್ಲೂ ಅಡ್ಮಿನಿಸ್ಟ್ರೇಟರನ್ನು ಅಪಾಯಿಂಟ್ ಮಾಡಿದರೆ ಎಲ್ಲರೂ ಓಡಿಹೋಗುತ್ತಾರೆ.

ಶ್ರೀ ರಾಮಕೃಷ್ಣ ಹೆಗಡೆ.—ಕೆಲವು ಸೊಸೈಟಿಗಳ ಮೇಲೆ ಅಂಥ ದೂರು ಬಂದಿದೆ. ತನಿಖೆ ಮಾಡಿಸುತ್ತಿದ್ದೇವೆ. ಆದರೆ ಮಾನ್ಯ ಕೆ.ಹೆಚ್. ಪಾಟೀಲರು ಕೊಟ್ಟಂಥ ಸೂಚನೆಯನ್ನು ತಕ್ಷಣವೇ ಒಪ್ಪಲಾರೆ. ಏತಕ್ಕೆಂದರೆ ಯಾರು ಯಾರೋ ಎಷ್ಟೆಷ್ಟೋ ದುಡ್ಡನ್ನು ತೆಗೆದುಕೊಂಡು ತಿಂದು ಹಾಕಿದ್ದಾರೆ. ಅಲ್ಲಿಗೆ ಗೌರ್ನಮೆಂಟ್ ಅಡ್ಮಿನಿಸ್ಟ್ರೇಷನ್ ಹಾಕಿ ಆ ತಲೆನೋವನ್ನು ನಾವು ತೆಗೆದು ಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಆಮೇಲೆ ಯಾರು ಮಾಡಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಸದಸ್ಯರು ಹಣ ಕೊಟ್ಟಿದ್ದರೆ, ಕ್ರಿಮಿನಲ್ ಕೇಸ್ ಹಾಕಲಿ. ಸದಸ್ಯರ ಹತ್ತಿರ ದುಡ್ಡನ್ನು ತೆಗೆದುಕೊಂಡು ಹೊರಟುಹೋಗಿದ್ದರೆ, ಅವರ ವಿರುದ್ಧ ಹೋರಾಟ ಮಾಡಲಿ. ಆದರೆ ಅವುಗಳ ಅಡ್ಮಿನಿಸ್ಟ್ರೇಷನ್ ನಾವು ತೆಗೆದುಕೊಂಡರೆ ಎಲ್ಲ ಜವಾಬ್ದಾರಿಯನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಅಡ್ಮಿನಿಸ್ಟ್ರೇಟರನ್ನು ನೀವು ಹಾಕಿಬಿಟ್ಟರೆ ಅಲ್ಲಿನ ವ್ಯವಹಾರ ಏನು ನಡೆದಿರುತ್ತದೆ, ಹೇಗೆ ಹಣ ಹೋಗಿಬಿಟ್ಟಿತು, ಅಲ್ಲಿ ನಡೆದಿರತಕ್ಕಂಥ ವ್ಯವಹಾರ, ಅಂದಾಜು ಎಲ್ಲ ಗೊತ್ತಾಗುತ್ತದೆ. ಸ್ವಲ್ಪ ತನಿಖೆ ಮಾಡಿದರೆ ಗೊತ್ತಾಗುತ್ತದೆ. ಒಂದು ಸಾರಿ ಅಡ್ಮಿನಿಸ್ಟ್ರೇಟರನ್ನು ಹಾಕಿಬಿಟ್ಟರೆ ವ್ಯವಹಾರವೆಲ್ಲಾ ಹೊರಗೆ ಬರುತ್ತದೆ. ಸರ್ಕಾರ ಬೆನ್ನು ಹತ್ತಿದರೆ ದುಡ್ಡು ಯಾರು ಹೊಡೆದಿದ್ದಾರೆ, ಯಾರು ಡೈರೆಕ್ಟರು ಇದ್ದರು ಎನ್ನುವುದು ಪೂರ್ತಿ ವ್ಯವಹಾರ ಹೊರಗೆ ಬರುತ್ತದೆ. ಪಾಪ ಜನರಿಗೂ ಗೊತ್ತಾಗಲಿ. ಆದ್ದರಿಂದ ಮಾನ್ಯ ಕೆ.ಹೆಚ್. ಪಾಟೀಲ್‌ರವರು ಕೊಟ್ಟಿರತಕ್ಕಂಥ ಸಲಹೆ ಯೋಗ್ಯವಾಗಿದೆ. ಏತಕ್ಕೆ ಈ ವಿಚಾರವನ್ನು ಒಪ್ಪಿಕೊಳ್ಳಬಾರದು.

ಶ್ರೀ ರಾಮಕೃಷ್ಣ ಹೆಗಡೆ.—ಅಂಥ ಕೇಸಸ್ ಇದ್ದರೆ ಮತ್ತು ಯಾರಾದರೂ ದೂರು ಕೊಟ್ಟರೆ ಯೋಚನೆ ಮಾಡಬಹುದು. ಮಾನ್ಯ ಕೆ.ಹೆಚ್. ಪಾಟೀಲ್‌ರವರು ಎನ್‌ಕ್ವಯರಿ ಕಮಿಷನ್ ವಿಚಾರ ದಲ್ಲಿ ಹೇಳಿದರು. ಎಷ್ಟು ಕಮಿಷನ್ ರಚನೆ ಮಾಡಿದಿರಿ, ಈ ರೀತಿ ಮಾಡಿದರೆ ಏನು ಪ್ರಯೋಜನ ? ಇದರ ಮೇಲೆ ರಿಪೋರ್ಟ್ ಬಂದಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ, ಎನ್ನುವ ಬಗ್ಗೆ ಹೇಳಿದರು. ಇದರ ಬಗ್ಗೆ ಕೆಲವು ದಿವಸಗಳ ಹಿಂದೆ ಉತ್ತರವನ್ನು ಕೊಟ್ಟಿದ್ದೇವೆ. ಪುನಃ ಹೇಳತಕ್ಕಂಥ ಅಗತ್ಯ ವಿಲ್ಲವೆಂದು ನನಗನ್ನಿಸುತ್ತದೆ. ಯಾವ ಯಾವ ಕಮಿಷನ್, ಏನು ರಿಪೋರ್ಟ್ ಕೊಟ್ಟಿದೆಯೆಂದರೆ—ಉದಾಹರಣೆಗೆ ಹೇಳುವುದಾದರೆ ಮಾನ್ಯ ಕುದೂರ್ ಕಮಿಷನ್, ಮಾನ್ಯ ಸೋಮಶೇಖರ್ ಕಮಿಷನ್ ಮಾನ್ಯ ಸದಾನಂದ ಕಮಿಷನ್, ಮಾನ್ಯ ಮುರಳೀಧರ್ ಕಮಿಷನ್,—ಈ ರೀತಿ ಕೆಲವು ಕಮಿಷನ್ ಗಳಿಂದ ರಿಪೋರ್ಟ್ ಬಂದಿದೆ. ರಿಪೋರ್ಟ್ ಮೇಲೆ ಸ್ಪೆಸಿಫಿಕ್ ಆಗಿ, ಪ್ರೈಮಾಫೇಸಿ ಕೇಸ್ ಹೇಳಿದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅವರು ಒಂದು ಮಾತನ್ನು ಹೇಳಿದರು, ಏನೆಂದರೆ, ಚೀಫ್ ಸೆಕ್ರೆಟರಿಯನಂತರ ಅಡಿಷನಲ್ ಚೀಫ್ ಸೆಕ್ರೆಟರಿ ಎಂದು ಬಹಳ ಜನರಿಗೆ ಪ್ರಮೋಷನ್ ಕೊಟ್ಟಿದ್ದೀರಿ ಎಂದು, ನಿಜವಾಗಿಯೂ ಕೆಲವರಿಗೆ ಇನ್ನೂ ಡ್ಯೂ ಇದೆ. ಅದನ್ನೂ ಇನ್ನೂ ಕೂಡ ಕೊಟ್ಟಿಲ್ಲ. ಕಳೆದ ಕೆಲವು ದಿವಸಗಳ ಹಿಂದೆ ಕೆಲವೊಂದು ಉನ್ನತ ಅಧಿಕಾರಿಗಳಿಗೆ ಹೈಯರ್ ಗ್ರೇಡ್ ಕೊಟ್ಟಿರುವುದು ನಿಜ. ಆದರೆ ಹೈಯರ್ ಡಿಸಿಗ್‌ನೇಷನ್ ಕೊಟ್ಟಿಲ್ಲ. ಅದು ಏತಕ್ಕೆಂದರೆ ನಾನು ಹೇಳುತ್ತೇನೆ, ಉದಾಹರಣೆಗಾಗಿ ಒಬ್ಬರು ಸೀನಿಯರ್ ಕಮಿಷನರ್ ಇದ್ದಾರೆಂದು ಇಟ್ಟುಕೊಳ್ಳಿ, ಅವರ ಸೀನಿಯಾರಿಟಿ ಎಷ್ಟೆಂದರೆ ಕೇಂದ್ರ ಸರ್ಕಾರದಲ್ಲಿ ಈವತ್ತು ಸೆಕ್ರೆಟರಿಯಾಗತಕ್ಕಂಥ ಸೀನಿಯಾರಿಟಿ ಇದೆ. ಮಾನ್ಯ ದುಬಾಷಿಯವರ ನಂತರ ಮಾನ್ಯ ವರದನ್, ಹೀಗೆ ಬೇರೆ ಬೇರೆ ಯಾರ್ಯಾರೋ ಇದ್ದಾರೆ. ನನಗೆ ನೆನಪಿಲ್ಲ. ಆದರೆ ನಾವು ಇನ್ನೂ ಅಡಿಷನಲ್ ಚೀಫ್ ಸೆಕ್ರೆಟರಿ ಪೋಸ್ಟ್‌ನ್ನೂ ಕೂಡ ಇವರಿಗೆ ಕೊಟ್ಟಿಲ್ಲ. ಅವರಿಗೆ ಅದನ್ನು ಕೊಡ ಬೇಕು, ಬೇರೆ ಬೇರೆ ರಾಜ್ಯಗಳಲ್ಲೂ ಇದ್ದಾರೆ. ಗುಜರಾತ್‌ನಲ್ಲಿ ೯ ಜನ, ತಮಿಳುನಾಡಿನಲ್ಲಿ ೮ ಜನ, ಮಧ್ಯಪ್ರದೇಶದಲ್ಲಿ ೬ ಜನ, ಸಣ್ಣ ರಾಜ್ಯಗಳಾದ ಕೇರಳದಲ್ಲಿ.........

ಶ್ರೀ ಎಸ್. ಬಂಗಾರಪ್ಪ.—ಎಲ್ಲ ಹೇಳುವುದು ಬೇಡ ಬಿಡಿ.

ಶ್ರೀ ರಾಮಕೃಷ್ಣ ಹೆಗಡೆ.—ಬೇಡ........

ಇನ್ನು ವಕ್ಫ್ ವಿಚಾರದಲ್ಲಿ ಕೆಲವು ಸ್ನೇಹಿತರು ಸೂಚನೆ ಮಾಡಿದ್ದಾರೆ. ಅದರಲ್ಲಿ ಒಂದು ಮಹತ್ವದ ಸೂಚನೆ ಏನೆಂದರೆ ವಕ್ಫ್ ಬೋರ್ಡ್ ಅವಧಿ ಮುಗಿದಿದೆ, ನೀವು ಇದನ್ನು ಮುಂದುವರಿಸ ಲಿಲ್ಲವೆಂದು ಹೇಳಿದ್ದಾರೆ. ಕಾಯ್ದೆ ಪ್ರಕಾರ ಹಳೇ ಬೋರ್ಡ್ ಮುಂದುವರಿಯುವುದಿಲ್ಲವೆಂದು ಹೇಳುತ್ತಿದ್ದಾರೆ, ಅದು ಸರಿಯಲ್ಲ. ವಕ್ಫ್ ಬೋರ್ಡ್ ಅವಧಿ ಮುಗಿದಿರುವುದು ನಿಜ. ಆದರೆ ನಜೀರ್‌ಸಾಬ್‌ರವರು ಈಗ ಇಲ್ಲಿ ಇಲ್ಲ, ಅವರು ಬಾಂಬೆಯಲ್ಲಿ ಶುಶ್ರೂಷೆ ಪಡೆಯುತ್ತಿದ್ದಾರೆ. ಅವರು ಕೆಲವು ಮಾಹಿತಿಗಳನ್ನು ತಯಾರು ಮಾಡಿಕೊಟ್ಟು ಹೋಗಿದ್ದರು. ಇನ್ನು ೩-೪ ದಿನಗಳಲ್ಲಿ ನಾನು ಅವರ ಯೋಗಕ್ಷೇಮವನ್ನು ವಿಚಾರಿಸಲು ಬಾಂಬೆಗೆ ಹೋಗುತ್ತೇನೆ. ಆ ಸಂದರ್ಭದಲ್ಲಿ ನಾನು ಅವರ ಹತ್ತಿರ ಮಾತನಾಡಿ ನಂತರ ಅನೌನ್ಸ್ ಮಾಡಬೇಕೆಂದಿದ್ದೇನೆ. ಅದಕ್ಕೋಸ್ಕರ ಸ್ವಲ್ಪ ತಡವಾಗಿದೆ. ನಾನು ಅಲ್ಲಿಗೆ ಹೋಗಿ ವಿಚಾರ ಮಾಡಿಕೊಂಡು ಬಂದಮೇಲೆ ಸ್ನೇಹಿತರ ಸಲಹೆಯನ್ನು ಸಹ ಗಮನ ದಲ್ಲಿಟ್ಟುಕೊಂಡು ಈ ಕೆಲಸ ಮಾಡುತ್ತೇನೆ. ಮೈಸೂರಿನಲ್ಲಿ ಅಂದೇಶ ಮುಖಾನ ರೈಯಟ್ಸ್‌ನಿಂದ ಏನಾಗಿದೆ ಅದರ ಬಗ್ಗೆ ಕಾಂಪನ್‌ಸೇಷನ್ ಕೊಟ್ಟಿಲ್ಲವೆಂದು ಹೇಳಿದರು. ಕಾಂಪನ್‌ಸೇಷನ್ ಕೊಡ ಬೇಕು ಮತ್ತು ಡ್ಯಾಮೇಜ್ ಆದದ್ದನ್ನು ರಿಪೇರಿ ಮಾಡಬೇಕೆಂಬ ಆರ್ಡರ್‌ನ್ನು ಪಾಸ್ ಮಾಡಿದ್ದೇವೆ. ಈಗಾಗಲೇ ಡೈರೆಕ್ಷನ್ ಇಶ್ಯೂ ಮಾಡಿದ್ದೇವೆ. Loss of 1.35 lakh acres of Wakf. land in Gulbarga, Bidar & Raichur under the land Reforms Act & Inam Abolition Act : ಇದರಲ್ಲಿ ಏನು ತೊಂದರೆಯಾಗಿದೆ ಎಂದರೆ ಲ್ಯಾಂಡ್ ರಿಫಾರಮ್ಸ್ ಆ್ಯಕ್ಟ್‌ನಂತೆ, ಏನು ಸೀಲಿಂಗ್‌ಗಿಂತ ಮೇಲಿದೆಯೋ ಅದನ್ನು ಸರ್ಕಾರದವರು ತೆಗೆದುಕೊಂಡು ಮಾಡ ಬೇಕೆಂದು ಹೇಳಿದ್ದು ನಿಜ. ಆದರೆ ವಕ್ಫ್ ಬೋರ್ಡ್‌ನವರು ಈ ಆರ್ಡರನ್ನು ಕೋರ್ಟಿನಲ್ಲಿ ಛಾಲೆಂಜ್ ಮಾಡಿರುವುದರಿಂದ ಅದು ಹಾಗೇ ಇದೆ. ಆದ್ದರಿಂದ ಇದರ ಬಗ್ಗೆ ಇನ್ನೂ ಕಾಯ್ದು ನೋಡ ಬೇಕೆಂದು ಹೇಳಬಯಸುತ್ತೇನೆ. The term of the Managing Committee of Tippu Sultan Wakf Estate has expired and the Board of the same is not constituted. Here again no specific period of the Committee has been fixed. ಒಂದು ಸೂಚನೆಯನ್ನು ಕೊಟ್ಟರು. ಅದು ಇನ್ನೂ ಕೂಡ ಇಂತಿಷ್ಟು ತಾರೀಖಿಗೆ ಮುಗಿಯುತ್ತದೆಂದು ಇಲ್ಲ. ಎಲ್ಲಿಯವರೆಗೆ ಹೊಸ ಕಮಿಟಿ ಆಗುವುದಿಲ್ಲ ಅಲ್ಲಿಯವರೆಗೆ ಇದೇ ಮುಂದುವರಿಯುತ್ತದೆ. ಅದನ್ನು ರೀ ಕಾನ್‌ಸ್ಟಿಟ್ಯೂಟ್ ಮಾಡುವ ವಿಚಾರವನ್ನು ನಜೀರ್‌ಸಾಬ್‌ರವರು ಬಂದಾಗ ಮಾತನಾಡಿ ಮಾಡುತ್ತೇನೆಂದು ಹೇಳ ಬಯಸುತ್ತೇನೆ. ಕೆಲವು ಕಾಲದ ಹಿಂದೆ ವಕ್ಫ್ ಪ್ರಾಪರ್ಟಿಯನ್ನು ಐಡೆಂಟಿಫೈ ಮಾಡಿ ಎಲ್ಲಿ ಮುಸ್ಲಿಂ ಕಬರಸ್ಥಾನ ಇದೆ ಅಲ್ಲಿ ಎನ್‌ಕ್ರೋಚ್ ಆಗದೆ ಇದ್ದ ಹಾಗೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ. ಆ ಕೆಲಸ ಇನ್ನೂ ಮುಗಿದಿಲ್ಲ. ಅನೇಕ ಕಡೆ ಪ್ರಾರಂಭವಾಗಿದೆ. ಜಿಲ್ಲಾಧಿಕಾರಿಗಳಿಗೆ ಪುನಃ ಹೇಳುತ್ತೇನೆ, ಬೇಗ ಐಡಿಂಟಿಫೈ ಮಾಡಬೇಕು ಮತ್ತು ಅದನ್ನು ಎನ್‌ಕ್ರೋಚ್ ಮಾಡಬೇಕು ಎಂದು. ಎನ್‌ಕ್ರೋಚ್ ಮಾಡದಿದ್ದರೆ ಹೊರಗಿನವರು ಯಾರೇ ಆಗಲಿ ಖಾಲಿ ಬೀಳತಕ್ಕ ಜಾಗದಲ್ಲಿ ಮನೆ ಕಟ್ಟುವುದು ಮತ್ತೊಂದು ಮಾಡತಕ್ಕವರು ಅನೇಕರು ಇರುತ್ತಾರೆ. ಅದು ಆಗದಂತೆ ತಡೆಗಟ್ಟಬೇಕೆಂದು ಹೇಳಿದ್ದೇನೆ. ಮತ್ತೆ ನೀರಾವರಿ ವಿಚಾರದಲ್ಲಿ ಎರಡು ಮಾತು ಹೇಳುತ್ತೇನೆ...

ಶ್ರೀ ಎಸ್. ಬಂಗಾರಪ್ಪ.—ಅದಕ್ಕೆ ಮುಂಚೆ ಒಂದು ವಿಚಾರ. ನಾನು ಎರಡು ಸರ್ಕಾರೀ ಆಜ್ಞೆ ಗಳನ್ನು ಕ್ವೋಟ್ ಮಾಡಿದ್ದೆ.

ಶ್ರೀ ರಾಮಕೃಷ್ಣ ಹೆಗಡೆ.—ಅದಕ್ಕೂ ಬರುತ್ತೇನೆ. ನೀರಾವರಿ ವಿಚಾರದಲ್ಲಿ ಖರ್ಗೆಯವರು ಮತ್ತಿತರ ಸದಸ್ಯರು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಮಾಡಿದರು. ಅದನ್ನು ನಾನು ಸ್ವಾಗತಿಸುತ್ತೇನೆ. ಅದು ಎಲ್ಲಿಯವರೆಗೆ ಬಂತು ಎಂದರೆ ನೀರಾವರಿಗೆ ಈ ವರ್ಷ ಎಷ್ಟು ಹಣ ಕೊಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ಹೇಳಬೇಕೆಂದರು. ಆದರೆ ಇಂತಿಷ್ಟು ಹಣ ಕೊಡುತ್ತೇ ವೆಂದು ಖಚಿತವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ. ಒಂದು ಸಾರಿ ಆ ತಪ್ಪನ್ನು ಮಾಡಿದ್ದೇವೆ. ನಮ್ಮ ಪಕ್ಷದಲ್ಲಿ 1984ರಲ್ಲಿ ಒಂದು ಠರಾವನ್ನು ಪಾಸ್ ಮಾಡಿದೆವು. ಆ ಠರಾವು ಪಾಸ್ ಮಾಡಿದ ಉದ್ದೇಶ ನಮ್ಮ ಪಕ್ಷದ ಕಳಕಳಿಯನ್ನು ತೋರಿಸಲಿಕ್ಕೆ. ಆಗ ನಮ್ಮ ಪಕ್ಷದಲ್ಲಿ ಯಾವ ಕಳಕಳಿ ಇತ್ತೋ ಇವತ್ತೂ ಅಷ್ಟೇ ಕಳಕಳಿ ನಮ್ಮ ಪಕ್ಷದಲ್ಲಿದೆ. ಆದರೆ ಆ ಸಂದರ್ಭದಲ್ಲಿ ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ ಎಂದು ಹೇಳತಕ್ಕದ್ದನ್ನು ನಾವು ಸರಿಯಾಗಿ ತೂಗಿ ಯೋಚನೆ ಮಾಡಿರಲಿಲ್ಲ ಎಂದು ನನಗನ್ನಿಸುತ್ತದೆ. ಆ ನಿರ್ಣಯ ಪಾಸ್ ಮಾಡಿದಮೇಲೆ ಮಾನ್ಯ ಸದಸ್ಯರೆಲ್ಲರಿಗೂ ಗೊತ್ತುಂಟು, ಅದರ ನಂತರದ ಬಜೆಟ್‌ನಲ್ಲಿ

ನಾವು ಯೋಜನೆಯ ಗಾತ್ರವನ್ನು ಹಿಗ್ಗಿಸಿ ನೀರಾವರಿ ಯೋಜನೆಗಳಿಗೆ 300 ಕೋಟಿ ರೂಪಾಯಿಗಳನ್ನು ಒದಗಿಸಿದ್ದು ನಿಜ. ಆದರೆ ನಾನು ಪುನಃ ಹೇಳಬೇಕಾಗಿಲ್ಲ ಯಾವ ತೊಂದರೆ ಬಂತು ಎಂದು. ಆ ತೊಂದರೆಗಳಿಂದ, ಸಮಸ್ಯೆಗಳಿಂದ 300 ಕೋಟಿ ರೂಪಾಯಿ ಹೋಗಲಿ, ಹಿಂದಿನ ವರ್ಷ ಎಷ್ಟು ಖರ್ಚು ಮಾಡಿದ್ದೆವೋ, 100 ಕೋಟಿ ರೂಪಾಯಿ ಕೃಷ್ಣ ಯೋಜನೆಗೆ ಏನು ಖರ್ಚು ಮಾಡಿದ್ದೆವೋ ಅಷ್ಟೂ ಕೂಡ ಖರ್ಚು ಮಾಡುವುದು ಕಷ್ಟವಾಯಿತು. ಕಳೆದ ಐದು ವರ್ಷಗಳಲ್ಲಿ ನೀರಾವರಿ ಬಗ್ಗೆ ನಮ್ಮ ಸರ್ಕಾರ ಎಷ್ಟು ಖರ್ಚು ಮಾಡಿದೆ ಎಂದರೆ ಈ ಐದು ವರ್ಷಗಳಿಗಿಂತ ಹಿಂದೆ ಸರ್ಕಾರ ಏನು ಖರ್ಚು ಮಾಡಿತ್ತೋ ಅದಕ್ಕಿಂತ ಎರಡರಷ್ಟು ಖರ್ಚು ಮಾಡಿದೆ. ಇದರಿಂದ ನಮಗೆ ಸಮಾಧಾನವಾಗಲೀ, ತೃಪ್ತಿಯಾಗಲೀ ಇಲ್ಲ. ನಮ್ಮ ಪಕ್ಷದಲ್ಲಿ ಗೊತ್ತುವಳಿ ಪಾಸ್ ಆದಮೇಲೆ ಮಾನ್ಯ ಕಡಪಟ್ಟಿಯವರು ಖಾಸಗಿ ನಿರ್ಣಯವೊಂದನ್ನು ಕಳುಹಿಸಿಕೊಟ್ಟರು. ಖಾಸಗಿ ನಿರ್ಣಯವನ್ನು ಇಲ್ಲಿ ತೆಗೆದುಕೊಳ್ಳುವುದಕ್ಕೆ ಬರದೇ ಇದ್ದುದಕ್ಕೆ ಬೇರೆ ರೂಲಿನ ಪ್ರಕಾರ ಇಲ್ಲಿ ಚರ್ಚೆಯಾಯಿತು. ಚರ್ಚೆಗೆ ಉತ್ತರ ಕೊಡುತ್ತಾ ನಮ್ಮ ನೀರಾವರಿ ಖಾತೆಯ ಮಂತ್ರಿಯಾಗಿದ್ದಂಥ ಮಾನ್ಯ ದೇವೇಗೌಡರು ಸರ್ಕಾರದ ಧೋರಣೆಯನ್ನು ಅತ್ಯಂತ ಸ್ಪಷ್ಟವಾಗಿ ಈ ಮನೆ ಮುಂದೆ ಇಟ್ಟಿದ್ದಾರೆ. ಆ ಧೋರಣೆಯಲ್ಲಿ ಯಾವುದೇ ರೀತಿಯ ವ್ಯತ್ಯಾಸವನ್ನು ನಮ್ಮ ಸರ್ಕಾರ ಮಾಡುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ನಿಮ್ಮ ಧೋರಣೆ ಮೇಲೆ ಅವರಿಗೆ ಏಕೆ ಸಿಟ್ಟು ಬಂತು ?

ಶ್ರೀ ರಾಮಕೃಷ್ಣ ಹೆಗಡೆ.—ಅವರಿಗೆ ಸಿಟ್ಟು ಬಂದಿಲ್ಲ. ನೀವೇಕೆ ಅದನ್ನು ಹೇಳುತ್ತೀರಿ ? ಆ ಧೋರಣೆ ನಮ್ಮ ಸರ್ಕಾರದ ಧೋರಣೆ. ಆ ಕಳಕಳಿಯಲ್ಲಾಗಲೀ ಧೋರಣೆಯಲ್ಲಾಗಲೀ ಯಾವುದೇ ವ್ಯತ್ಯಾಸ ಇಲ್ಲ. ಒಂದನ್ನು ಮಾನ್ಯ ಸದಸ್ಯರಿಗೆ ನೆನಪು ಮಾಡಿಕೊಡುತ್ತೇನೆ, ನಾನು ಅವತ್ತು ಚರ್ಚೆಯಾಗುವಾಗ ಈ ಮನೆಯಲ್ಲಿ ಏನು ಹೇಳಿದೆ ಅಂದರೆ ಅಕಸ್ಮಾತ್ ಈ ಮನೆಯಲ್ಲಿ ನಿರ್ಣಯವನ್ನು ತಂದರೆ ೩೦೦ ಕೋಟಿ ರೂಪಾಯಿಗಳನ್ನು ಒದಗಿಸುವುದಕ್ಕೆ ಯಾವ ಯಾವ ಬಾಬಿನಲ್ಲಿ ಕಡಿತ ಮಾಡಬೇಕು ಎಂಬುದನ್ನು ಹೇಳಿದರೆ ಸುಲಭವಾಗುತ್ತದೆ ಎಂದು ಹೇಳಿದ್ದೆ. ಆಗ ಅದನ್ನು ತಮಾಷೆ ಎಂದು ತಿಳಿದುಕೊಂಡರು. ತಮಗೆ ಗೊತ್ತು ನೀರಾವರಿ ಯೋಜನೆ ಅಂದರೆ ಕೇವಲ ರೈತರ ಆರ್ಥಿಕ ಉನ್ನತಿ ಅಷ್ಟೇ ಅಲ್ಲ ಅಥವಾ ನಮ್ಮ ಗ್ರಾಮೀಣ ಪ್ರದೇಶದಲ್ಲಿ ಉತ್ಪಾದನೆ ಹೆಚ್ಚು ಮಾಡತಕ್ಕದ್ದು ಅಷ್ಟೇ ಉದ್ದೇಶ ಅಲ್ಲ, ಅದಕ್ಕೂ ಹೆಚ್ಚಿನ ಉದ್ದೇಶ ಅಂದರೆ ನಮಗೆ ಸೇರಿದ ನೀರಿನ ಹಕ್ಕನ್ನು ಕಳೆದುಕೊಳ್ಳಬಾರದು ಎಂಬುದು. ಕಾವೇರಿ ಜಲಾನಯನ ಆಗಲೀ ಕೃಷ್ಣ ಜಲಾನಯನದಲ್ಲಾಗಲೀ ನಮ್ಮ ಹಕ್ಕನ್ನು ಕಳೆದುಕೊಳ್ಳಬಾರದು. ಮಾನ್ಯ ಖಾರ್ಗೆಯವರು ದಿನೇಶ್ ಸಿಂಗ್ ಅವರನ್ನು ಭೇಟಿಯಾಗಿದ್ದಾಗ ಏನು ಮಾತನಾಡಿದಿರಿ, ಫಾರ್ಮುಲ ಏನು ಕೊಟ್ಟಿದ್ದೀರಿ ಹೇಳಿ ಎಂದು ಹೇಳಿದರು. ಆದರೆ ನನಗೆ ವಿಷಾದ ಅನಿಸುತ್ತದೆ, ಏಕೆಂದರೆ, ಇವತ್ತು ಅದನ್ನು ಹೇಳತಕ್ಕ ಸ್ಥಿತಿಯಲ್ಲಿಲ್ಲ. ಇಬ್ಬರಲ್ಲಿ ಮಾತುಕತೆ ಆಗಿ ಒಪ್ಪಿಗೆಯನ್ನು ಪಡೆದುಕೊಳ್ಳತಕ್ಕ ಸಂದರ್ಭದಲ್ಲಿ ಇಂದಿನ ನೀರಾವರಿ ಮಂತ್ರಿಯಾದ ಬೊಮ್ಮಾಯಿಯವರೂ ಹಾಜರಿದ್ದರು. ಆ ಫಾರ್ಮುಲ ಬಗ್ಗೆ ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳನ್ನು ಕೇಳುತ್ತೇವೆ, ಮೂರು ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯನ್ನು ಸಾಧ್ಯವಾದರೆ ಕರೆಯುತ್ತೇವೆ ಅವತ್ತು ಚರ್ಚೆ ಮಾಡೋಣ ಎಂದು ಹೇಳಿದರು. ನನಗೆ ಅನ್ನಿಸಿದೆ, ದಿನೇಶ್ ಸಿಂಗ್ ಅವರಿಗೆ ಆ ಫಾರ್ಮುಲ ಕನ್‌ವಿನ್ಸ್ ಆಗಿದೆ. ಈಗ ಮಾಡುತ್ತಾ ಇರುವ ರೀತಿಯಲ್ಲಿ ತೆಲುಗು ಗಂಗಾ ಯೋಜನೆಗೆ ನಾವು ಒಪ್ಪುವುದಿಲ್ಲ. ಅವರು ಅವರ ನಿಲುವಿನಲ್ಲಿ ಬದಲಾವಣೆ ಮಾಡಬೇಕು, ನಾವು ನಮ್ಮ ನಿಲುವಿನಲ್ಲಿ ಬದಲಾವಣೆ ಮಾಡಬೇಕು, ಇವೆರಡೂ ಸಾಧ್ಯ ಆಗುವುದು, ನಾವು ಹೇಳಿದ ಫಾರ್ಮುಲ ಒಪ್ಪಿಕೊಂಡರೆ. ಅದರಿಂದ ನಮ್ಮ ಹಿತಕ್ಕೂ ಧಕ್ಕೆ ಬರುವುದಿಲ್ಲ, ಅವರ ಹಿತಕ್ಕೂ ಧಕ್ಕೆ ಬರುವುದಿಲ್ಲ. ಅಂಥ ಫಾರ್ಮುಲ ಇದೆ. ಸಧ್ಯದಲ್ಲೇ ನೀರಾವರಿ ಮಂತ್ರಿಗಳ ಮತ್ತು ಮೂರು ರಾಜ್ಯಗಳ ಮುಖ್ಯಮಂತ್ರಿಗಳ ಸಭೆಯನ್ನು ಕರೆಯುತ್ತಾರೆಂದು ನಾನು ಆಶೆ ಮಾಡಿದ್ದೇನೆ. ಆಮೇಲೆ ಇದೇ ಸಂದರ್ಭದಲ್ಲಿ ನಾವು ನೀರಾವರಿ ಬಗ್ಗೆ ವಿಚಾರ ಮಾಡುವಾಗ ಇನ್ನೂ ಎರಡು ವಿಚಾರಗಳನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ.

೬-೦೦ ಪಿ. ಎಂ.

ಒಂದು ವಿಚಾರವನ್ನು ಈ ಮನೆಯ ಎಲ್ಲಾ ಸದಸ್ಯರ ಅವಗಾಹನೆಗಾಗಿ ನಾನು ಇಡುತ್ತಿದ್ದೇನೆ. ಏನೆಂದರೆ, ಎಲ್ಲಿ ದೊಡ್ಡ ನೀರಾವರಿ ಅಥವಾ ಸಣ್ಣ ನೀರಾವರಿಯಾಗುವುದಿಲ್ಲವೋ ಅಂತಹ ಜಿಲ್ಲೆಗಳಲ್ಲಿ ತಕ್ಕ, ಅಂತಹ ಪ್ರದೇಶಗಳಲ್ಲಿರತಕ್ಕ ರೈತರಿಗೆ ನಾವು ಏನು ಮಾಡಬೇಕು? ಅವರಹಿತವನ್ನು ಯಾವ ರೀತಿ ರಕ್ಷಣೆ ಮಾಡಬೇಕು ? ಅವರ ಬಡತನವನ್ನು ತೆಗೆಯುವುದಕ್ಕೆ ಯಾವ ರೀತಿಯ ಕಾರ್ಯಕ್ರಮವತ್ತಿ

ಗಳನ್ನು ತೆಗೆದುಕೊಳ್ಳಬೇಕು ? ಈ ಬಗ್ಗೆ ಚರ್ಚೆ ಮಾಡುವಾಗ ಸಲಹೆಗಳನ್ನು ಕೊಡಿ ಅಂತ ಹೇಳಿದ್ದೆ. ಕೋಲಾರ ಜಿಲ್ಲೆಯವರು ನಮಗೆ ದೊಡ್ಡ ನೀರಾವರಿಯೂ ಇಲ್ಲ, ಮಧ್ಯಮ ನೀರಾವರಿಯೂ ಇಲ್ಲ, ನಮಗೆ ಇರತಕ್ಕಂತಹದ್ದು ಕೇವಲ ಬಾವಿ ನೀರಾವರಿ ಅಂತ ಹೇಳುತ್ತಿದ್ದಾರೆ. ಅದು ವಾಸ್ತವಾಂಶ ಕೂಡ. ಅದೇ ರೀತಿ ಬೇರೆ ಜಿಲ್ಲೆಯವರು ಹೇಳಬಹುದು. ಆದ್ದರಿಂದ ಈ ಎರಡನ್ನೂ ಒಂದೇ ಸಮನಾಗಿ ಮಾಡಬೇಕು. ರೈತರು ಅಂದರೆ ಎಲ್ಲರೂ ಒಂದೇ ಎಂಬ ಭಾವನೆಯಿಂದ ನಾವು ನೋಡಬೇಕಾಗುತ್ತದೆ. ಯಾರಿಗೆ ನೀರಾವರಿ ಸೌಲಭ್ಯವಿದೆ ಅವರೇ ಮಾತ್ರ ರೈತರು ಅಂತ ಹೇಳುವುದಾದರೆ ಅದು ತಪ್ಪಾಗುತ್ತದೆ. ಆದರೆ ಯಾವ ಒಬ್ಬ ರೈತನಿಗೆ ನೀರಾವರಿಯಿಂದ ಅನುಕೂಲ ಎಂದೂ ಸಿಕ್ಕುವುದಕ್ಕೆ ಸಾಧ್ಯವಿಲ್ಲವೋ ಅವರನ್ನು ರೈತರೆಂದು ತಿಳಿಯತಕ್ಕಂತಹದ್ದು ನಮ್ಮ ಧರ್ಮ ಆಗಲಿಕ್ಕಿಲ್ಲ. ನಮಗೆ ಸೇರಿದ ನೀರಿನ ಮೇಲಿನ ಹಕ್ಕನ್ನು ಉಳಿಸಿಕೊಂಡು ಅದಕ್ಕೆ ನಮ್ಮ ಆದ್ಯತೆಯನ್ನು ಇಟ್ಟುಕೊಂಡು ಎಲ್ಲ ರೈತರಿಗೂ ಅನುಕೂಲ ಸಿಕ್ಕತಕ್ಕ ರೀತಿಯಲ್ಲಿ ನಮ್ಮ ನೀತಿ ಇರಬೇಕೆಂಬುದೇ ನನ್ನ ಆಸೆ. ಆ ಆಸೆಗೆ ಇಡೀ ಮನೆಯ ಎಲ್ಲ ಸದಸ್ಯರೂ ಬೆಂಬಲ ಕೊಡುತ್ತಾರೆಂದು ನಾನು ನಂಬಿಕೊಂಡಿದ್ದೇನೆ.

ಇನ್ನು ಕೊನೆಯದು. ಸಾಮಾಜಿಕ ಕಲ್ಯಾಣದ ಕಾರ್ಯಕ್ರಮದ ವಿಚಾರವಾಗಿ ಹೊಸದಾಗಿ ಈ ಮನೆಯ ಮುಂದಾಗಲಿ ಅಥವಾ ನಮ್ಮ ಕರ್ನಾಟಕ ಜನತೆಯ ಮುಂದಾಗಲಿ ಇಡುತ್ತಿಲ್ಲ. ಈ ಕಾರ್ಯಕ್ರಮವನ್ನೂ ಕೂಡ ಅಷ್ಟೇ ಮಹತ್ವ ಕೊಟ್ಟು ನಡೆಸಿಕೊಂಡು ಬಂದಿದ್ದೇವೆ. ಇನ್ನು ಮುಂದೆಯೂ ಅದನ್ನು ನಡೆಸಿಕೊಂಡು ಹೋಗತಕ್ಕಂತಹ ಆಗತ್ಯ ಇದೆ ಎಂಬುದು ನನ್ನ ಅಭಿಪ್ರಾಯ. ಆದರೆ ಅದಕ್ಕೆ ನೀರಾವರಿ ಹಿತವನ್ನು ಕಾಪಾಡುವುದಕ್ಕೆ ಪ್ರೈಯಾರಿಟಿಯ ಆದ್ಯತೆಯ ಬೆಲೆ ಕೊಟ್ಟು ಬೇರೆ ಕೆಲಸಗಳನ್ನು ಮಾಡಿ ಅಂತ ಹೇಳತಕ್ಕಂತಹದ್ದಲ್ಲ. ನಾವು ಪ್ರಥಮ ಆದ್ಯತೆಯನ್ನು ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ಕೊಟ್ಟಿದ್ದೇವೆ. ಅದರ ನಂತರ, ಸಾಮಾಜಿಕ ಕಲ್ಯಾಣ ಕಾರ್ಯಕ್ರಮಕ್ಕೆ ಆದ್ಯತೆಯನ್ನು ಕೊಟ್ಟಿದ್ದೇವೆ. ಸಾಮಾಜಿಕ ನ್ಯಾಯ ದೃಷ್ಟಿಯಿಂದ ನಮ್ಮ ರಾಜ್ಯದ ಹಾಗೂ ರೈತರ ಹಿತವನ್ನು ರಕ್ಷಣೆ ಮಾಡತಕ್ಕ ದೃಷ್ಟಿಯಿಂದ ಇದು ಯೋಗ್ಯ ನೀತಿ ಎಂದು ತಿಳಿದಿದ್ದೇನೆ. ನನ್ನ ಉತ್ತರವನ್ನು ಮುಗಿಸುವುದಕ್ಕೆ ಮುಂಚಿತವಾಗಿ ಮಾನ್ಯ ಬಂಗಾರಪ್ಪನವರು ಟೆನನ್ಸಿ ಕೇಸೊಂದನ್ನು ಹೇಳಿದರು.

ಶ್ರೀ ಎಸ್. ಬಂಗಾರಪ್ಪ.—ನಾನು ಎರಡೂ ಗೌರ್ನಮೆಂಟ್ ಆರ್ಡರನ್ನು ಕೋಟ್ ಮಾಡಿ ಹೇಳಿದ್ದೇನೆ. ಆ ಎರಡೂ ಆರ್ಡರ್‌ಗಳ ಪೈಕಿ ಒಂದನ್ನು ೧೯೭೪ರಲ್ಲಿ ಮತ್ತೊಂದನ್ನು ೧೯೭೫ರಲ್ಲಿ ಹೊರಡಿಸಲಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಬೊಮ್ಮಾಯಿಯವರೆ, ಇದರ ಬಗ್ಗೆ ನೀವು ಹೇಳುತ್ತೀರಾ, ಏಕೆಂದರೆ ಆ ವಿಚಾರ ಅವರ ಹತ್ತಿರ ಬಂದಿದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೆ, ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಕೆಳಗೆ ಯಾವ ಯಾವ ರೈತರು ಭೂಮಿಯನ್ನು ಪಡೆವರೋ ಅವರಿಗೆ ಆ ಭೂಮಿಯ ಮಾಲೀಕತ್ವವನ್ನು ಪಡೆಯುವುದಕ್ಕೆ ಪ್ರೀಮಿಯಂನ್ನು ಕಂತುಗಳಲ್ಲಿ ಕಟ್ಟಬೇಕು. ಅವರು ಕಟ್ಟಬೇಕಾಗುತ್ತದೆ. ನಾವು ೧೯೭೪ರಲ್ಲಿ ಒಂದು ನಿರ್ಣಯವನ್ನು ತೆಗೆದುಕೊಂಡೆವು. ಆ ಪ್ರೀಮಿಯಂನ್ನು ತಡೆಗಟ್ಟತಕ್ಕಂತಹ ವಿಚಾರದಲ್ಲಿ ನಾವು ತೆಗೆದುಕೊಂಡು ನಿರ್ಣಯದ ಪ್ರಕಾರ ೧೯೭೪ ರಿಂದೀಚೆಗೆ ರೈತರು ಕಟ್ಟಬೇಕಾದ ಕಂತುಗಳಿಗೆ ವಿನಾಯಿತಿ ಇದೆ. ಆದರೆ ಅದರ ಹಿಂದಿನ ಕಂತುಗಳ ಬಗ್ಗೆ ವಿನಾಯಿತಿ ಇಲ್ಲ. ಅನೇಕ ಸಲ ಈ ಮಾತನ್ನು ಹೇಳಿದ್ದೇನೆ. ಆ ಪ್ರಕಾರ ಲ್ಯಾಂಡ್ ರಿಫಾರ್ಮ್ಸ್ ಆಕ್ಟನ್ನೂ ಕೂಡ ತಿದ್ದುಪಡಿ ಮಾಡಿದ್ದೇವೆ. ಆ ರೀತಿಯ ತಿದ್ದುಪಡಿಯನ್ನು ಮಾಡುವಾಗಲೂ ಇಲ್ಲಿ ಚರ್ಚೆಯಾಯಿತು. ಚರ್ಚೆಗೆ ಉತ್ತರ ಕೊಡುವ ಕಾಲದಲ್ಲಿ ಇದು "ಪ್ರಾಸ್ಪೆಕ್ಟೀವ್" "ರೆಟ್ರಾಸ್ಪೆಕ್ಟೀವ್" ಅಲ್ಲ ಅಂತ ಹೇಳಿದ್ದೇನೆ. ಹಿಂದಿನ ಕಂತುಗಳನ್ನು ಕಟ್ಟಲೇಬೇಕಾಗುತ್ತದೆ. ಬಾಕಿ ಉಳಿದಂತಹ ಕಂತುಗಳಿಗೆ ವಿನಾಯಿತಿ ಇದೆ. ಈ ಒಂದು ಪ್ರಶ್ನೆ ಏನಾಗಿದೆ ಎಂದರೆ, ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ನಿಂದ ರೈತರಿಗೆ ಸಾಲವನ್ನು ಒದಗಿಸಿ ಕಂತುಗಳನ್ನು ಕಟ್ಟಿಸಲಾಗಿದೆ. ಈಗ ಭೂ ಅಭಿವೃದ್ಧಿ ಬ್ಯಾಂಕ್‌ನಿಂದ ಹಣವನ್ನು ವಸೂಲು ಮಾಡುವುದಕ್ಕೆ ಕಾರ್ಯಕ್ರಮ ಕೈಗೊಂಡಿದೆ. ಅನೇಕರ ಮನೆಯ ಜಪ್ತಿ ಕ್ರಮ ಕೂಡ ಕೈಗೊಂಡಿದ್ದಾರೆ. ನಾವು ಸರ್ಕಾರದ ನೀತಿಯನ್ನು ಸ್ಪಷ್ಟಪಡಿಸಿದ್ದೇವೆ. ಯಾವ ರೀತಿ ಎಂದರೆ ಮುಂದಿನ ಕಂತುಗಳಿಗೆ ವಿನಾಯಿತಿ ಇದೆ. ಆದರೆ ಹಿಂದಿನ ಕಂತುಗಳಿಗೆ ರಿಯಾಯಿತಿ ಇಲ್ಲ ಆ ಕಂತುಗಳನ್ನು ಕಟ್ಟಲೇ ಬೇಕಾಗುತ್ತದೆ. ೧೯೭೮ರಲ್ಲಿ ಸರ್ಕಾರ ಸುತ್ತೋಲೆಯನ್ನು ಕಳುಹಿಸಿದೆ. ವಿಶೇಷವಾಗಿ ಆಗ ಶಿವಮೊಗ್ಗ ಜಿಲ್ಲೆಯಲ್ಲಿ ರೈತರ ಒಂದು ಆಂದೋಳನವೇ ಆಯಿತು. ಶ್ರೀಮಾನ್ ಪಟೇಲ್‌ರವರು ಹಾಗೂ ಶ್ರೀಮಾನ್ ಬಸವಣ್ಣಪ್ಪನವರು ಇಲ್ಲ, ಅಲ್ಲಿ ಚಿಕ್ಕ ಚಿಕ್ಕ ರೈತರು ಇದ್ದಾರೆ, ಆ ರೈತರು ಕಂತು ಕಟ್ಟುವ ಶಕ್ತಿಯನ್ನು ಹೊಂದಿಲ್ಲ, ಆದ್ದರಿಂದ ಅವರ ಬಗ್ಗೆ ವಿಚಾರ ಮಾಡಿ ಅಂತ ಹೇಳಿದರು. ಆ ಬಗ್ಗೆ

ಒಂದು ಸುತ್ತೋಲೆಯನ್ನು ಕಳುಹಿಸಿದ್ದೇವೆ, ವಸೂಲು ಮಾಡುವುದನ್ನು ಸದ್ಯಕ್ಕೆ ತಡೆಹಿಡಿಯಿರಿ, ಮರು ಪರಿಶೀಲನೆ ಮಾಡತಕ್ಕ ಆಲೋಚನೆ ಮಾಡುತ್ತೇವೆಂದು ಹೇಳಿದ್ದೇವೆ. ಇದಾದ ಮೇಲೆ ಪುನಃ ಈ ಮನೆಯಲ್ಲಿ ಮರು ಪರಿಶೀಲನೆ ಮಾಡುವುದಕ್ಕೆ ಇರುವ ತೊಂದರೆ ಇರುವುದನ್ನು ಹೇಳಿದ್ದೇವೆ. ಹಿಂದಿನ ಕಂತುಗಳಿಗೆ ವಿನಾಯಿತಿ ಕೊಡುವುದು ಕಷ್ಟ ಇದೆ. ಕಾರಣ ಏನೆಂದರೆ, ಶಿವಮೊಗ್ಗ ಮತ್ತು ಹೆಚ್ಚಾಗಿ ೨–೩ ಜಿಲ್ಲೆಗಳಲ್ಲಿನ ಚಿಕ್ಕ ರೈತರು ಪ್ರೀಮಿಯಂ ಕೊಟ್ಟಿಲ್ಲ. ಕಂತು ಬಾಕಿ ಇದೆ. ಆದರೆ ರಾಜ್ಯದ ಎಲ್ಲಾ ಕಡೆ ರೈತರು ಕೊಟ್ಟಿದ್ದಾರೆ. ಇಲ್ಲಿ ವಿನಾಯಿತಿ ಕೊಟ್ಟರೆ ಸರ್ಕಾರಕ್ಕೆ ಬಂದ ಹಣ ಏನಿದೆ ಅದನ್ನು ವಾಪಸ್ಸು ಕೊಡಬೇಕಾಗುತ್ತದೆ.

ಶ್ರೀ ರಾಮಕೃಷ್ಣ ಹೆಗ್ಡೆ.—ಮಾನ್ಯ ಸದಸ್ಯರು ಇಂಡಿವಿಜ್ಯುಯಲ್ ಕೇಸ್ ಬಗ್ಗೆ ಹೇಳಿದರು.

ಶ್ರೀ ಎಸ್. ಬಂಗಾರಪ್ಪ.—ನಾನು ಅದನ್ನು ಉದಾಹರಣೆ ಕೊಟ್ಟೆ ಅಷ್ಟೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ವಿವರವಾಗಿ ಹೇಳುತ್ತೇನೆ. ಮೊನ್ನೆ ತಾನೇ ಬಡ್ಡಿ ಹೆಚ್ಚಾಗಿ ತೊಂದರೆಯಾಗಿದೆಯೆಂದೂ, ಪರಿಶೀಲನೆ ಮಾಡಬೇಕೆಂದು ಹೇಳಿದ್ದಾರೆ. ಪರಿಶೀಲನೆ ಮಾಡುತ್ತೇವೆಂದು ಹೇಳಿ ಭರವಸೆಯನ್ನೂ ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಇದರಲ್ಲಿ ೧೭–೧೧–೮೪ರಲ್ಲಿ ಮೊದಲು ಆರ್ಡರ್ ಬಂದಿದೆ, ಅನಂತರ ೧೯೮೫ರಲ್ಲಿ ಮತ್ತೊಂದು ಆರ್ಡರ್ ಹೊರಡಿಸಿ ೧೯೮೪ರಲ್ಲಿ ಏನು ಆಜ್ಞೆಯನ್ನು ಹೊರಡಿಸಿದ್ದೀರೋ ಅದನ್ನೂ ಇದರಲ್ಲಿ ನಮೂದು ಮಾಡಿದ್ದೀರಿ. ಅದರಲ್ಲಿ ಏನಿದೆ ಎಂದರೆ, ೧೯೮೪ನೇ ಇಸವಿಗಿಂತಲೂ ಮುಂಚೆ ಯಾವುದಾದರೂ ಕಟಾಫ್ ಡೇಟ್ ಯಾವುದಾದರೂ ಇಟ್ಟುಕೊಳ್ಳಿ, ಈ ತಾರೀಖಿನಿಂದ ಮೊದಲು ಟ್ರಿಬ್ಯುನಲ್‌ನಲ್ಲಿ ಅಥವಾ ಕೋರ್ಟ್‌ನಲ್ಲಿ ತೀರ್ಮಾನ ಆಗಿರತಕ್ಕ ಕೇಸ್‌ಗಳಿಗೆ ಇದು ಅನ್ವಯ ವಾಗುವುದಿಲ್ಲ, ೧೯೮೪ರ ನಂತರ ಆಗಿರತಕ್ಕ ಕೇಸ್‌ಗಳಿಗೆ ಅನ್ವಯವಾಗುತ್ತದೆನ್ನುವ ವಿಚಾರವನ್ನು ತಾವು ಬರೆದಿಲ್ಲ. ತಾವು ಸಂಪೂರ್ಣವಾಗಿ ಓದಿ. ದಾಖಲೆಗಳು ಇವೆ. ನಾನು ತಮಗೆ ಕಾಪಿ ಕಳುಹಿಸಿ ಕೊಟ್ಟಿದ್ದೇನೆ. ಅದನ್ನು ಓದಿ ನೋಡಿ. ನೀವು ೧೯೮೫ರ ಆರ್ಡರ್‌ನಲ್ಲಿ ಕೂಡಾ ಹೇಳಿಲ್ಲ. ಈ ವರ್ಗೀಕರಣದ " ಡಿ " ವರ್ಗಕ್ಕೆ ಬರುವುದರಲ್ಲಿ ಸುಮಾರಾಗಿ ನಮ್ಮ ಕಡೆಯ ಮಳೆ–ತೆರೆಭೂಮಿ ಹಾಗೂ ನಿಮ್ಮ ಕಡೆಯ ಖುಷ್ಕಿ ಜಮೀನಿನಲ್ಲಿ ವಸೂಲಿ ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ ಆ ಜನ ಬಹಳ ಬಡವರಿದ್ದಾರೆ. ಇವತ್ತು ಒಬ್ಬ ಜಮೀನುದಾರ ೩೦–೪೦ ಎಕರೆ ಇರುವವರೂ ಕೂಡಾ ೪ ಎಕರೆಗೆ ಗೇಣಿದಾರರಾಗಿರುತ್ತಾರೆ. ಅವನಿಂದಲೂ ಕೂಡಾ ವಸೂಲಿ ಮಾಡಿ ಎಂದು ನಾವು ಹೇಳಿದ್ದೇವೆ. ಎಲ್ಲವನ್ನೂ ಸೂಟು ಬಿಡಿ ಎಂದು ಹೇಳುವುದಿಲ್ಲ. ಆದರೆ ಗೇಣಿದಾರನಾಗಿ ಅದರಿಂದಲೇ ಜೀವನ ಮಾಡತಕ್ಕ, ಮಲೆನಾಡು ಭಾಗದ ಮಳೆತೆರೆ ಭೂಮಿ ಹಾಗೂ ಖುಷ್ಕಿ ಭೂಮಿ ಏನು ಒಂದೆರಡು, ಮೂರು, ನಾಲ್ಕು ಎಕರೆ ಇಟ್ಟುಕೊಂಡಿದ್ದಾರೆ ಅವರಿಗೆ ವಿನಾಯಿತಿ ಕೊಡದೇ ಇದ್ದರೆ ಹಣವನ್ನು ಕಟ್ಟುವ ಪರಿಸ್ಥಿತಿಯಲ್ಲಿ ಹರಿಜನಗಿರಿಜನರು, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರು ಇಲ್ಲಿ ಈಗ ಹೆಚ್ಚಾಗಿ ಇಂತಹವರೇ ಗೇಣಿದಾರರಾಗಿದ್ದಾರೆ. ಆ ಜನರಿಗೆ ವಿನಾಯಿತಿ ಕೊಡುವುದು ಉಪಯೋಗ ಇಲ್ಲ ಎಂದು ವಾದ ಆಗಿತ್ತು. ೧೯೮೪ರಲ್ಲಿ ಈ ಬಗ್ಗೆ ಕೇಳಿದ ಮೇಲೆ ನಮ್ಮ ಮುಖ್ಯಮಂತ್ರಿಗಳು ಇಲ್ಲಿ ಹೇಳಿಕೆ ಕೊಟ್ಟು ನಾವು ಅದಕ್ಕೆ ವಿನಾಯಿತಿ ಕೊಡುತ್ತೇವೆಂದು ಹೇಳಿದ ಮೇಲೆ ೭– ೧–೮೪ರಲ್ಲಿ ಆರ್ಡರ್ ಹೊರಡಿಸಿದರು. ಆದರೆ ಇಲ್ಲಿ ತಾವು ಏನು ಹೇಳಿದ್ದೀರಿ ಎಂದರೆ ೮೪ರ ಮುಂಚಿನ ಕೇಸ್‌ಗಳಿಗೆ ಇದು ಅನ್ವಯವಾಗುವುದಿಲ್ಲ ಎಂದು ಆದರೆ ಅನಂತರ ಎಂದು ಇಲ್ಲಿ ಇಲ್ಲ. ಆರ್ಡರ್‌ನ್ನು ಓದಿ ನೋಡಿ. ನಿಮ್ಮ ಇಲಾಖೆಯವರು ಆಜ್ಞೆ ಹೊರಡಿಸಿದ್ದಾರೆ ನಿಜ. ಆದರೆ ಆಜ್ಞೆಯ ಪ್ರಕಾರ ಅಧಿಕಾರಿಗಳು ವಸೂಲಿ ಮಾಡುವುದನ್ನು ನಿಲ್ಲಿಸಿಲ್ಲ. ಆದರೆ ಒಂದು ಏನು ಮಾಡಿದ್ದಾರೆಂದರೆ, ಪಿ. ಎಲ್. ಡಿ. ಬ್ಯಾಂಕ್‌ನವರು ಏನಿದ್ದಾರೆ ಅವರು ಗೇಣಿದಾರರ ಪರವಾಗಿ ಕಂತಿನ ಹಣವನ್ನು ಕಟ್ಟಿದ್ದಾರೆ. ಆ ವಿಚಾರವನ್ನು ನಮೂದು ಮಾಡಿಲ್ಲ. ಅದನ್ನು ನಮೂದು ಮಾಡಬೇಕೆಂದು ಇಲ್ಲಿ ಒತ್ತಾಯ ಮಾಡಿದ್ದೆವು. ಇಲ್ಲಿ ಲಕ್ಷಾಂತರ ಜನರ ಪ್ರಶ್ನೆ ಇದೆ. ಪೂರ್ಣ ಜನರು ಹಣವನ್ನು ಇನ್ನೂ ಕಟ್ಟಿಲ್ಲ. ಅಂಕಿ ಅಂಶವನ್ನು ನೀವು ನೋಡಿ. ಇದು ನಿಮ್ಮ ಕಡೆಯ ಶಾಸಕರಿಗೂ ಗೊತ್ತು, ನಮ್ಮ ಕಡೆಯ ಶಾಸಕರಿಗೂ ಗೊತ್ತು. ಈಗಿರತಕ್ಕ ಆಜ್ಞೆ ಸರಿ ಇದೆ. ಅದನ್ನು ಜಾರಿಗೆ ಕೊಡಬೇಕಷ್ಟೇ. ಮತ್ತೆ ಪಿ. ಎಲ್. ಡಿ. ಬ್ಯಾಂಕ್‌ನವರು ಏನು ಪ್ರೀಮಿಯಂ ಹಣ ಕೊಟ್ಟಿದ್ದಾರೆ ಅದನ್ನು ಜೀಪ್‌ನಲ್ಲಿ ಹೋಗಿ ವಸೂಲಿ ಮಾಡುತ್ತಿದ್ದಾರೆ. ಅದನ್ನೂ ಇಲ್ಲಿ ಸೇರಿಸಿ ಎಂದಿದ್ದೆವು. ಪಿ. ಎಲ್. ಡಿ. ಬ್ಯಾಂಕ್‌ನವರು ಕಟ್ಟಿದ ಹಣವು ಸರ್ಕಾರದಿಂದ ವಜಾ ಆಗುತ್ತದೆ. ಹಿಂದಿನದು ಆಗಿಯೋಯಿತು. ಹಿಂದಿನದು ಎಂದರೆ ೮೪ರ ಮುಂಚಿನ, ಹಿಂದಿನದಲ್ಲ. ಕಟ್ಟುವವರು ಕಟ್ಟಿಬಿಟ್ಟರು. ಕಟ್ಟಿರತಕ್ಕ ಹಣವನ್ನು

ವಸೂಲು ಮಾಡತಕ್ಕದ್ದು, ಅದರಲ್ಲಿ ನೀವು ಬರೆದಿದ್ದೀರಿ. ಇದು ಲಿಖಿತ ಆರ್ಡರ್‌ನಲ್ಲಿ ಇದೆ. ಹಣವನ್ನು ಕಟ್ಟಿರುವವರು ಹಣವನ್ನು ಹಿಂದೆ ಕೊಡಬೇಕೆಂದು ಇದರ ಅರ್ಥ ಅಲ್ಲ ಎಂದು ಬರೆದಿದ್ದಿರಿ. ಇವತ್ತು ಹಿಂದಕ್ಕೆ ಕೊಡುವುದು ಬೇಡ. ಅದರ ಬಗ್ಗೆ ನಾವು ಪ್ರೆಸ್ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ವಸೂಲಾತಿ ಏನು ಆಗಿಲ್ಲ, ಕಟ್ಟುವುದಕ್ಕೆ ಸಾಧ್ಯವಿಲ್ಲ ಅದರ ಬಗ್ಗೆ ಹೇಳುತ್ತಿದ್ದೇನೆ. ಬರಗಾಲ ಇದೆ ಎಂದು ಕೇಂದ್ರಕ್ಕೆ ಏನು ವರದಿಯನ್ನು ಕೊಟ್ಟಿದ್ದೀರಿ ಅದರ ಮೇಲೆ ವಸೂಲಿ ಮಾಡುವುದರಲ್ಲಿ ಏನು ಅರ್ಥ ಇದೆ ? ಇವತ್ತು ನಿಮ್ಮ ಧಾರವಾಡ ಜಿಲ್ಲೆಯ ಹಾನಗಲ್ ತಾಲ್ಲೂಕನ್ನೆ ತೆಗೆದುಕೊಳ್ಳಿ. ಮಾನ್ಯ ಉದಾಸಿಯವರ ಕ್ಷೇತ್ರ ಅದು. ಅಲ್ಲಿ ಸಾವಿರಾರು ಜನ ಬಡವರು ಇದ್ದಾರೆ. ಹಾಗೆಯೇ ಕಾರವಾರ, ಧಾರವಾಡ, ದಕ್ಷಿಣ ಕನ್ನಡ ಜಿಲ್ಲೆ, ಗುಲ್ಬರ್ಗ ಎಲ್ಲಾ ಕಡೆ ಇದೇ ಪರಿಸ್ಥಿತಿ ಇದೆ. ವಸೂಲಿ ಕಾರ್ಯಕ್ರಮದ ಬಗ್ಗೆ ನೀವು ಆರ್ಡರ್ ಹೊರಡಿಸಿದ್ದು ಸರಿಯಿದೆ ಆದರೆ ಅದರಲ್ಲಿ ಮತ್ತೊಂದು ಪಾಯಿಂಟ್ ಸೇರಿಸಿದ್ದೀರಿ ೧೯೮೪ಕ್ಕೆ ಮುಂಚೆ ಇದು ಅನ್ವಯವಾಗುವುದಿಲ್ಲ ಅಂದರೆ ಟ್ರಿಬ್ಯುನಲ್‌ನಲ್ಲಿ ಕೇಸುಗಳು ಇವೆಯೇ ? ಕೇಸುಗಳು ಮುಗಿದಿವೆ ನಿಮ್ಮ ಆರ್ಡರ್ ತೆಗೆದುಕೊಂಡು ಹೋಗಿ ಹಣೆಗೆ ಹಚ್ಚಿಕೊಳ್ಳಬೇಕು, ಅದು ಉಪಯೋಗವಾಗುವುದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇನ್‌ಸ್ಟಾಲ್‌ಮೆಂಟ್ ಡ್ಯೂಸ್, ಕೇಸು ಯಾವಾಗಲೇ ಡಿಸ್ಪೈಡ್ ಆಗಿರಬಹುದು, ಆದರೆ ಕಂತುಗಳನ್ನು ಕಟ್ಟತಕ್ಕದ್ದು ಇದೆ. ೧೯೮೪ರಲ್ಲಿ ಒಂದು ಕೇಸ್ ಡಿಸ್ಪೈಡ್ ಆದರೆ ಪೂರಾ ವಿನಾಯಿತಿ ಸಿಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—೧೯೭೫–೭೬, ೧೯೭೭–೭೮, ೧೯೭೯–೮೦, ೧೯೮೧–೮೨ ೧೯೮೩–೮೪ ಬೇಕಾದಷ್ಟು ಹಣ ಕೊಡದೇ ಇರತಕ್ಕ ಸಾವಿರಾರು, ಲಕ್ಷಾಂತರ ಕೇಸುಗಳಿವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಲಕ್ಷಾಂತರ ಇವೆ. ಕಂತುಗಳನ್ನು ಕಟ್ಟುತ್ತಾ ಬಂದಿದ್ದಾರೆ. ಅದು ಸರ್ಕಾರಿ ಆಜ್ಞೆ ಅಲ್ಲ. ಕಾನೂನು ತಿದ್ದುಪಡಿ ಮಾಡಿದ್ದೇವೆ ಅದರ ಪ್ರಕಾರ ಹಿಂದೆ ಡ್ಯೂಸ್ ಇದ್ದಂತಹ 'ಪ್ರೀಮಿಯಮ್' ಕಂತುಗಳು ಏನಿವೆ, ಅದನ್ನು ಕಟ್ಟಬೇಕಾಗುತ್ತದೆ. ೧೯೮೪ ಕ್ಕಿಂತ ಮೊದಲು ಇದ್ದ ಕಾನೂನನ್ನು ತಿದ್ದುಪಡಿ ಮಾಡಿದ್ದು ಕಾನೂನು ಇರತಕ್ಕದ್ದು. ಇದನ್ನು ಪುನರ್ ಆಲೋಚನೆ ಮಾಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ, ಅದನ್ನು ನೋಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ನೋಡುತ್ತೇನೆ ಅಂದಮೇಲೆ ಪರಿಶೀಲನೆ ಮಾಡುತ್ತೇನೆಂದರೆ ಅಲ್ಲಿಯ ವರೆಗೆ ಜಪ್ತಿಯಾಗುತ್ತದೆ. ಆಲವಟ್ಟಿ ಕೇಸಿನಲ್ಲಿ ನೋಟೀಸ್ ಕೊಟ್ಟಿದ್ದಾರೆ ಅದರ ಬಗ್ಗೆ ಹೇಳುವುದು ಒಳ್ಳೆಯದು, ಮೂರು ಎಕರೆ ಭೂಮಿ ಭೂನ್ಯಾಯ ಮಂಡಳಿಯಲ್ಲಿ ಮಂಜೂರು ಆಗಿದೆ. ಅಲ್ಲಿಯ ವರೆಗೆ ವಸೂಲಿ ಮಾಡುವುದನ್ನು ನಿಲ್ಲಿಸಿಯೆಂದು ಹೇಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ನಾನು ಅದರ ಬಗ್ಗೆ ಹೇಳುತ್ತೇನೆ. ಶ್ರೀಮಹಮದ್ ಗೌಸ್ ಅವರಿಗೆ ಆಲವಟ್ಟಿಯಲ್ಲಿರತಕ್ಕದ್ದು ಮೂರು ಎಕರೆ ೯ ಗುಂಟೆ ನಿಜ. ಆದರೆ ಬೇರೆ ಕಡೆಗೆ ಕುಬತೂರು ಅಲ್ಲಿ ಮೂರು ಎಕರೆ ೯ ಗುಂಟೆ ಇದೆ ಒಟ್ಟು ೧೩ ಎಕರೆ ಆಗುತ್ತದೆ. ಇದೊಂದು ಇದೆಯಲ್ಲ He is ineligible because it is more than 10 acres. ೧೦ ಎಕರೆಗಿಂತ ಜಾಸ್ತಿಯಿದೆ, ಆದ್ದರಿಂದ ಅವರಿಗೆ ರಿಯಾಯಿತಿ ಕೊಡಲಿಕ್ಕೆ ಆಗುವುದಿಲ್ಲವೆಂದು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಮತ್ತೊಂದು ಗ್ರಾಮದಲ್ಲಿ ಭೂಮಿ ಇದ್ದಿದ್ದರೆ ಅದು ನಮಗೆ ಗೊತ್ತಾಗುವುದಿಲ್ಲ. ನೋಟೀಸ್‌ನಲ್ಲಿ ಮೂರು ಎಕರೆ ಚಿಲ್ಲರೆಯೆಂದು ನೋಟೀಸ್ ಕೊಟ್ಟಿದ್ದಾರೆ. ಬೇರೆ ಕೇಸುಗಳಲ್ಲಿ ಏನು ನೋಟೀಸ್ ಕೊಟ್ಟಿರುತ್ತಾರೆ ಅವರಿಗೆ ಆ ಭೂಮಿ ಬಿಟ್ಟು ಬೇರೆ ಕಡೆ ಭೂಮಿ ಇರುವುದಿಲ್ಲ. ೧೦ ಎಕರೆ ಒಳಗೆ ಇರತಕ್ಕವುಗಳು ಇರುತ್ತವೆ. ಈ ರೀತಿ ಇರುವುದನ್ನು ವಸೂಲಿ ಮಾಡಲಿಕ್ಕೆ ಹೊರಟದ್ದಾರೆ, ಅದನ್ನು ವಸೂಲಿ ಮಾಡಬಾರದು. ಅದರ ಬಗ್ಗೆ ತಾವು ವಸೂಲಿ ಮಾಡಬಾರದೆಂದು ಹೇಳಬೇಕಾಗುತ್ತದೆ. ಅದರ ಬಗ್ಗೆ ಈಗ ಏನು ಹೇಳಿದ್ದಾರೆಂದರೆ ೧೦ ಎಕರೆಗೆ ಮೇಲಿರುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆದರೆ ೧೦ ಎಕರೆ ಒಳಗಡೆ ಇರತಕ್ಕವರ ಬಗ್ಗೆ ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಆಗಲೇ ಹೇಳಿದ್ದೇನೆ. ಪುನರ್ ಆಲೋಚನೆ ಮಾಡುತ್ತೇನೆಂದು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ತಾವು ಪುನರ್ ಆಲೋಚನೆ ಮಾಡುವವರೆಗೆ ವಸೂಲಿಯನ್ನು ತಡೆಹಿಡಿಯಬೇಕು ಆ ಅಭಿಪ್ರಾಯವನ್ನು ತಾವು ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರಕ್ಕೆ ಕೊಡತಕ್ಕ ಕಂತುಗಳು ಬೇರೆ ಬೇರೆ ಇವೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಲ್ಲಿ ಸಾಲ ತೆಗೆದುಕೊಂಡಿರುತ್ತಾರೆ ಅದು ಒಂದು ಕಡೆ. ನಾನು ಈಗಾಗಲೇ ಸುತ್ತೋಲೆಯಲ್ಲಿ ಹೇಳಿದ್ದೇನೆ. ಸರ್ಕಾರಕ್ಕೆ ಬರತಕ್ಕ ಕಂತುಗಳ ಬಗ್ಗೆ ಪುನರ್ ಆಲೋಚನೆ ಮಾಡುವವರೆಗೆ ವಸೂಲಿ ಮಾಡುವುದನ್ನು ತಡೆಹಿಡಿಯಬೇಕೆಂದು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ನೀವು ಹೇಳಿದ್ದೀರಿ, ಆದರೆ ಅಲ್ಲಿ ಭರ್ಜರಿಯಾಗಿ ವಸೂಲಿ ಮಾಡುತ್ತಿದ್ದಾರೆ. ಜನರಿಗೆ ತಿನ್ನಲಿಕ್ಕೆ ಅನ್ನವಿಲ್ಲ ಅಂತಹ ಕಡೆ ವಸೂಲಿ ಮಾಡುತ್ತಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಬಗ್ಗೆ ಸೂಕ್ತ ಆದೇಶ ಕೊಡುತ್ತೇನೆ.

ಅಧ್ಯಕ್ಷರು.—ಶ್ರೀಮತಿ ನಾಗರತ್ನಮ್ಮನವರೇ, ನೀವು ಕ್ಲಾರಿಫಿಕೇಶನ್ ಕೇಳಿ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯಅಧ್ಯಕ್ಷರೆ, ನಮ್ಮ ಮುಖ್ಯಮಂತ್ರಿಗಳವರ ತಲೆಯ ಒಳಗಡೆ ವಿಕೇಂದ್ರೀಕರಣ ಎಂಬುದು ಹೇಗೆ ಆಗಿದೆ ಎನ್ನುವುದು ಅವರಿಗೆ ಗೊತ್ತಿಲ್ಲ. ಅವರು ಮೊದಲು ದೆಹಲಿಯಲ್ಲಿದ್ದರು, ಈಗ ಬೆಂಗಳೂರಿನಲ್ಲಿದ್ದಾರೆ. ಹಳ್ಳಿಗಳ ಮಟ್ಟದಲ್ಲಿ ಇವರ ವಿಕೇಂದ್ರೀಕರಣ ಆಗಿರುವುದು ಇವರಿಗೇ ಗೊತ್ತಿಲ್ಲ. ಒಂದು ಬಾವಿಗೆ ಎಲೆಕ್ಟ್ರಿಫಿಕೇಶನ್ ಆಗಬೇಕೆಂದು ಬರೆದರೆ ಅದು ಅಲ್ಲಿಯೇ ಆಗುವುದಿಲ್ಲ, ಅದು ಇಲ್ಲಿಗೆ ಬರಬೇಕು. ಜಿಲ್ಲಾಪರಿಷತ್‌ನವರನ್ನು ಕೇಳಿದರೆ ಆಗುವುದಿಲ್ಲ, ಮಿನಿಸ್ಟರ್ ಬಂದು ಒಪ್ಪಿಕೊಂಡು ರಾಚಯ್ಯನವರು ಹೇಳಿದರೇ ಅದು ಆಗುವುದು ಎಂದು ಹೇಳುತ್ತಾರೆ. ಆದ್ದರಿಂದ ವಿಕೇಂದ್ರಿಕರಣ ಎಂಬುದು ಇಲ್ಲವೇ ಇಲ್ಲ. ಬರೀ ಕೇಂದ್ರೀಕರಣ ನ್ಯಾಯಬೆಲೆ ಅಂಗಡಿ ಪ್ರಾರಂಭ ಮಾಡಲು ಯಾರಾದರು ಕೇಳಿದರೆ ಅಲ್ಲಿ ಸೊಸೈಟಿ ಇದ್ದರೂ ಅದನ್ನು ರದ್ದು ಮಾಡಿ, ನಾನು ಹೇಳಿದವರಿಗೆ ಕೊಡುತ್ತೀರೋ ಇಲ್ಲವೋ, ಕೊಡದಿದ್ದರೆ ಜಿಲ್ಲಾಪರಿಷತ್ ಮೆಂಬರ್‌ಗೆ ಹೇಳುತ್ತೇನೆ, ಜಿಲ್ಲಾಪರಿಷತ್‌ನ ಅಧ್ಯಕ್ಷರಿಗೆ ಹೇಳುತ್ತೇನೆ, ಇಲ್ಲದಿದ್ದರೆ ಮಿನಿಸ್ಟರ್‌ಗೆ ಹೇಳುತ್ತೇನೆಂದು ಹೇಳುತ್ತಾರೆ. ಅಲ್ಲಿ ಮಂಡಲಪಂಚಾಯಿತಿ ಪ್ರಧಾನನೂ ಇಲ್ಲ ಯಾವುದೂ ಇಲ್ಲ. ಅದೊಂದು ತರಹ ವಿಕೇಂದ್ರೀಕರಣ. ಕೆಲಸಗಳಿಗಾಗಿ ಅಕ್ಕಿ, ಗೋಧಿ ಕೊಟ್ಟಿದ್ದರೆ ಅದನ್ನು ಮಾರಾಟ ಮಾಡಿಕೊಂಡಿದ್ದರೆ ಅದನ್ನು ಪೋಲಿಸ್‌ನವರಿಗೆ ಎಲ್ಲರೂ ಸೇರಿ ಹಿಡಿದುಕೊಟ್ಟರೆ, ಅದನ್ನು ಬಿಟ್ಟುಬಿಡಿ, ಬಿಡದಿದ್ದರೆ ಮಿನಿಸ್ಟರ್ ರಾಚಯ್ಯನವರಿಗೆ ಹೇಳುತ್ತೇನೆ ಎಂದು ಹೇಳುತ್ತಾರೆ, ಈ ತರಹ ವಿಕೇಂದ್ರೀಕರಣ ಇಟ್ಟುಕೊಂಡು ಅದೇನು ಮಾಡುತ್ತಿರೋ ಗೊತ್ತಿಲ್ಲ. ನಿಮಗೊಬ್ಬರಿಗೇ ಈ ಇಮ್ಯಾಜಿನ್ ಇರುವುದು ಆ ಭಗವಂತನೇ ನಮ್ಮನ್ನೆಲ್ಲಾ ಕಾಪಾಡಬೇಕು.

ಶ್ರೀ ಬಿ. ರಾಚಯ್ಯ.—ಒಂದು ಕೇಸ್ ಆದರೂ ನೀವು ಪ್ರೂವ್ ಮಾಡಿ ಹೇಳಿ. ಯಾರದ್ದೋ ಹೆಸರು ಇಟ್ಟುಕೊಂಡು ನನ್ನ ಹೆಸರು ಹೇಳಿದ್ದೀರಿ. ಒಂದಕ್ಕೂ ನಾನು ಕೈಹಾಕಿಲ್ಲ. ಇದನ್ನು ನೀವು ತಿಳಿದುಕೊಳ್ಳಿ,

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಬೇಕಾದಷ್ಟು ಕೇಸ್‌ಗಳಬಗ್ಗೆ ಹೇಳಿದರು, ಹೀಗೆ ಆಗುತ್ತದೆ ಹಾಗೆ ಆಗುತ್ತದೆ ಎಂದೆಲ್ಲಾ ಹೇಳಿದರು. ಅಲ್ಲಿ ಆಕ್ಸಿಡೆಂಟ್ ಆಯಿತು, ಇಲ್ಲಿ ಆಯಿತು ಎಂದು ಹೇಳಿದರು. ನಾನು ಎರಡೂ ಕಿವಿಗಳನ್ನು ಬಿಟ್ಟುಕೊಂಡು ಕೇಳುತ್ತಿದ್ದೇನೆ. ಹೆಣ್ಣುಮಕ್ಕಳ ವಿಚಾರದಲ್ಲಿ ಏನಾದರೂ ಹೇಳುತ್ತಾರೆ ಎಂದು ನಿರೀಕ್ಷೆ ಮಾಡಿದ್ದೆ. ವರದಕ್ಷಿಣೆ ಸಾವು, ಅತ್ಯಾಚಾರ, ಮಹಿಳಾ ಪೋಲೀಸ್ ಅಧಿಕಾರಿಗಳನ್ನು ಜಾಸ್ತಿ ಮಾಡುತ್ತೇನೆ ಎನ್ನುವ ವಿಚಾರವಾಗಲೀ, ಹೆಣ್ಣುಮಕ್ಕಳ ಯೋಗಕ್ಷೇಮ ಅವರ ರಕ್ಷಣೆ ನೋಡಿಕೊಳ್ಳುತ್ತೇವೆ ಎನ್ನುವ ಒಂದು ಮಾತೂ ಅವರ ಬಾಯಿಂದ ಬರಲಿಲ್ಲವಲ್ಲ ? ನಾವು ೫೦ ಪರ್ಸೆಂಟ್ ಇದ್ದೀವಿ. ನಮಗೆ ಆಗತಕ್ಕಂಥ ದೌರ್ಜನ್ಯವನ್ನು ನೋಡಿದರೆ ಹೇಳುವುದಕ್ಕೆ ಆಗುವುದಿಲ್ಲ. ಇಂಥಾದ್ದರಲ್ಲಿ ಮುಖ್ಯ ಮಂತ್ರಿಗಳಿಗೆ ಅವರ ಮೇಲೆ ಕಣ್ಣುಬೀಳಲಿಲ್ಲವಲ್ಲ, ಹೆಂಗಸರ ಮೇಲೆ ದಯೆಯಿಲ್ಲವಲ್ಲ. ಮಹಿಳಾ ಪೋಲೀಸ್ ಅಧಿಕಾರಿಗಳ ಸಂಖ್ಯೆಯನ್ನು ಜಾಸ್ತಿ ಮಾಡುತ್ತೇವೆ ಎಂದು ಏನಾದರೂ ಅವರು ಹೇಳುತ್ತಾರೆಯೇ ?

ಶ್ರೀ ರಾಮಕೃಷ್ಣ ಹೆಗಡೆ.—ಮೊದಲನೇ ಪ್ರಶ್ನೆ ವಿಚಾರದಲ್ಲಿ ನಾನು ಮತ್ತೇನೂ ಹೇಳಲಾರೆ. ಅವರ ಅಭಿಪ್ರಾಯ ಮತ್ತು ನನ್ನ ಅಭಿಪ್ರಾಯ ತದ್ವಿರುದ್ಧ. ನನ್ನ ಅಭಿಪ್ರಾಯದಲ್ಲಿ ಯಾವ ಜನರು ನಮ್ಮನ್ನು ಆರಿಸಿ ಕಳಿಸತಕ್ಕಂಥ ಬುದ್ಧಿಯನ್ನು ಪಡೆದಿದ್ದಾರೆ, ಈ ದೇಶದ ಪ್ರಧಾನ

ಮಂತ್ರಿಯನ್ನು ಆರಿಸಿ ಕಳಿಸುವ ಬುದ್ಧಿಯನ್ನು ಪಡೆದಿದ್ದಾರೆ ಆ ಜನರು ನಮ್ಮ ಮಂಡಲಗಳ ಪ್ರಧಾನರು ಮತ್ತು ಸದಸ್ಯರನ್ನು ಆರಿಸಿ ಕಳಿಸತಕ್ಕಂಥ ಬುದ್ಧಿಯನ್ನು ಪಡೆದಿದ್ದಾರೆ. ಐದು ವರ್ಷ ಕಾದು ನೋಡೋಣ. ಐದು ವರ್ಷಗಳಲ್ಲಿ ಏನೂ ಆಗದಿದ್ದರೆ ಆಮೇಲೆ ಪುನರ್ ವಿಚಾರ ಮಾಡೋಣ. ಇನ್ನು ಎರಡನೇ ವಿಚಾರದಲ್ಲಿ ಸಮಯಾಭಾವದಿಂದ ನಾನು ಹೆಣ್ಣುಮಕ್ಕಳ ಮೇಲೆ ಆಗಿರತಕ್ಕಂಥ ಅತ್ಯಾಚಾರ ವಿಚಾರ ವಿಚಾರದಲ್ಲಿ ಆದಂಥ ಕೇಸ್‌ಗಳು ಎಷ್ಟು, ಏನು ಕ್ರಮ ತೆಗೆದುಕೊಂಡಿದ್ದೇವೆ ಮತ್ತು ಡೌರಿ ಡೆತ್ ಎಷ್ಟು, ಏನು ಕ್ರಮ ತೆಗೆದುಕೊಂಡಿದ್ದೇವೆ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಆಗಲಿಲ್ಲ. ಅದರ ಅರ್ಥ ಹೆಣ್ಣುಮಕ್ಕಳ ಬಗ್ಗೆ ಸರ್ಕಾರದ ದೃಷ್ಟಿ ಇಲ್ಲವೆಂದು ಅಲ್ಲ. ಹೆಣ್ಣುಮಕ್ಕಳ ಬಗ್ಗೆ ಸರ್ಕಾರಕ್ಕೆ ಅಷ್ಟೇ ಸಹಾನುಭೂತಿ, ಅನುಕಂಪ ಇದೆಯೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖಾರ್ಗೆ.—ನಾನು ಕೇಳಿದ್ದಕ್ಕೆ ತಾವು ಸ್ವಲ್ಪ ಉತ್ತರ ಕೊಟ್ಟಿರಿ. ಇರಿಗೇಷನ್ ಪ್ರಾಜೆಕ್ಟ್ ಬಗ್ಗೆ ಹೇಳಬೇಕೆಂದರೆ ಇನ್ನು ಉಳಿದಿರುವುದು ೧೨ ವರ್ಷಗಳು ಮಾತ್ರ. ಸಂಪೂರ್ಣವಾಗಿ ನೀರನ್ನು ಉಪಯೋಗ ಮಾಡಿ ಖರ್ಚುಮಾಡುವುದಕ್ಕೆ ಸಾಧ್ಯವಿದ್ದರೆ ಅದಕ್ಕೆ ಏನಾದರೂ ಯೋಜನೆ ಇರಬೇಕು. ೧೨ ವರ್ಷಗಳಲ್ಲಿ ಸಂಪೂರ್ಣವಾಗಿ ಉಪಯೋಗ ಮಾಡಬೇಕಾದರೆ ಯಾವರೀತಿ ಅದನ್ನು ಮಾಡುತ್ತೇವೆ ಎಂದು ತಾವು ಹೇಳಲಿಲ್ಲ. ನೀವೇನೋ ಸವಿಸ್ತಾರವಾಗಿ ಹೇಳಿದಿರಿ. ಸೋಶಿಯಲ್ ಸೆಕ್ಯುರಿಟಿ ಪ್ರೋಗ್ರಾಮ್ಸ್ ಇವೆ, ಅನೇಕ ಬೇರೆ ಪ್ರೋಗ್ರಾಮ್ಸ್ ಇದೆಯೆಂದು ಹೇಳಿ, ಅದಕ್ಕಾಗಿ ನಾವು ಆ ದೃಷ್ಟಿಯಿಂದ ನೋಡಬೇಕು ಎಂದು ಹೇಳಿ ಅದನ್ನು ಅಲ್ಲಿಗೇ ಬಿಟ್ಟಿರಿ. ನಂತರ ಎಷ್ಟರಮಟ್ಟಿಗೆ ಎಂದು ಖಂಡಿತವಾಗಿ ಹೇಳಲಿಲ್ಲ. ೧೨ ವರ್ಷಗಳಲ್ಲಿ ಯಾವರೀತಿ ಅದನ್ನು ಖರ್ಚು ಮಾಡುತ್ತೀರಿ? ಎರಡನೆಯದು, ಗುಲ್ಬರ್ಗಾದಲ್ಲಿ ಒಂದು ಪ್ರಾಜೆಕ್ಟ್, ಪೋಲೀಸ್ ಹೌಸಿಂಗ್ ಕಾರ್ಪೊರೇಷನ್ನಿಂದ ಇತ್ತು, ಅದನ್ನು ಇದ್ದಕ್ಕಿದ್ದಂತೆ ವಿತ್‌ಡ್ರಾ ಮಾಡಿಬಿಟ್ಟರು. ಅದನ್ನು ಮಾಡುತ್ತೀರೋ ಹೇಗೆ? ಸ್ಪಷ್ಟವಾಗಿ ಹೇಳಬೇಕು. ಕನ್‌ಸ್ಟ್ರಕ್ಷನ್‌ಗೆ ಟೆಂಡರ್ ಕಾಲ್‌ಫಾರ್ ಮಾಡಿ ೨೦೦ ಮನೆಗಳನ್ನು ಕಟ್ಟಿಸಬೇಕೆಂದು ಹೇಳಿ ಕೊನೆಗೆ ಆ ಪ್ರಾಜೆಕ್ಟ್‌ನ್ನು ನಿಲ್ಲಿಸಿದ್ದಾರೆ. ಅದರ ಬಗ್ಗೆ ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಪೋಲೀಸ್ ಹೌಸಿಂಗ್ ಕಾರ್ಪೊರೇಷನ್ನಿನದ್ದು ಒಂದು ವಿಶಿಷ್ಟವಾದ ಕೇಸ್ ಈ ವಿಚಾರದಲ್ಲಿ ನನಗೆ ಇನ್ನೂ ಸಮಾಚಾರ ಬಂದಿಲ್ಲ. ಬಂದ ತಕ್ಷಣ ತಿಳಿಸುತ್ತೇನೆ. ಪೋಲೀಸ್ ಹೌಸಿಂಗ್ ಕಾರ್ಪೊರೇಷನ್ ಮಾಡಿರುವ ಉದ್ದೇಶ ಹೆಚ್ಚು ಸಂಖ್ಯೆಯಲ್ಲಿ ಪೋಲೀಸರಿಗೆ ವಸತಿ ವ್ಯವಸ್ಥೆ ಮಾಡಬೇಕೆಂದು ಹೇಳಿ. ಈ ವರ್ಷ ೧೦ ಕೋಟಿಯಷ್ಟು ಖರ್ಚು ಮಾಡುತ್ತಿದ್ದೇವೆ. ಬರುವ ವರ್ಷ ಅದರ ಎರಡರಷ್ಟು ಖರ್ಚು ಮಾಡತಕ್ಕಂಥ ಒಂದು ಯೋಜನೆ ಇದೆ. ಅದಕ್ಕೆ ಹುಡ್ಕೋ ಮತ್ತು ಬ್ಯಾಂಕ್‌ಗಳಿಂದ ಎಲ್ಲೆಲ್ಲಿ ಸಾಲ ಸಿಗುತ್ತದೆ ಅದನ್ನು ತೆಗೆದುಕೊಂಡು ಮಾಡಬೇಕೆಂಬ ಅಭಿಪ್ರಾಯ ಇದೆ. ಆಮೇಲೆ ನೀರಾವರಿಯೋಜನೆ ಬಗ್ಗೆ ಒಂದು ಮಾತನ್ನು ಹೇಳಿದರು, ನಾನು ನಿರ್ದಿಷ್ಟವಾದ ಕಾರ್ಯ ಕ್ರಮದ ಘೋಷಣೆ ಮಾಡಿಲ್ಲವೆಂದು ಹೇಳಿದ್ದಾರೆ. ಈ ವಿಚಾರವನ್ನು ನಾನು ಈಗಾಗಲೇ ಹೇಳಿದೆ. ಈ ಮನೆಯಲ್ಲಿ ಅದರ ಬಗ್ಗೆ ಚರ್ಚೆಯಾಗಿದೆ. ಬೇಕಾದರೆ ಈ ಸದನದ ಒಂದು ಕಮಿಟಿಯನ್ನು ಮಾಡುವುದಕ್ಕೆ ನಾನು ಸಿದ್ಧನಿದ್ದೇನೆ.

ಮಾನ್ಯ ನೀರಾವರಿ ಮಂತ್ರಿಗಳಿಗೆ ಇದನ್ನು ಹೇಳುತ್ತೇನೆ, ಎಲ್ಲಾ ಪಕ್ಷದ ಸದಸ್ಯರನ್ನು ಸೇರಿಸಿ, ಬರುವ ೧೨ ವರ್ಷದಲ್ಲಿ ನೀರಾವರಿ ಯೋಜನೆಗಳಿಗೆ ಯಾವರೀತಿ ನಾವು ಕಾರ್ಯಕ್ರಮ ಹಾಕಿಕೊಳ್ಳಬೇಕು, ಮತ್ತು ಇದರ ಜೊತೆಗೆ ಯಾವರೀತಿ ಹಣಕಾಸಿನ ವ್ಯವಸ್ಥೆಯನ್ನು ಮಾಡಬೇಕೆಂಬುದನ್ನು ಕೂಲಂಕಷ ವಾಗಿ ಚರ್ಚೆ ಮಾಡಿ, ಸರ್ಕಾರಕ್ಕೆ ಒಂದು ಮಾರ್ಗದರ್ಶನ ಮಾಡತಕ್ಕಂಥ ಒಂದು ಕಮಿಟಿಯನ್ನು ನಾವು ರಚನೆ ಮಾಡುತ್ತೇವೆ.

ಅಧ್ಯಕ್ಷರು.—ಮಾನ್ಯ ಕೆ. ಹೆಚ್. ಪಾಟೀಲರೇ ತಾವು ಕೇಳಿ.........

SRI K.H PATIL.—Very bad case has been argued by a best lawyer. Therefore, I don't want to ask anything......

ಶ್ರೀ ಬಿ. ಬಸವಲಿಂಗಪ್ಪ.—ಹೆಣ್ಣುಮಕ್ಕಳ ಬಗ್ಗೆ ಈಗತಾನೆ ಬಹಳ ವಿಶಾಲ ಹೃದಯದಿಂದ ಉತ್ತರಕೊಡುತ್ತಿದ್ದೀರಿ. ೧-೨ ವರ್ಷಗಳ ಹಿಂದೆ ಹೆಣ್ಣುಮಕ್ಕಳಿಗೂ ತಂದೆಯ ಆಸ್ತಿ ಹಕ್ಕುಗಳು ಸಿಗುವ ಬಗ್ಗೆ ವಿಚಾರ ಮಾಡಿ, ಜಾಗ್ರತೆ ಕರಡು ಮಸೂದೆಯನ್ನು ತರುತ್ತೇವೆಂದು ಹೇಳಿದಿರಿ.

ಇವತ್ತು ಆ ವಿಚಾರವಾಗಿ ಹೇಳಲಿಲ್ಲ, ಅನುಕಂಪ ಮಾತ್ರ ವ್ಯಕ್ತಪಡಿಸಿದ್ದೀರಿ. ಎರಡನೆಯದು ನಮ್ಮ ಕಡೆ ಒಂದು ಗಾದೆ ಇದೆ ''ಎಮ್ಮೆಯನ್ನು ನೀರಿನಲ್ಲಿ ಮುಳುಗಿಸಿ ವ್ಯಾಪಾರ ಮಾಡಿದಹಾಗೆ'' ಎಂದು ನಾವು ಎಷ್ಟು ಕಷ್ಟಪಟ್ಟು, ಓದಿಕೊಂಡು ಬಂದು, ಇಷ್ಟೆಲ್ಲಾ ಹೇಳಿದರೂ ಕೂಡ, ನೀವು ಕೇವಲ ೨ ಗಂಟೆ ಉತ್ತರ ಕೊಟ್ಟಿದ್ದೀರಿ. ಒಂದಕ್ಕಾದರೂ ಸರಿಯಾದ ಉತ್ತರ ಕೊಟ್ಟಿದ್ದೀರಾ. ನೀವು ಹೇಳಿದ್ದೇ ಹೇಳಿದ್ದು. ಹೋದವರ್ಷ ಹೇಳಿದ್ದೆ, ಇವತ್ತು ಸಹ ಹೇಳಿದ್ದೀರಿ. ಆ ಹೆಣ್ಣುಮಕ್ಕಳಿಗೆ ಆಸ್ತಿ ಕೊಡುವ ಬಗ್ಗೆ ಆದರೂ ಹೇಳಿ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯಸದಸ್ಯರು ಹೋದವರ್ಷದ ರೀತಿಯಲ್ಲಿ ಭಾಷಣ ಮಾಡಿದರೆ, ಅದಕ್ಕೆ ಉತ್ತರ ಕೂಡ ಹೋದವರ್ಷದ ರೀತಿಯಲ್ಲೇ ಕೊಡಬೇಕಾಗುತ್ತದೆ. ಹೆಣ್ಣುಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಭಾಗವನ್ನು ಕೊಡತಕ್ಕ ಮಸೂದೆ ಲಾ ಡಿಪಾರ್ಟ್‌ಮೆಂಟ್‌ನಲ್ಲಿ ತಯಾರಾಗುತ್ತಿದೆ. ಇದು ಆದ ತಕ್ಷಣ ಶಾಸನ ಸಭೆಯ ಮುಂದೆ ತರುತ್ತೇವೆ.

ಶ್ರೀ ಧರ್ಮಸಿಂಗ್.—೨೦ ಅಂಶಗಳ ಕಾರ್ಯಕ್ರಮದಲ್ಲಿ ಇಡೀ ದೇಶದಲ್ಲಿಯೇ ನಮ್ಮ ರಾಜ್ಯಕ್ಕೆ ಒಳ್ಳೆಯ ಹೆಸರು ಇದೆ ಎಂದು ತಾವು ಹೇಳಿದಿರಿ. ರೂರಲ್ ಹೌಸಿಂಗ್‌ನಲ್ಲಿ ೧೯೮೩ ರಿಂದ ೧೯೮೮ ರ ವರೆಗೆ ಎಷ್ಟು ಮನೆಗಳನ್ನು ಕಟ್ಟಿಸಿದ್ದೀರಿ, ವರ್ಷವಾರು ಅಂಕಿಅಂಶ ಬೇಕು. ನೀವು ಒಟ್ಟಾರೆ ಇಷ್ಟು ಗುರಿ ಇತ್ತು, ಇಷ್ಟು ಸಾಧನೆ ಮಾಡಿದ್ದೇವೆಂದು ಹೇಳುತ್ತೀರಿ. ಎರಡನೆಯದು ರೂರಲ್ ಸೈಟ್‌ಲೆಸ್ ಜನರಿಗೆ ಸೈಟ್ ಕೊಡುವ ವಿಚಾರ ಇದೆ. ನೀವು ನಿಮ್ಮ ಬಜೆಟ್ ಭಾಷಣದಲ್ಲಿ ೧೪ ಲಕ್ಷದ ೮೩ ಸಾವಿರ ಜನರಿಗೆ ಕೊಟ್ಟಿದ್ದೇವೆಂದು ಹೇಳಿದಿರಿ, ೧೯೮೩ ರಿಂದ ೧೯೮೮ರ ವರೆಗೆ ಎಷ್ಟು ಸೈಟ್‌ಗಳನ್ನು ತಾವು ಕೊಟ್ಟಿದ್ದೀರಿ, ಇದೂ ಕೂಡ ವರ್ಷವಾರು ಅಂಕಿ ಅಂಶಗಳು ಕೊಡಬೇಕು. ನೀವು ಈ ವರ್ಷ ಎಷ್ಟು ಸೈಟ್‌ಗಳನ್ನು ಕೊಟ್ಟಿದ್ದೇವೆ ಎಂಬುದನ್ನು ಉಲ್ಲೇಖ ಮಾಡುವುದಿಲ್ಲ. ಎಷ್ಟು ಮನೆಗಳನ್ನು ಕೊಟ್ಟಿದ್ದೇವೆ ಎನ್ನುವುದನ್ನು ಹೇಳುವುದಿಲ್ಲ. ಸುಮ್ಮನೆ ಪರ್ಸೆಂಟೇಜ್ ಹೇಳುತ್ತೀರಿ. ಮತ್ತೆ ಸೋಷಿಯಲ್‌ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಬಹಳ ಪ್ರಾಮುಖ್ಯವಾದುದು, ಮೊನ್ನೆ ಬಸವಣ್ಣನವರು ಕೂಡ ಹೇಳಿದ್ದಾರೆ. ೧೯೮೮-೮೯ರಲ್ಲಿ ೦.೪೬ಗೆ ಬಂದಿದೆ. ಏನೆಂದರೆ ಅಲಾಟ್‌ಮಾಡಿದ್ದು ಬಿಗ್ಗರ್ ಅಮೌಂಟ್. ಇದರಲ್ಲಿ ಡೆವಲಪ್‌ಮೆಂಟಿಗೆ ಎಷ್ಟು ಹಣವನ್ನು ಖರ್ಚು ಮಾಡುತ್ತೀರಿ, ಅದರಲ್ಲಿ ಇವತ್ತು ೧,೨೫೪ ಕೋಟಿ ಸೋಷಿಯಲ್ ಸರ್ವಿಸಸ್‌ಗೆ ಪ್ರೊವೈಡ್ ಮಾಡಿದ್ದೀರಿ. ಸೋಷಿಯಲ್ ವೆಲ್‌ಫೇರ್‌ಗೆ ಇದಕ್ಕಿಂತ ಕಡಿಮೆ ಹಣ ಕೊಟ್ಟಿದ್ದೀರಿ. ಇದೂ ಕೂಡ ಕರ್ನಾಟಕ ಗ್ಲಾಸ್ಸ್‌ನಲ್ಲಿ ೧೯೮೮-೮೯ರಲ್ಲಿ ಇದೆ. ಇದನ್ನೂ ಕೂಡ ಬಿಡಿಸಿ ಹೇಳಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಮೊನ್ನೆ ಹೌಸಿಂಗ್ ಡಿಪಾರ್ಟ್‌ಮೆಂಟ್‌ನ ಬೇಡಿಕೆ ಬಗ್ಗೆ ಚರ್ಚೆಯಾದಾಗ ಸಾಕಷ್ಟು ಅಂಕಿಅಂಶಗಳನ್ನು ಕೊಟ್ಟಿರುತ್ತಾರೆ. ಒಂದುವೇಳೆ ಅವರು ಕೊಡದೇ ಇದ್ದರೆ, ಈ ಬಗ್ಗೆ ಪ್ರತ್ಯೇಕವಾದ ಅಂಕಿ ಅಂಶ ಸಂಗ್ರಹಿಸಿ ಕೊಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ಐ. ಟಿ. ಸಿ. ಕಂಪನಿಯವರು ಕಾರ್ಮಿಕರಿಗೆ ಮೋಸ ಮಾಡಬೇಕು, ಕರ್ನಾಟಕ ಸರ್ಕಾರಕ್ಕೆ ಮೋಸ ಮಾಡಬೇಕೆಂದು ಎರಡು ಷಾಪ್‌ಗಳನ್ನು ಕ್ಲೋಸ್ ಮಾಡಿ, ರಾ ಟೊಬ್ಯಾಕೋ ಎನ್ನತಕ್ಕಂಥ ಹೆಸರಿನಲ್ಲಿ ಹೊಸೂರಿನಲ್ಲಿ ಸಿಗರೇಟ್ ತಯಾರು ಮಾಡುತ್ತಿದ್ದಾರೆ. ಇದರಿಂದ ಸರ್ಕಾರಕ್ಕೆ ೩-೪ ಕೋಟಿರೂಪಾಯಿಗಳು ನಷ್ಟವಾಗುತ್ತಿದೆ, ಜೊತೆಗೆ ಬರತಕ್ಕ ಟ್ಯಾಕ್ಸ್ ಕೂಡ ಹೋಗುತ್ತಿದೆ. ಇಲ್ಲಿಯೇ ತಯಾರು ಮಾಡಿದ್ದರೆ ನಮಗೆ ಟ್ಯಾಕ್ಸ್ ಬರುತ್ತಿತ್ತು, ಇದರಿಂದ ವರ್ಕರ್ಸ್‌ಗೂ ಮೋಸ, ಸರ್ಕಾರಕ್ಕೂ ಲಾಸ್ ಆಗಿದೆ ಇದನ್ನು ತಾವು ಪರಿಶೀಲನೆಮಾಡಬೇಕು. ಎರಡನೆಯದಾಗಿ ಪೋಲೀಸ್ ಕಾನ್‌ಸ್ಟೇಬಲ್‌ಗಳು ಇದ್ದಾರೆ. ಇವರಿಗೆ ಇಪ್ಪತ್ತು ವರ್ಷವಾದರೂ ಸಹ ಹೆಡ್ ಕಾನ್‌ಸ್ಟೇಬಲ್ ಆಗಿ ಪ್ರಮೋಷನ್ ಆಗುವುದಿಲ್ಲ. ಇವರಿಗೆ ಪ್ರಮೋಷನ್ ಕೊಡಲು ಒಂದೊಂದು ಸಲ ಡಿಪಾರ್ಟ್‌ಮೆಂಟಲ್ ಎಕ್ಸಾಮಿನೇಷನ್ಸ್‌ನಿಂದ ರಿಯಾಯಿತಿ ಇದೆ ಎಂದು ಹೇಳುತ್ತಾರೆ, ಇನ್ನೊಂದು ಸಲ ರಿಯಾಯಿತಿ ಇಲ್ಲ ಎಂದು ಹೇಳುತ್ತಾರೆ. ಇದು ಎಸ್. ಪಿ. ಗಳ ಮೂಡ್ ಮೇಲೆ ಡಿಪೆಂಡ್ ಆಗಿದೆ. ಇವರಿಗೆ ಹತ್ತುವರ್ಷ ಸರ್ವೀಸ್ ಆದಮೇಲೆ ಪ್ರಮೋಷನ್ ಕೊಡುವ ಒಂದು ಫೆಸಿಲಿಟಿ ಕೊಡುತ್ತೀರಾ ? ಎಂಟು ಗಂಟೆಗಳ ಕಾಲ ಕೆಲಸ ಎನ್ನುವುದು ಇವರಿಗೆ ಅಪ್ಲೈ ಆಗುವುದಿಲ್ಲ. ವಾರಕ್ಕೆ ಒಂದು ದಿವಸ ಸಹ ರಜೆ ಕೊಡುವುದಿಲ್ಲ. ವಾರಕ್ಕೊಂದು ದಿವಸ ರಜೆ ಕೊಡದೇ ಇದ್ದರೆ ಏನಾಗುತ್ತದೆ ಹೇಳಿ ? ವೀಕ್ಲಿ ಆಫ್ ಎಂದು ಏಳು ರೂಪಾಯಿ ಕೊಡುತ್ತಾರೆ. ಪೂರ್ತಿ ಸಂಬಳವನ್ನು ಕೊಡುವುದಿಲ್ಲ. ಇದನ್ನು ಸರಿಪಡಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ನಾನು ಆಗಲೇ ಹೇಳಿದೆ. ಧರ್ಮವೀರ ಕಮೀಷನ್ ರೆಕಮೆಂಡೇಷನ್‌ನಲ್ಲಿ ಸುಮಾರು ಶೇಕಡ ೩೭ ರಷ್ಟನ್ನು ನಾವು ಒಪ್ಪಿಕೊಂಡು ಜಾರಿಗೆ ತಂದಿದ್ದೇವೆ. ಈ ವಿಚಾರದಲ್ಲೂ ಕೂಡಾ ಧರ್ಮವೀರ ಕಮೀಷನ್ ರಿಪೋರ್ಟ್ ಇದೆ. ಅದನ್ನು ಜಾರಿಗೆ ತರುತ್ತೇವೆ. ಇನ್ನು ಐ. ಟಿ. ಸಿ. ಕಂಪೆನಿಯದು ಅವರು ಹೇಳಿದರು. ಅದರ ಬಗ್ಗೆ ಯಾವರೀತಿ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನಾನು ಪೋಲೀಸ್ ಇಲಾಖೆಗೆ ಸಂಬಂಧಪಟ್ಟಂತೆ ನಿರ್ದಿಷ್ಟವಾಗಿ ಮೂರು ಘಟನೆಗಳನ್ನು ಪ್ರಸ್ತಾಪ ಮಾಡಿದೆ, ಅದನ್ನು ಮುಖ್ಯಮಂತ್ರಿಗಳು ನಾನು ಬರೆದುಕೊಳ್ಳುತ್ತಿದ್ದೇನೆ ಎಂದು ಹೇಳಿದರು. ಆದರೆ ಅದರ ಮೇಲೆ ನಿಮ್ಮ ಕಣ್ಣು ಹರಿಸಿದ ಹಾಗೆ ಕಾಣುವುದಿಲ್ಲ. ಆ ಬಗ್ಗೆ ಏನೂ ನಿರ್ದಿಷ್ಟವಾಗಿ ತಾವು ಹೇಳಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಇಷ್ಟೆಲ್ಲಾ ಭಾಷಣಗಳು ಆದಮೇಲೆ ಅವರು ಅದನ್ನು ಮರೆಯಬಹುದು ಎಂದು ತಿಳಿದುಕೊಂಡಿದ್ದೆ. ಆದರೆ ಅವರು ಅದನ್ನು ಮರೆತಿಲ್ಲ. ಈಗ ದೊಡ್ಡಪೇಟೆ ಕೇಸ್‌ನಲ್ಲಿ ಪೋಲೀಸರ ಮೇಲೆ ಅಪಾದನೆ ಇದೆ.

Original cases were registered for unnatural deaths under Section 174 Cr. P. C. D. S. P. Shimoga, investigated these cases and placed charge-sheet against local police for murder. Cases are pending trial since 27-2-1988. Records have since been scrutinised by COD. The matter of further investigation into certain aspect of the case with the consent of the Court is under examination.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಈ ತರಹ ವರದಿ ಕೊಡುವುದಾದರೆ, ಅದರಲ್ಲಿ ಏನೂ ತಾತ್ಪರ್ಯ ಇಲ್ಲ. ಫ್ರಾಡ್ ಏನಾಗಿದೆ ಎಂದು ನಾನು ವಿವರಿಸಿ ಹೇಳಿದ್ದೇನೆ. ಸರಕಾರದವರು ಡಿ. ಎಸ್. ಪಿ. ಕೈಯಲ್ಲಿ ಇನ್‌ವೆಸ್ಟಿಗೇಷನ್ ಮಾಡಿಸುತ್ತೇವೆ ಎಂದು ಹೇಳಲಿಲ್ಲ. ಸಿ. ಓ. ಡಿ. ಯಿಂದ ಈ ಮರ್ಡರ್ ಕೇಸ್ ಇನ್‌ವೆಸ್ಟಿಗೇಟ್ ಮಾಡಿಸಿ ಕ್ರಮ ತೆಗೆದುಕೊಳ್ಳುತ್ತೇವೆ. ನಿಷ್ಪಕ್ಷಪಾತವಾದ ತನಿಖೆ ಮಾಡಿಸುತ್ತೇವೆ ಎಂದು ಹೇಳಿದರು. Whole thing is now it amounts to total fraud. ಅದಕ್ಕೆ ನಾನು ಹೇಳುತ್ತಿದ್ದೇನೆ, ಈ ಎಲ್ಲ ವಿಚಾರದಲ್ಲಿ ಯಾವುದಾದರೂ ಒಬ್ಬರು ಸೀನಿಯರ್ ಡಿಪಾರ್ಟ್‌ಮೆಂಟಲ್ ಆಫಿಷಿಯಲ್‌ನಿಂದ ಎನ್‌ಕ್ವೈರಿ ಮಾಡಿಸಿ. ಆಗ ಗೊತ್ತಾಗುತ್ತದೆ ಏನು ಫ್ರಾಡ್ ಆಗಿದೆ ಎನ್ನತಕ್ಕಂಥಾದ್ದು. ಈ ವಿಚಾರದಲ್ಲಿ ಫೈಟ್ ಮಾಡುವುದಕ್ಕೆ ಪೋಲೀಸರೇ ಒಂದು ಫಂಡ್ ಮಾಡಿಕೊಂಡು ಹೊರಟಿದ್ದಾರೆ ಎಂದರೆ ಈ ಕೇಸ್ ಏನಾಗುತ್ತದೆ ಎಂದು ನಿಮಗೆ ಸ್ಪಷ್ಟವಾಗಿ ಗೊತ್ತಾಗುತ್ತದೆ.

ಶ್ರೀ ರಾಮಕೃಷ್ಣ ಹೆಗಡೆ.—ಇದರಲ್ಲಿ ಏನಾದರೂ ಬುದ್ಧಿಪೂರ್ವಕವಾಗಿ ಯಾರಾದರೂ ಇದು ಅನ್‌ನ್ಯಾಚುರಲ್ ಡೆತ್ ಎಂದು ಮಾಡಿದ್ದರೆ ಅವರ ವಿರುದ್ಧ ನಾವು ಕ್ರಮ ತೆಗೆದುಕೊಳ್ಳದೇ ಹೋಗುವುದಿಲ್ಲ. ಈ ಆಶ್ವಾಸನೆಯನ್ನು ನಾನು ಅವರಿಗೆ ಕೊಡುತ್ತೇನೆ. ಎರಡನೆಯ ಕೇಸ್ ಅಂದರೆ ನೂರ್ ಜೆಹಾನ್ ಕೇಸ್‌ನಲ್ಲಿ ಸ್ಪೆಷಲ್ ಐ. ಜಿ. ಪಿ. ಸಿ. ಓ. ಡಿ. ಅವರು ಸ್ವತಃ ಇದನ್ನು ತನಿಖೆ ಮಾಡುತ್ತಿದ್ದಾರೆ. ಅವರ ವರದಿ ಬಂದ ಮೇಲೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ. ಆ ಮೇಲೆ ಮತ್ತೊಂದು ಕೇಸ್‌ನಲ್ಲಿ ಶಿವಮೊಗ್ಗ ಎಸ್. ಪಿ. ಯವರಿಗೆ ನಾವು ಷೋಕಾಸ್ ನೋಟೀಸ್ ಕೊಟ್ಟಿದ್ದೇವೆ. ನೀವು ಪೇಪರ್‌ನಲ್ಲಿ ಬಂದಿದೆ ಎಂದು ಹೇಳಿದರಲ್ಲ, ಅವರು ಆ ಅಪಾದನೆಯನ್ನು ಡಿನೈ ಮಾಡಿರುತ್ತಾರೆ. ಅವರು ಪತ್ರಿಕಾ ಹೇಳಿಕೆ ಕೊಟ್ಟಿದ್ದನ್ನು ಯಾರೂ ಇಲ್ಲಿಯವರೆಗೆ ಹಾಜರು ಮಾಡಲಿಲ್ಲ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ನಾನು ಕೊಟ್ಟಿದ್ದೇನೆ. ಆಗಲೇ ಕೊಟ್ಟಿದ್ದೇನೆ. ರಾಚಯ್ಯನವರ ಕೈಯಲ್ಲೇ ಕೊಟ್ಟಿದ್ದೆ. ಈಗ ಆ ಫೈಲ್ ಇಲ್ಲ ಎಂದು ಆಯಿತು.

ಶ್ರೀ ರಾಮಕೃಷ್ಣ ಹೆಗಡೆ.—ಇರಬಹುದು, ನೋಡಿಸುತ್ತೇನೆ. ...

೬.೩೦ ಪಿ. ಎಂ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಆಮೇಲೆ ಪರಿಹಾರದ ಹಣ ಕೂಡ ತಾವು ಘೋಷಣೆ ಮಾಡಿಲ್ಲ; ಇಲ್ಲಿ ಸತ್ತವರ ಕುಟುಂಬದವರಿಗೆ ೨೦ ಸಾವಿರ, ಗಾಯಾಳುಗಳಿಗೆ ೫ ಸಾವಿರ ಕೊಡುತ್ತೇವೆಂದು. ಮಾನ್ಯ ಬಸವಣ್ಣಪ್ಪನವರ ಹೇಳಿಕೆ ಇದೆ. ಅವರಿಗೆ ಇದುವರೆವಿಗೂ ಒಂದು ಬಿಲ್‌ನ ಹಣ ಕೂಡ ಬಂದಿಲ್ಲ. ೧೦ ಸಾವಿರ ಇಲ್ಲ, ೫ ಸಾವಿರ ಇಲ್ಲ, ಕಡೆಗೆ ಒಂದು ಸಾವಿರ ರೂಪಾಯಿಗಳ ಪರಿಹಾರ ಹಣ ಕೂಡ ಬರಲಿಲ್ಲ. ಈ ಬಗ್ಗೆ ಸರ್ಕಾರದ ಆಶ್ವಾಸನೆ ಇದೆ. ನನ್ನ ಆಶ್ವಾಸನೆಯಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಕೊಡಿಸುತ್ತೇನೆ.

ಶ್ರೀ ಕೆ. ಹೆಚ್. ಶ್ರೀನಿವಾಸ್.—ಕೇಸ್ ಬಗ್ಗೆ ತಮಗೆ ಬೇಕಾದರೆ ಎಲ್ಲಾ ಮಾಹಿತಿಗಳನ್ನು ಸಿದ್ಧಪಡಿಸಿ ಕೊಡುತ್ತೇನೆ. ನನ್ನಲ್ಲಿ ಅಧಿಕೃತವಾಗಿ ಇನ್‌ಫರ್‌ಮೇಶನ್ ಇದೆ. ತಾವು ತಾತ್ಸಾರ ಮಾಡಬಾರದು.

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲ.

ಶ್ರೀ ಎಸ್. ಎಸ್. ಕಡಪಟ್ಟಿ.—ಮಾನ್ಯ ಅಧ್ಯಕ್ಷರೇ, ನೀರಾವರಿ ಬಗ್ಗೆ ಸನ್ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಾ ಕೇಂದ್ರ ಸರ್ಕಾರದ ಮಂತ್ರಿಗಳಿಗೆ ಒಂದು ಪಾರ್‌ಮುಲ್ಲಾ ಕೊಟ್ಟಿದ್ದೇನೆಂದು ಮತ್ತು ಮೂರು ರಾಜ್ಯಗಳ ನೀರಾವರಿ ಮಂತ್ರಿಗಳನ್ನು ಮತ್ತು ಕೇಂದ್ರ ಸರ್ಕಾರದ ನೀರಾವರಿ ಮಂತ್ರಿಗಳ ಜೊತೆ ಈ ಸಮಸ್ಯೆಯನ್ನು ವಿಚಾರ ಮಾಡುವಾಗ ಶತ ಶತಮಾನಗಳಿಂದ ನೀರಾವರಿಯಲ್ಲಿ ವಂಚಿತವಾಗಿರತಕ್ಕಂಥ ಪ್ರದೇಶದ ಹಿತರಕ್ಷಣೆ ಮಾಡುವುದಕ್ಕೆ ನಿಶ್ಚಿತವಾದ ಭರವಸೆಯನ್ನು ಈ ಸದನದ ಮೂಲಕ ರಾಜ್ಯದ ಜನತೆಗೆ ಕೊಡಬೇಕು. ಈ ಸದನವನ್ನು ಈ ರಾಜ್ಯವನ್ನು ವಿಶ್ವಾಸಕ್ಕೆ ತೆಗೆದು ಕೊಂಡು ನಮ್ಮ ಭಾಗದ ನೀರನ್ನು ೨೦೦೦ ಇಸವಿಯೊಳಗೆ ಸಂಪೂರ್ಣವಾಗಿ ಉಪಯೋಗಿಸಿಕೊಂಡು ಎರಡು ಸಾವಿರ ಇಸವಿಯಾದ ನಂತರ ಎಷ್ಟು ನೀರು ಹೆಚ್ಚುವರಿ ಲಭ್ಯವಾಗುತ್ತದೆಯೋ ಆ ನೀರನ್ನು ಸಂಪೂರ್ಣವಾಗಿ ಉಪಯೋಗ ಮಾಡುವಂತಹ ವ್ಯವಸ್ಥೆಯನ್ನು ಮಾಡಿ ರಾಜ್ಯದ ಜನತೆ ನೆಮ್ಮದಿ ಯಿಂದ ಜೀವನ ಸಾಗಿಸುವಂತೆ ಮಾಡುತ್ತೀರಾ ? ಇನ್ನು ನೀರಾವರಿ ಮಂತ್ರಿಗಳು ನೀರಾವರಿ ಬಾಂಡ್ ಗಳನ್ನು ರೈಜ್ ಮಾಡುತ್ತೇವೆಂದು ಹೇಳಿದ್ದರು ಆ ಬಗ್ಗೆ ಕೂಡ ಈ ಸದನಕ್ಕೆ ನಿಶ್ಚಿತವಾಗಿ ತಿಳಿಸ ಬೇಕು ?

ಶ್ರೀ ರಾಮಕೃಷ್ಣ ಹೆಗಡೆ.—ನಾನು ಈಗತಾನೆ ಹೇಳಿದೆ, ಮಾನ್ಯ ಸದಸ್ಯರಾದ ಕಡಪಟ್ಟಿಯವರು ಇರಲಿಲ್ಲವೆಂದು ಕಾಣುತ್ತದೆ. ಈ ವಿಚಾರದಲ್ಲಿ ಈ ಮನೆಯ ಸರ್ವ ಪಕ್ಷಗಳ ಒಂದು ಕಮಿಟಿಯನ್ನು ಮಾಡುತ್ತೇನೆಂದು.

ಶ್ರೀ ಎಸ್. ಎಸ್. ಕಡಪಟ್ಟಿ.—ಸದನದ ಸಮಿತಿಯನ್ನು ಮಾಡುವುದರಲ್ಲಿ ನನಗಂತು ವಿಶ್ವಾಸ ವಿಲ್ಲ. ತಾವು ಹಿಂದೆ ರೀಜನಲ್ ಹಿಂಬ್ಯಾಲೆನ್ಸ್ ಕಮಿಟಿ ಮಾಡಿದ ಮೇಲೆ ಅವರ ಕಹಿ ಅನುಭವ ನನಗೆ ಆಗಿದೆ. ಆದ್ದರಿಂದ ಸರ್ಕಾರದವರು ಏನು ಮಾಡುತ್ತಾರೆ ಎನ್ನುವುದನ್ನು ನಿಶ್ಚಿತವಾಗಿ ಹೇಳಬೇಕು.

ಅಧ್ಯಕ್ಷರು.—ವರದಿ ಕೊಡಬೇಕೆಂದು ಹೇಳಿದ್ದರಲ್ಲ. ನಾನೇ ಎಷ್ಟೋ ಸಾರಿ ಹೇಳಿದೆ.

ಶ್ರೀ ಎಸ್. ಎಸ್. ಕಡಪಟ್ಟಿ.—ವರದಿ ಕೊಟ್ಟಿರುವುದು ತಮಗೂ ಗೊತ್ತಿರಬೇಕು ಮಾನ್ಯ. ಮುಖ್ಯ ಮಂತ್ರಿಗಳಿಗೂ ಗೊತ್ತಿರಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಈ ಬಗ್ಗೆ ಕೂಲಂಕಷವಾಗಿ ವಿಚಾರ ಮಾಡಬೇಕಾಗುತ್ತದೆ. ಒಂದು ಸ್ಟ್ರಾಟಜಿ ಮಾಡಬೇಕಾಗುತ್ತದೆ. ಬೇರೆ ಬೇರೆ ಖಾತೆಗಳಲ್ಲಿ ಎಷ್ಟೆಷ್ಟು ಖರ್ಚಾಗುತ್ತದೆ ಯಾವ ಯಾವ ಖಾತೆಗಳಿಗೆ ಖರ್ಚು ಕಡಿತ ಮಾಡಬೇಕಾಗುತ್ತದೆ ಎನ್ನುವುದನ್ನೆಲ್ಲಾ ಯೋಚನೆ ಮಾಡ ಬೇಕಾಗುತ್ತದೆ. ಆದ್ದರಿಂದ ಇವತ್ತೇ ಇದರ ಬಗ್ಗೆ ಇಂಥಾದ್ದೇ ಕಾರ್ಯಕ್ರಮ ಹಾಕಿಕೊಳ್ಳುತ್ತೇವೆಂದು ಹೇಳತಕ್ಕಂಥಾದ್ದಕ್ಕೆ ಸಾಧ್ಯವಾಗುವುದಿಲ್ಲ. ಇದರ ಬಗ್ಗೆ ಕುಳಿತುಕೊಂಡು ಚರ್ಚೆ ಮಾಡೋಣ.

ಶ್ರೀ ಎಸ್. ಎಸ್. ಕಡಪಟ್ಟಿ.—ಎರಡು ಸಾವಿರ ಇಸವಿಯೊಳಗಾಗಿ ನಮಗಿರುವ ನೀರಿನ ಹಕ್ಕನ್ನು ಕಳೆದುಕೊಳ್ಳುವುದಿಲ್ಲವೆನ್ನುವ ಭರವಸೆಯನ್ನಾದರೂ ಕೊಡುವಿರಾ ?

ಶ್ರೀ ರಾಮಕೃಷ್ಣ ಹೆಗಡೆ.—ನಮಗೆ ಸೇರಿದಂತ ನೀರಿನ ಹಕ್ಕನ್ನು ನಾವು ಯಾವತ್ತೂ ಕಳೆದು ಕೊಳ್ಳುವುದಿಲ್ಲ.

ಶ್ರೀ ಬಿ. ಲಕ್ಕಪ್ಪ.—ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಯಾವ ಯಾವ ಜಿಲ್ಲೆಗೆ ಯಾವ ಯಾವ ಶಾಸಕರುಗಳಿಗೆ ಎಷ್ಟೆಷ್ಟು ಹಣ ಬಿಡುಗಡೆ ಮಾಡಿದ್ದೀರಿ ? ನೇರವಾಗಿ ಎಷ್ಟು ಪರಿಹಾರ ಹಣವನ್ನು ಬಿಡುಗಡೆ ಮಾಡಿದ್ದೀರಿ ? ಆ ಮೇಲೆ......

ಅಧ್ಯಕ್ಷರು.—ನೇರವಾಗಿ ಕ್ಲಾರಿಫಿಕೇಶನ್ ಕೇಳಿ.

ಶ್ರೀ ಬಿ. ಲಕ್ಕಪ್ಪ.—ಆ ಮೇಲೆ ತಮ್ಮ ಇಲಾಖೆಯಲ್ಲಿರತಕ್ಕಂಥ ಸಿ. ಓ. ಡಿ. ಏನು ಇದೆ. ಇದು ತನ್ನ ಕೆಳಗಿನ ಅಧಿಕಾರಿಗಳ ಮೇಲೆ ಏನಾದರೂ ದೂರುಗಳಿದ್ದು ಆ ಬಗ್ಗೆ ವಿಚಾರಣೆ ಮಾಡು ವಂತಹ ಸಂದರ್ಭದಲ್ಲಿ, ತಪ್ಪಿತಸ್ಥ ಅಧಿಕಾರಿಗಳ ಬಗ್ಗೆ ಸರಿಯಾದ ರೀತಿಯಲ್ಲಿ ಇನ್‌ವೆಸ್ಟಿಗೇಶನ್ ಮಾಡುತ್ತಿಲ್ಲ. ತಮ್ಮ ಇಲಾಖಾಧಿಕಾರಿಗಳು ತಪ್ಪು ಮಾಡಿದ್ದರೂ ಅವರನ್ನು ಪ್ರೊಟೆಕ್ಟ್ ಮಾಡುತ್ತಾರೆ. ಆದ್ದರಿಂದ ಸಿ. ಐ. ಡಿ. ಇನ್‌ವೆಸ್ಟಿಗೇಶನ್ ಅನ್ನು ತಾವು ರಚನೆ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಈಗ ಸಾಮಾಜಿಕವಾಗಿ ಗೊತ್ತಿರತಕ್ಕಂಥ ಸತ್ಯವನ್ನು ಮುಚ್ಚಿಡತಕ್ಕಂಥ ಕೆಲಸ ಪೋಲೀಸ್ ಇಲಾಖೆಯಿಂದ ನಡೆಯಬಾರದು ? ಅನ್ಯಾಯವಾಗಿರುವುದು ನಮ್ಮ ಕಣ್ಣೆದುರಿನಲ್ಲಿಯೇ ಕಾಣುತ್ತಿದೆ, ಆ ಬಗ್ಗೆ ನಾನು ಮೊನ್ನೆ ಮಾತನಾಡುವಾಗ ಹೇಳಿದ್ದೇ. ಅದೇನೆಂದರೆ ಬೈಲಾಪುರದ [illegible]ಳಪಳ್ಳಿಯಲ್ಲಿ ಒಂದು ಗಲಾಟೆ ನಡೆಯಿತು. ಅಲ್ಲಿನ ಎಸ್. ಐ. ಆದರಂಗನಾಥ ಅವರು ಆ ಪಾರ್ಟಿ ಯೊಬ್ಬರನ್ನು ಪೋಲೀಸ್ ಠಾಣೆಗೆ ಕರೆಸಿ ನಿಮ್ಮ ಕೈಗೆ ಕಬ್ಬಿಣದ ಬಳೆ ತೊಡಿಸುತ್ತೇನೆ. ನಿಮ್ಮನ್ನು ಹಾಗೆ ಮಾಡುತ್ತೇನೆ ಹೀಗೆ ಮಾಡುತ್ತೇನೆ, ನೀವು ನನಗೆ ೪೦ ಸಾವಿರ ದುಡ್ಡು ಕೊಡಬೇಕೆಂದು ಹೇಳಿ ಹೆದರಿಸಿ ದುಡ್ಡು ತೆಗೆದುಕೊಂಡಿರತಕ್ಕಂಥ ವಿಚಾರ ಹೇಳಿದೆ. ತಾವು ಪೋಲೀಸ್ ಇನ್‌ವೆಸ್ಟಿಗೇಶನ್ ಮಾಡಿಸುತ್ತೇನೆಂದು ಹೇಳಿದಿರಿ. ಆದರೆ ಅವರು ಪ್ರಾಮಾಣಿಕವಾಗಿ ಇನ್‌ವೆಸ್ಟಿಗೇಶನ್ ಮಾಡದೆ ಎಸ್. ಐ. ಅಪರಾಧ ಮಾಡಿಲ್ಲವೆಂದು ವರದಿಯಲ್ಲಿ ತಿಳಿಸಿದ್ದಾರೆ. ಆದ್ದರಿಂದ ಈ ಬಗ್ಗೆ ಸರಿಯಾದ ತನಿಖೆ ಮಾಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ತಾವು ಹೇಳಿದ ಎರಡೂ ಕೇಸಿನ ವಿಚಾರದಲ್ಲಿ ತನಿಖೆ ಮಾಡಿಸಿ ಶೀಘ್ರವಾದ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಮತ್ತೆ ತಾವು ಸಿ. ಓ. ಡಿ. ಯನ್ನು ಪ್ರತ್ಯೇಕವಾದ ಒಂದು ಇಂಡಿಪೆಂಡೆಂಟ್ ಖಾತೆಯನ್ನಾಗಿ ಮಾಡಬೇಕೆಂದು ಹೇಳಿದ್ದೀರಿ. ಈಗ ಇರತಕ್ಕಂಥ ಪದ್ಧತಿ ಯಲ್ಲಿ ಸಿ. ಓ. ಡಿ. ಯಲ್ಲಿ ಮತ್ತು ಇಂಟಲಿಜೆನ್ಸ್ ಸೆಕ್ಷನ್‌ನಲ್ಲಿ, ಪೋಲೀಸ್ ಡಿಪಾರ್ಟ್‌ಮೆಂಟ್‌ನ ಯೋಗ್ಯವಾದ ಕಾಂಪಿಟೆಂಟ್ ಆಫೀಸರ್ಸ್ ಬರುತ್ತಾರೆ, ಸಿಬ್ಬಂದಿ ಬರುತ್ತಾರೆ ಎಂದು ಹೇಳತಕ್ಕಂಥ ನಿಯಮ ಇಲ್ಲ. ಅನೇಕ ಸಂದರ್ಭಗಳಲ್ಲಿ ಬೇರೆ ಎಲ್ಲಾಕಡೆ ಬೇಡ ಎಂದವರನ್ನು ಇಲ್ಲಿ ಹಾಕುತ್ತಾರೆ ಎಂದು ಹೇಳಿದಿರಿ. ಆದ್ದರಿಂದ ಸಿ. ಓ. ಡಿ. ಸೆಕ್ಷನ್ ಅನ್ನು ಇಂಪ್ರೂವ್ ಮಾಡುವುದರ ಬಗ್ಗೆ ಕೆಲವು ಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಎನ್. ಬಚ್ಚೇಗೌಡ.—ಕಾಫೀಬೋರ್ಡ್‌ನಿಂದ ನಮ್ಮ ರಾಜ್ಯ ಸರಕಾರಕ್ಕೆ ಸುಮಾರು ಒಂದುನೂರು ಕೋಟಿ ರೂಪಾಯಿ ಟ್ಯಾಕ್ಸ್ ರೂಪದಲ್ಲಿ ಬರಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದರು. ಅದು ಎಷ್ಟು ದಿವಸದಲ್ಲಿ ಬರಬಹುದು ಮತ್ತು ಅದಕ್ಕೆ ನಮ್ಮ ರಾಜ್ಯ ಸರಕಾರ ಏನು ಕ್ರಮ ಕೈಗೊಳ್ಳುತ್ತದೆ ಎಂದು ಒಂದು. ಇನ್ನು ಕಾಫಿ ಉತ್ಪಾದನೆಯಲ್ಲಿ ಕರ್ನಾಟಕ ರಾಜ್ಯಕ್ಕೆ ಬರತಕ್ಕಂಥ ಆದಾಯ ಎಷ್ಟು ಟ್ಯಾಕ್ಸ್ ರೂಪದಲ್ಲಿ ಕೇಂದ್ರಕ್ಕೆ ಹೋಗುವ ಆದಾಯ ಎಷ್ಟು ಎಂಬುದನ್ನು ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕು.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ಕಾಫಿಯ ಒಟ್ಟು ಉತ್ಪಾದನೆಯಿಂದ, ಕಾಫಿ ಬೆಳೆಯಿಂದ, ಕಾಫಿ ಎಂದು ಹೇಳತಕ್ಕಂಥ ಒಂದು ಕಮಾಡಿಟಿಯಿಂದ ಕೇಂದ್ರ ಸರಕಾರಕ್ಕೆ ಪ್ರತಿವರ್ಷ ೪೫೪ ಕೋಟಿ ರೂಪಾಯಿ ಆದಾಯ ಬರುತ್ತದೆ. ಈ ೪೫೪ ಕೋಟಿ ರೂಪಾಯಿನಲ್ಲಿ ಸುಮಾರು ೩೧೮ ಕೋಟಿ ರೂಪಾಯಿ ಕರ್ನಾಟಕ ರಾಜ್ಯದಿಂದ ಹೋಗುತ್ತದೆ. ೩೧೮ ಕೋಟಿ ಎಂದರೆ ೩೧೭. ಕೋಟಿ ೭೩ ಲಕ್ಷ ರೂಪಾಯಿಗಳು ಕರ್ನಾಟಕದಲ್ಲಿ ಬೆಳೆದಂಥ ಕಾಫಿಯಿಂದ, ಎಕ್ಸೈಸ್ ಡ್ಯೂಟಿ ಮತ್ತು ಬೇರೆ ಬೇರೆ ಟ್ಯಾಕ್ಸ್ ರೂಪದಲ್ಲಿ ಕೇಂದ್ರ ಸರಕಾರಕ್ಕೆ ಹೋಗುತ್ತದೆ. ಒಟ್ಟು ಕಾಫಿಯಿಂದ ಅವರಿಗೆ ಸಿಗತಕ್ಕದ್ದು ೪೫೪ ಕೋಟಿ ರೂಪಾಯಿ. ಇಷ್ಟು ಕಾಫಿ ಬೆಳೆದು ನಮಗೆ ಬರತಕ್ಕಂಥಾದ್ದು ಕೇವಲ ೧೧ ಕೋಟಿ ರೂಪಾಯಿ ಮಾತ್ರ. ಈ ಹನ್ನೊಂದು ಕೋಟಿ ರೂಪಾಯಿ ನಾವು ಏನು ಕಾಫಿ ಮೇಲೆ ಅಗ್ರಿಕಲ್ಚರಲ್......

(ಗೊಂದಲ)

ಶ್ರೀ ರಾಮಕೃಷ್ಣ ಹೆಗಡೆ.—ಇದು ನಮ್ಮ ಅಗ್ರಿಕಲ್ಚರಲ್ ಇನ್‌ಕಮ್ ಟ್ಯಾಕ್ಸ್ ಮುಖಾಂತರ ಬರತಕ್ಕಂಥಾದ್ದು. ಈಗ ಎಕ್ಸೈಸ್ ಡ್ಯೂಟಿ ಸ್ವಲ್ಪ ಭಾಗ ಬರುತ್ತದೆ ಅಷ್ಟೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಎಕ್ಸೈಸ್ ಡ್ಯೂಟಿಯಿಂದ ಎಷ್ಟು ಬರುತ್ತದೆ ಅದನ್ನು ಹೇಳಿ. ಅಗ್ರಿಕಲ್ಚರಲ್ ಇನ್‌ಕಮ್‌ಟ್ಯಾಕ್ಸ್‌ನಿಂದ ರಾಜ್ಯ ಸರಕಾರಕ್ಕೆ ಎಷ್ಟು ಬರುತ್ತದೆ ಎಂದು ಹೇಳಿದಿರಿ ಅದೇ ಎಕ್ಸೈಸ್ ಡ್ಯೂಟಿ ರೂಪದಲ್ಲಿ ಎಷ್ಟು ಬರುತ್ತದೆ ಎಂಬುದನ್ನು ತಾವು ಹೇಳಿರಿ.

ಶ್ರೀ ಬಿ.ಎ. ಜೀವಿಜಯ.—ಅಧ್ಯಕ್ಷರೇ.........

ಅಧ್ಯಕ್ಷರು.—ನಿಮಗೂ ಅವಕಾಶ ಕೊಡುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಈ ಕಾಫಿ ಬಾಬತ್ತಿನಿಂದ ೪೫೪ ಕೋಟಿ ರೂ.ಗಳು ಏನು ಕೇಂದ್ರ ಸರಕಾರಕ್ಕೆ ಹೋಗುತ್ತದೆ, ನಮಗೆ ಬರುವ ಎಕ್ಸೈಸ್ ಡ್ಯೂಟಿಯಲ್ಲಿ ಇದರ ಭಾಗ ಪ್ರತ್ಯೇಕವಾಗಿ ಬರುವುದಿಲ್ಲ. ಇಡೀ ದೇಶದ ಎಕ್ಸೈಸ್ ಡ್ಯೂಟಿಯ ಒಳಗೆ ಇದು ಸೇರಿ ಹೋಗುತ್ತದೆ. ಇದರಿಂದ ಎಷ್ಟು ಭಾಗ ಬರಬೇಕು ಅಷ್ಟು ಬರುವುದಿಲ್ಲ. ಇಡೀ ದೇಶದ ಎಕ್ಸೈಸ್ ಡ್ಯೂಟಿ ಏನಿದೆ ಅದರಲ್ಲಿ ಕೆಲವು ಭಾಗ ನಮಗೆ ಬರುತ್ತದೆಯೇ ಹೊರತು, ಇದಕ್ಕೇ ಎಂದು ಬೇರೆ ಬರುವುದಿಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ.—ಕಾಫಿಯಿಂದ ಎಷ್ಟು ಬರುತ್ತದೆ ಹೇಳಿರಿ.

ಶ್ರೀ ರಾಮಕೃಷ್ಣ ಹೆಗಡೆ.—ಕಾಫಿಯಿಂದ ಎಷ್ಟು ಬರುತ್ತದೆ ಎಂದು ಗೊತ್ತಾಗುವುದಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಕಾಫಿಯಿಂದ ಎಷ್ಟು ಬರುತ್ತದೆ ಎಂದು ಗೊತ್ತಾಗುವುದಿಲ್ಲ ಎಂದರೆ ಒಂದು ಕಡೆ ಪಿಕ್ಚರ್ ಮಾತ್ರ ಕೊಡಬೇಡಿ. ಗೊತ್ತಿದ್ದರೆ ಹೋಲ್ ಪಿಕ್ಚರ್ ಕೊಡಿ. ಇಲ್ಲದೇ ಹೋದರೆ don't give distorted picture.........

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ.—ಒಂದು ವಿಷಯದ ಬಗ್ಗೆ ಎಲ್ಲಾ ವಿಚಾರಗಳು ಗೊತ್ತಿದ್ದರೆ ಹೇಳಿಕೆ ಕೊಡಿ. ಅದು ಏನಿಲ್ಲದೆ ಹನ್ನೊಂದು ಕೋಟಿ ಅಗ್ರಿಕಲ್ಚರಲ್ ಇನ್‌ಕಮ್ ಟ್ಯಾಕ್ಸ್‌ನಿಂದ ಮಾತ್ರ ಬಂದಿದೆ ಎಂದು ಹೇಳಿಬಿಟ್ಟರೆ ಹೇಗೆ ?

ಶ್ರೀ ಬಿ.ಎ. ಜೀವಿಜಯ.—ಮುಖ್ಯಮಂತ್ರಿಯವರಿಗೆ ಮಾಹಿತಿ ಕೊಟ್ಟಿರುವುದು ಸರಿಯಲ್ಲ ಎಂದು ನನ್ನ ಭಾವನೆ. ಟೋಟಲ್ ಕಾಫಿ ಪ್ರೊಡಕ್ಷನ್ ಇನ್ ಕರ್ನಾಟಕ ೩೧೮ ಕೋಟಿ. ಅದರಲ್ಲಿ ಆಕ್ಚುಯಲ್ ಆಗಿ ಟ್ಯಾಕ್ಸ್ ಡ್ಯೂಟಿ ನಮಗೆ ಬರುವುದು ೮೫ ಕೋಟಿ. ಪ್ರಾಯಶಃ ಅಧಿಕಾರಿಗಳು ನಮ್ಮ ಮುಖ್ಯಮಂತ್ರಿಗಳಿಗೆ ಸರಿಯಾದ ಫಿಗರ್ ಕೊಟ್ಟಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲಿ ನೋಡಿ, ಫಿಗರ್ ನನ್ನ ಹತ್ತಿರ ಇದೆ.

ಶ್ರೀ ಎಂ. ವೀರಪ್ಪಮೊಯಿಲಿ.—ಅದು ಟರ್ನ್‌ಓವರ್

ಶ್ರೀ ರಾಮಕೃಷ್ಣ ಹೆಗಡೆ.—ಇದು excise duty at the rate of Rs. 250. per ton plus export duty ಎಲ್ಲಾ ಸೇರಿ ಅಷ್ಟು ಬರುತ್ತದೆ.

ಶ್ರೀ ಎಂ. ವೀರಪ್ಪಮೊಯಿಲಿ.—ಟೋಟಲ್ ಟರ್ನ್‌ಓವರ್ ಅವರು ಕೊಟ್ಟಿದ್ದು. It is total turn over by the Coffee Board which is Rs. 380 crores. It is not excise duty.........

ಶ್ರೀ ರಾಮಕೃಷ್ಣ ಹೆಗಡೆ.—ಒಂದು ಲಕ್ಷ ಐವತ್ತುಸಾವಿರ ಮೆಟ್ರಿಕ್ ಟನ್ ಕಾಫಿ ಇಡೀ ದೇಶದಲ್ಲಿ ಬೆಳೆಯುವುದು. ನಮ್ಮ ರಾಜ್ಯದ್ದು ಒಂದು ಲಕ್ಷ ಇಪ್ಪತ್ತುಸಾವಿರ ಮೆಟ್ರಿಕ್ ಟನ್ ಇರಬಹುದು.

ಶ್ರೀ ಬಿ.ಎ. ಜೀವಿಜಯ.—ಅದು ೧ ಲಕ್ಷದ ೯೨ ಸಾವಿರ ಮೆಟ್ರಿಕ್‌ಟನ್ ಇರಬೇಕು ಎಂದು ಕಾಣುತ್ತದೆ.. ......

ಶ್ರೀ ಎಂ. ವೀರಪ್ಪಮೊಯಿಲಿ.— ಈ ತರಹದ ಅಂಕಿಅಂಶಗಳನ್ನು ಕೊಟ್ಟು ನಮಗೆ ಕನ್‌ಫ್ಯೂಸ್ ಮಾಡಬೇಡಿ.........

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ, ನಾನು ಹಿಂದೆ ಕಬ್ಬಿನ ವಿಚಾರದಲ್ಲಿಯೂ ಕೂಡ ಇದೇ ಅಂಕಿಅಂಶಗಳನ್ನು ಕೊಟ್ಟಿದ್ದೇನೆ. ನಮ್ಮ ರೈತರು ಕಬ್ಬು ಬೆಳೆಯುತ್ತಾರೆ. ಅವರು ಬೆಳೆಯುವ ಕಬ್ಬಿಗೆ ನೀರು ಒದಗಿಸುವವರು ಯಾರು ? ರಾಜ್ಯದಲ್ಲಿ ನೀರಾವರಿಯ ಬಗ್ಗೆ ಹಣ ಖರ್ಚು ಮಾಡ ತಕ್ಕಂಥವರು ಯಾರು ? ರಾಜ್ಯಸರಕಾರದವರು ಅಲ್ಲವೇ ? ಕಬ್ಬನ್ನು ಬೆಳೆಯತಕ್ಕಂಥ ರೈತರು ಕಬ್ಬನ್ನು ಬೆಳೆದ ಮೇಲೆ ಸಕ್ಕರೆ ಉತ್ಪಾದನೆ ಮಾಡುತ್ತಾರೆ. ಹೀಗೆ ಸಕ್ಕರೆ ಉತ್ಪಾದನೆ ಆದಮೇಲೆ ಎಕ್ಸೈಸ್ ಡ್ಯೂಟಿ ಮತ್ತು ಬೇರೆ ಡ್ಯೂಟಿಗಳನ್ನು ತೆಗೆದುಕೊಂಡು ಹೋಗುವವರು ಯಾರು ? ಅದು ಕೇಂದ್ರ ಸರಕಾರದವರು ಅಲ್ಲವೇ ?

ಶ್ರೀ ಎಂ. ವೀರಪ್ಪಮೊಯಿಲಿ.—ಹಾಗೆ ಅವರು ಯಾವ ದೇಶಕ್ಕೆ ತೆಗೆದುಕೊಂಡು ಹೋಗುತ್ತಾರೆ ?

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲಿ ದೇಶದ ವಿಚಾರ ಹೇಳುವುದು ಬೇಡ......

ಶ್ರೀ ಎಂ. ವೀರಪ್ಪಮೊಯಿಲಿ.—ತಾವೇನು ಕರ್ನಾಟಕದ ಪ್ರೈಮ್ ಮಿನಿಸ್ಟರ್‌ರವರೇ ? ತಾವು ಏನೋ ಹೊಸದನ್ನು ಹೇಳುತ್ತಿದ್ದೀರಿ.........

ಶ್ರೀ ಜೆ.ಎಚ್. ಪಟೇಲ್.—ಒಬ್ಬ ರೈತನು ಒಂದು ಎಕರೆಗೆ ಸರಾಸರಿ ೩೫ರಿಂದ ೪೦ ಟನ್ ಕಬ್ಬು ಬೆಳೆಯುತ್ತಾನೆ. ಆ ಬಗ್ಗೆ ಕೇಂದ್ರ ಸರಕಾರಕ್ಕೆ ೨,೪೦೦-ರೂ.ಗಳನ್ನು ಒಂದು ಎಕರೆಗೆ ಕೊಡುತ್ತಾನೆ. ಆತನು ಒಂದು ಎಕರೆಗೆ ೪೦ ಟನ್ ಕಬ್ಬನ್ನು ಬೆಳೆಯುತ್ತಾನೆ ಎಂದು ಇಟ್ಟುಕೊಳ್ಳಿ. ಒಂದು ಟನ್ ಕಬ್ಬಿಗೆ ಒಂದು ಕ್ವಿಂಟಾಲ್ ಸಕ್ಕರೆಯಾಗುತ್ತದೆ. ಹೀಗೆ ೪೦ ಕ್ವಿಂಟಾಲ್ ಸಕ್ಕರೆಯಾದರೆ ಒಂದು ಕ್ವಿಂಟಾಲ್‌ಗೆ ೬೦ ರೂಪಾಯಿಗಳ ಪ್ರಕಾರ ಎಕ್ಸೈಸ್ ಡ್ಯೂಟಿ ೨,೪೦೦ ರೂ.ಗಳು ಆಗುತ್ತದೆ. ಅದರಲ್ಲಿ ರಾಜ್ಯ ಸರಕಾರಕ್ಕೆ ಕೊಡುವುದು ೧೨ ರೂ.ಗಳು ಮಾತ್ರ.

ಶ್ರೀ ಎಂ. ವೀರಪ್ಪಮೊಯಿಲಿ.—ಲಿಕ್ಕರ್‌ಟ್ರೇಡ್‌ನಿಂದ ಏನು ಹಣವನ್ನು ನೀವು ವಸೂಲು ಮಾಡುತ್ತೀರಿ ಅದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಎಂ. ರಘುಪತಿ.—ಅದೇ ತರಹದಲ್ಲಿ ಕೇಂದ್ರ ಸರಕಾರದಿಂದ ನಮಗೆ ಕೊಡಿಸಿ......

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

ಶ್ರೀ ರಾಮಕೃಷ್ಣ ಹೆಗಡೆ.—ಇಂತಹ ವಾದಕ್ಕೆ ವಿತ್ತಂಡವಾದ ಎಂದು ಹೇಳುತ್ತಾರೆ. ಕರ್ನಾಟಕದಿಂದ ಸುಮಾರು ೧೦೦೦ರಿಂದ ೧೧೦೦ ಕೋಟಿ ರೂ.ಗಳಷ್ಟು ನನ್ನ ಅಂದಾಜಿನ ಪ್ರಕಾರ ಕಾರ್ಪೋರೇಟ್ ಟ್ಯಾಕ್ಸ್ ಕೇಂದ್ರ ಸರ್ಕಾರಕ್ಕೆ ಹೋಗುತ್ತದೆ. ಅದರಲ್ಲಿ ಒಂದು ಕಾಸೂ ಕೂಡಾ ನಮಗೆ ಬರುವುದಿಲ್ಲ. ಆದರೆ ಇನ್‌ಕಂ ಟ್ಯಾಕ್ಸ್‌ನಿಂದ ನಿಗದಿತ ಭಾಗ ನಮಗೆ ಬರುತ್ತದೆ. ಆದುದರಿಂದ ಎಕ್ಸೈಸ್‌ಡ್ಯೂಟಿ ಅದು ಬೇಕಾದರೆ ಶುಗರ್ ಮೇಲಿರಲಿ, ಕಾಫಿ ಮೇಲಿರಲಿ, ನಮಗೆ ಮಾತ್ರ ಏನೂ ಸಿಗುವುದಿಲ್ಲ ಎಂದು ಹೇಳಿದ್ದೇನೆ. ಇಲ್ಲಿ ನಾನು ಯಾವ ಕಾಂಟೆಸ್ಟ್‌ನಲ್ಲಿ ಇವನ್ನು ಹೇಳುತ್ತಾ ಇದ್ದೇನೆ ಅಂದರೆ ನಮಗೆ ಇವೊತ್ತು ೧೦೦ ಕೋಟಿ ರೂ.ಗಳು ಕಾಫಿ ಬೋರ್ಡಿನಿಂದ ಬರಬೇಕಾಗಿದೆ.

ಶ್ರೀ ಎಂ. ವಿರಪ್ಪ ಮೊಯಿಲಿ.— ನೀವು ಅದನ್ನು ಸಂಬಂಧಪಟ್ಟವರಿಂದ ವಸೂಲು ಮಾಡಿ. ಇಲ್ಲದಿದ್ದರೆ ಕಂಟೆಪ್ಟ್ ಆಫ್ ಕೋರ್ಟ್ ಪಿಟಿಷನ್ ಹಾಕಿ.

ಶ್ರೀ ರಾಮಕೃಷ್ಣ ಹೆಗಡೆ. ದಯಮಾಡಿ ಕೇಳ ಬೇಕು. ನಿಮಗಿಂತಲೂ ಜೋರಾಗಿ ಮಾತನಾಡಲು ನನಗೆ ಗಂಟಲು ಜೋರಾಗಿ ಇಲ್ಲ. ನೀವು ತಿಳಿದುಕೊಳ್ಳಬೇಕೆಂಬ ದೃಷ್ಟಿಯಲ್ಲಿ ನಾನು ಹೇಳಿದೆ. ಮಾನ್ಯ ಬಚ್ಚೇಗೌಡರು ಒಂದು ಪ್ರಶ್ನೆಯನ್ನು ಕೇಳಿದರು, ಈ ವಿಚಾರವನ್ನು ನಾನಾಗಿಯೇ ಹೇಳಲಿಲ್ಲ. ನಮಗೆ ನೂರು ಕೋಟಿ ರೂ. ಗಳು ಕಾಫಿ ಬೋರ್ಡಿನಿಂದ ಬರಬೇಕು ಸ್ವಾಭಾವಿಕವಾಗಿ ಆ ಬಗ್ಗೆ ಒಂದು ಜಿಜ್ಞಾಸೆ ಏನೆಂದರೆ ಇಷ್ಟು ದುಡ್ಡು ಬರಬೇಕಲ್ಲ ? ಇದರಲ್ಲಿ ಕೇಂದ್ರ ಸರಕಾರದ್ದು

ಎಷ್ಟು ಮತ್ತು ರಾಜ್ಯ ಸರ್ಕಾರದ್ದು ಎಷ್ಟು ಎಂಬುದಾಗಿ ಅವರು ಕೇಳಿದರು. ಅದಕ್ಕೆ ನಾನು ಸೂಕ್ತ ಉತ್ತರವನ್ನು ಹೇಳುತ್ತಿದ್ದೆ. ನಾವು ಯಾವುದೇ ವಿಚಾರ ಕೇಂದ್ರ ಸರಕಾರದ ಬಗ್ಗೆ ಹೇಳಿದರೆ ನೀವು ಅವನ್ನು ಟೀಕೆ ಮಾಡುತ್ತಿದ್ದೇವೆ ಎಂದು ಏತಕ್ಕೆ ತಿಳಿದುಕೊಳ್ಳಬೇಕು ?

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಮುಖ್ಯಮಂತ್ರಿಗಳು ಯಾವಾಗಲೂ ಕೇಂದ್ರ ಸರಕಾರದ ಬಗ್ಗೆ......

ಅಧ್ಯಕ್ಷರು.—ಕೇಂದ್ರ ಸರಕಾರವು ನಮ್ಮದೇ, ರಾಜ್ಯ ಸರಕಾರವು ನಮ್ಮದೇ......

ಶ್ರೀ ವೀರಪ್ಪ ಮೊಯಿಲಿ.—ಮಾನ್ಯ ಸದಸ್ಯರು ಒಂದು ಸ್ಪಷ್ಟೀಕರಣವನ್ನು ಕೇಳಿದಾಗ ಅದಕ್ಕೆ ಸೂಕ್ತ ಉತ್ತರವನ್ನು ಕೊಡಬೇಕೆ ಹೊರತು ಕೇಳಿದ ಸದಸ್ಯರನ್ನು ಕನ್‌ಫ್ಯೂಸ್ ಮಾಡಬಾರದು ಎಂದು ನಾನು ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈಗ ಬೇಡಿಕೆಗಳ ಮೇಲಿನ ಚರ್ಚೆ ಮುಕ್ತಾಯವಾಯಿತು. ಈ ಕೆಳಕಂಡ ಬೇಡಿಕೆಗಳನ್ನು ಮತಕ್ಕೆ ಹಾಕುತ್ತೇನೆ,

ಅಧ್ಯಕ್ಷರು.—ನಾನು ಪ್ರಸ್ತಾಪವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವವೆನೆಂದರೆ,

"೩೧-೩-೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಯ ಸಂಖ್ಯೆ.೧೭. ೧೮, ೧೯, ೨೦, ೨೨, ೩೯, ೪೦, ೪೧, ೪೨, ೪೩, ೨೭, ೫೫, ಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರಿದ ಮೊಬಲಗುಗಳನ್ನು ಮಂಜೂರು ಮಾಡಬೇಕು.",

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜುರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ ೧೭

ವರಮಾನ ತೆರಿಗೆ, ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವರಮಾನ, ತೆರಿಗೆ, ವೃತ್ತಿಗಳು, ಮಾರಾಟ ಮತ್ತು ಇತರ ಸೇವೆಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೬೧,೬೮,೨೪,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೮

ವಿಮೆ, ಖಜಾನೆ ಮತ್ತು ಲೇಖಾ ಇಲಾಖೆಗಳ ಆಡಳಿತ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ ರಂದು ಕೊನೆ ಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಮೆ, ಖಜಾನೆ ಮತ್ತು ಲೇಖಾ ಇಲಾಖೆಗಳ ಆಡಳಿತ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೨,೪೪,೯೫,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವು ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೧೯

ವಿಶ್ರಾಂತಿ ವೇತನ ಮತ್ತು ಇತರ ನಿವೃತ್ತಿ ಸೌಲಭ್ಯಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಿಶ್ರಾಂತಿ ವೇತನ ಮತ್ತು ಇತರ ಸೌಲಭ್ಯಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೯,೫೫೦,೦೦.೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೨೦

ಸರಕಾರಿ ನೌಕರರಿಗೆ ಸಾಲಗಳು ಮತ್ತು ವಿವಿಧ ಸಾಲಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೬೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸರಕಾರಿ ನೌಕರರಿಗೆ ಸಾಲಗಳು ಮತ್ತು ವಿವಿಧ ಸಾಲಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ಬಂಡವಾಳ ಖಾತೆಯಲ್ಲಿ ೧೭,೫೬,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೨೨

ಇತರೇ ವಿವಿಧ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೬೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಇತರೇ ವಿವಿಧ ಸೇವೆಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೩,೦೧,೦೪.೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೯

ಚುನಾವಣೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೬೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚುನಾವಣೆಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ.೩,೩೯,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು,

ಅಭಿಯಾಚನೆ ಕ್ರಮಾಂಕ ೪೦

ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೬೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಾಜ್ಯಪಾಲರು, ಮಂತ್ರಿಗಳ ಮತ್ತು ಲೋಕಸೇವಾ ಆಯೋಗ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೪೪,೭೫,೦೦೦ ರೂ, ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೪೧

ಸಚಿವಾಲಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೬೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಚಿವಾಲಯ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೫,೯೯,೪೫,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೪೨

ಜಿಲ್ಲಾಡಳಿತ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೬೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಜಿಲ್ಲಾಡಳಿತ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೩,೭೬,೬೭,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೪೩

ಮುಖ್ಯಮಂತ್ರಿಯವರ ವಿವಿಧ ಅಭಿಯಾಚನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮುಖ್ಯ ಮಂತ್ರಿಯವರ ವಿವಿಧ ಅಭಿಯಾಚನೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೧,೨೯,೦೬,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೨೬

ಪೋಲೀಸ್ ಮತ್ತು ಅಗ್ನಿಶಾಮಕ ಸೇವೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೯ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪೋಲೀಸ್ ಮತ್ತು ಅಗ್ನಿಶಾಮಕ ಸೇವೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೨೮,೪೩,೯೫,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೫೫

ವಕ್ಫ್

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೬ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ವಕ್ಫ್ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೮೨,೦೦,೦೦೦ ರೂ. ಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರು ಮಾಡಿದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು.

ಅಧ್ಯಕ್ಷರು.—ಸದನದ ಇಂದಿನ ಕಾರ್ಯಕಲಾಪಗಳು ಇಲ್ಲಿಗೆ ಮುಕ್ತಾಯವಾಗಿ ಸದನವು ದಿನಾಂಕ ೨೦-೬-೧೯೮೮ರ ಸೋಮವಾರ ಬೆಳಿಗ್ಗೆ ೯-೩೦ಕ್ಕೆ ಮತ್ತೆ ಸೇರುತ್ತದೆ.

(ಸದನವು ೬-೪೮ಕ್ಕೆ ಮುಕ್ತಾಯವಾಗಿ ದಿನಾಂಕ ೨೦-೬-೮೮ರ ಸೋಮವಾರ ಬೆಳಿಗ್ಗೆ ೯-೩೦ಕ್ಕೆ ಸೇರಲು ನಿರ್ಧರಿಸಿತು)